ಸಂವಾದ

ಅಕ್ಟೋಬರ್ 2009 ರೂ.20

ಹಸಿರು ಕ್ರಾಂತಿಯ ಹರಿಕಾರ

ಬಡ ರೈತರ ಕೊಲೆಗಾರ!

ಪುಸ್ತಕ ವಿಮರ್ಶೆ

ಯಂತ್ರಗಳನ್ನು ಕಳಚುವುದು ಸುಲಭವಲ್ಲ!

ಹಿಂದುತ್ವ ಪಾಳಯದಲ್ಲಿ ಜಿನ್ನಾ ಎಂಬ ಭೂತ

ಸಂವಾದ
ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೧೨
ಅಕ್ಟೋಬರ್ ೨೦೦೮

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 080-23480278, 9945264687
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೦೪
- ❑ ಅಂತರಂಗ ೦೫
- ❑ ಸಂಪಾದಕರೊಂದಿಗೆ ಸಂವಾದ:
  ○ ಡಿ. ಎಸ್. ನಾಗಭೂಷಣ ೦೬
- ❑ ಹಸಿರುಕ್ರಾಂತಿಯ ಹರಿಕಾರ ಬಡರೈತರ ಕೊಲೆಗಾರ! ೦೮
  ○ ಶಿವಸುಂದರ್
- ❑ ವಿಚಾರವಾದ ಕೆಲವು ಟಿಪ್ಪಣಿಗಳು ೧೦
  ○ ಡಾ. ಬಸವರಾಜ ಸಬರದ
- ❑ ಹಿಂದುತ್ವ ಪಾಳಯದಲ್ಲಿ ಜಿನ್ನಾ ಎಂಬ ಭೂತ ೧೨
  ○ ನಾ ದಿವಾಕರ

- ❑ ಮಾಯಾವತಿ v/s ಬಹುಗುಣ ಜೋಷಿ: ಜಾತಿ ಸಂಬಂಧಗಳ ಮರು ವ್ಯಾಖ್ಯಾನ ೧೮
  ○ ಮನೋರಂಜನಿ ಪ್ರವೀಣ್
- ❑ ಬರ್ಬರ 'ಚೌರಿ ಸೇವೆ' ೨೪
  ○ ಡಾ.ಸುಲೋಚನ ನಾರಾಯಣ್
- ❑ ಜನಪದ ಕಥನದ ಮಿಸ್ಸಿಂಗ್ ಲಿಂಕುಗಳು ೨೬
  ○ ಮೊಗಳ್ಳಿ ಗಣೇಶ್
- ❑ ಪುಸ್ತಕ ಅವಲೋಕನ: ಯಂತ್ರಗಳನ್ನು ಕಳಚುವುದು ಇಷ್ಟು ಸುಲಭವಲ್ಲ! ೩೨
  ○ ಡಿ. ಎಸ್. ನಾಗಭೂಷಣ
- ❑ ಬೀದಿಗೆ ಬಿದ್ದ ಹಬ್ಬಗಳು
  ○ ಜಯಪ್ರಕಾಶ್ ಶೆಟ್ಟಿ. ಹೆಚ್ ೩೬
- ❑ ಪುಸ್ತಕ ಅವಲೋಕನ: ದಲಿತ ಚಳವಳಿ ನಡಿಗೆಯ ದಕ್ಪೂಚಿ
  ○ ಡಾ. ಆನಂದ ಋಗ್ವೇದಿ ೪೦
- ❑ ಧರೆ ಹತ್ತಿ ಉರಿದರೆ... ೧೫ ಸಂಸ್ಕೃತ ವಿಶ್ವವಿದ್ಯಾಲಯದ ಸುತ್ತಮುತ್ತ
  ○ ಡಾ. ಟಿ. ಆರ್ ಚಂದ್ರಶೇಖರ್ ೪೨
- ❑ ದಲಿತ್ ಡೈರಿ
  ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
- ❑ ಬುದ್ಧಾಯಣ ೫೦
  ○ ಸಿ. ಎಚ್. ರಾಜಶೇಖರ್

ಕವನಗಳು :
- ❑ ಹಿಂದಿಂಗಳ ಚಂದು ೧೭
- ❑ ಪುರದಮ್ಮ ೨೩



ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಮತೀಯವಾದದ ವಿಭಿನ್ನ ಮುಖಗಳು

ಮಾನ್ಯ ಸಂಪಾದಕರಿಗೆ,

ಗುರು ಬಾಳಿಗ ಅವರ "ಕೊಂಕಣಿಗಳು ಮತ್ತು ಸಂಘನಿಷ್ಠೆ" ಲೇಖನಕ್ಕೆ ಪ್ರತಿಕ್ರಿಯಿಸಿರುವ ಮಾನ್ಯ ಜಿ. ರಾಜಶೇಖರ್ ಅವರ ಪ್ರತಿಪಾದನೆ(ಸೆಪ್ಟೆಂಬರ್09). ಗುರು ಬಾಳಿಗ ಅವರ ಲೇಖನದಲ್ಲಿ ಅವ್ಯಕ್ತವಾಗಿರುವ ಅಂಶಗಳು ಈ ಪ್ರತಿಕ್ರಿಯೆಯಲ್ಲಿ ವ್ಯಕ್ತವಾಗಿದ್ದು ಹೊಸ ಚಿಂತನೆಗಳನ್ನು ಮೂಡಿಸುತ್ತದೆ. ಬಹುಶಃ ಯಾವುದೇ ಒಂದು ಸಮುದಾಯವನ್ನು ಇಡಿಯಾಗಿ ಸೈದ್ಧಾಂತಿಕ ಚೌಕಟ್ಟಿಗೆ ಒಳಪಡಿಸುವುದು ಸೂಕ್ತವಲ್ಲ ಎನಿಸುತ್ತದೆ. ಈ ಅಂಶವನ್ನು ರಾಜಶೇಖರ್ ಉಲ್ಲೇಖಿಸಿದ್ದಾರೆ. ಗುರು ಬಾಳಿಗಾ ಅವರ ಲೇಖನ ಒಂದು ರೀತಿಯಲ್ಲಿ Defensive ಆಗಿದ್ದರಿಂದ ಅವರ ವಾದಸರಣಿಯಲ್ಲಿ ನನ್ನ ಅನಿಸಿಕೆ, ನನ್ನ ಭಾವನೆ ಮುಂತಾದ ಉಲ್ಲೇಖಗಳು ಮೂಡಿವೆ ಎಂದು ನನ್ನ ಭಾವನೆ.

ರಾಜಶೇಖರ್ ಅವರ ಲೇಖನದಲ್ಲಿ ಪೂರ್ವಗ್ರಹಗಳ ಬಗ್ಗೆ ಉಲ್ಲೇಖಿಸುತ್ತಾ "ಕರ್ನಾಟಕದಲ್ಲಿ ಹಿಂದೂ ಮತೀಯವಾದದಷ್ಟೇ ಅಪಾಯಕಾರಿಯಾದ ಮುಸ್ಲಿಂ ಮತೀಯವಾದವಿದೆ ಎಂದು ಅನೇಕ ಬುದ್ಧಿಜೀವಿಗಳು-ಎಡಪಂಥೀಯರು ಪ್ರತಿಪಾದಿಸುತ್ತಿದ್ದಾರೆ. ಎಡಪಂಥೀಯರೂ ಉಭಯ ಮತೀಯವಾದಿಗಳ ತಕ್ಕಡಿಯನ್ನು ಸರಿದೂಗಿಸುವ ಯತ್ನ ನಡೆಸಿದ್ದಾರೆ" ಎಂದು ಹೇಳಿರುವುದು ಚರ್ಚಾಸ್ಪದ. ರಾಜಶೇಖರ್ ಹೇಳಿರುವಂತೆ ಹಿಂದೂಗಳ ವಿರುದ್ಧ ದ್ವೇಷ ಅಥವಾ ಅಪಪ್ರಚಾರವನ್ನು ಯಾವುದೇ ಇಸ್ಲಾಮಿಕ್ ಕ್ರೈಸ್ತ ಸಂಘಟನೆ ಕೈಗೊಂಡಿಲ್ಲ ಎಂಬ ಸಂಗತಿ ನಿರ್ವಿವಾದ.

ಈ ಪ್ರವೃತ್ತಿಗೆ ಹಲವಾರು ಸಾಮಾಜಿಕ-ರಾಜಕೀಯ ಕಾರಣಗಳೂ ಇರಬಹುದು. ಹಾಗೆಂದ ಮಾತ್ರಕ್ಕೆ ಮುಸ್ಲಿಂ ಸಮುದಾಯದಲ್ಲಿ ಒಂದು ವರ್ಗವು ಮತೀಯವಾದವನ್ನು, ಜಿಹಾದ್ ಸಂಸ್ಕೃತಿಯನ್ನು, ಕೋಮುದ್ವೇಷವನ್ನು ಬೆಳೆಸುತ್ತಿರುವುದನ್ನು ಅಲಕ್ಷಿಸಲಾಗುವುದಿಲ್ಲ. ಬಹುಸಂಖ್ಯಾತ ಮತೀಯವಾದ ಬಲಿಷ್ಠವಾಗಿರುವ ಸಂದರ್ಭದಲ್ಲಿ ಅಲ್ಪಸಂಖ್ಯಾತ ಮತೀಯವಾದ Defensive ಆಗಿರಬಹುದು. ಬಹಿರಂಗವಾಗಿ ತಮ್ಮ ಮತೀಯ ರಾಜಕಾರಣವನ್ನು ಸಾರ್ವತ್ರೀಕರಣಗೊಳಿಸುವ ಕ್ರಿಯೆಯಲ್ಲಿ ಇಸ್ಲಾಮಿಕ್ ಮೂಲಭೂತವಾದಿಗಳು ಹಿಂಜರಿಯುತ್ತಿರಬಹುದು.

ಪತ್ರಾಗ್ನಿ

ಇಲ್ಲಿ ಮತೀಯವಾದವನ್ನು ಎರಡು ರೀತಿಯಲ್ಲಿ ವಿಶ್ಲೇಷಿಸಬೇಕಾಗುತ್ತದೆ. ಸಂಘಟನಾತ್ಮಕವಾಗಿ ಅನ್ಯ ಮತೀಯರ ವಿರುದ್ಧ ದ್ವೇಷ ಹರಡುವ ಸಂಘಪರಿವಾರದ ಶೈಲಿ ವಿಧ್ವಂಸಕವಾಗಿರುತ್ತದೆ. ಇದು ಸಾಮಾಜಿಕ ಸ್ವಾಸ್ಥ್ಯವನ್ನು ಹಾಳುಮಾಡುವ ಪರಂಪರೆಯನ್ನೇ ಸೃಷ್ಟಿಸುವುದನ್ನು ಈಗಾಗಲೇ ಕಂಡಿದ್ದೇವೆ. ಈ ರೀತಿಯ ದ್ವೇಷಪೂರಿತ ಮತೀಯತೆ ಬಹುಸಂಖ್ಯಾತರಿಂದ ಮಾತ್ರ ಸುಲಭ ಸಾಧ್ಯವಾಗುತ್ತದೆ ಕಾರಣ ಅವರಿಗೆ ಸಾಂಸ್ಥಿಕ, ಸಾಮಾಜಿಕ ಮತ್ತು ರಾಜಕೀಯ ತಳಹದಿ ದೊರೆತಿರುತ್ತದೆ. ಈ ಮತೀಯತೆಗೆ ಪ್ರತಿಕ್ರಿಯೆಯಾಗಿ ಮೂಡುವ ಭಾವನಾತ್ಮಕ ಸನ್ನಿವೇಶಗಳು ಅಲ್ಪಸಂಖ್ಯಾತರಲ್ಲೂ ಮತೀಯತೆಯನ್ನು ಗಟ್ಟಿಗೊಳಿಸುವುದೂ ಅಷ್ಟೇ ಸತ್ಯ.

ಕರ್ನಾಟಕದಲ್ಲಾಗಲೀ, ಭಾರತದಲ್ಲಾಗಲೀ ಇದನ್ನೇ ನೋಡುತ್ತಿದ್ದೇವೆ. ಭಾರತದಲ್ಲಿ ಭಯೋತ್ಪಾದನೆ, ಮತೀಯವಾದ ಪರಾಕಾಷ್ಠೆ ತಲುಪಿದ್ದು ಅಯೋಧ್ಯಾ ವಿವಾದದ ನಂತರದಲ್ಲೇ ಎನ್ನುವುದನ್ನು ಗಮನಿಸಬೇಕಾಗುತ್ತದೆ. ಇಂತಲ್ಲಿ ಒಂದು ಸಾಮಾಜಿಕ ಪ್ರತಿಕ್ರಿಯೆಯಾಗಿ ಮೂಡುವ ಅಲ್ಪಸಂಖ್ಯಾತರ ಮತೀಯತೆ ಸಾಂಸ್ಥಿಕವಾಗಿಯಾಗಲೀ, ಸಂಘಟನಾತ್ಮಕವಾಗಿಯಾಗಲೀ ವ್ಯಕ್ತವಾಗುವುದು ದುಸ್ತರವಾಗುತ್ತದೆ. ಹಾಗೊಮ್ಮೆ ವ್ಯಕ್ತವಾದರೂ ಸಣ್ಣಪುಟ್ಟ ಸಂಘರ್ಷಗಳಲ್ಲಿ ಕೊನೆಗೊಳ್ಳುತ್ತದೆ. ಆದರೆ ಸಾಮುದಾಯಿಕ ಚಿಂತನೆಯಲ್ಲಿ, ಸಾಮಾಜಿಕ ಪರಿಸರದಲ್ಲಿ, ಅನ್ಯಮತ ದ್ವೇಷವನ್ನು ಬೆಳೆಸುವ ಪರಂಪರೆ ಅಲ್ಪಸಂಖ್ಯಾತರಲ್ಲೂ ಬೆಳೆಯುವುದನ್ನು ಸಾರಾಸಗಟಾಗಿ ನಿರಾಕರಿಸಲಾಗುವುದಿಲ್ಲ. ಈ ದೃಷ್ಟಿಯಿಂದ ಮುಸ್ಲಿಂ ಸಮುದಾಯದಲ್ಲಿ ಮತೀಯವಾದ ಹೆಚ್ಚಾಗಿದ್ದರೂ ಅಚ್ಚರಿಯೇನಿಲ್ಲ.

ಇಲ್ಲಿ ಮತೀಯವಾದ ಎಂದರೆ ಅವರ ಉಡುಗೆ ತೊಡುಗೆಗಳು, ಟೋಪಿ, ಗಡ್ಡ ಇವೆಲ್ಲವೂ ಗೌಣ. ಇದು ಸಾಂಪ್ರದಾಯಿಕ ಆಚರಣೆಗಳು ಅಸ್ಮಿತೆಗಳ ರಕ್ಷಣೆಯ ಸಂಕೇತಗಳಾಗಿ ಹೊರಹೊಮ್ಮುತ್ತವೆ. ಆದರೆ ಮುಸ್ಲಿಂ ಅಥವಾ ಕ್ರೈಸ್ತ ಸಮುದಾಯದ ಯುವ ಜನತೆಯ ಮನ ಸ್ಥಿತಿಯಲ್ಲಿ ಉಂಟಾಗುವ ಪ್ರಕ್ಷುಬ್ಧತೆ ಮತ್ತು ಗೊಂದಲಗಳು ಎಲ್ಲೋ ಒಂದು ಕಡೆ ವ್ಯಕ್ತವಾಗುವ ಸಾಧ್ಯತೆಗಳಿರುತ್ತವೆ. ಭಯೋತ್ಪಾದಕ ಕೃತ್ಯಗಳಲ್ಲೂ ಅನೇಕ ಸ್ಥಳೀಯ ಯುವಕರು ಸಕ್ರಿಯವಾಗಿ ಅಥವಾ ಪರೋಕ್ಷವಾಗಿ ಭಾಗಿಯಾಗಿರುವುದು ಗಮನಾರ್ಹ.

ಮಲೆಗಾಂವ್ ಪ್ರಕರಣದಲ್ಲಿ ಹಿಂದೂಗಳೂ ಇಂತಹುದೇ ಕೃತ್ಯಗಳಲ್ಲಿ ಭಾಗಿಯಾಗಿರುವುದೂ ಅಷ್ಟೇ ಸತ್ಯ. ಇಂತಿರುವಾಗ ಮುಸ್ಲಿಮರಲ್ಲಿ ಮತೀಯವಾದವನ್ನು ಗುರುತಿಸುವ ಮೂಲಕ ತಕ್ಕಡಿ ಸರಿದೂಗಿಸುವ ಪ್ರಮೇಯ ಎಲ್ಲಿ ಬರುತ್ತದೆ? ಮುಸ್ಲಿಂ ಸಂಘಟನೆಗಳು ದ್ವೇಷ ಪ್ರಚಾರವನ್ನು ಕೈಗೊಳ್ಳುತ್ತಿಲ್ಲ ಎಂದ ಮಾತ್ರಕ್ಕೆ ಅವರಲ್ಲಿ ಮತೀಯವಾದ, ಮೂಲಭೂತವಾದ, ಜಿಹಾದಿ ಪರಿಕಲ್ಪನೆಗಳು ಇಲ್ಲವೇ ಇಲ್ಲ ಎಂದು ಹೇಳಲಾಗುವುದೇ? ಇದನ್ನು ಕನ್ನಡ ಬೌದ್ಧಿಕ ಜಗತ್ತಿನ ಹುಸಿ ನ್ಯಾಯಪರತೆ ಎಂಬ ರಾಜಶೇಖರ್ ಅವರ ಅಭಿಪ್ರಾಯ ಒಪ್ಪುವಂತಹುದಲ್ಲ.

ಮತೀಯವಾದ ವ್ಯಕ್ತವಾಗುವ ಮಾರ್ಗಗಳು, ಸ್ವರೂಪಗಳು ಭಿನ್ನವಾಗಿದ್ದರೂ, ಮತೀಯವಾದದ ಇರುವಿಕೆಯನ್ನೇ ಅಲ್ಲಗಳೆಯಲಾಗುವುದಿಲ್ಲ ಅಲ್ಲವೇ? ದಲಿತ ಶೋಷಣೆಯ ವಿಷಯಕ್ಕೆ ಬಂದಾಗ ಬ್ರಾಹ್ಮಣ-ಮೇಲ್ಜಾತಿ ಸಂಘಟನೆಗಳೂ ಹೀಗೆಯೇ ಪ್ರತಿಪಾದಿಸುತ್ತವೆ. "ನಾವೇನೂ ಬ್ರಾಹ್ಮಣರಾಗಿ ದಲಿತರನ್ನು ನಿಕೃಷ್ಟವಾಗಿ ಕಾಣುತ್ತಿಲ್ಲ" ಎಂಬ ವಾದ ಸರ್ವೇ ಸಾಮಾನ್ಯವಾಗಿ ಕೇಳಿ ಬರುತ್ತದೆ. ಅಂದ ಮಾತ್ರಕ್ಕೆ ಮೇಲ್ಜಾತಿಯವರಲ್ಲಿ ಜಾತಿ ಪ್ರಜ್ಞೆಯೇ ಇಲ್ಲ ಎಂದು ಹೇಳಲಾಗುವುದೇ. ಅದು ವಿಭಿನ್ನ ಸ್ವರೂಪದಲ್ಲಿ ವ್ಯಕ್ತವಾಗುತ್ತಿರುತ್ತದೆ. ಮುಸ್ಲಿಂ ಮೂಲಭೂತವಾದವೂ ಹಾಗೆಯೇ ಸುಪ್ತವಾಗಿ ಪ್ರಕಟಗೊಳ್ಳುತ್ತಿದೆ.

ಈ ಬೆಳವಣಿಗೆಯನ್ನು ತಡೆಗಟ್ಟುವುದು ಕಷ್ಟವೇನಲ್ಲ ಎಂಬುದು ಸಮಾಧಾನಕರ ಅಂಶ. ಆದರೆ ಆ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿಲ್ಲ. ಮುಸ್ಲಿಮರಲ್ಲಿ ಮತೀಯವಾದವೇ ಇಲ್ಲ ಎಂಬ ವಾದ ಒಂದೆಡೆಯಾದರೆ, ಅದು ಅವರ ಆಂತರಿಕ ವಿಷಯ ಅವರೇ ಬಗೆಹರಿಸಿಕೊಳ್ಳಲಿ ಎಂಬ ಧೋರಣೆ ಮತ್ತೊಂದೆಡೆ ವ್ಯಕ್ತವಾಗುತ್ತಿದೆ. ಈ ಎರಡೂ ಧೋರಣೆಗಳ ನಡುವೆ ಮತೀಯತೆಗೆ ಬಲಿಯಾಗುತ್ತಿರುವ ಯುವಜನತೆಯನ್ನು ಭ್ರಮಾಲೋಕದಿಂದ ಹೊರತರುವ ಕಾರ್ಯ ನಡೆಯಬೇಕಾಗಿದೆ. ಈ ವಿಷಯದಲ್ಲಿ ಸಮಾಜ ಶಾಸ್ತ್ರಜ್ಞರು ಅಧ್ಯಯನ ನಡೆಸಿ ವಾಸ್ತವವನ್ನು ಗ್ರಹಿಸುವ ಅವಶ್ಯಕತೆ ಹೆಚ್ಚಾಗಿದೆ.

ಕಡೆಯದಾಗಿ ಮಾನ್ಯ ರಾಜಶೇಖರ್ ಅವರ ಲೇಖನದ ಕೊನೆಯ ಪ್ಯಾರಾದಲ್ಲಿ ಬಳಸಿರುವ ವರ್ಣನೆ (ನಮ್ಮ ಶರೀರದ....) ಅತಿಯಾಯಿತು ಎನಿಸುತ್ತದೆ. ಗಂಭೀರವಾದ ಸಂವಾದದಲ್ಲಿ ಈ ರೀತಿಯ ಭಾಷೆ ಬಳಸುವ ಅವಶ್ಯಕತೆ ಇತ್ತೇ?

ನಾ ದಿವಾಕರ,
ಮೈಸೂರು



ಯಶಸ್ವಿಯಾಗಲಿ

ಮಾನ್ಯ ಸಂಪಾದಕರಿಗೆ,

ವ್ಯಕ್ತಿಗತ ನಿಂದನೆ, ಸುದ್ದಿಯ ವೈಭವೀಕರಣ ಮತ್ತು ಕಲ್ಪನಾತೀತವಾದ ವರ್ಣರಂಜಿತ ಸುದ್ದಿ ಹೊಸೆಯುವುದೇ ಪತ್ರಿಕಾ ಧರ್ಮವೆಂಬಂತಾಗಿರುವ ಇಂದಿನ ಸಂದರ್ಭದಲ್ಲಿ ವ್ಯಕ್ತಿಯ ವೈಚಾರಿಕ ಪ್ರಜ್ಞೆಯನ್ನು ಇಮ್ಮಡಿಗೊಳಿಸುವಲ್ಲಿ ಸಂವಾದದ ಪ್ರಯತ್ನ ಯಶಸ್ವಿಯಾಗಲಿ.

ಸೌಮ್ಯ,
ಮೈಸೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಮರೆಯದ ಮಣ್ಣು
ಲೇ: ಪಿ.ಲಂಕೇಶ್
ಬೆಲೆ: ರೂ.150/-

ಸುತ್ತಣ ಸಂಗತಿಗಳನ್ನು ಪರಿಶೀಲಿಸುತ್ತಾ ಅದರ ಒಳನೋಟಗಳನ್ನು ಕಾಣಿಸುವ ಲಂಕೇಶರ ಬರಹದ ಅಪೂರ್ವ ಅನುಭವವನ್ನು ಈ ಪುಸ್ತಕದ ಮೂಲಕ ಓದುಗರು ಅನುಭವಿಸುತ್ತಾರೆ. ಸಾಮಾನ್ಯವಾದ ನೋಡುವಿಕೆಯ ಆಳದಲ್ಲಿ ಹುದುಗಿರುವ ಅಸಮಾನ್ಯಸ್ತರಗಳು, ಸ್ಫೋಟಗಳು ಒಂದರ ಜೊತೆ ಮತ್ತೊಂದು ಸೇರುತ್ತ ವಿಶಿಷ್ಟ ಕಥನವಾಗಿ ಮೈ ಪಡೆಯುವ ಕುತೂಹಲ, ವಿಸ್ಮಯ, ನಿಗೂಢತೆಗಳ ವಲಯ ಇಲ್ಲಿನ ಬರಹಗಳಲ್ಲಿ ನಿರ್ಮಾಣಗೊಂಡಿದೆ.

ಪ್ರಕಾಶಕರು: ಲಂಕೇಶ್ ಪ್ರಕಾಶನ ನಂ.9, ಪೂರ್ವ ಆಂಜನೇಯ ಗುಡಿ ರಸ್ತೆ, ಬಸವನ ಗುಡಿ, ಬೆ-560 004





ಕೋಮು ಗಲಭೆಗಳು ಹಾಗೂ ಭಾರತದ ಪೊಲೀಸರು
ಲೇ: ವಿಭೂತಿ ನಾರಾಯಣರಾಯ್
ಅನು: ಹಸನ್ ನಯೀಂ ಸುರಕೋಡ
ಬೆಲೆ: ರೂ. 60/-

ಪೊಲೀಸ್‌ಪಡೆಗೆ ಸೇರುವ ಯುವಕರು ಜಾತ್ಯಾತೀತ ಮನೋಧರ್ಮ ಬೆಳೆಸಿಕೊಳ್ಳುತ್ತಾರೆ ಎಂದು ನಿರೀಕ್ಷಿಸಬಹುದಾದರೂ ಹೆಚ್ಚಿನವರು ತಮ್ಮ ಧಾರ್ಮಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವ ಮೂಲಕ ಹಿಂದೂ-ಮುಸಲ್ಮಾನರಾಗಿಯೇ ಉಳಿದು ಬಿಡುತ್ತಾರೆ. ಪ್ರತ್ಯೇಕ ಅಸ್ಮಿತೆಯನ್ನು ಉಳಿಸಿಕೊಳ್ಳುವ ಪ್ರವೃತ್ತಿಯಿಂದಾಗಿ ಕೋಮು ಗಲಭೆಗಳಲ್ಲಿ ಪೊಲೀಸ್ ಪಡೆಗಳ ಪಾತ್ರ ಹೇಗೆ ಕಳಂಕಿತಗೊಳ್ಳುತ್ತದೆ ಎಂಬುದನ್ನು ಈ ಕೃತಿ ವಿಶದಪಡಿಸುತ್ತದೆ.

ಪ್ರಕಾಶನ: ಲೋಹಿಯಾ ಪ್ರಕಾಶನ ಕಪ್ಪುಗಲ್ಲು ರಸ್ತೆ, ಗಾಂಧಿನರ, ಬಳ್ಳಾರಿ

ಹೊಸ ಪುಸ್ತಕ



ಪ್ರತಿಚಿಂತನೆ
ಮೂಲ: ಕಿಷನ್ ಪಟ್ನಾಯಕ್
ಅನು: ಹಸನ್ ನಯೀಂ ಸುರಕೋಡ
ಬೆಲೆ: ರೂ.150/-

ಜಗತ್ತಿನಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ನಮ್ಮದು. ಆದರೆ ಪ್ರಜಾಪ್ರಭುತ್ವವನ್ನು ನಾವು ಒಂದು ಬಿಳಿ ಆನೆಯನ್ನಾಗಿ ಸಲಹುತ್ತಿದ್ದೇವೆ. ಸಂಸತ್ತು ಬರೀ ಮಾತಿನ ಅಂಗಡಿಯಾಗಿದೆ, ರಾಜಕೀಯ ಗೂಂಡಾಗಳಿಗೆ ಒಂದು ಆಡುಂಬೋಲವಾಗಿದೆ. ಪ್ರತಿಭಟನೆ, ಹೋರಾಟಗಳನ್ನೇ ಮರೆತ ಪ್ರಜಾತಂತ್ರ ವ್ಯವಸ್ಥೆಗೆ ಪಾರ್ಶ್ವವಾಯು ಬಡಿದಂತಾಗಿದೆ. ಇಂಥ ಸಂದರ್ಭದಲ್ಲಿ ಕಿಷನ್ ಪಟ್ನಾಯಕರ ಚಿಂತನೆಗಳು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಾಯಕಲ್ಪ ನೀಡಬಲ್ಲವು. ಖ್ಯಾತ ಸಮಾಜವಾದಿ ಚಿಂತಕ ಕಿಷನ್ ಪಟ್ನಾಯಕರ ಚಿಂತನೆಗಳ ಓದಲೇ ಬೇಕಾದ ಅಪರೂಪದ ಕೃತಿ ಇದು.

ಪ್ರಕಾಶನ: ಲೋಹಿಯಾ ಪ್ರಕಾಶನ ಕಪ್ಪುಗಲ್ಲು ರಸ್ತೆ, ಗಾಂಧಿನರ, ಬಳ್ಳಾರಿ

ಜೇನು
ಶ್ರೀ ಶಿವಮೂರ್ತಿ ಮುರುಘಾಶರಣರು
ಬೆಲೆ: ರೂ.300/-

ಲೇಖಕರ ದೃಷ್ಟಿಯಲ್ಲಿ ಜೀವನವೆಂದರೆ ಘಟನಾವಳಿ. ಅವರ ಬದುಕಿನ ಘಟನಾವಳಿಗಳನ್ನು ಆಯ್ದು ಅವುಗಳಿಗೆ ಒಂದು ತಾತ್ವಿಕವಾದ ಸ್ಪರ್ಶವನ್ನು ನೀಡಲು ಯತ್ನಿಸಿದ್ದಾರೆ. ನಾನಿಲ್ಲದಾಗ ಏನೇನೋ ದಂತಕತೆಗಳನ್ನು ಹುಟ್ಟುವ ಸಾಧತೆ ಇದೆ. ಅದರ ಬದಲಾಗಿ ನಾನೇ ಸ್ವತಃ ಘಟನೆಗಳನ್ನು ನಿರೂಪಿಸಿದ್ದಾರೆ ಯಾವ ಗೊಂದಲಕ್ಕೂ ಆಸ್ಪದ ಇರುವುದಿಲ್ಲ. ಅಂತಹ ಒಂದು ಸಧಾಶಯದಿಂದ ಕೈಗೊಂಡಿರುವ ವಿನಮ್ರ ಪ್ರಯತ್ನ ಇದು ಎಂದು ಹೇಳುವ ಮೂಲಕ ಈ ಪುಸ್ತವನ್ನ ಕೊಡುಗೆಯಾಗಿ ನೀಡಿದ್ದಾರೆ.

ಪ್ರಕಾಶನ: ಮುರುಘರಾಜೇಂದ್ರ ಗ್ರಂಥ ಮಾಲೆ ಮುರುಘಾಮಠ, ಚಿತ್ರದುರ್ಗ



ವಸಿಷ್ಠರು ಮತ್ತು ವಾಲ್ಮೀಕಿಯರು
ಲೇ: ಡಿ.ಎಸ್.ನಾಗಭೂಷಣ
ಬೆಲೆ: ರೂ. 150/-

ಲೇಖಕರ ಸಮಾಜವಾದಿ ಸಂಕಥನಗಳ ಮಾಲಿಕೆಯಲ್ಲಿನ ಮೂರನೇ ಸಂಪುಟ ಇದು. ಸಮಾಜವಾದ ಕುರಿತ ಲೇಖಕರ ತಾತ್ವಿಕ ಆಸಕ್ತಿ, ಕುತೂಹಲಗಳಿಂದ ಹುಟ್ಟಿದ ವಿಶ್ಲೇಷಣೆಗಳು ಈ ಕೃತಿಯಲ್ಲಿವೆ. ಕಳೆದ ಶತಮಾನದ ಅಂತ್ಯದ ವೇಳೆಗೆ ಸಮಾಜವಾದ ರಾಜಕಾರಣವನ್ನು ಸೋಲಿಸಿ ಮುನ್ನೆಡೆಯಿತೆಂದು ಹೇಳಲಾದ ಮುಕ್ತ ಮಾರುಕಟ್ಟೆಯ ಬಂಡವಾಳಶಾಹಿ ರಾಜಕಾರಣ, ಜಾಗತಿಕ ಆರ್ಥಿಕ ಹಿಂಜರಿತದಿಂದಾಗಿ ಹೇಗೆ ತನ್ನೆಲ್ಲ ವಿಶ್ವಾರ್ಹತೆಯನ್ನು ಕಳೆದುಕೊಳ್ಳತೊಡಗಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಪ್ರಕಾಶನ: ಲೋಹಿಯಾ ಪ್ರಕಾಶನ ಗಾಂಧಿನರ, ಬಳ್ಳಾರಿ-583 103



ನೀಲು
ಲೇ: ಪಿ.ಲಂಕೇಶ್
ಬೆಲೆ: ರೂ. 150/-

ಚರಿತ್ರೆ, ರಾಜಕೀಯ, ನೀತಿ-ಅನೀತಿ, ಸೃಜನಶೀಲತೆ, ಸಾಹಸ, ಆಟ ಆಟದ ವಿವಿಧ ಬಗೆ-ಭಂಗಿಗಳು, ಯುದ್ಧ, ಜೂಜು, ಬಡತನ-ಸಿರಿತನ ಹೀಗೆ ವೈವಿಧ್ಯದಿಂದ ಕೂಡಿದ ಅಸಂಖ್ಯ ಸಂಗತಿಗಳೊಂದಿಗೆ ಪಿಸುಮಾತನಾಡುವಂತಿವೆ ಇಲ್ಲಿನ ಕವನಗಳು. ಆದರೆ ಇದ್ಯಾವುದೂ ನೇರವೂ ಅಲ್ಲ, ಸರಳವೂ ಅಲ್ಲ. ಈ ಎಲ್ಲಾ ಆಸಕ್ತಿಯಿಂದ ಕೂಡಿದ ಸಂಗತಿಗಳನ್ನು, ಅದರಿಂದ ಹುಟ್ಟಿದ ಅನುಭೂತಿಗಳನ್ನು ಸೂಕ್ಷ್ಮಪರಿಶೀಲನೆಗೆ ಒಡ್ಡಿ ರೂಪಕಗೊಳಿಸುವ ಸಂಕೇತಗೊಳಿಸುವ ಪರಿಣಿತಿಯನ್ನು ಇಲ್ಲಿನ ಕವನಗಳಲ್ಲಿ ಕಾಣುತ್ತೇವೆ.

ಪ್ರಕಾಶಕರು: ಲಂಕೇಶ್ ಪ್ರಕಾಶನ ಬಸವನ ಗುಡಿ, ಬೆಂಗಳೂರು-4

ಸಂಪಾದಕೀಯ

ನ್ಯಾಯಾಂಗಕ್ಕೆ ಗೆದ್ದಲು ಹತ್ತಿದ್ದು ಯಾವಾಗ?

ನಿಮಗೆ ಆಶ್ಚರ್ಯವಾಗಬಹುದು. ಇಂಥದೊಂದು ಪ್ರಶ್ನೆ ಕೇಳುವುದು ಕೂಡ ಅಪರಾಧ! ಯಾಕೆಂದರೆ, ನ್ಯಾಯಾಂಗದ ಬಗ್ಗೆಯಾಗಲೀ, ನ್ಯಾಯಾಧೀಶರ ಬಗ್ಗೆಯಾಗಲೀ, ಅಥವಾ ಅವರು ಕೊಡುವ ತೀರ್ಪುಗಳ ಬಗ್ಗೆಯಾಗಲೀ ಮಾತನಾಡಿದರೆ ಜೈಲು ಸೇರಬೇಕಾದೀತು ಎನ್ನುವ ಅಘೋಷಿತ ಆತಂಕದ ವಾತಾವರಣ ಸಮಾಜದಲ್ಲಿದೆ.

ಭಾರತೀಯ ನ್ಯಾಯಾಂಗ ವ್ಯವಸ್ಥೆ ಹಲವು ಕಾರಣಗಳಿಗಾಗಿ ಈಚೆಗೆ ಸಾರ್ವಜನಿಕ ಚರ್ಚೆಯ ವಸ್ತುವಾಗಿದೆ. ನ್ಯಾಯಾಂಗ ವ್ಯವಸ್ಥೆ ಆಗಾಗ ನೀಡುವ ತೀರ್ಪುಗಳಿಂದಾಗಿ ಕೆಲವು ಬಾರಿ ಹೀಗನ್ನಿಸಿದರೆ, ಮತ್ತೆ ಕೆಲವು ಬಾರಿ ನ್ಯಾಯಾಧೀಶರುಗಳ ನಡತೆಗಳಿಂದಾಗಿ ಜನರ ಗಮನ ಸೆಳೆಯುತ್ತಿದೆ. ಕಳೆದ ಕೆಲವು ತಿಂಗಳುಗಳಿಂದ ನ್ಯಾಯಾಧೀಶರ ಆಸ್ತಿ ಘೋಷಣೆ ಕುರಿತಂತೆ ವಿವಿಧ ನ್ಯಾಯಾಧೀಶರ ಭಿನ್ನಾಭಿಪ್ರಾಯಗಳಿಂದಾಗಿ ಚರ್ಚೆಗೆ ಗ್ರಾಸ ಒದಗಿಸಿದ್ದ ನ್ಯಾಯಾಂಗ ವ್ಯವಸ್ಥೆ ಈಗ ನ್ಯಾಯಾಧೀಶರ ಭ್ರಷ್ಟಚಾರದಿಂದಾಗಿ ಮತ್ತೆ ಚರ್ಚೆಯ ಕೇಂದ್ರ ಬಿಂದುವಾಗಿದೆ.

ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯ ಮೂರ್ತಿ ದಿನಕರನ್ ಈಗ ವಿವಾದದ ಸುಳಿಗೆ ಸಿಕ್ಕಿಬಿದ್ದಿದ್ದಾರೆ. ಅವರ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಹಾಗೂ ಅಧಿಕಾರ ದುರುಪಯೋಗದ ಆರೋಪಗಳು ಕೇಳಿಬಂದಿವೆ. ಈ ಯಾವ ಆರೋಪಗಳಿಗೂ ನ್ಯಾಯಾಮೂರ್ತಿ ದಿನಕರನ್ ಸಾರ್ವಜನಿಕವಾಗಿ ಉತ್ತರ ನೀಡಿಲ್ಲ. ನ್ಯಾಯಮೂರ್ತಿಯಾಗಿ ಅವರು ಉತ್ತರ ನೀಡುವಂತೆಯೂ ಇಲ್ಲ!

ಈ ಆರೋಪಗಳು ನಿಜವೋ ಸುಳ್ಳೋ ಗೊತ್ತಿಲ್ಲ. ಆದರೆ ಈ ಆರೋಪ ಮಾಡುತ್ತಿರುವವರು ವಹಿಸುತ್ತಿರುವ ವಿಶೇಷ ಆಸಕ್ತಿಯಿಂದಾಗಿ ಇದಕ್ಕೆ ಸಾಮಾಜಿಕವಾದ ಮತ್ತ್ಯಾವುದೋ ಕಾರಣ ಇರಬಹುದೆಂಬ ಶಂಕೆ ವ್ಯಾಪಕವಾಗಿ ಮೂಡುತ್ತಿದೆ. ಯಾಕೆಂದರೆ ಅರೋಪಕ್ಕೊಳಗಾಗಿರುವ ನ್ಯಾಯಮೂರ್ತಿ ದಿನಕರನ್ ದಲಿತ ಜನಾಂಗಕ್ಕೆ ಸೇರಿದವರು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನಿಯೋಜಿತಗೊಳ್ಳಲಿರುವವರು. ಅಲ್ಲದೆ ಅವರ ವಿರುದ್ಧ ನಿಂತಿರುವವರೆಲ್ಲ ಪುರೋಹಿತಶಾಹಿಯ ವಕ್ತಾರರು! ರಾಮಾ ಜೋಯಿಸ್ ಮುಂತಾದ ಸಂಘಪರಿವಾರದ ವಕ್ತಾರರು ಹೇಗಾದರೂ ಮಾಡಿ ನ್ಯಾಯಮೂರ್ತಿ ದಿನಕರನ್ ಸುಪ್ರಿಂ ಕೋರ್ಟಿಗೆ ಕಾಲಿಡದಂತೆ ಮಾಡಲು ಹಗಲಿರುಳು ಒದ್ದಾಡುತ್ತಿರುವುದನ್ನು ನೋಡಿದರೆ ಇದರ ಹಿಂದಿನ ಮರ್ಮ ಅರ್ಥವಾಗುತ್ತದೆ.

ಭ್ರಷ್ಟಚಾರ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗಗಳಿಗೆ ಯಾರೂ ಹೊರತಲ್ಲ. ಅದರಲ್ಲಿ ದಲಿತ ಹಿಂದುಳಿದ ಅಲ್ಪಸಂಖ್ಯಾತ ಇತ್ಯಾದಿ ಬೇಧವೇನಿಲ್ಲ. ಆದರೆ ದಲಿತ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಕೋಮಿನವರು ಮಾತ್ರ ಇಂಥ ಆರೋಪಗಳಿಗೆ ಸಿಕ್ಕಿಕೊಳ್ಳುತ್ತಿರುವುದು ಮತ್ತು ಅಂಥವರು ಸಿಕ್ಕಿಕೊಂಡಾಗ ಮಾತ್ರ ಇಡೀ ದೇಶದಲ್ಲಿ ಮಾಧ್ಯಮಗಳು ಡಂಗುರ ಬಾರಿಸುವುದು ಮಾತ್ರ ಚಿದಂಬರ ರಹಸ್ಯ! ಹಿಂದೆ ಕರ್ನಾಟಕದಲ್ಲಿ ನ್ಯಾಯಮೂರ್ತಿ ಭೀಮಯ್ಯನವರಿಗೆ ನೀಡಿದ ಕಿರುಕುಳ, ರೆಸಾರ್ಟ್ ಹಗರಣದಲ್ಲಿ ಸಿಕ್ಕಿಬಿದ್ದ(?) ನ್ಯಾಯಮೂರ್ತಿಗಳ ಬಗ್ಗೆ ಮಾಧ್ಯಮಗಳು ನೀಡಿದ (ಅಪ)ಪ್ರಚಾರ ಇವುಗಳನ್ನೆಲ್ಲ ನೋಡಿದರೆ ಈ ರಹಸ್ಯದ ಹಿಂದಿನ ಕಾರ್ಯಸೂಚಿ ಅರ್ಥವಾಗುತ್ತದೆ!

ನಮ್ಮ ನ್ಯಾಯಾಂಗ ವ್ಯವಸ್ಥೆ ಸಂಪೂರ್ಣ ನಿಷ್ಪಕ್ಷಪಾತವಾಗಿ ವರ್ತಿಸುತ್ತಿಲ್ಲ ಎಂಬ ಕೊರಗು ಅಲಕ್ಷಿತ ಸಮುದಾಯಗಳಲ್ಲಿ ಬಹಳ ಕಾಲದಿಂದ ಉಳಿದುಬಿಟ್ಟಿದೆ. ಈ ಪಕ್ಷಪಾತವೇ ಹಿಂದೂ ಸಂಸ್ಕೃತಿಯ ಅಂತಃಸತ್ವ, ಸಾವಿರಾರು ವರ್ಷಗಳಿಂದ ಅದು ನಡೆದುಕೊಂಡು ಬಂದಿದೆ. ಆದರೆ ಸ್ವಾತಂತ್ರ್ಯಾನಂತರವಾದರೂ ಅದು ಸುಧಾರಿಸಬೇಕಾಗಿತ್ತು. ಸಂವಿಧಾನದಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಯೂ ಸಮಾನವೆಂದು ಘೋಷಿಸಿದ ನಂತರ ಕೂಡ ಅದು ಸರಿಯಾಗಲಿಲ್ಲ. ಮುಂದೆ ಸರಿಯಾಗುವ ಲಕ್ಷಣಗಳೂ ಕಾಣಿಸುತ್ತಿಲ್ಲ!

ನಮ್ಮ ನ್ಯಾಯಾಂಗ ವ್ಯವಸ್ಥೆ ಹೆಸರಿಗೆ ಪ್ರತ್ಯೇಕ ಅಸ್ತಿತ್ವ ಉಳಿಸಿಕೊಂಡಿದ್ದರೂ, ಅದು ರಾಜಕೀಯ ಸಾಮಾಜಿಕ ಕಾರಣಗಳಿಂದ ಹೊರಗೆ ಉಳಿದಿಲ್ಲ. ಪ್ರತಿಯೊಬ್ಬ ನ್ಯಾಯಾಧೀಶನ ಆಯ್ಕೆಯಲ್ಲೂ ಸರ್ಕಾರ; ಆ ಮೂಲಕ ರಾಜಕಾರಣಿಗಳು ನೇರವಾಗಿ ಹಸ್ತಕ್ಷೇಪ ನಡೆಸುತ್ತಾರೆ. ಅಷ್ಟೇ ಅಲ್ಲ ತಪ್ಪು ಮಾಡಿದ ನ್ಯಾಯಾಮೂರ್ತಿಯೊಬ್ಬನಿಗೆ ಶಿಕ್ಷೆ ವಿಧಿಸಲೂ ಈಗಿನ ವ್ಯವಸ್ಥೆಯಲ್ಲಿ ಸರಿಯಾದ ಕ್ರಮಗಳೇ ಇಲ್ಲ. ದೋಷಾರೋಪ ಹೊರಿಸಿ, ಛೀಮಾರಿ ಹಾಕುವುದಷ್ಟೇ ವಿಧಿಸಬಹುದಾದ ದೊಡ್ಡ ಶಿಕ್ಷೆ. ಆ ಶಿಕ್ಷೆಯನ್ನು ಕೂಡ ಈವರೆಗೆ ಯಾರಿಗೂ ವಿಧಿಸಲಾಗಿಲ್ಲ.

ವಿಚಿತ್ರವೆಂದರೆ ನ್ಯಾಯಾಂಗ ವ್ಯವಸ್ಥೆ ಬಗ್ಗೆ ಭಯ ಮತ್ತು ಆತಂಕದಿಂದಲೇ ಸಮಾಜ ಪ್ರತಿಕ್ರಿಯಿಸುತ್ತದೆ. ಸಾಮಾನ್ಯವಾಗಿ ನ್ಯಾಯಾಲಯಗಳೆಂದರೆ ತಮಗೆ ನ್ಯಾಯ ದೊರಕಿಸಿಕೊಡುವ ಸಾಧನಗಳೆಂದು ಬಹಳಷ್ಟು ಜನರು ತಿಳಿದಿಲ್ಲ. ಪೊಲೀಸ್ ಠಾಣೆಗಳನ್ನು ಕಂಡರೆ ಹೆದರುವಂತೆ ಜನ ನ್ಯಾಯಾಲಯಗಳಿಗೂ ಹೆದರುತ್ತಾರೆ. ಕೆಲವರಿಗೆ ವಕೀಲರನ್ನು ಕಂಡರೇ ಭಯ. ಇನ್ನು ಕೆಲವರಿಗೆ ನ್ಯಾಯಾಧೀಶರನ್ನು ಕಂಡರೆ ಭೂಮಿಗೇ ಇಳಿದು ಹೋಗುತ್ತಾರೆ. ಇಂದಿಗೂ ಊಳಿಗಮಾನ್ಯ ವ್ಯವಸ್ಥೆಯ ಪಡಿಯಚ್ಚಿನಂತೆಯೇ ನ್ಯಾಯಾಂಗ ವ್ಯವಸ್ಥೆ ಕೆಲಸ ಮಾಡುತ್ತಿದೆ. ಕೆಲವು ನ್ಯಾಯಾಲಯಗಳಂತೂ, ಜನರು ಚಪ್ಪಲಿ ಧರಿಸಿ ಬರಲೂ ಬಿಡುವುದಿಲ್ಲ. ಬಹುತೇಕ ನ್ಯಾಯಾಲಯಗಳಲ್ಲಿ ಕಾಲು ಮೇಲೆ ಕಾಲು ಹಾಕಿ ಕುಳಿತುಕೊಳ್ಳುವುದೂ ಅಪರಾಧ. ನ್ಯಾಯಾಲಯಕ್ಕೆ ಹೋಗುವ ಪ್ರತಿಯೊಬ್ಬರೂ 'ಜೀಹುಜೂರ್'ಗಳಂತೆಯೇ ನಡೆದುಕೊಳ್ಳಬೇಕು. 'ವಿಧೇಯತೆ' ಅಂದರೆ 'ಗುಲಾಮಗಿರಿ' ಅಂತ ಕೆಲವು ನ್ಯಾಯಾಲಯಗಳು ಭಾವಿಸಿವೆಯೇನೋ ಎನ್ನುವ ಅನುಮಾನ ಬರುವಷ್ಟರ ಮಟ್ಟಿಗೆ ಅಲ್ಲಿನ ವಾತಾವರಣ ಇರುತ್ತದೆ.

ನ್ಯಾಯಾಂಗ ವ್ಯವಸ್ಥೆ ಜನ ಸ್ನೇಹಿಯಾಗಿಲ್ಲ ಎನ್ನುವುದಂತೂ ವ್ಯಾಪಾಕವಾಗಿರುವ ಸಂಗತಿ. ಕೆಳನ್ಯಾಯಾಲಯಗಳ ಸ್ಥಿತಿ ಒಂದು ರೀತಿಯಾದರೆ, ಮೇಲಿನ ಹಂತದ ನ್ಯಾಯಾಲಯಗಳು ಸಾಮಾನ್ಯ ಜನರಿಗೆ ನಿಲುಕದ ನಕ್ಷತ್ರಗಳು. ಜಿಲ್ಲಾ ನ್ಯಾಯಾಲಯಗಳ ಮೆಟ್ಟಿಲೇರುವುದರಲ್ಲೇ ಹೈರಾಣಾಗುವ ಜನ, ಇನ್ನು ಹೈಕೋರ್ಟ್ ಸುಪ್ರೀಂ ಕೋರ್ಟ್‌ಗಳ ಕನಸನ್ನಾದರೂ ಕಾಣಲು ಸಾಧ್ಯವಾದೀತೆ? ವಕೀಲರ ಫೀಜು, ನ್ಯಾಯಾಲಯ ಶುಲ್ಕ...ನೆನಸಿಕೊಂಡರೇ ಅವರ ಜಂಘಾಬಲ ಉಡುಗಿ ಹೋಗುತ್ತದೆ! ಈ ನಿಟ್ಟಿನಲ್ಲಿ ನಡೆಯುತ್ತಿರುವ ಸುಧಾರಣಾ ಕ್ರಮಗಳು ಇನ್ನೂ ಜನರಿಗೆ ಮುಟ್ಟಿಲ್ಲ.

ಭ್ರಷ್ಟಾಚಾರ, ಅಧಿಕಾರ ದುರುಪಯೋಗ ಮತ್ತು ಸ್ವಜನ ಪಕ್ಷಪಾತಗಳು ಇರದ ಕ್ಷೇತ್ರವೇ ಇಲ್ಲವೇನೋ ಅನ್ನುವಷ್ಟರ ಮಟ್ಟಿಗೆ ವ್ಯವಸ್ಥೆ ಹದಗೆಟ್ಟು ಹೋಗಿದೆ. ಅಲ್ಲೋ ಇಲ್ಲೋ ಕಂಡು ಬರುವ ನ್ಯಾಯದ ಸಣ್ಣ ಬೆಳಕುಗಳೂ ಅಸಮಾನ ಜಾತಿ ವ್ಯವಸ್ಥೆಯ ಕರಾಳತೆಯಲ್ಲಿ ಕರಗಿ ಹೋಗಬಾರದೆನ್ನುವುದಷ್ಟೇ ಸಧ್ಯದ ಕಳವಳ.

ನ್ಯಾಯಮೂರ್ತಿ ದಿನಕರನ್ ಪ್ರಕರಣ ಇದರ ಇನ್ನೊಂದು ಉದಾಹರಣೆಯಾಗಬಾರದು!

○ ಇಂದೂಧರ ಹೊನ್ನಾಪುರ



ಸಂಪಾದಕರೊಡನೆ ಸಂವಾದ

'ಗಣಿತಶಾಸ್ತ್ರವೆಂಬುದು ಅಂಕಶಾಸ್ತ್ರವಲ್ಲ'

ಡಿ.ಎಸ್.ನಾಗಭೂಷಣ

ಮಾನ್ಯರೇ,

ಕಳೆದ ಸಂಚಿಕೆಯ ಮೂರು ಬರಹಗಳಿಗೆ ಇಲ್ಲಿ ಪ್ರತಿಕ್ರಿಯಿಸಲಿಚ್ಛಿಸುವೆ.

1. ಮೊದಲನೆಯದು ಶಿವಸುಂದರ್ ಅವರ 'ಪ್ರಜಾತಂತ್ರವನ್ನೇ ಸೋಲಿಸುವ ಚುನಾವಣೆಗಳು' ಲೇಖನಕ್ಕೆ ನಾನು ಬರೆದ ಪ್ರತಿಕ್ರಿಯೆಗೆ ಅವರು ಬರೆದಿರುವ ಪ್ರತಿಕ್ರಿಯೆಯ ಬಗ್ಗೆ. ನಾನು ಬರೆದದ್ದು ಮುಕ್ಕಾಲು ಪುಟದ ಟಿಪ್ಪಣಿ. ಅದಕ್ಕೆ ಇವರದ್ದು ಎರಡು ಪುಟಗಳನ್ನೂ ಮೀರಿದ ಪ್ರತಿಕ್ರಿಯೆ! ಇರಲಿ, ಶಿವಸುಂದರ್ ಅವರಿಗೆ ಯಾರೋ ನನ್ನನ್ನು ಗಣಿತಶಾಸ್ತ್ರದ ವಿದ್ಯಾರ್ಥಿಯೆಂದು ಪರಿಚಯಸಿದ್ದಾರೆಂದು ಕಾಣುತ್ತದೆ. ಹಾಗಾಗಿಯೇ ಅವರು ತಮ್ಮ ಈ ಪ್ರತಿಕ್ರಿಯೆಯಲ್ಲಿ ಸ್ವತಃ ತಾವೇ ತಮ್ಮ ವಾದದ ಸಮರ್ಥನೆಗಾಗಿ ಪದೇ ಪದೇ ಅಂಕೆ-ಸಂಖ್ಯೆಗಳನ್ನು ಮಂಡಿಸುತ್ತಾ, ನನ್ನ ಮಾತುಗಳನ್ನು ಮಾತ್ರ ಪದೇ ಪದೇ ಇದು ಗಣಿತವಲ್ಲ, ಅದು ಗಣಿತದ ಹಾಗಲ್ಲ ಎಂದು ವ್ಯಂಗ್ಯವಾಗಿ ಹೇಳುತ್ತಾ ತಿರಸ್ಕರಿಸಲು ಪ್ರಯತ್ನಿಸಿದ್ದಾರೆ! ಶಿವಸುಂದರ್ ಅವರ ಗಮನಕ್ಕೆ ಈ ಮಾಹಿತಿ: ಗಣಿತಶಾಸ್ತ್ರವೆಂಬುದು ಅಂಕಶಾಸ್ತ್ರವಲ್ಲ. ಅಂಕಗಣಿತವೆಂಬುದು ಗಣಿತ ಶಾಸ್ತ್ರದ ಪ್ರಾಥಮಿಕ ಹಂತವಷ್ಟೆ. ಗಣಿತಶಾಸ್ತ್ರ ಮೂಲತಃ ರೂಪ (form)ಗಳ ಮತ್ತು ಸಂರಚನೆ(structure)ಗಳ ಅಧ್ಯಯನ ಶಾಸ್ತ್ರ. ನನ್ನ ಬರವಣಿಗೆಯನ್ನು ಶಿವಸುಂದರ್ ಅವರು ಈ ದೃಷ್ಟಿಯಿಂದ ನೋಡಿದರೆ ಹೆಚ್ಚು ಪ್ರಯೋಜನವಾದೀತು!

ಇನ್ನು ನೇರವಾಗಿ ಶಿವಸುಂದರರ ಉತ್ತರಕ್ಕೆ ಬರುವುದಾದರೆ, ನನ್ನ ಪ್ರತಿಕ್ರಿಯೆಗೆ ಕಾರಣವಾದ ಮತ್ತು ನನ್ನ ಆ ಪ್ರತಿಕ್ರಿಯೆಯ ಆರಂಭದಲ್ಲೇ ಹೇಳಿದ ಈ ಮಾತನ್ನು ಅವರು ಗಮನಿಸಿದಂತೆ ಕಾಣುವುದಿಲ್ಲ: 'ಚುನಾವಣೆಗಳಿಗಿಂತ ಅಥವಾ ಈ ತರಹದ ಚುನಾವಣೆಗಳಿಗಿಂತ ಇನ್ನೂ ಉತ್ತಮವಾದ ಚುನಾವಣಾ ಪದ್ಧತಿಯ ಮೂಲಕ ಪ್ರಜಾತಂತ್ರವನ್ನು ಬಲಪಡಿಸುವ ಅಥವಾ ಅವರು ಹೇಳುವಂತಹ 'ಸೋಲಿ'ನಿಂದ ಕಾಪಾಡುವ ವಿಧಾನಗಳ ಬಗ್ಗೆಯೇನೂ ಅವರು ಬರೆದಂತಿಲ್ಲ.' ಏಕೆಂದರೆ, ಶಿವಸುಂದರ ಲೇಖನ ಚುನಾವಣಾ ಪದ್ಧತಿಯನ್ನೇ, ಅದರ ಪರಿಕಲ್ಪನೆಯನ್ನೇ ನಿರಾಕರಿಸುವ, ಹಾಸ್ಯಾಸ್ಪದವೆಂದು ಪ್ರತಬಿಂಬಿಸುವ ಪ್ರಯತ್ನ ಮಾಡಿತ್ತು. ಅದರಲ್ಲಿ ರಾಷ್ಟ್ರ ಈವರೆಗೆ ಪರಿಶೀಲಿಸಿರುವ; ಆದರೆ ಕಾರ್ಯಶೀಲಗೊಳಿಸಲು ಸಾಧ್ಯವಾಗದಿರುವ ಚುನಾವಣಾ ಸುಧಾರಣೆಗಳ ಬಗ್ಗೆ ಸೊಲ್ಲೇ ಇರಲಿಲ್ಲ! ಅವರ ಈ ಲೇಖನದ ಈ ವ್ಯಂಗ್ಯಪೂರ್ಣ ವಾಕ್ಯವನ್ನೂ ಗಮನಿಸಿದರೆ ಇದು ಇನ್ನಷ್ಟು ಸ್ಪಷ್ಟವಾದೀತು: '.... ಇದಕ್ಕಿಂತ ಉತ್ತಮ ಪ್ರಜಾತಂತ್ರವಾಗಲೀ, ಚುನಾವಣೆಗಿಂತ ಉತ್ತಮ ಪ್ರಜಾತಾಂತ್ರಿಕ ಪ್ರಕ್ರಿಯೆಯಾಗಲೀ ಮತ್ತೊಂದಿಲ್ಲವೆಂದು ಬಹುತೇಕ ಗಾಂಧೀವಾದಿಗಳಿಂದ ಹಿಡಿದು, ಸಮಾಜವಾದಿ, ಸ'ಮಾಜಾ'ವಾದಿಗಳ ತನಕ ಎಲ್ಲರ ಅಭಿಪ್ರಾಯ'.

ಆದರೆ ಈಗ ನನಗೆ ಉತ್ತರಿಸಲು ಶಿವಸುಂದರ್ ತಂತ್ರ ಬದಲಿಸಿ, ಚುನಾವಣಾ ಸುಧಾರಣೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡತೊಡಗಿದ್ದಾರೆ! ಪ್ರಾಮಾಣಿಕವಾ ಗಿದ್ದರೆ, ಇದೂ ಒಳ್ಳೆಯ ಬೆಳವಣಿಗೆಯೇ! ಆದರೆ ತಮಾಷೆಯೆಂದರೆ, ಇವನ್ನು ನಾನು ವಿರೋಧಿಸುತ್ತಿರುವ ಹಾಗೆ ಇವರು ಅದರ ವಿವರಗಳನ್ನು ನೀಡುತ್ತಾ ಹೋಗಿರುವುದು! ನಾನು ನನ್ನ ಪ್ರತ್ರಿಕ್ರಿಯೆಯಲ್ಲಿ ವಿವರಿಸಿದ ಪ್ರಜಾತಂತ್ರದ 'ಸ್ವಯಂ ಚಿಕಿತ್ಸೆ'ಯ ರೀತಿ-ನೀತಿಗಳಲ್ಲಿ ಈ ಚುನಾವಣಾ ಸುಧಾರಣೆಗಳೂ ಸೇರಿರುತ್ತವೆ ಎಂಬುದು ಶಿವಸುಂದರರಂತಹ ಬುದ್ಧಿವಂತರಿಗೆ ಅರ್ಥವಾಗದೇ ಹೋಗಿರುವುದು ಆಶ್ಚರ್ಯಕರ! ಹಾಗಾಗಿಯೇ ಇವರು ಅದರಲ್ಲಿ ಇದನ್ನು ಬಿಟ್ಟು, ಇನ್ನೆಲ್ಲ ಅರ್ಥಗಳನ್ನೂ ಹೊರಡಿಸಿಕೊಂಡು ಸುಮ್ಮನೆ ವಾದ ಮಾಡುತ್ತಾ ಹೋಗಿದ್ದಾರೆ. ಅದರ ಭಾಗವಾಗಿ, ಚುನಾವಣಾ ಸುಧಾರಣೆಗಳನ್ನು ನಾನು 'ಅಕಾಲಿಕ' ಎಂದು ಸೂಚಿಸಿದ್ದೇನೆ ಎಂದು ತಪ್ಪಾಗಿ ನಿರೂಪಿಸುತ್ತಾರೆ. ಆದರೆ ಈ ಸುಧಾರಣೆಗಳನ್ನು ಚುನಾವಣಾ ಪದ್ಧತಿಯ ಮೇಲೇ ಸಾರಾಸಗಟಾಗಿ ದಾಳಿ ಮಾಡುವ ಮೂಲಕ ತರಲಾಗುವುದಿಲ್ಲ ಎಂಬುದನ್ನು ಶಿವಸುಂದರ್ ಅವರೂ ಬಲ್ಲರೆಂದು ನಾನು ಭಾವಿಸುತ್ತೇನೆ. ನಾನು 'ಅಕಾಲಿಕ' ಎಂದಿರುವುದು, ಚುನಾವಣಾ ಪದ್ಧತಿಯ ಮೇಲೇ ನಡೆಸಿರುವ ಇಂತಹ ನೇರ ದಾಳಿಯನ್ನಷ್ಟೆ ಎಂಬುದನ್ನು ಓದುಗರು ಗಮನಿಸಿದ್ದಾರೆ ಎಂದು ನಂಬಿದ್ದೇನೆ.

> ನನಗೆ ಉತ್ತರಿಸಲು ಶಿವಸುಂದರ್ ತಂತ್ರ ಬದಲಿಸಿ, ಚುನಾವಣಾ ಸುಧಾರಣೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡತೊಡಗಿದ್ದಾರೆ! ಪ್ರಾಮಾಣಿಕವಾಗಿದ್ದರೆ, ಇದೂ ಒಳ್ಳೆಯ ಬೆಳವಣಿಗೆಯೇ! ಆದರೆ ತಮಾಷೆಯೆಂದರೆ, ಇವನ್ನು ನಾನು ವಿರೋಧಿಸುತ್ತಿರುವ ಹಾಗೆ ಇವರು ಅದರ ವಿವರಗಳನ್ನು ನೀಡುತ್ತಾ ಹೋಗಿರುವುದು! ನಾನು ನನ್ನ ಪ್ರತ್ರಿಕ್ರಿಯೆಯಲ್ಲಿ ವಿವರಿಸಿದ ಪ್ರಜಾತಂತ್ರದ 'ಸ್ವಯಂ ಚಿಕಿತ್ಸೆ'ಯ ರೀತಿ-ನೀತಿಗಳಲ್ಲಿ ಈ ಚುನಾವಣಾ ಸುಧಾರಣೆಗಳೂ ಸೇರಿರುತ್ತವೆ ಎಂಬುದು ಶಿವಸುಂದರರರಂತಹ ಬುದ್ಧಿವಂತರಿಗೆ ಅರ್ಥವಾಗದೇ ಹೋಗಿರುವುದು ಆಶ್ಚರ್ಯಕರ! ಹಾಗಾಗಿಯೇ ಇವರು ಅದರಲ್ಲಿ ಇದನ್ನು ಬಿಟ್ಟು, ಇನ್ನೆಲ್ಲ ಅರ್ಥಗಳನ್ನೂ ಹೊರಡಿಸಿಕೊಂಡು ಸುಮ್ಮನೆ ವಾದ ಮಾಡುತ್ತಾ ಹೋಗಿದ್ದಾರೆ.

ಮುಂದುವರೆದು ಶಿವಸುಂದರ್ ಅವರು ಇರಾನ್, ನೇಪಾಳ, ಶ್ರೀಲಂಕಾ ಇತ್ಯಾದಿ ರಾಷ್ಟ್ರಗಳ ಚುನಾವಣಾ ಪದ್ಧತಿಗಳನ್ನು ವಿವರಿಸುತ್ತಾ, ಇವುಗಳಲ್ಲಿ ತಮ್ಮ ಆಯ್ಕೆ ಅಥವಾ ಸಮೀಪದ ಮಾದರಿ ಯಾವುದೆಂದು ಹೇಳದೆಯೇ, ನಾನು ಪ್ರಸ್ತಾಪಿಸಿದ ಭಾರತದ ವಿಶಿಷ್ಟ ರಾಜಕಾರಣದ ಲಯವನ್ನು, ಈ ಲಯ ಇರಾನ್‌ಗಿಂತ ಹಿಂದಿದೆಯೇ, ನೇಪಾಳಕ್ಕಿಂತಲೂ ಹೀನಾಯವಾಗಿದೆಯೇ ಎಂದು ಅಸಂಬದ್ಧವಾಗಿ ಪ್ರಶ್ನಿಸುತ್ತಾ ಹೋಗಿದ್ದಾರೆ! ಲಯದಲ್ಲಿ ಒಳ್ಳೆಯ ಲಯ, ಹೀನಾಯ ಲಯ ಅಥವಾ ಮುಂದುವರೆದ ಲಯ, ಹಿಂದುಳಿದ ಲಯ ಎಂಬುವುಗಳಿರಲಾರವು ಎಂದು ನಾನು ಭಾವಿಸಿದ್ದೇನೆ. ಹಾಗೇ ಲಯವೆಂಬುದು ತಂತಾನೇ ಹುಟ್ಟಿಕೊಳ್ಳುವಂತಹ, ಇವರು ಭಾವಿಸಿದ ಹಾಗೆ ಒಂದು 'ಅಮೂರ್ತ'ವೂ ಅಲ್ಲ ಅಥವಾ 'ವಿಧಿ'ಯೂ ಅಲ್ಲ. ಅದು ಕೂಡಾ ಜನತೆಯ ಭಾಗವಹಿಸುವಿಕೆ, ಪ್ರತಿಭಟನೆ ಮತ್ತು ಹೋರಾಟಗಳ ಮೂಲಕ ಸೃಷ್ಟಿಯಾಗುತ್ತಾ ಹೋಗುವಂತಹದು.

ಆದರೆ ಶಿವಸುಂದರ್ ಅವರ ಸಮಸ್ಯೆ ಎಂದರೆ, ಅವರು ಕಲ್ಪಿಸಿಕೊಂಡಿರುವ ಜನತೆ ಹಾಗೂ ಅವರು ಪ್ರತಿಪಾದಿಸುವಂತಹ ಹೋರಾಟಗಳೇ ಮೂರ್ತವಾದಂತಹವು ಮತ್ತು ಕಾಲ-ದೇಶ ಖಚಿತವಾದಂತಹವು ಎಂದು ನಂಬಿರುವುದು. ಹಾಗಾಗಿಯೇ ಇವರು ಈ 'ಬ್ರ್ಯಾಂಡ್'ನ ಹೋರಾಟಗಳೆಲ್ಲವೂ ಅವರೇ ಒಪ್ಪಿಕೊಂಡಿರುವಂತೆ ಸ್ಟಾಲಿನ್-ಮಾವೋ-ಪ್ರಚಂಡರವರೆಗೆ 'ಬೂರ್ಜ್ವಾ' ನಾಯಕತ್ವನ್ನೇ ಸೃಷ್ಟಿಸಿದ್ದರೂ, ತಮ್ಮ 'ಜನತಾ ಹೋರಾಟ'ದ ತೌಡು ಕುಟ್ಟುವುದನ್ನು ಮಾತ್ರ ಇನ್ನೂ ನಿಲ್ಲಿಸಲಾರದವರಾಗಿದ್ದಾರೆ. ಹಾಗೇ, ಸ'ಮಜಾ'ವಾದಿಗಳು ಎಂಬ ಅಗ್ಗದ ಮತ್ತು ಸವಕಲಾದ ಶಬ್ದ ಬಳಸಿ ತಾವೇ ಮಾಡಿದ ಲೇವಡಿಯ ಪ್ರಯತ್ನವನ್ನು ಮರೆತವರಂತೆ, ಇತರರ ಮೇಲೆ ಲೇವಡಿ-ವ್ಯಂಗ್ಯಗಳ ಆರೋಪ ಮಾಡಿ ಉಪದೇಶಾತ್ಮಕವಾದ ದೊಡ್ಡ ದೊಡ್ಡ ಫರ್ಮಾನುಗಳನ್ನು ಹೊರಡಿಸಬಲ್ಲವರಾಗಿದ್ದಾರೆ.

ಶಿವಸುಂದರ್ ಅವರು ತಮ್ಮ 'ಜನತಾ ಹೋರಾಟ' ಆರಂಭಿಸುವ ಮೊದಲು ಜನತೆ ಮತ್ತು ಹೋರಾಟಗಳನ್ನು ಕುರಿತಂತೆ ಈ ಹುಸಿ 'ಸರ್ವಶ್ರೇಷ್ಠತೆ' ಮತ್ತು 'ಪರಿಶುದ್ಧತೆ'ಗಳ ಕಲ್ಪನೆಗಳನ್ನೂ, ಇತರರ ಮಾತುಗಳ ಬಗ್ಗೆ ಆತ್ಯಂತಿಕ ತೀರ್ಪು ಕೊಡುವ ಧಾಟಿಯನ್ನು ಕೈಬಿಡುವುದು ಒಳಿತು. ಹಾಗೇ ಪ್ರಜಾತಂತ್ರದ ಸಿಪ್ಪೆ ಒಣಕಲಾಗಿದೆ, ಹಣ್ಣು ಕೊಳೆತಿದೆ ಎಂದು ಹಾಹಾಕಾರವೆಬ್ಬಿಸುವುದನ್ನು ಕೂಡಾ. ಸಿಪ್ಪೆ ಒಣಗಿ ಹಣ್ಣು ಕೊಳೆತಲ್ಲೇ ಹೊಸ ಬೆಳೆಗೆ ನೆಲ ಹದವಾಗು

ವುದು. ಹಾಗಾಗಿ, ಶಿವಸುಂದರ್ ಬರೀ ನಮ್ಮ ಪ್ರಜಾತಂತ್ರದ ಸೋಲಿನ ಬಗ್ಗೆಯೇ ವ್ಯಸನಗೊಳ್ಳದೆ, ದ್ವಂದ್ವಮಾನ ಭೌತವಾದದ ಸೋಲುಗಳ ಬಗ್ಗೆಯೂ ಚಿಂತಿಸಿಸುವ ಮೂಲಕ, ಸ್ವಲ್ಪ ಪ್ರಕೃತಿ ಸಹಜವಾಗಿಯೂ ಯೋಚಿಸುವಂತಾಗಲಿ. ಆಗಲಾದರೂ ಪ್ರಜಾತಂತ್ರ ಕುರಿತ ವಿಚಾರ ಮಂಥನದಲ್ಲಿ ಅವರಿಗೆ ಅಮೃತವಾವುದು, ಹಾಲಾಹಲವಾವುದು ಎಂಬುದು ಗೊತ್ತಾಗುವಂತಾಗಲಿ ಎಂಬುದು ನನ್ನ ಹಾರೈಕೆ.

2. ಇನ್ನು ಜಿ.ರಾಜಶೇಖರ್ ಅವರು ಗುರು ಬಾಳಿಗಾ ಅವರ ಲೇಖನಕ್ಕೆ ಪ್ರತಿಕ್ರಿಯಿಸುತ್ತಾ, ಅಷ್ಟಕ್ಕೇ ಸುಮ್ಮನಾಗದೇ, ಗಾಂಧಿವಾದಿಗಳು, ಮಾರ್ಕ್ಸ್‌ವಾದಿಗಳು ಮತ್ತು ಲೋಹಿಯಾವಾದಿಗಳೆಂಬ ತಮ್ಮದೇ ಆದಂತಹ ಕಲ್ಪಿತ 'ಸಮುದಾಯ'ಗಳ ಮೇಲೆ ಪ್ರಯೋಗಿಸಿರುವ ಕಟು ವ್ಯಂಗ್ಯದ ಬಗ್ಗೆ: ಗುರು ಬಾಳಿಗಾ ಅವರ ಲೇಖನವನ್ನು ನಾನು ಸಂಪದ.ನೆಟ್‌ನಲ್ಲಿಯೇ ಓದಿ ಮೆಚ್ಚಿದ್ದೆ. ಆದರೆ ದ.ಕ.ದ ಸಾಮಾಜಿಕ–ರಾಜಕೀಯದ ಐತಿಹಾಸಿಕ ಒಳ ವಿವರಗಳು ಗೊತ್ತಿಲ್ಲದ ಕಾರಣ, ಅವರಿಗೆ ನನ್ನ ಪ್ರತಿಕ್ರಿಯೆ ತಿಳಿಸುವ ಧೈರ್ಯವಾಗಲಿಲ್ಲ. ಆದರೆ ಈ ಒಳ ವಿವರಗಳನ್ನು ಬಲ್ಲ ರಾಜಶೇಖರ್ ಆ ಬರಹವನ್ನು ತಾವು ಏಕೆ ಮೆಚ್ಚಿಕೊಂಡಿರುವುದಾಗಿ ಸರಿಯಾಗಿಯೇ ಹೇಳುತ್ತಾ, ಅದನ್ನು ಆತ್ಯಂತಿಕವಾಗಿ; 'ಹುಸಿ ನ್ಯಾಯಪರತೆ'ಯೆಂದು ತಾವು ಭಾವಿಸಿರುವ ವಿದ್ಯಮಾನವನ್ನು ತಮ್ಮದೇ ರೀತಿಯಲ್ಲಿ ವಿವರಿಸಿ ವ್ಯಂಗ್ಯವಾಡಲು ಬಳಸಿಕೊಂಡಿರುವುದು ಖೇದಕರ.

ಇರುವುದು ಹಿಂದೂ ಕೋಮುವಾದ ಮಾತ್ರ; ಹಿಂದೂಯೇತರರದ್ದು ಏನಾದರೂ ಇದ್ದರೆ, ಅದು ಸಂವಿಧಾನದತ್ತವಾದ ಧಾರ್ಮಿಕ ಸ್ವಾತಂತ್ರ್ಯದ ಚೌಕಟ್ಟಿನಲ್ಲಿ ಆಚರಿಸಲು ಅವಕಾಶವಿರುವಂತಹ ಮೂಲಭೂತವಾದ ಮಾತ್ರ ಎಂದು ನಂಬಿರುವ ರಾಜಶೇಖರರು; ತಮ್ಮ ಈ ನಂಬಿಕೆಯನ್ನು ಒಪ್ಪದ ಎಲ್ಲರನ್ನೂ ಗಾಂಧಿವಾದಿಗಳೆಂದೋ, ಮಾರ್ಕ್ಸ್‌ವಾದಿಗಳೆಂದೋ ಲೋಹಿಯಾವಾದಿಗಳೆಂದೋ ವರ್ಗೀಕರಿಸಿ ಅವರ ಮೇಲೆ ಹರಿಹಾಯ್ದಿರುವುದು ಸಹಜವೇ ಆಗಿದೆ! ಕೋಮುವಾದವೆಂಬುದು ಬಹುಸಂಖ್ಯಾತರು ಮಾತ್ರ ಆಚರಿಸಬಹುದಾದ ಮತೀಯತೆ ಎಂಬಂತೆ ಅರ್ಥೈಸಿಕೊಂಡಿರುವ ಇವರು;ಇಂತಹ ಕೋಮುವಾದ ಮುಸ್ಲಿಮರಿಂದಾಗಲೀ, ಕ್ರಿಶ್ಚಿಯನ್ನರಿಂದಾಗಲೀ ಎಲ್ಲಿ ಘಟಿಸಿದೆ ಎಂದು ಕೇಳುವುದು ಮಾತ್ರ ಹಾಸ್ಯಾಸ್ಪದವಾಗಿದೆ. ಏಕೆಂದರೆ ಈ ಸಮುದಾಯಗಳು ಬಹುಸಂಖ್ಯಾತವಾಗಿಲ್ಲದೆಡೆ ಅವು ಹೇಗೆ ಈ ನಿಮ್ಮ ಅರ್ಥದಲ್ಲಿ ಕೋಮುವಾದಿಯಾಗಲು ಸಾಧ್ಯ? ಅವು ಬಹುಸಂಖ್ಯಾತವಾಗಿರುವ ದೇಶಗಳಲ್ಲಿ ಅವು ಹಾಗೆ ಆಗಿವೆ, ಆಗುತ್ತಿವೆ ಮತ್ತೆ ಕೆಲವೆಡೆ ಮುಂದೆ ಆಗುವ ತರಲೆಯೇ ಬೇಡವೆಂದೇನೋ ಅಲ್ಪಸಂಖ್ಯಾತರನ್ನೇ ಹೊರಗಟ್ಟಿವೆ, ಹೊರಗಿಡುತ್ತಿವೆ.

ಆದುದರಿಂದ ರಾಜಶೇಖರ್‌ರಂತಹವರು ಹಿಂದೂ ಕೋಮುವಾದ, ಮುಸ್ಲಿಂ ಮೂಲಭೂತವಾದವೆಂದು ಸ್ಥಳೀಯ ನೆಲೆಯಲ್ಲಿ ತಾತ್ವಿಕವಾಗಿ ವಿಭಜಿಸಿ ನೋಡಿ ಹೀಗೆ ಕೂದಲು ಸೀಳುತ್ತಾ ನ್ಯಾಯ ಒಪ್ಪಿಸುವ ಬದಲು, ಇವು ಜಾಗತಿಕ ನೆಲೆಯಲ್ಲಿ ವಿವಿಧ ಕಾರಣಗಳನ್ನು ಕಂಡುಕೊಂಡು ವಿವಿಧ ರೂಪಗಳಲ್ಲಿ ಹರಡುತ್ತಿರುವ ಉಗ್ರ ಮತೀಯತೆಯ ಸ್ಥಳೀಯ ಪರಿಣಾಮಗಳೂ ಹೌದು; ಹಾಗಾಗಿ, ತಾತ್ವಿಕ ಚರ್ಚೆಯ ಪರಿಭಾಷೆಯಲ್ಲಿ ಕೋಮುವಾದವೋ, ಮೂಲಭೂತವಾದವೋ, ತಮ್ಮ ಪರಿಣಾಮ

> **ಜಿ.ರಾಜಶೇಖರ್ ಅವರು ಗುರು ಬಾಳಿಗಾ ಅವರ ಲೇಖನಕ್ಕೆ ಪ್ರತಿಕ್ರಿಯಿಸುತ್ತಾ, ಅಷ್ಟಕ್ಕೇ ಸುಮ್ಮನಾಗದೇ, ಗಾಂಧಿವಾದಿಗಳು, ಮಾರ್ಕ್ಸ್‌ವಾದಿಗಳು ಮತ್ತು ಲೋಹಿಯಾವಾದಿಗಳೆಂಬ ತಮ್ಮದೇ ಆದಂತಹ ಕಲ್ಪಿತ 'ಸಮುದಾಯ'ಗಳ ಮೇಲೆ ಪ್ರಯೋಗಿಸಿರುವ ಕಟು ವ್ಯಂಗ್ಯದ ಬಗ್ಗೆ. ಗುರು ಬಾಳಿಗಾ ಅವರ ಲೇಖನವನ್ನು ನಾನು ಸಂಪದ.ನೆಟ್ ನಲ್ಲಿಯೇ ಓದಿ ಮೆಚ್ಚಿದ್ದೆ. ಆದರೆ ದ.ಕ.ದ ಸಾಮಾಜಿಕ–ರಾಜಕೀಯದ ಐತಿಹಾಸಿಕ ಒಳ ವಿವರಗಳು ಗೊತ್ತಿಲ್ಲದ ಕಾರಣ, ಅವರಿಗೆ ನನ್ನ ಪ್ರತಿಕ್ರಿಯೆ ತಿಳಿಸುವ ಧೈರ್ಯವಾಗಲಿಲ್ಲ.**

ಗಳಲ್ಲಿ ಮಾತ್ರ ಅವು ಸ್ಪರ್ಧಾತ್ಮಕ ಮತೀಯತೆಯ ಅನಾಹುತಗಳೇ ಎಂದು ಒಟ್ಟಾರೆಯಾಗಿ ನೋಡುವ, ಗ್ರಹಿಸುವ ಪ್ರಯತ್ನ ಮಾಡಿದರೆ ಇತರರ ಮಾತುಗಳು ಅವರಿಗೆ ಸ್ಪಷ್ಟವಾದಾವು. ಆದರೆ ಇಂತಹ ಪ್ರಯತ್ನಗಳ ಪ್ರಸ್ತಾಪವನ್ನೇ ಗೇಲಿ ಮಾಡುತ್ತಾ ಇತ್ತೀಚೆಗೆ ಹೆಚ್ಚೆಚ್ಚು ಒಮ್ಮುಖವಾಗಿ ವಾದ ಮಾಡುತ್ತಿರುವ ರಾಜಶೇಖರ್‌ಗೆ, ಇತರರು ಮಂಡಿಸುವ ವಿಚಾರಗಳಲ್ಲಿ ಎರಡೂ ಕಡೆ ಸರಿದೂಗಿಸಿದ ಜಾಣ ಲೆಕ್ಕಾಚಾರವಷ್ಟೇ ಕಂಡಿದ್ದರೆ ಆಶ್ಚರ್ಯವೇನಿಲ್ಲ. ಆದರೆ ಎಲ್ಲವನ್ನೂ ತರ್ಕಾಧಾರಿತ ಸಾಕ್ಷ್ಯದೊಂದಿಗೇ ಮಂಡಿಸಬೇಕೆಂದು ಇತರರನ್ನು ಆಗ್ರಹಿಸುವ ಇವರು, ತಾವು ಮಾತ್ರ ಈ ಆಪಾದನೆಯನ್ನು ಯಾವ ಸಾಕ್ಷ್ಯವನ್ನಾಗಲೀ, ತರ್ಕವನ್ನಾಗಲೀ ಅನುಸರಿಸದೆ ಮಾಡುವ ವಿಶೇಷ ಹಕ್ಕನ್ನು ಪಡೆದುಕೊಂಡು ಇಲ್ಲಿ ಚಲಾಯಿಸಿದ್ದಾರೆ!

ಹಾಗೆ ನೋಡಿದರೆ ಇವರು ತಮ್ಮ ವಾದವನ್ನು ಒಪ್ಪದವರಿಂದ, ಎಲ್ಲಕ್ಕೂ ಸಾಕ್ಷ್ಯ ನೀಡಿ ಮಾತನಾಡಿ ಎಂದು ಪಂಚಾಯಿತಿಕೆ ಪರಿಭಾಷೆಯಲ್ಲಿ ಆಗ್ರಹಿಸುವುದೇ ವಿಚಿತ್ರವಾಗಿದೆ. ಕೋಮು ಪರಿಸ್ಥಿತಿ, ಅದು ಹೊತ್ತಿ ಉರಿಯುತ್ತಿರುವಾಗ ಸಾಕ್ಷ್ಯ–ಅಂಕಿ–ಅಂಶಗಳ ನೆರವಿನ ವಾದ–ವಿವಾದಗಳಿಂದ ಶಮನವಾಗಲಾರದು. ಅಲ್ಲದೆ, ಅಂತಹ ಉದ್ವಿಗ್ನ ಪರಿಸ್ಥಿತಿಯಲ್ಲಿ ಖೊಟ್ಟಿ ಸಾಕ್ಷ್ಯಗಳು ಸೃಷ್ಟಿಯಾಗುವ ಅಥವಾ ನಿಜವಾದ ಸಾಕ್ಷ್ಯಗಳು ಮುಚ್ಚಿ ಹಾಕಲ್ಪಡುವ ಸಾಧ್ಯತೆಗಳೇ ಹೆಚ್ಚು. ಅಥವಾ ಅವೇನಿದ್ದರೂ, ಎರಡೂ ಕಡೆಯ ವಕ್ತಾರರಿಗೆ, ವಕೀಲರಿಗೆ ಅದನ್ನು ಇನ್ನಷ್ಟು ಹೊತ್ತಿ ಉರಿಸಲು ನೆರವಾಗಬಹುದಷ್ಟೆ. ನಂತರವಷ್ಟೇ ಅವು ಪರಿಸ್ಥಿತಿಯ ಮರಣೋತ್ತರ ಪರೀಕ್ಷೆಗೋ, ಅಧ್ಯಯನಗಳಿಗೋ, ಪ್ರಮೇಯ ನಿರ್ಮಾಣಕ್ಕೋ ನೆರವಾಗಬಹುದು.

ಸದ್ಯದ ತುರ್ತೆಂದರೆ ಪರಿಸ್ಥಿತಿಯನ್ನು ತಹಬಂದಿಗೆ ತರುವಂತಹ ಮತ್ತು ಎರಡೂ ಕಡೆಯ ಮತೀಯರಲ್ಲದ; ಆದರೆ ಧಾರ್ಮಿಕರಾದ ಜನರು ನಂಬುವಂತಹ, ಒಪ್ಪುವಂತಹ ತಕ್ಷಣದ ಸತ್ಯಗಳನ್ನು ಹೇಳುವುದು. ಅವೇ ಮುಂದೆ ಪರಿಸ್ಥಿತಿ ತಹಬಂದಿಗೆ ಬಂದ ಮೇಲೆ ವಾಸ್ತವ ಸತ್ಯಗಳೆಂದೂ ರುಜುವಾತು ಆದಾವು. ಏಕೆಂದರೆ, ಹಲವು ಮೂಲಗಳ ಮಾಹಿತಿ–ಅಭಿಪ್ರಾಯಗಳು ಹರಡುತ್ತಿರುವ ಈ ದಿನಗಳಲ್ಲಿ, ಜನ ನಿರಂತರವಾಗಿ ಸುಮ್ಮನೆ ಯಾರೋ ಹೇಳಿದ್ದನ್ನೆಲ್ಲ ಕೇಳಿ ಕಾರ್ಯೋನ್ಮುಖರಾಗುವಷ್ಟು ಮುಗ್ಧರೂ ಅಲ್ಲ, ಮೂಢರೂ ಅಲ್ಲ.

(ಅಕಸ್ಮಾತ್ ಅಂತಹ ಪರಿಸ್ಥಿತಿಯೇನಾದರೂ ಉಂಟಾಗಿದ್ದರೆ, ಅದಕ್ಕೆ ನಾವೂ ಹೊಣೆಯೆಂಬ ನಮ್ರತೆಯಿಂದ ಅದನ್ನು ಅನುಭವಿಸುತ್ತಲೇ ಎದುರಿಸುವುದೊಂದೇ ಉಳಿದಿರುವ ದಾರಿ!) ಆದರೆ ಬರೀ ವಾಸ್ತವ 'ಸಾಕ್ಷ್ಯ'ಗಳ ಆಧಾರದ ಮೇಲೆ ವಾದ ಮಾಡುವ ವಿಧಾನದಲ್ಲಿ ಹಲವು ಬಾರಿ 'ಸತ್ಯ'ಕ್ಕೆ ಸೋಲಾಗಿ ಜನ ಸಿನಿಕರಾಗುವುದನ್ನೂ, ಇದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಡುವುದನ್ನೂ (ದ.ಕ.ದಲ್ಲಿ ಆಗುತ್ತಿರುವುದೂ ಇದೇನೇ ಎಂಬುದು ನನ್ನ ಅನುಮಾನ) ರಾಜಶೇಖರರು ಗಮನಿಸದೇ ಇರಲಾರರು. ದ.ಕ.ದಲ್ಲಿ ಕೋಮು ಪರಿಸ್ಥಿತಿ ಇತರೆಡೆಗಳಿಗಿಂತ ಭಿನ್ನ ಎನಿಸಿದ್ದರೆ, ಅದನ್ನು ಅವರು ಹಾಗೆ ಹೇಳಿ ವಿವರಿಸುವುದೂ ಒಳಿತು. ಆದರೆ ತಲೆಗೆಲ್ಲಾ ಒಂದೇ ಮಂತ್ರವೆಂಬಂತೆ ಅದನ್ನು ಸಾರ್ವತ್ರಿಕಗೊಳಿಸಿ ಈಗ ಮಾಡಿರುವಂತೆ' ತತ್ವ ಹೇಳಲು ಹೊರಡಬಾರದು.

ಸುಮಾರು ಹತ್ತು ವರ್ಷಗಳ ಹಿಂದೆ ರಾಜಶೇಖರರು 'ಲಂಕೇಶ್ ಪತ್ರಿಕೆ'ಯಲ್ಲಿ ಬರೆದಿದ್ದ ಲೇಖನವೊಂದು ಇಲ್ಲಿ ನೆನಪಿಗೆ ಬರುತ್ತಿದೆ. ಅದನ್ನು ಇವರು ಎರಡು ವರ್ಷಗಳ ಹಿಂದಷ್ಟೇ 'ನೀನಾಸಂ' ಶಿಬಿರದ ಹೊತ್ತಲ್ಲಿ ನನ್ನೊಂದಿಗೆ ಸಮರ್ಥಿಸಿಕೊಂಡದ್ದರಿಂದಷ್ಟೇ ಅದನ್ನು ಇಲ್ಲಿ ಹೇಳುತ್ತಿದ್ದೇನೆ. ವಿದ್ಯಾವಂತ ಮುಸ್ಲಿಂ ಹುಡುಗಿಯೊಬ್ಬಳು ವಿದ್ಯಾವಂತ ಮುಸ್ಲಿಮೇತರ ಹುಡುಗನೊಬ್ಬನನ್ನು ಪ್ರೀತಿಸಿ ಮದುವೆಯಾಗಿದ್ದಳು. ಇದಕ್ಕೆ ಹುಡುಗಿ ಕುಟುಂಬದ ತೀವ್ರ ವಿರೋಧವಿದ್ದುದರಿಂದ ಅವರಿಬ್ಬರೂ ತಲೆ ಮರೆಸಿಕೊಂಡು ಬದುಕಬೇಕಾಯಿತು. ಈ ಮಧ್ಯೆ ಅವರಿಗೆ ಒಂದು ಮಗುವೂ ಆಯಿತು. ಆದರೆ ಇವರ ಚಲನವಲನಗಳ ಮೇಲೆ ಕಣ್ಣು ಇಟ್ಟೇ ಇದ್ದ ಹುಡುಗಿಯ ಅಣ್ಣ (ಆತನೂ ವಿದ್ಯಾವಂತನೇ) ಒಮ್ಮೆ ಇವರ ಪ್ರಯಾಣದ ವಿವರವನ್ನು ಹೇಗೋ ಗೊತ್ತು ಮಾಡಿಕೊಂಡು, ಹೈದರಾಬಾದ್‌ನತ್ತ ತೆರಳುತ್ತಿದ್ದ ತನ್ನ ತಂಗಿಯ ಕುಟುಂಬದ ಕಾರನ್ನು ಹಿಂಬಾಲಿಸಿ ಹೋಗಿ ಅವರಿಬ್ಬರನ್ನೂ ಬರ್ಬರವಾಗಿ ಕೊಂದು ಹಾಕಿದ. ಅದು ದೊಡ್ಡ ಸುದ್ದಿಯಾಯಿತು.

ಆಗ ರಾಜಶೇಖರರು ಈ ಲೇಖನವನ್ನು ಬರೆದು ಸಾರ್ವಜನಿಕರು ಈ ಘಟನೆಯನ್ನು ಕೋಮುವಾದಿ ಮನಸ್ಸಿನ ಹಿಂಸೆಯೆಂದು ಪರಿಗಣಿಸಬಾರದೆಂದೂ, ಆ ಮುಸ್ಲಿಂ ಕುಟುಂಬದ, ಆ ಮುಸ್ಲಿಂ ತರುಣನ ಮನಸ್ಸಿನ ಬೇಗುದಿಯನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಂಡು ಪ್ರತಿಕ್ರಿಯಿಸಬೇಕೆಂದು ಉಪದೇಶಿಸಿದ್ದರು. ರಾಜಶೇಖರ್‌ರಂತಹವರ ಇಂತಹ 'ಸೆಕ್ಯುಲರ್' ಉಪದೇಶಗಳೇ ಇಂದು ರಾಜ್ಯದಲ್ಲಿ ಕೋಮು ಪರಿಸ್ಥಿತಿಯನ್ನು ಅನಿಯಂತ್ರಿತ ಸ್ಥಿತಿಗೆ ತಂದಿರುವುದು ಎಂದರೆ ತಪ್ಪಾಗಲಾರದು.

ಹಾಗಾಗಿ, ರಾಜಶೇಖರ್ ತಮ್ಮ ಸದ್ಯದ ಲೇಖನದಲ್ಲಿ ಕ್ರುದ್ಧರಾಗಿ ಬರೆದಿರುವುದೆಲ್ಲ, ವಾಸ್ತವದ ಅಜೀರ್ಣದ ಪರಿಣಾಮವಾಗಿ ಎಲ್ಲಿಂದ ಹೊರ ಬರಬೇಕಿತ್ತೋ ಅಲ್ಲಿಂದಲೇ ಹೊರ ಬಂದಿರುವ 'ಗ್ಯಾಸ್' ಆಗಿದೆ. ಅದು ಇವರು ಇತರರಿಗೆ ಸಂಬಂಧಿಸಿದಂತೆ ಆರೋಪಿಸಿರುವಂತೆ, ಶರೀರದ ಇನ್ನೊಂದು ತುದಿಯ ಬದಲು ಬಾಯಿಯ ಮುಖಾಂತರ ಹೊರಬಿದ್ದ 'ಗ್ಯಾಸ್'ಯೇನಾದರೂ ಆಗಿ

(16ನೇ ಪುಟಕ್ಕೆ)

ಹಸಿರುಕ್ರಾಂತಿಯ ಹರಿಕಾರ ಬಡರೈತರ ಕೊಲೆಗಾರ!

ಶಿವಸುಂದರ್

ಇಪ್ಪತ್ತನೇ ಶತಮಾನದಲ್ಲಿ ಜಗತ್ತಿನ ಗ್ರಾಮೀಣ ಪ್ರದೇಶದ ಚಿತ್ರಣವನ್ನೇ ಬದಲಾಯಿಸಿದ ನಾರ್ಮನ್ ಬೋರ್ಲಾಗ್ ಎಂಬ ಕೃಷಿ ವಿಜ್ಞಾನಿ ಮೊನ್ನೆ ಸೆಪ್ಟೆಂಬರ್ 13ರಂದು ತನ್ನ 95ನೇ ವಯಸ್ಸಿನಲ್ಲಿ ಮೃತರಾದರು. ನಾರ್ಮನ್ ಬೋರ್ಲಾಗ್ ಯಾರು ಎಂದು ಅರ್ಥ ಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. "ಹಸಿರು ಕ್ರಾಂತಿ"ಯ ಹರಿಕಾರ ಎಂದು ಬಣ್ಣಿಸಲಾಗುವ ಈ ವಿಜ್ಞಾನಿ ಯಾರ ಸ್ನೇಹಿತ ಎಂಬ ಪ್ರಶ್ನೆಗೆ ಸರಿಯಾದ ಉತ್ತರ ಪಡೆಯಬೇಕೆಂದರೆ ನಮ್ಮ ದೇಶದ ಅಭಿವೃದ್ಧಿ ಮಾದರಿಯ ಬಗ್ಗೆ ಸ್ಪಷ್ಟವಾದ ತಿಳವಳಿಕೆ ಮತ್ತು ನಿಲುವುಗಳು ಬೇಕಾಗುತ್ತವೆ. ಏಕೆಂದರೆ ನಮ್ಮ ದೇಶದ ರೈತಾಪಿ ಇಂದು ತಲುಪಿರುವ ಸ್ಥಿತಿಗೆ ಈ ಮಹಾಶಯರು ಪರಿಚಯಿಸಿದ ಹಸಿರು ಕ್ರಾಂತಿ ಮತ್ತು ಕೃಷಿ ಪದ್ಧತಿಯೇ ಕಾರಣ. ಹೀಗಾಗಿ ನಾರ್ಮನ್ ಬೋರ್ಲಾಗ್ ಭಾರತದ ರೈತಾಪಿಯ ಸ್ನೇಹಿತನೋ ಅಥವಾ ಶತ್ರುವೋ ಎಂಬ ತೀರ್ಮಾನವು ಭಾರತದ ರೈತಾಪಿಯ ಪರಿಸ್ಥಿತಿ ಮತ್ತು ಭಾರತದ ಆಹಾರ ಭದ್ರತೆಯ ಪರಿಸ್ಥಿತಿ ಹೇಗಿದೆ ಎಂಬುದರ ಬಗ್ಗೆ ನಮ್ಮ ನಮ್ಮ ಅಭಿಪ್ರಾಯಗಳನ್ನೇ ಆಧರಿಸಿರುತ್ತದೆ.

ಭಾರತ ಸರ್ಕಾರದ ಪ್ರಕಾರ ಭಾರತದ ಆಹಾರ ಭದ್ರತೆ ಮೊದಲಿಗಿಂತ ಉತ್ತಮಗೊಂಡಿದೆ. ಭಾರತದ ರೈತಾಪಿ ಮೊದಲಿಗಿಂತ ಹೆಚ್ಚು ಸುಖವಾಗಿದ್ದಾರೆ. ಆದ್ದರಿಂದಲೇ ಭಾರತದ ಬಡವರ ಸಂಖ್ಯೆ ಹಸಿರು ಕ್ರಾಂತಿ ಪರಿಚಯಿಸುವ ಮೊದಲು ಇದ್ದ ಶೇ.50ರಿಂದ ಈಗ ಶೇ.27ಕ್ಕೆ ಇಳಿದಿದೆ. ಗ್ರಾಮೀಣ ರೈತಾಪಿಯ ಕೊಳ್ಳುವ ಶಕ್ತಿ ಹೆಚ್ಚಿದೆ. ಇತ್ಯಾದಿ. ಇತ್ಯಾದಿ. ಇದಕ್ಕೆಲ್ಲಾ ಕಾರಣ ವೇನೆಂದರೆ ಭಾರತದ ಕೃಷಿ ಪದ್ಧತಿಯಲ್ಲಿ ಸರ್ಕಾರ ನಾರ್ಮನ್ ಬೋರ್ಲಾಗ್ ಕಂಡುಹಿಡಿದ ಹೆಚ್ಚು ಇಳುವರಿ ಕೊಡುವ ಊಜಗಿ ಬೀಜಗಳನ್ನು, ಅದಕ್ಕೆ ತಕ್ಕಂತೆ ರಸಗೊಬ್ಬರ, ಕ್ರಿಮಿನಾಶಕ ಮತ್ತು ಕೀಟ ನಾಶಕಗಳನ್ನು ಬಳಸುತ್ತಾ ಮೊದಲಿಗಿಂತ ಹತ್ತಾರು ಪಟ್ಟು ಹೆಚ್ಚು ಇಳುವರಿಯನ್ನು ಹೆಚ್ಚಿಸಿಕೊಂಡಿದ್ದೇ ಕಾರಣ ಎಂದು ವಾದವನ್ನು ಮಂಡಿಸಲಾಗುತ್ತದೆ. ಈ ವಾದವನ್ನು ಕೇವಲ ಭಾರತ ಸರ್ಕಾರ ಮಾತ್ರವಲ್ಲ, ಏಷಿಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದ ಎಲ್ಲಾ ಬಡ ದೇಶಗಳ ಸರ್ಕಾರಗಳು ಮಂಡಿಸುತ್ತವೆ.



ಈ ವಾದದ ಒಟ್ಟು ಸಾರಾಂಶ ವೇನೆಂದರೆ ಆಹಾರ ಉತ್ಪಾದನೆಯ ಕುಸಿತದಿಂದ ಆಹಾರಕ್ಕೂ ಅಮೆರಿಕ ಮತ್ತಿತರ ದೇಶಗಳ ಸರ್ಕಾರವನ್ನೇ ಅವಲಂಬಿಸುವಂತ ದೈನೇಸಿ ಪರಿಸ್ಥಿತಿಯಲ್ಲಿದ್ದ ದೇಶಗಳನ್ನು ಆಹಾರ ಸ್ವಾವಲಂಬಿ ಮಾಡಿದ್ದೇ ನಾರ್ಮನ್ ಬೋರ್ಲಾಗ್‌ನ ಹಸಿರು ಕ್ರಾಂತಿ..ಅದಕ್ಕೆ ಪೂರಕವಾಗಿ ಅವರು 1965ರಲ್ಲಿ ಭಾರತ ಎದುರಿಸುತ್ತಿದ್ದ ಆಹಾರ ಬಿಕ್ಕಟ್ಟನ್ನು ಮತ್ತು 1950ರಲ್ಲಿ ಮೆಕ್ಸಿಕೋ ಎದುರಿಸುತ್ತಿದ್ದ ಆಹಾರ ಬಿಕ್ಕಟ್ಟನ್ನು ಉದಾಹರಿಸಿ ಹಸಿರು ಕ್ರಾಂತಿಯ ನಂತರ ಹೇಗೆ ಭಾರತ ಮತ್ತು ಮೆಕ್ಸಿಕೋದಂತ ದೇಶಗಳು ಕೆಲವೇ ವರ್ಷಗಳಲ್ಲಿ ಆಹಾರ ಸ್ವಾವಲಂಬಿಯಾಗಿದ್ದು ಮಾತ್ರವಲ್ಲದೇ ಹೆಚ್ಚುವರಿ ಉತ್ಪಾದನೆ ಮಾಡಿ ವಿದೇಶಕ್ಕೂ ರಫ್ತು ಮಾಡುವಂತಾಯಿತು ಎಂದು ಅಂಕಿ ಅಂಶಗಳನ್ನು ಮಂಡಿಸುತ್ತಾರೆ.

ಈ ವಾದವು ಸುಳ್ಳಲ್ಲ. ಹಾಗೆಯೇ ಸತ್ಯವೂ ಅಲ್ಲ! ಭಾರತದ ಗೋಡೋಣುಗಳಲ್ಲಿ ಅಪಾರ ಆಹಾರ ಧಾನ್ಯ ಸಂಗ್ರಹಣೆ ಇರುವುದು ನಿಜ. ಈ ಪ್ರಮಾಣದ ಆಹಾರ ಉತ್ಪಾದನೆ ಸಾಧ್ಯವಾದದ್ದು ಹಸಿರು ಕ್ರಾಂತಿಯಿಂದ ಎಂಬುದೂ ಸತ್ಯವೇ. ಆದರೆ ಈ ಅಪಾರ ಪ್ರಮಾಣದ ಆಹಾರ ಉತ್ಪಾದನೆಯಿಂದ ರೈತಾಪಿಯ ಬಾಳು ಮೊದಲಿಗಿಂತ ಹಸನು ಆಗಿದೆಯೇ ಎಂಬ ಪ್ರಶ್ನೆಗೆ ಸರ್ಕಾರವೂ ಉತ್ತರ ಕೊಡುವುದಿಲ್ಲ. ಬೋರ್ಲಾಗನೂ ಸಾಯುವವರೆಗೆ ಉತ್ತರ ಕೊಡಲಿಲ್ಲ. ಭಾರತದ ಕೃಷಿಯ ಕಥೆ ಈ ದೇಶದ ಅಭಿವೃದ್ಧಿ ಮಾದರಿಯಂತೇ ಉಳ್ಳವರಿಗೆ ಅಮೃತವನ್ನೂ ಇಲ್ಲದವರಿಗೆ ಹಾಲಾಹಲವನ್ನೂ ಉಣಿಸುತ್ತಾ ಬರುತ್ತಿದೆ. ಉದಾಹರಣೆಗೆ ನಮ್ಮ ದೇಶದಲ್ಲಿ ಆಹಾರ ಸಮೃದ್ಧಿಯಿದೆ. ಆದರೆ ಭಾರತದ ಗ್ರಾಮೀಣ ಪ್ರದೇಶದ ತಲಾವಾರು ಆಹಾರ ಪ್ರಮಾಣದ ಬಳಕೆ ಮಾತ್ರ ಕಡಿಮೆಯಾಗುತ್ತಲೇ ಬರುತ್ತಿದೆ. ಹಸಿರು ಕ್ರಾಂತಿ ಪರಿಚಯವಾಗುವ ಮುನ್ನ ಎಂದರೆ 1970ರಲ್ಲಿ ಭಾರತದ ಗ್ರಾಮೀಣ ಪ್ರದೇಶದ ತಲಾವಾರು ಆಹಾರ ಬಳಕೆ 170 ಕಿಲೋ ಕ್ಯಾಲರಿಯಿದ್ದದ್ದು ಈಗ 145 ಕಿಲೋ ಕ್ಯಾಲರಿಗೆ ಕುಸಿದಿದೆ. ಇದಾದದ್ದು ಆಹಾರದ ಉತ್ಪಾದನೆಯ ಕೊರತೆಯಿಂದಲ್ಲ. ಹೀಗಾಗಿ ಹಸಿರು ಕ್ರಾಂತಿಯು ಏಕಕಾಲದಲ್ಲಿ ಆಹಾರ ಉತ್ಪಾದನೆಯನ್ನೂ ಜಾಸ್ತಿ ಮಾಡಿದ್ದು ನಿಜವಾದರೂ

ಜನತೆಯ ಬಡತನವನ್ನೂ ಜಾಸ್ತಿ ಮಾಡಿದ್ದು ನಿಜ. ಈ ಪ್ರಕ್ರಿಯೆ ಹಸಿರು ಕ್ರಾಂತಿಯ ತಂತ್ರಜ್ಞಾನದಲ್ಲೇ ಅಡಕವಾಗಿದೆ. ಅಧಿಕ ಇಳುವರಿ ಬೀಜವನ್ನು ಬಿತ್ತನೆ ಮಾಡಿದ ನಂತರ ಅದು ಅಧಿಕ ಇಳುವರಿ ಕೊಡಬೇಕೆಂದರೆ ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರವನ್ನು ಪೂರೈಸಬೇಕು. ಇದಕ್ಕ ಕಾಸು ಖರ್ಚಿಲ್ಲದೆ ಕೊಟ್ಟಿಗೆಯಲ್ಲಿ ಸಿಗುತ್ತಿದ್ದ ಸಗಣಿ ಗೊಬ್ಬರ ಸಾಕಾಗುವುದಿಲ್ಲ. ಅಲ್ಲದೆ ಈ ಬೀಜಗಳು ಸಹಜವಾಗಿಯೇ ಹಲವಾರು ಹೊಸ ಬೆಗೆಯ ಕ್ರಿಮಿ ಮತ್ತು ಕೋಟಗಳನ್ನು, ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳನ್ನೂ ಆಹ್ವಾನಿಸುತ್ತವಾದ್ದರಿಂದ ಕ್ರಿಮಿನಾಶಕ ಮತ್ತು ಕೀಟನಾಶಕಗಳನ್ನೂ ಕೊಳ್ಳಬೇಕು. ಅಲ್ಲದೇ ಸಾಂಪ್ರದಾಯಿಕ ಬೀಜಗಳಿಗಿಂತ ಈ ಹೈಬ್ರೀಡ್ ಬೀಜಗಳು ಹೆಚ್ಚು ನೀರನ್ನೂ ಕಬಳಿಸುತ್ತವೆ. ಹೀಗಾಗಿ ಇಳುವರಿ ಮೊದಲಿಗಿಂತ ಐದು ಪಟ್ಟು ಹೆಚ್ಚಾದರೂ ಒಂದು ಕ್ವಿಂಟಾಲ್ ಇಳುವರಿಗೆ ರೈತ ಹೂಡುತ್ತಿದ್ದ ಹೂಡಿಕೆಯೂ ಸಹ ಐದು ಪಟ್ಟು ಹೆಚ್ಚಾಗುತ್ತದೆ. ಆದ್ದರಿಂದ ಒಟ್ಟು ಸಾರಾಂಶದಲ್ಲಿ

ಭಾರತ ಸರ್ಕಾರದ ಪ್ರಕಾರ ಭಾರತದ ಆಹಾರ ಭದ್ರತೆ ಮೊದಲಿಗಿಂತ ಉತ್ತಮಗೊಂಡಿದೆ. ಭಾರತದ ರೈತಾಪಿ ಮೊದಲಿಗಿಂತ ಹೆಚ್ಚು ಸುಖವಾಗಿದ್ದಾರೆ. ಆದ್ದರಿಂದಲೇ ಭಾರತದ ಬಡವರ ಸಂಖ್ಯೆ ಹಸಿರು ಕ್ರಾಂತಿ ಪರಿಚಯಿಸುವ ಮೊದಲು ಇದ್ದ ಶೇ.೫೦ರಿಂದ ಈಗ ಶೇ.೨೭ಕ್ಕೆ ಇಳಿದಿದೆ. ಗ್ರಾಮೀಣ ರೈತಾಪಿಯ ಕೊಳ್ಳುವ ಶಕ್ತಿ ಹೆಚ್ಚಿದೆ. ಇತ್ಯಾದಿ. ಇತ್ಯಾದಿ. ಇದಕ್ಕೆಲ್ಲಾ ಕಾರಣ ವೇನೆಂದರೆ ಭಾರತದ ಕೃಷಿ ಪದ್ಧತಿಯಲ್ಲಿ ಸರ್ಕಾರ ನಾರ್ಮನ್ ಬೋರ್ಲಾಗ್ ಕಂಡುಹಿಡಿದ ಹೆಚ್ಚು ಇಳುವರಿ ಕೊಡುವ ಊಜಗಿ ಬೀಜಗಳನ್ನು, ಅದಕ್ಕೆ ತಕ್ಕಂತೆ ರಸಗೊಬ್ಬರ, ಕ್ರಿಮಿ ನಾಶಕ ಮತ್ತು ಕೀಟ ನಾಶಕಗಳನ್ನು ಬಳಸುತ್ತಾ ಮೊದಲಿಗಿಂತ ಹತ್ತಾರುಪಟ್ಟು ಹೆಚ್ಚು ಇಳುವರಿಯನ್ನು ಹೆಚ್ಚಿಸಿಕೊಂಡಿದ್ದೇ ಕಾರಣ ಎಂದು ವಾದವನ್ನು ಮಂಡಿಸಲಾಗುತ್ತದೆ.

ರೈತನ ಆರ್ಥಿಕತೆಯಲ್ಲಿ ಏರಿಕೆಗಿಂತ ಇಳಿಕೆ ಮತ್ತು ಬರ್ಬಾದಿಯೇ ಹೆಚ್ಚಾಗುತ್ತದೆ.

ಹಸಿರುಕ್ರಾಂತಿಯ ಪ್ರಾರಂಭದ ದಿನಗಳಲ್ಲಿ ಸರ್ಕಾರವು ಸಬ್ಸಿಡಿ ದರದಲ್ಲಿ ಇವೆಲ್ಲವನ್ನೂ ಪೂರೈಸುತ್ತಿತ್ತು. ಆದರೆ ಉದಾರೀಕರಣದ ಪ್ರಕ್ರಿಯೆಯಲ್ಲಿ ಸರ್ಕಾರ ಎಲ್ಲಾ ಜನ ಕಲ್ಯಾಣ ಕಾರ್ಯಕ್ರಮಗಳಿಂದ ಹಿಂತೆಗೆಯುತ್ತಿದ್ದಂತೆ ರೈತಾಪಿ ಇನ್ನಷ್ಟು ಅನಾಥನಾಗಿ ಮಾರುಕಟ್ಟೆಯಲ್ಲಿ ಭಿಕ್ಷುಕನಾದ.

ಅಲ್ಲದೆ ಹಸಿರು ಕ್ರಾಂತಿಯನ್ನು ಭಾರತದಂತ ದೇಶಗಳಲ್ಲಿ ಅಳವಡಿಸಲು ಸರ್ಕಾರಗಳು ಕೊಡುತ್ತಿದ್ದ ಮತ್ತೊಂದು ಅತಿ ಮುಖ್ಯ ಕಾರಣ ಸ್ವಾವಲಂಬನೆ. ಆದರೆ ಹಸಿರು ಕ್ರಾಂತಿ ಜಾರಿಯಾದ ನಾಲ್ಕು ದಶಕಗಳ ನಂತರ ಹಿಂತಿರುಗಿ ನೋಡಿದರೆ ಭಾರತ ಆಹಾರದ ವಿಷಯದಲ್ಲಿ ಸ್ವಾವಲಂಬಿಯಾಗಿರಬಹುದು. ಆದರೆ ಕೃಷಿ ಪದ್ಧತಿಯ ವಿಷಯದಲ್ಲಿ ಸ್ವಾವಲಂಬಿಯಾಗಿದೆಯೇ? ಖಂಡಿತಾ ಇಲ್ಲ. ಅದರಲ್ಲೂ ಜಾಗತೀಕರಣವೆಂಬ ಸಾಮ್ರಾಜ್ಯಶಾಹಿ ನೀತಿಗಳನ್ನು ಭಾರತವೂ ಒಳಗೊಂಡಂತೆ ಪ್ರಪಂಚದ ಎಲ್ಲಾ ಬಡ ದೇಶಗಳು ಜಾರಿಗೆ ತರಲು ಪ್ರಾರಂಭಿಸಿದ ಮೇಲೆ ಭಾರತದ ರೈತಾಪಿ ಬೀಜ, ಗೊಬ್ಬರ, ಕ್ರಿಮಿ ನಾಶಕ ಇತ್ಯಾದಿಗಳೆಲ್ಲಾ ವಿಷಯದಲ್ಲೂ ಅಮೆರಿಕದಂತ ದೇಶಗಳ ಮೇಲೆ ಸಂಪೂರ್ಣ ಅವಲಂಬಿಸ ಬೇಕಾಗಿದೆ. ಹೀಗಾಗಿ ಹಸಿರು ಕ್ರಾಂತಿ ನಮ್ಮ ಪರಾವಲಂಬನೆಯನ್ನೇನೂ ತಪ್ಪಿಸಲಿಲ್ಲ.

ಆದರೆ ಹಸಿರುಕ್ರಾಂತಿಯ ಸಂಪೂರ್ಣ ಲಾಭ ಅನುಭವಿಸಿದ್ದು ಮಾತ್ರ ಅಮೆರಿಕದ ಮಾನ್ಸಾಂಟೋ, ಡು-ಪಾಂಟ್, ಫೋರ್ಡ್, ರಾಕ್‌ಫೆಲ್ಲರ್, ಸಿಬಾ-ಗೈಗಿ, ಕಾರ್ಗಿಲ್‌ನಂತ ಗೊಬ್ಬರ, ಬೀಜ, ಮತ್ತು ಕ್ರಿಮಿನಾಶಕ ಕಂಪನಿಗಳು. ಇದೇ ಕಂಪನಿಗಳೇ ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್‌ಗೂ ಮತ್ತು ಅದರ ವಿರುದ್ಧ ಯುದ್ಧ ಮಾಡುತ್ತಿದ್ದ ಬ್ರಿಟನ್‌ನಂಥ ದೇಶಗಳಿಗೂ ಶಸ್ತ್ರಾಸ್ತ್ರಗಳನ್ನೂ, ರಾಸಾಯನಿಕಗಳನ್ನೂ ಸರಬರಾಜು ಮಾಡುತ್ತಿದ್ದವು. ಅದೇ ಕಂಪನಿಗಳೇ ಇದ್ದಕ್ಕಿದ್ದಂತೆ ಕೃಷಿಗೆ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕ ಸರಬರಾಜು ಮಾಡಲು ಪ್ರಾರಂಭಿಸಿ ಯುದ್ಧಾ ನಂತರವೂ ತಮ್ಮ ಮಾರುಕಟ್ಟೆಯನ್ನು ಬೇರೊಂದು ರೂಪದಲ್ಲಿ ಉಳಿಸಿಕೊಂಡಿದ್ದೂ ಮತ್ತು ಅದಕ್ಕೆ ಮಾರುಕಟ್ಟೆ ಸೃಷ್ಟಿಸುವ ಹಸಿರು ಕ್ರಾಂತಿ ಜಗತ್ತಿನಾದ್ಯಂತ ಜಾರಿಗೆ ಬಂದದ್ದು ಕಾಕತಾಳಿಯವೇನಲ್ಲ. ಏಕೆಂದರೆ ನಾರ್ಮನ್‌ಬೋರ್ಲಾಗ್ ಕೆಲಸ ಮಾಡುತ್ತಿದ್ದ ಕೆಮಿಕಲ್ ಸಂಸ್ಥೆಯಾಗಿದ್ದ ಡು-ಪಾಂಟ್ನಲ್ಲಿ. ಆತನಿಗೆ ಫೆಲೋಶಿಪ್ ನೀಡಿ ಮೆಕ್ಸಿಕೋದಲ್ಲಿ ತಾವು ನಡೆಸುತ್ತಿದ್ದ ಕೃಷಿ ಸಂಶೋಧನೆಯಲ್ಲಿ ಸಹಾಯ ಮಾಡುವಂತೆ ಆಹ್ವಾನಿಸಿದ್ದು ಇದೇ ರಾಕ್‌ಫೆಲ್ಲರ್ ಕಂಪನಿಯೇ!

ಈಗ ಭಾರತ ಮತ್ತೆ ಆಹಾರ ಕೊರತೆಯನ್ನು ಅನುಭವಿಸಲು ಪ್ರಾರಂಭಿಸಿದ್ದು ನಾರ್ಮನ್ ಬೊರ್ಲಾಗ್ ಆದಿಯಾಗಿ ಎಲ್ಲರೂ ಅದಕ್ಕೆ ಜನಸಂಖ್ಯಾ ಸ್ಫೋಟವನ್ನು ಹೊಣೆ ಮಾಡುತ್ತಿದ್ದಾರೆ ಮತ್ತು ಅದನ್ನು ಎದುರಿಸಲು ಎರಡನೇ ಹಸಿರು ಕ್ರಾಂತಿಯನ್ನ ಅಂದರೆ ಜೆನಿಟಿಕಲ್ ಮಾಡಿಫೈಡ್ ಕೃಷಿಯೆಂಬ ಅತ್ಯಂತ ವಿನಾಶಕಾರಿ ಪದ್ಧತಿಯನ್ನು ಅಳವಡಿಸುವಂತೆ ಒತ್ತಾಯಿಸುತ್ತಿದ್ದಾರೆ. ಈ ಜೆನಿಟಿಕಲ್ ಮಾಡಿಫೈಡ್ ಕೃಷಿಯ ಪ್ರಧಾನ ಫಲಾನುಭವಿಗಳೆಲ್ಲಾ ಮತ್ತೆ ಇದೇ ಕೃಷಿ ಬಹುರಾಷ್ಟ್ರೀಯ ಕಂಪನಿಗಳೇ!

ಹೀಗಾಗಿ ನಾರ್ಮನ್ ಬೊರ್ಲಾಗ್ ಕೇವಲ ಒಬ್ಬ ವಿಜ್ಞಾನಿ ಆತ ಸರ್ಕಾರದ ಆರ್ಥಿಕ ಮತ್ತು ರಾಜಕೀಯ

ಜನತೆಯ ಬಡತನವನ್ನೂ ಜಾಸ್ತಿ ಮಾಡಿದ್ದು ನಿಜ. ಈ ಪ್ರಕ್ರಿಯೆ ಹಸಿರು ಕ್ರಾಂತಿಯ ತಂತ್ರಜ್ಞಾನದಲ್ಲೇ ಅಡಕವಾಗಿದೆ. ಅಧಿಕ ಇಳುವರಿ ಬೀಜವನ್ನು ಬಿತ್ತನೆ ಮಾಡಿದ ನಂತರ ಅದು ಅಧಿಕ ಇಳುವರಿ ಕೊಡಬೇಕೆಂದರೆ ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರವನ್ನು ಪೂರೈಸಬೇಕು. ಇದಕ್ಕೆ ಕಾಸು ಖರ್ಚಿಲ್ಲದೆ ಕೊಟ್ಟಿಗೆಯಲ್ಲಿ ಸಿಗುತ್ತಿದ್ದ ಸಗಣಿ ಗೊಬ್ಬರ ಸಾಕಾಗುವುದಿಲ್ಲ. ಅಲ್ಲದೆ ಈ ಬೀಜಗಳು ಸಹಜವಾಗಿಯೇ ಹಲವಾರು ಹೊಸ ಬಗೆಯ ಕ್ರಿಮಿ-ಕೀಟಗಳನ್ನು, ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳನ್ನೂ ಆಹ್ವಾನಿಸುತ್ತವಾದ್ದರಿಂದ ಕ್ರಿಮಿನಾಶಕ-ಕೀಟನಾಶಕಗಳನ್ನೂ ಕೊಳ್ಳಬೇಕು.

ನೀತಿಗಳಿಗೆ ಹೇಗೆ ಹೊಣೆಗಾರನಾಗುತ್ತಾನೆ ಎಂಬ ಪ್ರಶ್ನೆಯೇ ಅಸಂಬದ್ಧವಾಗುತ್ತದೆ. ನಾರ್ಮನ್‌ಬೋರ್ಲಾಗ್‌ರನ್ನೂ ಒಳಗೊಂಡಂತೆ ಹಸಿರು ಕ್ರಾಂತಿಯೆಂಬ ಈ ಇಡೀ ಯೋಜನೆಯೇ ಎರಡನೇ ಪ್ರಪಂಚ ಯುದ್ಧದ ನಂತರ ಇಡೀ ಜಗತ್ತನೇ ತನ್ನ ನಿಯಂತ್ರಣದಲ್ಲಿ ತೆಗೆದುಕೊಳ್ಳಬೇಕೆಂಬ ಅಮೆರಿಕನ್ ಸಾಮ್ರಾಜ್ಯಶಾಹಿ ಆಸಕ್ತಿಯಿಂದ ಹುಟ್ಟಿಕೊಂಡಿದ್ದು ಎಂಬುದನ್ನು ಗಮನಿಸಿದಾಗ ಹಸಿರು ಕ್ರಾಂತಿಯ ಅಸಲಿ ಸ್ವರೂಪ ಇನ್ನಷ್ಟು ಸ್ಪಷ್ಟವಾಗುತ್ತದೆ.

ಹಸಿರು ಕ್ರಾಂತಿಯ ನೈಜ ಕಥೆ 1943ರಲ್ಲಿ ರಾಕ್‌ಫೆಲ್ಲರ್ ಸಂಸ್ಥೆಯು ಕೃಷಿ ಪರಿಣಿತರ ಒಂದು ತಂಡವನ್ನು ಮೆಕ್ಸಿಕೋಗೆ ಅಲ್ಲಿನ ಸ್ಥಳೀಯ ಧಾನ್ಯಗಳ ಅಭಿವೃದ್ಧಿಯ ಬಗ್ಗೆ ಅಧ್ಯಯನ ಮಾಡಲು ಕಳಿಸುವುದರ ಮೂಲಕ ಪ್ರಾರಂಭವಾಗುತ್ತದೆ. ನಾರ್ಮ ಬೋರ್ಲಾಗ್ ಈ ತಂಡಕ್ಕೆ 1944ರಲ್ಲಿ ಸೇರ್ಪಡೆಯಾಗುತ್ತಾರೆ. ರಾಕ್‌ಫೆಲ್ಲರ್ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲು ಪ್ರಧಾನ ಕಾರಣ 1939ರಲ್ಲಿ ಮೆಕ್ಸಿಕೋದಲ್ಲಿ ಅಧಿಕಾರಕ್ಕೆ ಬಂದಿದ್ದ ಅಧ್ಯಕ್ಷ ಲಜಾರ್ದೋ ಕಾರ್ಡೆನೇಜ್‌ನ ರಾಷ್ಟ್ರೀಯವಾದಿ ಸರ್ಕಾರ ರಾಕ್‌ಫೆಲ್ಲರ್‌ನ ಸ್ಟ್ಯಾಂಡರ್ಡ್ ಆಯಿಲ್ ಕಂಪನಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದು ಮತ್ತು ಎರಡನೆಯದಾಗಿ ಆ ದಕ್ಷಿಣಾರ್ಧಗೋಳದಲ್ಲಿ ನಾಜಿಗಳ ಕಾಲದಿಂದಲೂ ತಮ್ಮ ಪ್ರಭಾವವನ್ನು ವಿಸ್ತರಿಸಿಕೊಳ್ಳಬೇಕೆಂಬ ಸತತ ಪ್ರಯತ್ನ ನಡೆಯುತ್ತಿದ್ದದ್ದು. ಯುದ್ಧಕ್ಕಿಂತ ಅಭಿವೃದ್ಧಿಪರರೆಂಬ ಮುಖವಾಡ ತಮ್ಮ ಹೂಡಿಕೆಯನ್ನೂ ಮತ್ತು ಪ್ರಭಾವವನ್ನು ವಿಸ್ತರಿಸಲು ಸಹಾಯ ಮಾಡುತ್ತದೆಂದು ಎರಡನೇ ಮಹಾಯುದ್ಧ ಅವರಿಗೆ ಕಲಿಸಿಕೊಟ್ಟಿತ್ತು.

1956ರ ಸುಮಾರಿಗೆ ಬೋರ್ಲಾಗ್ ತಂಡ ಈ ವಿಶೇಷ ಇಳುವರಿ ಪದ್ಧತಿಯನ್ನು ಕಂಡುಹಿಡಿದಿದ್ದರು. ಅದನ್ನು ನಾಲ್ಕು ವರ್ಷಗಳ ಕಾಲ ಮೆಕ್ಸಿಕೋದ ಮಣ್ಣಲ್ಲಿ ಪರೀಕ್ಷಿಸಿ ಅದಕ್ಕೆ ಬೇಕಾಗುವ ಅಗತ್ಯಗಳೇನೆಂದು ಗುರುತಿಸಲಾಯಿತು. ಈ ಹೈಬ್ರೀಡ್ ಕೃಷಿ ಹೊಸಬಗೆಯ ಬೀಜವನ್ನು ಮಾತ್ರವಲ್ಲದೆ ಬಡದೇಶಗಳ ಸ್ವಾಲಂಬಿ ಕೃಷಿ ಪದ್ಧತಿಯನ್ನೇ ಸಂಪೂರ್ಣವಾಗಿ ನಾಶಮಾಡಿ ಬೀಜ, ಗೊಬ್ಬರ, ಕ್ರಿಮಿ ನಾಶಕಗಳೆಲ್ಲವಕ್ಕೂ ತಮ್ಮ ಮೇಲೆ ಅಂದರೆ ಬಂಡವಾಳಶಾಹಿ ಜಗತ್ತಿನ ಮೇಲೆ ಅವಲಂಬಿಸುವಂತೆ ಮಾಡುತ್ತದೆಂದು ಖಾತ್ರಿ ಪಡಿಸಿಕೊಳ್ಳಲಾಯಿತು. ಹೀಗಾಗಿ ಪ್ರಪಂಚವನ್ನು ಸಾಮ್ರಾಜ್ಯಶಾಹಿ ನಿಯಂತ್ರಣಕ್ಕೆ ಯುದ್ಧದ ಅಗತ್ಯವೇ ಇಲ್ಲದ ಮತ್ತೊಂದು ಸಾಧನ ಅವರಿಗೆ ದಕ್ಕಿತ್ತು.

ಅದೇ ವೇಳೆಗೆ ಜಗತ್ತು ಹೊಸ ಬಗೆಯ ರಾಜಕೀಯ ಪಲ್ಲಟವನ್ನು ಕಾಣುತ್ತಿತ್ತು. ಏಷಿಯಾದ ಬೃಹತ್ ರಾಷ್ಟ್ರ ಚೀನಾದಲ್ಲಿ ಕಮ್ಯುನಿಷ್ಟ ಕ್ರಾಂತಿಯಾಗಿ ಭೂಮಾಲೀಕರನ್ನು ಮತ್ತು ಸಾಮ್ರಾಜ್ಯಶಾಹಿಗಳನ್ನು ಚೀನಾದಿಂದ ಹೊರಗಟ್ಟಲಾಗಿತ್ತು. ಕೊರಿಯಾದಲ್ಲಿ ಸಹ ಅಂತರ್ಯುದ್ಧ ಪ್ರಾರಂಭವಾಗಿ ಅರ್ಧ ಕೊರಿಯಾ ಕಮ್ಯುನಿಷ್ಟ್ ಪ್ರಭಾವಕ್ಕೊಳಗಾಗಿತ್ತು. ಮಲೇಷಿಯಾದಲ್ಲಿ ಬ್ರಿಟನ್ ಸಾಮ್ರಾಜ್ಯಶಾಹಿಗಳ ವಿರುದ್ಧ ಎಡಪಂಥೀಯ ಗೆರಿಲ್ಲಾಗಳ ಯುದ್ಧ ಪ್ರಾರಂಭವಾಗಿತ್ತು. ಕಾಂಬೋಡಿಯಾ, ಲಾವೋಸ್ ಇನ್ನಿತ್ಯಾದಿ ಇಂಡೋ-ಚೈನಾ ದೇಶಗಳಲ್ಲಿ ಕಮ್ಯುನಿಷ್ಟರ ಗೆರಿಲ್ಲಾಗಳು ಅಧಿಕಾರದ ಕದವನ್ನು ತಟ್ಟುತ್ತಿದ್ದರು. ಫಿಲಿಫೈನ್ಸ್ ದೇಶದಲ್ಲೂ ಎಡಪಂಥೀಯ ಗೆರಿಲ್ಲಾಗಳೂ ಸಶಕ್ತಗೊಳ್ಳುತ್ತಿದ್ದರು. ಭಾರತವೊಂದನ್ನು ಹೊರತುಪಡಿಸಿದರೆ ಮಿಕ್ಕೆಲ್ಲಾ ಏಷಿಯಾ ದೇಶಗಳಲ್ಲಿ ಹೆಚ್ಚು ಕಡಿಮೆ ಕಮ್ಯುನಿಷ್ಟರ ಪ್ರಭಾವ ಹೆಚ್ಚುತ್ತಿತ್ತು. ಎರಡನೇ ಪ್ರಪಂಚ ಯುದ್ಧ ಕೊನೆಗೊಳ್ಳುವ ಜೊತೆಜೊತೆಗೆ ಅರ್ಧ ಯೂರೋಪೂ ಸಹ ಬಂಡವಾಳಶಾಹಿ ಜಗತ್ತಿನ ಪ್ರಭಾವವನ್ನು ಕಳಚಿಕೊಂಡು ಕಮ್ಯುನಿಷ್ಟರ ಪ್ರಭಾವದೆಡೆ ಸೆಳೆಯಲ್ಪಡುತ್ತಿತ್ತು.

ಅಮೆರಿಕ ಹಸಿರು ಕ್ರಾಂತಿಯನ್ನು ಅನ್ವೇಷಿಸಿದ್ದು

(೧೬ನೇ ಪುಟಕ್ಕೆ)

ವಿಚಾರವಾದ ಕೆಲವು ಟಿಪ್ಪಣಿಗಳು

ಡಾ. ಬಸವರಾಜ ಸಬರದ

'ಅರಿವರಂ ಪೊಸಯಿಸುವುದೆ ಧರ್ಮಂ
ಅದರ ತಡೆವುದೆ ಅಧರ್ಮಂ...' –ಪಂಪ

ಹತ್ತನೇ ಶತಮಾನದಲ್ಲಿ ಪಂಪ ಹೇಳಿದ ಈ ಮಾತು ಇಂದಿಗೂ ಪ್ರಸ್ತುತವಾಗಿದೆ. ಅರಿವು ಅಥವಾ ಜ್ಞಾನವೆಂಬುದು ಆಕಾಶದಿಂದ ಬೀಳುವುದಿಲ್ಲ. ಅಥವಾ ಅದು ರೆಡಿಮೇಡ್ ವಸ್ತುವೂ ಅಲ್ಲ. ನಮ್ಮ ಅನ್ನ–ಆಹಾರ–ಉಡುಪುಗಳನ್ನು ಹೇಗೆ ನಮ್ಮ ಕಾಲಕ್ಕೆ ತಕ್ಕಂತೆ ನಾವೇ ತಯ್ಯಾರಿಸಿಕೊಳ್ಳುತ್ತೇವೆಯೋ, ಹಾಗೆ ಅರಿವನ್ನು ನಿತ್ಯ ಕಸಿಮಾಡಿ ಕಟ್ಟಿಕೊಳ್ಳಬೇಕಾಗುತ್ತದೆ. ನಮ್ಮ ನೆಲದಲ್ಲಿ ಕಚ್ಚಾ ಸಾಮಾಗ್ರಿಗಳು ಸಿಗುವ ಹಾಗೆ ನಮ್ಮ ಪರಂಪರೆಯಲ್ಲಿ ಅರಿವನ್ನು ಹೆಚ್ಚಿಸುವ ಜ್ಞಾನಶಾಖೆಗಳಿವೆ. ಕಚ್ಚಾ ಸಾಮಾಗ್ರಿ ಹೇಗೆ ನೇರವಾಗಿ ಉಪಯೋಗಿಸಲು ಸಾಧ್ಯವಾಗುವುದಿಲ್ಲವೋ, ಅದೇ ರೀತಿ ನಮ್ಮಲ್ಲಿ ಜನಸಮುದಾಯದ ಮೂಲಕ ಬೆಳೆದು ಬಂದ, ಕೃತಿಗಳ ಮೂಲಕ ಕಂಡುಕೊಂಡ ಜ್ಞಾನವನ್ನು ಯಥಾವತ್ತಾಗಿ ಉಪಯೋಗಿಸಲಾಗುವುದಿಲ್ಲ.

ಪಾರಂಪರಿಕ ಜ್ಞಾನವನ್ನು ಸಾಣೆಗೆ ಹಚ್ಚಿದಾಗ, ವರ್ತಮಾನದ ತುರ್ತುಗಳಲ್ಲಿಟ್ಟು ಅದನ್ನು ಕಸಿ ಮಾಡಿದಾಗ, ಸಮಕಾಲೀನ ಸಂದರ್ಭದ ಜ್ಞಾನ ಹುಟ್ಟಿಕೊಳ್ಳುತ್ತದೆ. ಇದನ್ನೇ ಪಂಪ "ಅರಿವಂ ಪೊಸಿಯಿಸುವುದು" ಎಂದಿದ್ದಾನೆ.

ಪಾರಂಪರಿಕ ತಿಳುವಳಿಕೆಯನ್ನು ಪುನರ್ ಮೌಲ್ಯೀಕರಣಗೊಳಿಸುವುದು, ಪುನಶ್ಚೇತನಗೊಳಿಸುವುದು ನಿಜವಾದ ಧರ್ಮವೆಂದು ಹೇಳಿರುವ ಪಂಪ, ಇಲ್ಲಿ ಧರ್ಮಕ್ಕೆ ಹೊಸ ವ್ಯಾಖ್ಯೆ ನೀಡಿದ್ದಾನೆ ಪೊಸಯಿಸುವುದನ್ನು ತಡೆಯುವುದೇ ಅಧರ್ಮವೆಂದು ಸ್ಪಷ್ಟಪಡಿಸಿದ್ದಾನೆ. ಹೀಗೆ ಪೊಸಯಿಸುವ ಪ್ರಕ್ರಿಯೆಯೇ ವಿಮರ್ಶೆ.



ಪಾರಂಪರಿಕ ಜ್ಞಾನವನ್ನು ವಿಮರ್ಶೆಯ ಒರೆಗಲ್ಲಿಗೊಡ್ಡಿದಾಗ ವೈಚಾರಿಕತೆ ಹುಟ್ಟಿಕೊಳ್ಳುತ್ತದೆ. ಇಂತಹ ವೈಚಾರಿಕ ಸಾಧ್ಯತೆಗಳನ್ನೇ ನಾವು ವಿಚಾರವಾದವೆಂದು ಕರೆಯುತ್ತೇವೆ. ಇಂತಹ ವಿಚಾರವಾದದ ಪರಂಪರೆ ಭಾರತದಲ್ಲಿ ಚಾರ್ವಾಕರಿಂದಲೇ ಪ್ರಾರಂಭವಾಗಿದೆ. ಭಾರತದ ಸಂದರ್ಭದಲ್ಲಿ ಬುದ್ಧ ಪ್ರಥಮ ವಿಚಾರವಾದಿಯಾಗಿ ಕಾಣಿಸುತ್ತಾನೆ.

ಹಿಂದಿನ ಕಾಲದಲ್ಲಿಯೇ ಬ್ರಹ್ಮಗುಪ್ತ, ಉದ್ದಾಲಕ, ಆರುಣಿ ಮತ್ತು ಚರಕರಂತಹ ಋಷಿಗಳು ವೇದ ಪ್ರಾಮಾಣ್ಯವನ್ನು ಪ್ರಶ್ನಿಸಿದ್ದಾರೆ. ಅಂದಿನ ಕಾಲದಲ್ಲಿ ಧರ್ಮಗ್ರಂಥಗಳ ಪ್ರಾಮಾಣ್ಯವನ್ನು ಅಲ್ಲಗಳೆದವರಿದ್ದಾರೆ. ಗಾರ್ಗಿ, ಮೈತ್ರೇಯಿಯಂತಹ ಮಹಿಳೆಯರು ಪ್ರಖರ ವಿಚಾರವಾದಿಗಳಾಗಿ ಬೆಳೆದಿದ್ದಾರೆ. ಹನ್ನೆರಡನೇ ಶತಮಾನದ ವಚನಕಾರರು ವೇದ–ಆಗಮಗಳ ಮಿತಿಗಳನ್ನು ಹೇಳುತ್ತಲೇ, ಅನೇಕ ಮೂಢ ನಂಬಿಕೆಗಳ ವಿರುದ್ಧ ಬಂಡಾಯವೆದ್ದಿದ್ದಾರೆ. ದೇವಾಲಯಗಳು ಶೋಷಣೆಯ ಕೇಂದ್ರವಾದಾಗ, ದೇಹವೇ ದೇಗುಲವೆಂದು ಸ್ಪಷ್ಟಪಡಿಸಿದ್ದಾರೆ. ಸಮಾಜ ವ್ಯವಸ್ಥೆಯಲ್ಲಿ ತುಂಬಿ ಹೋಗಿದ್ದ ಅನೇಕ ಅಂಧ ಸಂಪ್ರದಾಯಗಳನ್ನು–ಅಪಶಕುನಗಳನ್ನು ಅಲ್ಲಗಳೆದಿದ್ದಾರೆ. ಶರಣರು, ಕರ್ನಾಟಕ ಕಂಡ ಪ್ರಕಾರ ವಿಚಾರವಾದಿಗಳಾಗಿದ್ದಾರೆ.

ಆಧುನಿಕ ಸಂದರ್ಭದಲ್ಲಿ ವೈಚಾರಿಕತೆಯ ಬೆಳವಣಿಗೆಗೆ ಅನೇಕ ಚಿಂತಕರು ಕಾರಣರಾಗಿದ್ದಾರೆ. ಡಾರ್ವಿನ್, ಸಾಕ್ರಟಿಸ್, ಕೊಪರ್ನಿಕಸ್, ಬರ್ಟ್ರಂಡ್ ರಸೆಲ್, ರಾಬರ್ಟ್ ಇಂಗರ್‌ಸಾಲ್ ಈ ಮೊದಲಾದವರು ವೈಚಾರಿಕತೆಯ ಪರಂಪರೆಯನ್ನು ಕಟ್ಟಿ ನಿಲ್ಲಿಸಿದ್ದಾರೆ. ಡಾ. ಬಾಬಾ ಸಾಹೆಬಾ ಅಂಬೇಡ್ಕರ್ ಅವರು ಪ್ರಮುಖ ವಿಚಾರವಾದಿಗಳಾಗಿದ್ದರೆಂಬುದು ಗಮನಿಸುವ ಸಂಗತಿಯಾಗಿದೆ.

ಹಿಂದುತ್ವ ಹಾಗೂ ಮನುಸ್ಮೃತಿ ಬಗೆಗೆ ಡಾ. ಅಂಬೇಡ್ಕರ್ ಅತ್ಯಂತ ವಸ್ತುನಿಷ್ಠ ಚಿಂತನೆ ನಡೆಸಿದವರಾಗಿದ್ದಾರೆ. ಜಾಗತಿಕ ವೈಚಾರಿಕ ಪರಂಪರೆಯಲ್ಲಿ ಕಾರ್ಲ್‌ಮಾರ್ಕ್ಸ್, ಮಾವೋ ಪ್ರಸಿದ್ಧರಾಗಿದ್ದಾರೆ. ಭಾರತದ ಆಧುನಿಕ ಸಂದರ್ಭದಲ್ಲಿ ಡಾ. ಅಂಬೇಡ್ಕರ್–ಪೆರಿಯಾರ್–ಲೋಹಿಯಾ–ಗಾಂಧೀಜಿಯವರ ಚಿಂತನೆಗಳು ಹೊಸ ಸಾಧ್ಯತೆಗಳನ್ನುಂಟು ಮಾಡಿವೆ. ಧರ್ಮ–ದೇವರುಗಳನ್ನು ನಿರಾಕರಿಸಿ ವಿಚಾರವಾದವನ್ನು ಹುಟ್ಟುಹಾಕಿದವರಿದ್ದಾರೆ. ಧರ್ಮ–ದೇವರುಗಳ ಬಗೆಗಿದ್ದ ಮೌಢ್ಯತೆಗಳನ್ನು ಅಲ್ಲಗಳೆದು ಆಸ್ತಿಕರಾಗಿದ್ದುಕೊಂಡೇ ವೈಚಾರಿಕತೆಯನ್ನು ಬೆಳೆಸಿದವರಿದ್ದಾರೆ.

ಈ ಮೊದಲೇ ಚರ್ಚಿಸಿದಂತೆ ವೈಚಾರಿಕತೆಯೆಂಬುದು ಮುಂದುವರಿದ ಪರಿಷ್ಕೃತ ಜ್ಞಾನ. ಪ್ರಕೃತಿಯ ಗೂಢಗಳನ್ನರಿಯುತ್ತಲೇ ವಾಸ್ತವ ರೀತಿಯಲ್ಲಿ ಬದುಕನ್ನು ಕಟ್ಟಿಕೊಳ್ಳುವ ಕ್ರಿಯೆ. ಸಮಾಕಾಲೀನ ಸಮುದಾಯಗಳ ಜೀವಪರ ಕಾಳಜಿಗಾಗಿ ಪರಿತಪಿಸುವ ಸತ್ಯದ ಅನ್ವೇಷಣೆ. ಭಾವೋದ್ವೇಗ–ಭೌತಿಕತೆಗಳನ್ನು ಮೀರಿ ನಿಲ್ಲುವ ಸಾಧ್ಯತೆ. ಸಾಂಪ್ರಾದಾಯಿಕ–ಸಾಂಸ್ಕೃತಿಕ ರೂಪಗಳನ್ನು ಒಡೆಯುವ ಪ್ರಕ್ರಿಯೆ. ಪ್ರಶ್ನೆ–ಉಪಪ್ರಶ್ನೆಗಳ ಮೂಲಕ,

ಆಧುನಿಕ ಸಂದರ್ಭದಲ್ಲಿ ವೈಚಾರಿಕತೆಯ ಬೆಳವಣಿಗೆಗೆ ಅನೇಕ ಚಿಂತಕರು ಕಾರಣರಾಗಿದ್ದಾರೆ. ಡಾರ್ವಿನ್, ಸಾಕ್ರಟಿಸ್, ಕೊಪರ್ನಿಕಸ್, ಬರ್ಟ್ರಂಡ್ ರಸೆಲ್, ರಾಬರ್ಟ್ ಇಂಗರ್‌ಸಾಲ್ ಈ ಮೊದಲಾದವರು ವೈಚಾರಿಕತೆಯ ಪರಂಪರೆಯನ್ನು ಕಟ್ಟಿ ನಿಲ್ಲಿಸಿದ್ದಾರೆ. ಡಾ. ಬಾಬಾ ಸಾಹೆಬಾ ಅಂಬೇಡ್ಕರ್ ಅವರು ಪ್ರಮುಖ ವಿಚಾರವಾದಿಗಳಾಗಿದ್ದರೆಂಬುದು ಗಮನಿಸುವ ಸಂಗತಿಯಾಗಿದೆ. ಹಿಂದುತ್ವ ಹಾಗೂ ಮನುಸ್ಮೃತಿ ಬಗೆಗೆ ಡಾ. ಅಂಬೇಡ್ಕರ್ ಅತ್ಯಂತ ವಸ್ತುನಿಷ್ಠ ಚಿಂತನೆ ನಡೆಸಿದವರಾಗಿದ್ದಾರೆ. ಜಾಗತಿಕ ವೈಚಾರಿಕ ಪರಂಪರೆಯಲ್ಲಿ ಕಾರ್ಲ್ ಮಾರ್ಕ್ಸ್, ಮಾವೋ ಪ್ರಸಿದ್ಧರಾಗಿದ್ದಾರೆ. ಭಾರತದ ಆಧುನಿಕ ಸಂದರ್ಭದಲ್ಲಿ ಡಾ. ಅಂಬೇಡ್ಕರ್-ಪೆರಿಯಾರ್-ಲೋಹಿಯಾ ಗಾಂಧೀಜಿಯವರ ಚಿಂತನೆಗಳು ಹೊಸ ಸಾಧ್ಯತೆಗಳನ್ನುಂಟು ಮಾಡಿವೆ.

ಸಂಶಯ-ಅನುಮಾನಗಳ ಮೂಲಕ ನಡೆಸಬಹುದಾದ ಸತ್ಯದ ಹುಡುಕಾಟ. ಸತ್ಯದ ಬಹುಮುಖಿ ರೂಪಗಳನ್ನು ಕಂಡುಕೊಳ್ಳಬಹುದಾದ ಕುತೂಹಲದ ಕಾರ್ಯ.

ವಿಚಾರವಾದವೆಂಬುವುದು ಕೇವಲ ಬೌದ್ಧಿಕ ಕಸರತ್ತಲ್ಲ. ವಾಸ್ತವತೆಯ ಕನ್ನಡಿ. ಅದು ಒಣ ತರ್ಕವಲ್ಲ ಅಂತರಂಗದ ಧ್ವನಿ. ಶುಷ್ಕ ಪಾಂಡಿತ್ಯವಲ್ಲ, ಮನಪರಿವರ್ತನೆಯ ಹರಿಕಾರ. ನೀತಿಬೋಧನೆಯಲ್ಲ, ನಿರಂತರ ಹರಿಯುವ ತೀವ್ರತೆ. ಭಾವನೆಗಳನ್ನು ಹತ್ತಿಕ್ಕುವುದು ಅದರ ಕಾರ್ಯವಲ್ಲ, ಉತ್ಸಾಹವನ್ನು ಸ್ಫುರಿಸುವುದು ಅದರ ಕಾರ್ಯ. ಅಂತಃಕರಣದ ಚಿಲುಮೆಯಾಗಿ, ಶೋಷಿತರ ದನಿಯಾಗಿ, ಸಮಾನತೆಯ ಹರಿಕಾರನಾಗಿ ವೈಚಾರಿಕತೆಯೆಂಬುದು ಮೈದಾಳಬೇಕು. ಅಂತಹ ಮಹತ್ವದ ಪರಂಪರೆ ಕನ್ನಡದಲ್ಲೂ ಇದೆ.

ಬ್ರಿಟೀಷರು ಭಾರತವನ್ನು ಆಕ್ರಮಿಸಿಕೊಂಡು ತಮ್ಮ ವಸಾಹತನ್ನು ಪ್ರಾರಂಭಿಸಿದ ನಂತರ ಭಾರತದಲ್ಲಿ ಬ್ರಿಟೀಷರ ಸುಲುಗೆಯ ಜತೆಗೆ ಅನೇಕ ಸಕಾರಾತ್ಮಕ ಬದಲಾವಣೆಗಳೂ ಆದವು. ಅದುವರೆಗಿದ್ದ ಗುರುಕುಲ ಶಿಕ್ಷಣ ಪದ್ಧತಿ, ಕೇವಲ ಉಚ್ಚವರ್ಗದವರಿಗೆ ಮಾತ್ರ ಮೀಸಲಾಗಿದ್ದ ಶಿಕ್ಷಣದ ಅವಕಾಶಗಳು ಬದಲಾಗಿ ಶೂದ್ರ-ದಲಿತವರ್ಗಗಳಿಗೂ ಶಿಕ್ಷಣ ಪಡೆಯುವ ಅವಕಾಶ ದೊರಕಿತು.

ಸಂಸ್ಕೃತ ಮಂತ್ರವನ್ನು ಕೇಳಿದ ದಲಿತರ ಕಿವಿಗೆ ಕಾಯ್ದ ಸೀಸ ಹೊಯ್ದು ಹಿಂಸೆಯನ್ನುಂಟು ಮಾಡುತ್ತಿದ್ದ ಭಾರತ ದೇಶದಲ್ಲಿ, ಶೂದ್ರರು-ದಲಿತರು ಶಿಕ್ಷಣ ಪಡೆದು ಇಂಗ್ಲೀಷ್‌ನಲ್ಲಿ ಮಾತನಾಡಲು ಪ್ರಾರಂಭಿಸಿದ್ದು ಕ್ರಾಂತಿಕಾರಕ ವಿಚಾರವೇ ಆಗಿದೆ.

ಬ್ರಿಟೀಷರು ಈ ದೇಶಕ್ಕೆ ಬಾರದೇ ಹೋಗಿದ್ದರೆ, ಈ ದೇಶದ ಶೂದ್ರರು ಇನ್ನೂ ಮಲ ಹೊರಬೇಕಾಗುತಿತ್ತು" ಎನ್ನುವ ಕುವೆಂಪು ಅವರ ಮಾತುಗಳಲ್ಲಿ ಸತ್ಯವಡಗಿದೆ. ಬ್ರಿಟೀಷ್ ವಸಾಹತುಶಾಹಿ ಅನೇಕ ರೀತಿಯ ಶೋಷಣೆಯನ್ನುಂಟು ಮಾಡಿದ್ದರೂ, ಈ ದೇಶದ ಕೆಳವರ್ಗದ ಜನರಿಗೆ ಶಿಕ್ಷಣ ನೀಡುವ ಮೂಲಕ ಕಾಂತಿಕಾರಕವಾದ ಹೆಜ್ಜೆಯನ್ನಿಟ್ಟಿದೆ. ಅಂತೆಯೇ ಡಾ. ಅಂಬೇಡ್ಕರ್‌ರಂತವರು ಭಾರತದ ಸಂವಿಧಾನ ಬರೆಯಲು ಸಾಧ್ಯವಾಯಿತು. ಮನುಸ್ಮೃತಿಯನ್ನು ಸುಡಲು ಸಾಧ್ಯವಾಯಿತು. ಪ್ರಾಣಿಗಳಂತೆ ಬದುಕುತ್ತಿದ್ದ ಜನರನ್ನು ಮನಷ್ಯರನ್ನಾಗಿ ಪರಿವರ್ತಿಸಲು ಸಾಧ್ಯವಾಯಿತು. ಮಾರ್ಕ್ಸ್‌ವಾದ, ಲೋಹಿಯಾವಾದಗಳು ವೈಚಾರಿಕತೆಯ ಬೆಳವಣಿಗೆಗೆ ಮುಖ್ಯ ಪ್ರೇರಣೆಯಾದವು.

ಕರ್ನಾಟಕದ ಆಧುನಿಕ ಸಂದರ್ಭದಲ್ಲಿ ವೈಚಾರಿಕತೆ ಹುಟ್ಟಿಕೊಂಡಿದ್ದಕ್ಕೆ ಕೆಲವು ಮುಖ್ಯ ಕಾರಣಗಳಿವೆ. ಶ್ರೀಲಂಕಾದ ಪ್ರಖರ ವಿಚಾರವಾದಿ ಡಾ. ಕೋವೂರ ಅವರು ಪುಟ್ಟಪರ್ತಿ ಸಯಿಬಾಬಾನಿಗೆ ಪಬ್ಲಿಕ್ ವೇದಿಕೆಯಲ್ಲಿ ಚಾಲೇಂಜ್ ಮಾಡಿದರು. ಪವಾಡಗಳನ್ನು ಮಾಡುವದಾದರೆ ಜನ ಸಮುದಾಯದ ನಡುವೆ ತಾವು ತಿಳಿಸಿದ ಪವಾಡ ಮಾಡಿತೋರಿಸಲೆಂದು ಡಾ. ಕೋವೂರ ಅವರು ಸವಾಲು ಹಾಕಿದರು.

ಅಂತಹ ಪವಾಡ ಮಾಡಿದರೆ ಲಕ್ಷ ರೂಪಾಯಿ ಮೊತ್ತದ ಬಹುಮಾನ ನೀಡುವುದಾಗಿ ಹೇಳಿ ದರು. ಆದರೆ ಸಾಯಿಬಾಬಾ ಬರಲಿಲ್ಲ. ಅಂದಿನಿಂದ ಪವಾಡ ಬಯಲು ಮಾಡುವ ಕಾರ್ಯಕ್ರಮಗಳು ವಿಜ್ಞಾನ ಪರಿಷತ್ತಿನಿಂದ ಪ್ರಾರಂಭವಾದವು.

ಎಂಬತ್ತರ ದಶಕದಲ್ಲಿ ಡಾ. ಎಚ್. ನರಸಿಂಹಯ್ಯ

ಕನ್ನಡದಲ್ಲಿ ವಿಚಾರವಾದದ ಬೆಳವಣಿಗೆಗೆ ವೈಚಾರಿಕ ಪತ್ರಿಕೆಗಳ ಪಾತ್ರವೂ ಗಮನಾರ್ಹವಾಗಿದೆ. ಪ್ರಾರಂಭದಲ್ಲಿ ಗೋಪಾಲ ಕೃಷ್ಣ ಅಡಿಗರ ಸಂಪಾದಕತ್ವದಲ್ಲಿ ಪ್ರಕಟವಾದ 'ಸಾಕ್ಷಿ', ಚಂಪಾ-ಗಿರಡ್ಡಿ-ಪಟ್ಟಣಶೆಟ್ಟಿಯವರ ಸಂಪಾದಾಕತ್ವದಲ್ಲಿ ಹುಟ್ಟಿಕೊಂಡ "ಸಂಕ್ರಮಣ" ಯುವಜನತೆಯಲ್ಲಿ ವೈಚಾರಿಕತೆ ಬೆಳೆಯಲು ಕಾರಣವಾದವು. ನಂತರದ ಸಂದರ್ಭದಲ್ಲಿ ಬಂದ ಶೂದ್ರ, ಅನ್ವೇಷಣೆ, ಲಂಕೇಶ ಪತ್ರಿಕೆ, ಹೊಸತು, ಸಂವಾದ, ಅಗ್ನಿ ಈ ಮುಂತಾದ ಪತ್ರಿಕೆಗಳು ಅನೇಕ ವೈಚಾರಿಕ ಲೇಖನಗಳನ್ನು ಪ್ರಕಟಿಸಿದವು. ಕರ್ನಾಟಕದಲ್ಲಿ ವೈಚಾರಿಕ ಪರಂಪರೆಯನ್ನು ಹುಟ್ಟು ಹಾಕುವಲ್ಲಿ ಪ್ರಗತಿ ಪರ ಚಳುವಳಿಗಳ ಪಾತ್ರವೂ ಗಮನಾರ್ಹವಾದುದಾಗಿದೆ. ತುರ್ತು ಪರಿಸ್ಥಿತಿಯ ಸಂದರ್ಭ ವೈಚಾರಿಕ ನೆಲೆಗಳನ್ನು ಕಂಡುಕೊಳ್ಳಲು ಒಂದು ಮಹತ್ವದ ಘಟನೆಯಾಯಿತು. ಸಮಾಜವಾದಿ ಚಿಂತಕರು ಜೈಲುಗಳ ಮೂಲಕವೆ ತಮ್ಮ ಬರವಣಿಗೆ ಪ್ರಾರಂಭಿಸಿದರು. ಕರ್ನಾಟಕ ರಾಜ್ಯ ಸಮುದಾಯ ಸಂಘಟನೆ ನಾಡಿನಾದ್ಯಂತ ತನ್ನ ಶಾಖೆಗಳನ್ನು ಪ್ರಾರಂಭಿಸಿ ಯುವಕರಲ್ಲಿ ಸಾಂಸ್ಕೃತಿಕ ಜಾಗೃತಿಯನ್ನುಂಟು ಮಾಡಿತು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ, ಬೀದರ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬಂದ ಭಾನಾಮತಿ ಪ್ರಸಂಗಗಳನ್ನು ಪರಿಶೀಲಿಸಲು ಸರಕಾರ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತು. ಆ ಸಮಿತಿಯಲ್ಲಿದ್ದ ಅನೇಕ ವಿಜ್ಞಾನಿಗಳು ಮನೋವೈದ್ಯರು ಭಾನಾಮತಿಯ ಕಾರಣಗಳನ್ನು ಬಯಲು ಮಾಡಿದರು.

ಈ ಸಂದರ್ಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಪ್ರಕಟಿಸಿದ 'ವಿಚಾರ ಸಾಹಿತ್ಯ' ಸಂಕಲನಗಳು, ನಂತರದ ವರ್ಷಗಳಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಪ್ರತಿ ವರ್ಷ ಪ್ರಕಟಿಸಲು ಪ್ರಾರಂಭಿಸಿದ ವಿಚಾರ ಸಾಹಿತ್ಯದ ವಾರ್ಷಿಕ ಸಂಕಲನಗಳು ಯುವಕರ ಮೇಲೆ ಗಾಢ ಪರಿಣಾಮವನ್ನುಂಟು ಮಾಡಿದವು.

ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಹುಟ್ಟಿಕೊಂಡ ಜಿಲ್ಲಾ ವಿಜ್ಞಾನ ಕೇಂದ್ರಗಳು, ಬೇರ ಬೇರೆ ಪ್ರದೇಶಗಳಲ್ಲಿ ಹುಟ್ಟಿಕೊಂಡ ವಿಶ್ವವಿದ್ಯಾಲಯಗಳು-ಕಾಲೇಜುಗಳು ಮೌಢ್ಯತೆ -ಅಂಧ ಸಂಪ್ರದಾಯ ನಿವಾರಣೆಗೆ ಮುಖ್ಯ ಕಾರಣವಾದವು. ನಂತರದ ವರ್ಷಗಳಲ್ಲಿ ವೈಚಾರಿಕತೆಗೆ ಸಂಬಂಧಿಸಿದ ಅನೇಕ ಕೃತಿಗಳು ಕನ್ನಡದಲ್ಲಿ ಪ್ರಕಟವಾದವು.

ಸೃಜನಶೀಲ ಕೃತಿಗಳಲ್ಲಿಯೂ ವೈಚಾರಿಕತೆಯನ್ನು ಗುರುತಿಸುವ ಪ್ರಯತ್ನಗಳು ನಡೆದವು. ನಂತರದ ಕಾಲಘಟ್ಟದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿಯೂ ಕೂಡ ಹೊಸ ಚಿಂತನೆ ಪ್ರಾರಂಭವಾಯಿತು. ಧಾರ್ಮಿಕ ಚಿಂತನೆಯ ಕೃತಿಗಳು, ಸಾಮಾಜಿಕ ಚಿಂತನೆಯ ಕೃತಿಗಳು, ರಾಜಕೀಯ ಚಿಂತನೆಯ ಕೃತಿಗಳು, ಆರ್ಥಿಕ ಚಿಂತನೆಯ ಕೃತಿಗಳು ಪ್ರಕಾಶನಗೊಂಡವು. ಹೀಗಾಗಿ ಇಂದು ಕನ್ನಡದಲ್ಲಿ ವೈಚಾರಿಕ ಸಾಹಿತ್ಯ ಒಂದು ಪ್ರಕಾರವಾಗಿ, ಬಹುಮುಖಿ ಚಿಂತನೆಗಳ ಒಂದು ಶಿಸ್ತಾಗಿ ಬೆಳೆದು ನಿಂತಿದೆ.

ಕನ್ನಡದಲ್ಲಿ ವಿಚಾರವಾದದ ಬೆಳವಣಿಗೆಗೆ ವೈಚಾರಿಕ ಪತ್ರಿಕೆಗಳ ಪಾತ್ರವೂ ಗಮನಾರ್ಹವಾಗಿದೆ. ಪ್ರಾರಂಭದಲ್ಲಿ ಗೋಪಾಲಕೃಷ್ಣ ಅಡಿಗರ ಸಂಪಾದಕತ್ವದಲ್ಲಿ ಪ್ರಕಟವಾದ 'ಸಾಕ್ಷಿ', ಚಂಪಾ-ಗಿರಡ್ಡಿ-ಪಟ್ಟಣಶೆಟ್ಟಿಯವರ ಸಂಪಾದಾಕತ್ವದಲ್ಲಿ ಹುಟ್ಟಿಕೊಂಡ "ಸಂಕ್ರಮಣ" ಯುವಜನತೆಯಲ್ಲಿ ವೈಚಾರಿಕತೆ ಬೆಳೆಯಲು ಕಾರಣವಾದವು. ನಂತರದ ಸಂದರ್ಭದಲ್ಲಿ ಬಂದ ಶೂದ್ರ, ಅನ್ವೇಷಣೆ, ಲಂಕೇಶ ಪತ್ರಿಕೆ, ಹೊಸತು, ಸಂವಾದ, ಅಗ್ನಿ ಈ ಮುಂತಾದ ಪತ್ರಿಕೆಗಳು ಅನೇಕ ವೈಚಾರಿಕ ಲೇಖನಗಳನ್ನು ಪ್ರಕಟಿಸಿದವು.

ಕರ್ನಾಟಕದಲ್ಲಿ ವೈಚಾರಿಕ ಪರಂಪರೆಯನ್ನು ಹುಟ್ಟು ಹಾಕುವಲ್ಲಿ ಪ್ರಗತಿಪರ ಚಳುವಳಿಗಳ ಪಾತ್ರವೂ ಗಮನಾರ್ಹವಾದುದಾಗಿದೆ. ತುರ್ತು ಪರಿಸ್ಥಿತಿಯ ಸಂದರ್ಭ ವೈಚಾರಿಕ ನೆಲೆಗಳನ್ನು ಕಂಡುಕೊಳ್ಳಲು ಒಂದು ಮಹತ್ವದ ಘಟನೆಯಾಯಿತು. ಸಮಾಜವಾದಿ ಚಿಂತಕರು ಜೈಲುಗಳ ಮೂಲಕವೆ ತಮ್ಮ ಬರವಣಿಗೆ ಪ್ರಾರಂಭಿಸಿದರು.

ಕರ್ನಾಟಕ ರಾಜ್ಯ ಸಮುದಾಯ ಸಂಘಟನೆ ನಾಡಿನಾದ್ಯಂತ ತನ್ನ ಶಾಖೆಗಳನ್ನು ಪ್ರಾರಂಭಿಸಿ ಯುವಕರಲ್ಲಿ ಸಾಂಸ್ಕೃತಿಕ ಜಾಗೃತಿಯನ್ನುಂಟು ಮಾಡಿತು. ಅದೇ ರೀತಿ ಕರ್ನಾಟಕ ರಾಜ್ಯ ದಲಿತ ಸಂಘಟನೆ, ಕರ್ನಾಟಕ ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ, ಅಖಿಲ ಭಾರತ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ರೈತ ಸಂಘಟನೆ- ಈ ಮೊದಲಾದ ರಾಜ್ಯ ಮಟ್ಟದ ಸಂಘಟನೆಗಳು ಕ್ರಮಬದ್ಧವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಕರ್ನಾಟಕದಲ್ಲಿ ವೈಚಾರಿಕತೆಯ ಅಲೆಯನ್ನೇ ಹುಟ್ಟುಹಾಕಿದವು.

ಕ್ರಾಂತಿಗೀತೆಗಳ ಮೂಲಕ, ಬೀದಿ ನಾಟಕಗಳ ಮೂಲಕ ವರ್ತಮಾನದ ತುರ್ತುಗಳಿಗೆ ಸ್ಪಂದಿಸಿದವು. ದಲಿತವರ್ಗದಿಂದ, ಹಿಂದುಳಿದ ವರ್ಗಗಳಿಂದ, ಗ್ರಾಮೀಣ ಪ್ರದೇಶದಿಂದ ಬಂದ ಯುವಕರು ಶಿಕ್ಷಣ ಪಡೆದು, ಸಂಘಟನೆ ಕಟ್ಟಿ ಅನ್ಯಾಯದ ವಿರುದ್ಧ ಶತಮಾನಗಳ ಶೋಷಣೆಯ ವಿರುದ್ಧ ಹೋರಾಟಗಳನ್ನು ಹುಟ್ಟು ಹಾಕಿದರು. ಅನೇಕ ಚಳುವಳಿಗಳು-ಜಾಥಾಗಳು ಯುವಕರ ಮೇಲೆ ಪರಿಣಾಮ ಬೀರಿದವು.

ಧರ್ಮವನ್ನು ಕುರಿತು, ಶಿಕ್ಷಣವನ್ನು ಕುರಿತು, ಸಮಾಜವನ್ನು ಕುರಿತು ಹೊಸ ಚಿಂತನೆಗಳು ಪ್ರಾರಂಭವಾದವು. ನರಗುಂದ ರೈತರ ಬಂಡಾಯ ಬೆಂಡಿಗೇರಿ ಪ್ರಕರಣ, ಕುದುರಿಮೋತಿ ಪ್ರಕರಣಗಳು ಹೋರಾಟಗಾರರಿಗೆ ಹುಮ್ಮಸ್ಸು ನೀಡಿದವು. ಎಂಬತ್ತು ತೊಂಬತ್ತರ ದಶಕಗಳಲ್ಲಿ ಜನಪರ ಚಳುವಳಿಗಳು ತೀವ್ರಗೊಂಡವು. ಈ ಎಲ್ಲ ಸಂಗತಿಗಳು ವೈಚಾರಿಕ ಸಾಹಿತ್ಯದ ಹುಟ್ಟಿಗೆ ಕಾರಣವಾದವು. □

ಹಿಂದುತ್ವ ಪಾಳಯದಲ್ಲಿ ಜಿನ್ನಾ ಎಂಬ ಭೂತ

ನಾ ದಿವಾಕರ

ದೇಶದ ಸಂವಿಧಾನದ ಆಶಯಗಳನ್ನೇ ಒಪ್ಪದೆ ಒಂದು ಧರ್ಮ ಕೇಂದ್ರಿತ ಸಮಾಜಕ್ಕಾಗಿ ಹೋರಾಟ ನಡೆಸುತ್ತಿದ್ದ ಆರೆಸ್ಸೆಸ್‌ನ ಆಶ್ರಯದಲ್ಲೇ ಬೆಳೆದ ಜನಸಂಘ ಸಾರ್ವಜನಿಕ ಉದ್ದಿಮೆಗಳ ರಾಷ್ಟ್ರೀಕರಣಕ್ಕಾಗಲೀ, ರಾಜಪ್ರಭುತ್ವದ ವಿರುದ್ಧವಾಗಲೀ, ದೇಶದ ನಿಮ್ನ ವರ್ಗಗಳ ಪರವಾಗಿಯಾಗಲೀ ಹೋರಾಟ ನಡೆಸಲು ಸಿದ್ಧವಿರಲಿಲ್ಲ. ಬದಲಾಗಿ ಕಾಂಗ್ರೆಸ್ ವಿರೋಧಿ ನೀತಿಯನ್ನೇ ಕೇಂದ್ರೀಕರಿಸಿ, ಭಾರತೀಯ ಸಂವಿಧಾನದ ಸೆಕ್ಯುಲರ್ ನೀತಿಗಳನ್ನೇ ಬುಡಮೇಲು ಮಾಡುವ ಯತ್ನದಲ್ಲಿ ತನ್ನ ಇಡೀ ರಾಜಕೀಯ ಸಿದ್ಧಾಂತವನ್ನು ರೂಪಿಸಿತ್ತು. ದೇಶದ ಸಂವಿಧಾನವನ್ನು ಸಾಕಾರಗೊಳಿಸುವ ಚುನಾಯಿತ ಸಂಸತ್ತಿಗಿಂತಲೂ ಆರೆಸ್ಸೆಸ್ ಪ್ರೇರಿತ ಧರ್ಮ ಸಂಸತ್ತು ಹಿಂದೂ ರಾಷ್ಟ್ರದ ರೂಪು ರೇಷೆಗಳನ್ನು ನಿರ್ಧರಿಸುತ್ತಿದ್ದುದು ಕಟು ವಾಸ್ತವ.

ಗತಕಾಲದ ವೈಭವಗಳು, ಭೂತಕಾಲದ ಘಟನೆಗಳು ಮತ್ತು ಚರಿತ್ರೆಯ ಗೋರಿಗಳನ್ನು ಅಗೆದಾಗ ದೊರೆಯುವ ಕೆಲವು ಭೂತಗಳು ಯಾವುದೇ ಒಂದು ರಾಜಕೀಯ ಪಕ್ಷದ ಭವಿಷ್ಯವನ್ನು ನಿರ್ಧರಿಸುವುದಿದ್ದರೆ ಅದು ಭಾರತೀಯ ಜನತಾ ಪಕ್ಷದಲ್ಲಿ ಮಾತ್ರ ಸಾಧ್ಯ ಎಂದು ತೋರುತ್ತದೆ. 1925ರಲ್ಲಿ ಭಾಜಪದ ಪಿತೃ ಸಂಘಟನೆ ಆರೆಸ್ಸೆಸ್ ಉಗಮಿಸಿದ ದಿನದಿಂದಲೂ ಹಿಂದೂ ರಾಷ್ಟ್ರವನ್ನು ಪ್ರತಿಪಾದಿಸುವ ರಾಜಕಾರಣದಲ್ಲಿ ಸಮಕಾಲೀನ ಚಿಂತನೆಗಳು ವ್ಯಕ್ತವಾಗದೆಯೇ ಇರುವುದು ವಿಚಿತ್ರವಾದರೂ ಅಷ್ಟೇ ಸತ್ಯ. ಬ್ರಿಟೀಷರ ವಿರುದ್ಧ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಒಂದೆಡೆ, ದೇಶದ ದಲಿತ ಸಮುದಾಯಗಳ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಒಂದೆಡೆ, ರಾಜಪ್ರಭುತ್ವದ ವಿರುದ್ಧ ಜನಸಮುದಾಯಗಳ ಹೋರಾಟ ಒಂದೆಡೆ, ಜಾಗತಿಕ ಮಟ್ಟದಲ್ಲಿ ವ್ಯಾಪಕವಾಗಿ ಹರಡಿದ್ದ ಸಾಮ್ರಾಜ್ಯಶಾಹಿ ಆಕ್ರಮಣಗಳ ವಿರುದ್ಧ ಹೋರಾಟ ಒಂದೆಡೆ, ಶ್ರಮಿಕ ವರ್ಗಗಳ ವಿಮೋಚನೆಗಾಗಿ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ಒಂದೆಡೆ, ಹೀಗೆ ಭಾರತ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ವಿಭಿನ್ನ ಜನಸಮುದಾಯಗಳ ಆಶೋತ್ತರಗಳ ಈಡೇರಿಕೆಗಾಗಿ ಸಂಘರ್ಷಮಯ ವಾತಾವರಣದಲ್ಲಿ ತೊಡಗಿದ್ದ ಸಂದರ್ಭದಲ್ಲಿ ಆರೆಸ್ಸೆಸ್ ಮತ್ತಿತರ ಸಂಘಟನೆಗಳಿಗೆ ಪ್ರಧಾನವಾಗಿ ಕಂಡುಬಂದ ಅಗತ್ಯತೆ, ಹಿಂದೂ ರಾಷ್ಟ್ರದ ಸ್ಥಾಪನೆ. ಮೇಲೆ ಉಲ್ಲೇಖಿಸಲಾದ ಯಾವುದೇ ಹೋರಾಟಗಳಲ್ಲೂ ತಮ್ಮನ್ನು ತೊಡಗಿಸಿಕೊಳ್ಳದೆ, ಅಂದಿನ ಕಾಲಘಟ್ಟದ ಸಾರ್ವಜನಿಕ ಅಭಿಪ್ರಾಯವನ್ನೂ ಮನ್ನಿಸದೆ, ಪ್ರಜಾಸತ್ತಾತ್ಮಕ ಅಲೆಗಳ ವಿರುದ್ಧ ಈಜುವ ಆರೆಸ್ಸೆಸ್‌ನ ನೀತಿ ಒಂದು ರೀತಿಯಲ್ಲಿ ದೇಶದ ವಿಭಜನೆಯಲ್ಲೂ ತನ್ನದೇ ಆದ ಪಾತ್ರ ವಹಿಸಿದ್ದನ್ನು ಅಲ್ಲಗಳೆಯಲಾಗುವುದಿಲ್ಲ.

ಹಿಂದೂ ರಾಷ್ಟ್ರದ ಸ್ಥಾಪನೆಗೆ, ಹಿಂದೂ ಧರ್ಮ ರಕ್ಷಣೆಗಾಗಿ ಸ್ಥಾಪಿಸಲಾದ ಸಾಂಸ್ಕೃತಿಕ ಸಂಘಟನೆ ಜನಸಂಘದ ಮೂಲಕ ರಾಜಕೀಯ ಪ್ರವೇಶ ಮಾಡಿದಾಗಲೂ ಹಿಂದುತ್ವ ಪಾಳಯದ ಚಿಂತನೆಗಳಲ್ಲಿ ಭಿನ್ನತೆಯೇನೂ ಕಂಡು ಬಂದಿರಲಿಲ್ಲ. ವಿಶ್ವದ ಬಹುತೇಕ ರಾಷ್ಟ್ರಗಳು ಸಮಾಜವಾದ, ಸಮತಾವಾದ, ಸಾಮ್ರಾಜ್ಯಶಾಹಿ ವಿರೋಧಿ ಧೋರಣೆಯನ್ನು ವ್ಯಕ್ತಪಡಿಸುತ್ತಿದ್ದ ಕಾಲಘಟ್ಟದಲ್ಲೂ ಜನಸಂಘ ಮತ್ತು ಆರೆಸ್ಸೆಸ್ ತನ್ನ ಬಲಪಂಥೀಯ ಧೋರಣೆ ಮತ್ತು ಸಾಮ್ರಾಜ್ಯಶಾಹಿ ಪರ ಧೋರಣೆಯಿಂದ ವಿಮುಖವಾಗಿರಲಿಲ್ಲ.

ದೇಶದ ಸಂವಿಧಾನದ ಆಶಯಗಳನ್ನೇ ಒಪ್ಪದೆ ಒಂದು ಧರ್ಮ ಕೇಂದ್ರಿತ ಸಮಾಜಕ್ಕಾಗಿ ಹೋರಾಟ ನಡೆಸುತ್ತಿದ್ದ ಆರೆಸ್ಸೆಸ್‌ನ ಆಶ್ರಯದಲ್ಲೇ ಬೆಳೆದ ಜನಸಂಘ ಸಾರ್ವಜನಿಕ ಉದ್ದಿಮೆಗಳ ರಾಷ್ಟ್ರೀಕರಣಕ್ಕಾಗಲೀ, ರಾಜಪ್ರಭುತ್ವದ ವಿರುದ್ಧವಾಗಲೀ, ದೇಶದ ನಿಮ್ನ ವರ್ಗಗಳ ಪರವಾಗಿಯಾಗಲೀ ಹೋರಾಟ ನಡೆಸಲು ಸಿದ್ಧವಿರಲಿಲ್ಲ. ಬದಲಾಗಿ ಕಾಂಗ್ರೆಸ್ ವಿರೋಧಿ ನೀತಿಯನ್ನೇ ಕೇಂದ್ರೀಕರಿಸಿ, ಭಾರತೀಯ ಸಂವಿಧಾನದ ಸೆಕ್ಯುಲರ್ ನೀತಿಗಳನ್ನೇ ಬುಡಮೇಲು ಮಾಡುವ ಯತ್ನದಲ್ಲಿ ತನ್ನ ಇಡೀ ರಾಜಕೀಯ ಸಿದ್ಧಾಂತವನ್ನು ರೂಪಿಸಿತ್ತು. ದೇಶದ ಸಂವಿಧಾನವನ್ನು ಸಾಕಾರಗೊಳಿಸುವ ಚುನಾಯಿತ ಸಂಸತ್ತಿಗಿಂತಲೂ ಆರೆಸ್ಸೆಸ್ ಪ್ರೇರಿತ ಧರ್ಮ ಸಂಸತ್ತು ಹಿಂದೂ ರಾಷ್ಟ್ರದ ರೂಪು ರೇಷೆಗಳನ್ನು ನಿರ್ಧರಿಸುತ್ತಿದ್ದುದು ಕಟು ವಾಸ್ತವ.

ಈ ಪರಂಪರೆಯಲ್ಲೇ ಬೆಳೆದು ಬಂದ ಜನಸಂಘ ಭಾರತೀಯ ಜನತಾ ಪಕ್ಷವಾಗಿ ಮಾರ್ಪಟ್ಟ ಮೇಲೆ ಸೈದ್ಧಾಂತಿಕವಾಗಿ



ಬದಲಾವಣೆ ಕಾಣದಿದ್ದರೂ, ರಾಜಕೀಯ ಕ್ಷೇತ್ರಕ್ಕೆ ಅನುಗುಣವಾಗಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳುವಲ್ಲಿ ಭಾಜಪ ಯಶಸ್ವಿಯಾಗಿತ್ತು. ಹಿಂದೂ ರಾಷ್ಟ್ರ ಪರಿಕಲ್ಪನೆಯ ಮೂಲ ತಳಹದಿಯ ಮೇಲೆ ತನ್ನದೇ ಆದ ಸೆಕ್ಯುಲರ್ ಸಿದ್ಧಾಂತವನ್ನು ಪ್ರತಿಪಾದಿಸಲು ಭಾಜಪಕ್ಕೆ ವಾಜಪೇಯಿ ಅವರಂತಹ ಉದಾರವಾದಿ ಮುಖವಾಡಗಳು ನೆರವಾಗಿದ್ದವು. ಜೆಪಿ ಅವರ ಪರ್ಯಾಯ ರಾಜಕೀಯದ ಸಂಪೂರ್ಣ ಫಲಾನುಭವಿಗಳಾಗಿ ಹೊರಹೊಮ್ಮಿದ ಭಾಜಪಕ್ಕೆ ತನ್ನದೇ ಆದ ರಾಜಕೀಯ ನೆಲೆ ಕಂಡುಕೊಳ್ಳಲು ವಾಜಪೇಯಿ ಅವರ ಮುಖಂಡತ್ವದಲ್ಲಿ ಸಮಾಜದ ಎಲ್ಲ ಸಮುದಾಯಗಳನ್ನು ಸೆಳೆಯುವುದೂ ಅಗತ್ಯವಾಗಿತ್ತು. ಹಾಗಾಗಿಯೇ ವಿವೇಕಾನಂದ, ಭಗತ್‌ಸಿಂಗ್, ಚಂದ್ರಶೇಖರ್ ಅಜಾದ್, ಸರ್ದಾರ್ ಪಟೇಲ್, ಕೆಲವೊಮ್ಮೆ ಗಾಂಧಿ, ಅಂಬೇಡ್ಕರ್ ಎಲ್ಲರೂ ಹಿಂದುತ್ವ ಪಾಳಯಕ್ಕೆ ಅಪ್ಯಾಯಮಾನವಾದರು.

ಈ ಎಲ್ಲ ರಾಷ್ಟ್ರೀಯ ನಾಯಕರ ಧ್ಯೇಯೋದ್ದೇಶಗಳನ್ನು ತನ್ನದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿ ಪಕ್ಷದ ಹಿಂದೂ ರಾಷ್ಟ್ರದ ಪರಿಕಲ್ಪನೆಗೆ ಪ್ರಜಾತಾಂತ್ರಿಕ ರೂಪವನ್ನು ನೀಡುವ ನಿಟ್ಟಿನಲ್ಲಿ ಭಾಜಪಕ್ಕೆ ತನ್ನ ಏಕ ಸಂಸ್ಕೃತಿಯ ಅನುಷ್ಠಾನಕ್ಕೆ "ಅನ್ಯರ" ಅವಶ್ಯಕತೆಯೂ ಅಷ್ಟೇ ತುರ್ತಾಗಿತ್ತು. ಅಲ್ಪ ಸಂಖ್ಯಾತರಲ್ಲಿ ಈ ಅನ್ಯರನ್ನು ಗುರುತಿಸುವುದು ಕಷ್ಟಕರವಾಗಿರಲಿಲ್ಲ. ಈ ನಿಟ್ಟಿನಲ್ಲಿ ಅಂಬೇಡ್ಕರ್ ಅವರನ್ನೂ ಅಪ್ಪಿಕೊಳ್ಳುವುದು ಹಿಂದುತ್ವ ಪಾಳಯಕ್ಕೆ ಅನಿವಾರ್ಯವಾಗಿತ್ತು. ದೇಶದ ವಿಭಜನೆಯ ಕಾವು ತಣ್ಣಗಾಗುವ ಮುನ್ನವೇ ಪಾಕಿಸ್ತಾನದ ವಿರುದ್ಧ ನಡೆದ ಎರಡು ಯುದ್ಧಗಳು ಭಾಜಪದ ಈ ತರ್ಕಕ್ಕೆ ಹೆಚ್ಚು ಪುಷ್ಟಿ ನೀಡಿದ್ದೇ ಅಲ್ಲದೆ ಹಿಂದೂ ರಾಷ್ಟ್ರದ ಸ್ಥಾಪನೆಗೆ ಬಹುಸಾಂಸ್ಕೃತಿಕತೆಯೇ ಕಂಟಕವೆಂದು ಪ್ರತಿಪಾದಿಸಲು ನೆರವಾಗಿದ್ದವು.

ಈ ಸಂದರ್ಭದಲ್ಲಿ ಸಾಮಾನ್ಯ ಜನತೆ ಎದುರಿಸುತ್ತಿದ್ದ ಎಲ್ಲ ಸಾಮಾಜಿಕ-ಆರ್ಥಿಕ ಸಮಸ್ಯೆಗಳಿಗೂ, ಸಾಂಸ್ಕೃತಿಕ ಸಂಘರ್ಷಗಳಿಗೂ ಅನ್ಯರನ್ನೇ ಗುರಿ ಮಾಡುವುದೂ ಭಾಜಪಕ್ಕೆ ಸುಲಭಸಾಧ್ಯವಾಗಿತ್ತು. ಈ ನಿಟ್ಟಿನಲ್ಲಿ ತನ್ನ ಕಾರ್ಯ ಸಿದ್ಧಿಗೆ ಮೂಲ ಅಸ್ತ್ರವಾಗಿದ್ದು ಗತಕಾಲದ ಮುಸ್ಲಿಂ ದೊರೆಗಳು ಮತ್ತು ಸಮಕಾಲೀನ ಇತಿಹಾಸದ ಮೊಹಮ್ಮದ್ ಅಲಿ ಜಿನ್ನಾ. ದೇಶದ ವಿಭಜನೆಯ ಬಗ್ಗೆ ಪ್ರಪ್ರಥಮವಾಗಿ ಸೊಲ್ಲೆತ್ತಿದವರು ಸಾವರ್‌ಕರ್ ಆದರೂ ವಿಭಜನೆಗೆ ಜಿನ್ನಾ ಮಾತ್ರ ಕಾರಣ ಎಂಬ ಹಿಂದುತ್ವ ಪಾಳಯದ ವಾದ ಒಂದು ರೀತಿಯಲ್ಲಿ ಒಪ್ಪಿತವಾದ ಅಭಿಪ್ರಾಯವಾಗಿಯೂ ಪರಿಣಮಿಸಿತ್ತು. ಹಾಗಾಗಿಯೇ ಜಿನ್ನಾ ಎಂಬ ಭೂತ ಭಾಜಪವನ್ನು ಆಗಿಂದಾಗ್ಗೆ ಕಾಡುತ್ತಿರುತ್ತದೆ.

ನಕಾರಾತ್ಮಕ ರಾಜಕಾರಣ

ಸೋಲನ್ನು ಪರಾಮರ್ಶಿಸಿ ಒಪ್ಪಿಕೊಳ್ಳದಿರುವುದು ಮತ್ತು ತನ್ನ ಅಪರಾಧಗಳ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಂಡು ಪ್ರಾಯಶ್ಚಿತ್ತ ಪಡದಿರುವುದು ರಾಜಕೀಯ ಪಕ್ಷಗಳ ಲಕ್ಷಣ. ಭಾಜಪದಲ್ಲಿ ಇದು ಪಾರಂಪರಿಕ ಗುಣ. ತನ್ನ ಪೂರ್ವಾವತಾರ ಜನಸಂಘದಿಂದ ಭಾಜಪವಾಗಿ ಪರಿವರ್ತಿತವಾದ ನಂತರದಲ್ಲಿ ಭಾಜಪದ ಸೈದ್ಧಾಂತಿಕ ತಳಹದಿ ಶಿಥಿಲವಾಗುತ್ತಿರುವುದು ಹಿಂದುತ್ವ ಪಾಳಯದಲ್ಲಿ ತೀವ್ರ ಆತಂಕ ಉಂಟುಮಾಡುತ್ತಿದೆ. ಆರೆಸ್ಸೆಸ್‌ನ ನಿಯಂತ್ರಣದಲ್ಲಿದ್ದುಕೊಂಡೇ, ಸಂಘಟನೆಯಿಂದ ದೂರವಿರುವಂತೆ ನಾಟಕ ಮಾಡಬೇಕಾಗಿರುವುದು ಭಾಜಪದ ರಾಜಕೀಯ ಅನಿವಾರ್ಯತೆ ಮತ್ತು ಸೈದ್ಧಾಂತಿಕ ಗೊಂದಲ.

ಜಿನ್ನಾ

ಗೋಪಾಲ್ಕರ್

ಸೋಲನ್ನು ಪರಾಮರ್ಶಿಸಿ ಒಪ್ಪಿಕೊಳ್ಳದಿರುವುದು–ತನ್ನ ಅಪರಾಧಗಳ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಂಡು ಪ್ರಾಯಶ್ಚಿತ್ತ ಪಡದಿರುವುದು ರಾಜಕೀಯ ಪಕ್ಷಗಳ ಲಕ್ಷಣ. ಭಾಜಪದಲ್ಲಿ ಇದು ಪಾರಂಪರಿಕ ಗುಣ. ತನ್ನ ಪೂರ್ವಾವತಾರ ಜನಸಂಘದಿಂದ ಭಾಜಪವಾಗಿ ಪರಿವರ್ತಿತವಾದ ನಂತರದಲ್ಲಿ ಭಾಜಪದ ಸೈದ್ಧಾಂತಿಕ ತಳಹದಿ ಶಿಥಿಲವಾಗುತ್ತಿರುವುದು ಹಿಂದುತ್ವ ಪಾಳಯದಲ್ಲಿ ತೀವ್ರ ಆತಂಕ ಉಂಟುಮಾಡುತ್ತಿದೆ. ಆರೆಸ್ಸೆಸ್‌ನ ನಿಯಂತ್ರಣದಲ್ಲಿದ್ದು ಕೊಂಡೇ ಸಂಘಟನೆಯಿಂದ ದೂರವಿರುವಂತೆ ನಾಟಕ ಮಾಡಬೇಕಾಗಿರುವುದು ಭಾಜಪದ ರಾಜಕೀಯ ಅನಿವಾರ್ಯತೆ ಮತ್ತು ಸೈದ್ಧಾಂತಿಕ ಗೊಂದಲ.

ಉದಾರವಾದಿ ಹಣೆಪಟ್ಟಿ ಹೊತ್ತಿದ್ದ ವಾಜಪೇಯಿ ಅವರ ಸರ್ಕಾರದಲ್ಲೇ ಮಂತ್ರಿ ಮಂಡಲ ರಚನೆಯಲ್ಲಿ ಸಂಘಪರಿವಾರ ತನ್ನದೇ ಆದ ಪ್ರಭಾವ ಬೀರಿದ್ದನ್ನು ಇಲ್ಲಿ ಸ್ಮರಿಸಬಹುದು. ಆದರೆ ಅಧಿಕಾರ ಗ್ರಹಣದ ಆಕಾಂಕ್ಷೆಯನ್ನು ಹೊತ್ತ ಯಾವುದೇ ರಾಜಕೀಯ ಪಕ್ಷ ತನ್ನ ಸಿದ್ಧಾಂತಗಳೊಡನೆ ರಾಜಿ ಮಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ. ಈ ಅಂಶ ಭಾರತೀಯ ಪ್ರಜಾತಂತ್ರದಲ್ಲಿ ಸ್ಪಷ್ಟವಾಗಿ ಸಾಬೀತಾಗಿದೆ. ಹಾಗಾಗಿಯೇ ಎಡ ಪಕ್ಷಗಳೂ ಕೆಲವೊಮ್ಮೆ ಸೀಮಿತ ಮಟ್ಟದಲ್ಲಾದರೂ ರಾಜಿ ಮಾಡಿಕೊಂಡಿವೆ. ವಿ.ಪಿ.ಸಿಂಗ್ ಸರ್ಕಾರಕ್ಕೆ ಎಡ ಮತ್ತು ಬಲ ಎರಡೂ ಬೆಂಬಲ ಇದ್ದುದು ಇದಕ್ಕೆ ನಿದರ್ಶನ.

ಆದರೆ 1982ರಲ್ಲಿ ಅಧಿಕೃತ ರಾಜಕೀಯ ಪಕ್ಷವಾಗಿ ಹೊರಹೊಮ್ಮಿದ ಭಾಜಪಕ್ಕೆ ತನ್ನ ಪಿತೃ ಸಂಘಟನೆಯಾದ ಸಂಘಪರಿವಾರದ ಹಿಂದುತ್ವ-ಅಖಂಡ ಭಾರತ-ಏಕಮುಖ ಸಂಸ್ಕೃತಿ ಇವುಗಳೇ ಪ್ರಮುಖ ತಳಹದಿಯಾಗಿತ್ತು. ಪ್ರಾರಂಭಿಕ ವರ್ಷಗಳಲ್ಲಿ, ಅಯೋಧ್ಯ ಚಳುವಳಿಯವರೆಗೂ, ಪಕ್ಷ ಇದೇ ಸಿದ್ಧಾಂತಕ್ಕೆ ಬದ್ಧವಾಗಿದ್ದನ್ನೂ ಕಾಣಬಹುದು. ಆದರೆ 1990ರ ದಶಕದ ನಂತರ ಬೀಸಿದ ಜಾಗತೀಕರಣದ ಅಲೆ ಮತ್ತು ಕೋಮು ದ್ವೇಷದ ರಾಜಕಾರಣ ಭಾಜಪದ ದಿಕ್ಕನ್ನು ಬದಲಿಸಿತ್ತು. ಕೇಂದ್ರದಲ್ಲಿ ಅಧಿಕಾರ ವಹಿಸಿಕೊಳ್ಳುವುದು ಪಕ್ಷದ ಪ್ರಮುಖ ಧ್ಯೇಯವಾಯಿತೇ ಹೊರತು ತನ್ನ ಅಖಂಡ ಭಾರತದ ಕಲ್ಪನೆಯಲ್ಲ. ಈ ಹಾದಿಯಲ್ಲಿ ಬಂದ ಎಲ್ಲ ತೊಡಕುಗಳನ್ನೂ ನಿವಾರಿಸಲು ಪಕ್ಷದಲ್ಲಿ ಉದಾರವಾದಿ ಮುಖವಾಡದ ಹೊಸ-ಹಳೆಯ ಪ್ರಭೃತಿಗಳು ಸಕ್ರಿಯರಾಗಿದ್ದರು. ಪಕ್ಷವು ಹಿಂದೆಂದೂ ಪ್ರತಿಪಾದಿಸದ ಸಾಮಾಜಿಕ ನ್ಯಾಯ, ಖಾಸಗೀಕರಣ ವಿರೋಧ, ಅಂಬೇಡ್ಕರ್ ಚಿಂತನೆ, ಗಾಂಧೀಜಿಯವರ ಸಮಾಜವಾದ, ಲೋಹಿಯಾವಾದ ಎಲ್ಲವನ್ನೂ ತನ್ನ ಕಬಂಧ ಬಾಹುಗಳಲ್ಲಿ ಅಳವಡಿಸಿಕೊಳ್ಳಲು ಭಾಜಪಕ್ಕೆ ಹೆಚ್ಚು ಕಾಲ ಬೇಕಾಗಲಿಲ್ಲ. ದೇಶದ ರಾಜಕೀಯ ಚಿತ್ರಣವೂ ಅಭದ್ರತೆ-ಅಸ್ಪಷ್ಟತೆಗಳಿಂದ ಕೂಡಿದ್ದ ಕಾರಣ ಭಾಜಪಕ್ಕೆ ಅಧಿಕಾರ ಗ್ರಹಣ ಕಷ್ಟವಾಗಲಿಲ್ಲ.

ಆದರೆ ತನ್ನ ಅವಕಾಶವಾದಿ ರಾಜಕಾರಣಕ್ಕೆ ಸಿದ್ಧಾಂತಗಳನ್ನು ಬಲಿನೀಡಿದ ಪರಿಣಾಮವನ್ನು ಭಾಜಪ ಈಗ ಎದುರಿಸುತ್ತಿದೆ. ಎರಡು ಲೋಕಸಭಾ ಚುನಾವಣೆಗಳಲ್ಲಿ ಸೋಲುಂಡ ನಂತರ ಪುನಃ ಅಧಿಕಾರ ದಾಹ ಪಕ್ಷವನ್ನು ಬಾಧಿಸುತ್ತಿರುವುದು ಸ್ಪಷ್ಟವಾ

ಗಿದೆ. ಕರ್ನಾಟಕದಲ್ಲಿ ನಡೆಯುತ್ತಿರುವ ಆಪರೇಷನ್ ಕಮಲದಂತಹ ಭ್ರಷ್ಟ ಮಾರ್ಗಗಳೂ ಇದನ್ನೇ ಸೂಚಿಸುತ್ತವೆ. ಆದರೆ ಜಾತಿ ರಾಜಕಾರಣದ ಪರಾಕಾಷ್ಠೆ ತಲುಪಿರುವ ಭಾರತೀಯ ಪ್ರಜಾತಂತ್ರದಲ್ಲಿ ರಾಷ್ಟ್ರಮಟ್ಟದಲ್ಲಿ ತನ್ನ ಛಾಪು ಮೂಡಿಸುವಲ್ಲಿ ಭಾಜಪ ವಿಫಲವಾಗುತ್ತಿದೆ. ಇತ್ತೀಚೆಗೆ ಮುಗಿದ ಚಿಂತನ್ ಬೈಠಕ್‌ನಲ್ಲಿ ಪಕ್ಷದ ಸೋಲಿನ ಕಾರಣಗಳನ್ನು ಕುರಿತು ಚಿಂತಿಸಲಾಗಿದ್ದು, ನರೇಂದ್ರ ಮೋದಿಯನ್ನು ಮುಂಚೂಣಿಗೆ ತಂದಿದ್ದು, ವರುಣ್ ಗಾಂಧಿಗೆ ಸಮರ್ಥನೆ ನೀಡಿದ್ದು, ಮನಮೋಹನ್ ಸಿಂಗ್ ಅವರನ್ನು ವೈಯ್ಯಕ್ತಿಕವಾಗಿ ಟೀಕಿಸಿದ್ದು ಮತ್ತು ಸ್ಪಷ್ಟ ಪ್ರಣಾಳಿಕೆ ಇಲ್ಲದಿರುವುದನ್ನು ಕಾರಣಗಳೆಂದು ಗುರುತಿಸಲಾಗಿದೆ.

ಆದರೆ ತನ್ನ ಹಿಂದುತ್ವವಾದಿ ಸಿದ್ಧಾಂತ–ರಾಮಸೇತು–ರಾಮ ಮಂದಿರ–ಗೋಹತ್ಯೆ ಮುಂತಾದ ಗಂಭೀರ ವಿಷಯಗಳು ಜನತೆಯನ್ನು ಏಕೆ ಆಕರ್ಷಿಸುತ್ತಿಲ್ಲ ಎಂಬ ಜಿಜ್ಞಾಸೆಗೆ ಭಾಜಪದಲ್ಲಿ ಉತ್ತರ ದೊರಕುತ್ತಿಲ್ಲ. ಅಥವಾ ತೀವ್ರ ಬೆಲೆ ಏರಿಕೆ, ಭಯೋತ್ಪಾದನೆಯ ಕೃತ್ಯಗಳು, ರೈತರ ಆತ್ಮಹತ್ಯೆ, ಆರ್ಥಿಕ ಹಿಂಜರಿತ ಇವೆಲ್ಲ ಸಮಸ್ಯೆಗಳಿದ್ದರೂ ಸಾಮಾನ್ಯ ಜನತೆಯ ಬೆಂಬಲ ಗಳಿಸುವಲ್ಲಿ ಪಕ್ಷದ ವೈಫಲ್ಯದ ಬಗ್ಗೆ ಸ್ಪಷ್ಟ ನಿಲುವು ಕಂಡುಬರುತ್ತಿಲ್ಲ.

ರಾಜಕೀಯ ತಂತ್ರಗಾರಿಕೆ –ಪರಿವಾರದ ಶೈಲಿ

ಲೋಕಸಭಾ ಚುನಾವಣೆಯ ಸೋಲಿಗೆ ಕಾರಣಗಳನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಭಾಜಪದ ಪಾಳಯದಲ್ಲಿ ವ್ಯಕಿಗಳನ್ನೇ ದೂಷಿಸಲಾಗುತ್ತಿರುವುದೇ ಹೊರತು ಸಂಘಟನಾತ್ಮಕವಾಗಿ ಹೊಣೆಗಾರಿಕೆಯನ್ನು ಹೊರುತ್ತಿಲ್ಲ. ಚುನಾವಣಾ ಫಲಿತಾಂಶದ ಹಿನ್ನೆಲೆಯಲ್ಲೇ ಯಶವಂತ್ ಸಿನ್ಹಾ, ಅರುಣ್ ಶೌರಿ, ಅರುಣ್ ಜೈಟ್ಲಿ ಮುಂತಾದವರು ತಮ್ಮ ಭಿನ್ನಾಭಿಪ್ರಾಯಗಳನ್ನು ಹೊರಗೆಡಹಿದ್ದರು. ರಾಜಸ್ಥಾನ ಚುನಾವಣೆಯ ಸೋಲಿನ ನಂತರ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ ಅವರು ಈ ಪಕ್ಷದ ವಿರುದ್ಧ ಬಂಡಾಯ ಹೂಡಿದ್ದಾರೆ. ಆಪರೇಷನ್ ಕಮಲದ ಮೂಲಕ ಶಾಸಕರನ್ನು ಖರೀದಿಸಿ ಸರ್ಕಾರ ರಚಿಸಿದ ನಂತರ ಕರ್ನಾಟಕದಲ್ಲಿ ಬಂಡಾಯದ ಬಿರುಗಾಳಿ ಎದ್ದಿದೆ.

ಗುಜರಾತಿನ ಅಪ್ರತಿಮ ನಾಯಕನೆಂದೇ ಪರಿಗಣಿಸಲ್ಪಡುವ ಮೋದಿಯವರ ವಿರುದ್ಧವೂ ಭಿನ್ನಮತ ವ್ಯಕ್ತವಾಗುತ್ತಿದೆ. ಒರಿಸ್ಸಾದಲ್ಲಿ ಸೋಲಿನಿಂದ ಪಕ್ಷ ಧೂಳಿಪಟವಾಗಿದೆ. ಆಂಧ್ರ–ತಮಿಳುನಾಡಿನಲ್ಲಿ ಪಕ್ಷದ ಅಸ್ತಿತ್ವವೇ ಅಪಾಯದ ಅಂಚಿನಲ್ಲಿದೆ. ಉತ್ತರ ಪ್ರದೇಶದಲ್ಲಿ ಪಕ್ಷ ತೀವ್ರ ಹಿನ್ನಡೆ ಅನುಭವಿಸಿದ್ದು, ರಾಜಧಾನಿ ದೆಹಲಿಯಲ್ಲಿ ಹೆಸರಿಲ್ಲದಂತಾಗಿದೆ. ರಾಮಮಂದಿರ–ರಾಮಸೇತು–ಗೋಧ್ರ–ಭಯೋತ್ಪಾದನೆ ಮುಂತಾದ ವಿಚಾರಗಳು ಕೇವಲ ಭಾವನೆಗಳನ್ನು ಸೃಷ್ಟಿಸಬಲ್ಲವೇ ಹೊರತು ಮತಬ್ಯಾಂಕುಗಳನ್ನಲ್ಲ ಎಂಬ ಸತ್ಯ ಭಾಜಪದ ನಾಯಕರಿಗೆ ಅರ್ಥವಾಗುತ್ತಿದೆ.

ಈ ಹಿನ್ನೆಲೆಯಲ್ಲೇ ನಡೆದ ಚಿಂತನ್ ಬೈಠಕ್‌ನಲ್ಲಿ ಎಂದಿನಂತೆ ಆರೆಸ್ಸೆಸ್ ಪ್ರಭಾವ ಪ್ರಧಾನವಾಗಿ ಬಿಂಬಿತವಾಗಿರುವುದನ್ನು ಕಾಣಬಹುದು. ಚುನಾವಣೆಯ ಸೋಲಿಗೆ ನೈತಿಕ ಹೊಣೆಗಾರಿಕೆ ಹೊತ್ತು ರಾಜೀನಾಮೆ ನೀಡುವ ಪ್ರಹಸನ ನಡೆಸಿದ ಅದ್ವಾನಿ ಈಗ ಪುನಃ 2014ರ ಕನಸಿನ ಗೋಪುರ ನಿರ್ಮಿಸತೊಡಗಿದ್ದಾರೆ. ಅದ್ವಾನಿಯ ನಂತರ ಮೋದಿ ಎಂದು ಘೋಷಿಸಿ ತನ್ನ ಪಾರಂಪರಿಕ ತಳಹದಿಯ ಪುನರ್ನಿರ್ಮಾಣಕ್ಕಾಗಿ ಶ್ರಮಿಸಿದ ಭಾಜಪದಲ್ಲಿ ನಿರಾಸೆಯ ಕಾರ್ಮೋಡ ಆವರಿಸಿದೆ. ಹಿಂದುತ್ವ–ಮಂದಿರ ರಾಜಕೀಯ ಜನತೆಗೆ ಆಕರ್ಷಣೀಯವಾಗಲಾರದೆಂಬ ಸತ್ಯವನ್ನು 2009ರ ಚುನಾವಣೆಗಳು ನಿರೂಪಿಸಿರುವುದರ ಹಿನ್ನೆಲೆಯಲ್ಲಿ, ವಾಜಪೇಯಿಯವರ ಉದಾರವಾದದ ಛಾಯೆಯಲ್ಲೇ ಮೆದು ಹಿಂದುತ್ವದ ಹಣೆಪಟ್ಟಿ ಗಳಿಸಿರುವ ಅದ್ವಾನಿ, ಪಕ್ಷ ಮತ್ತು ಸಂಘಟನೆಯ ಮೂಲ ಸೈದ್ಧಾಂತಿಕ ನೀತಿಯನ್ನು ಉಳಿಸಿಕೊಂಡೇ ಅಧಿಕಾರ ಗಳಿಸಲು ರಾಜಕೀಯ ತಂತ್ರ ರೂಪಿಸುವ ಜವಾಬ್ದಾರಿಯನ್ನು ಹೊರಬೇಕಿದೆ. ಹಾಗಾಗಿ ಯುವ ನಾಯಕತ್ವ ಬೇಕು ಎಂಬ ಸಂಘಪರಿವಾರದ ಹುಸಿ ಆಗ್ರಹದ ಬೆನ್ನಲ್ಲೇ, ತನ್ನ ಸೈದ್ಧಾಂತಿಕ ತಳಹದಿಯನ್ನು ಬಲಪಡಿಸುವ ಆರೆಸ್ಸೆಸ್‌ನ ತಂತ್ರ ಚಿಂತನ್ ಬೈಠಕ್‌ನಲ್ಲಿ ವ್ಯಕ್ತವಾಗಿದೆ.

ಈ ಸಂದರ್ಭದಲ್ಲೇ ಪ್ರಕಟವಾದ ಜಸ್ವಂತ್ ಸಿಂಗ್ ಅವರ ಜಿನ್ನ ಇಂಡಿಯ ಪಾರ್ಟಿಷನ್ ಇಂಡಿಪೆಂಡೆನ್ಸ್ ಎಂಬ ಕೃತಿ ಪ್ರಕಟವಾಗಿದ್ದು ಭಾಜಪ ಮತ್ತು ಸಂಘಪರಿವಾರಕ್ಕೆ ತಮ್ಮ ಮೂಲ ಸೈದ್ಧಾಂತಿಕ ನಿಲುವು ಶಿಥಿಲಗೊಂಡಿಲ್ಲ ಎಂದು ನಿರೂಪಿಸಲು ವರದಾನವಾಗಿ ಪರಿಣಮಿಸಿತು. ಜಸ್ವಂತ್ ಸಿಂಗ್ ಅವರ ಕೃತಿಯನ್ನು ಪೂರ್ತಿಯಾಗಿ ಓದದೆಯೇ ಕೃತಿಯನ್ನು ಬಹಿಷ್ಕರಿಸಿದ ಗುಜರಾತ್ ಸರ್ಕಾರದ ವೈಖರಿಗೂ, ಕೃತಿಯ ಲೇಖಕರಿಗೆ ತಮ್ಮ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳುವ ಅವಕಾಶವನ್ನೂ ನೀಡದೆ ಉಚ್ಚಾಟಿಸಿದ ಪಕ್ಷದ ವೈಖರಿಗೂ ವ್ಯತ್ಯಾಸವೇ ಕಂಡುಬರುವುದಿಲ್ಲ.

ಲೋಕಸಭಾ ಚುನಾವಣೆಯ ಸೋಲಿಗೆ ಕಾರಣಗಳನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಭಾಜಪದ ಪಾಳಯದಲ್ಲಿ ವ್ಯಕಿಗಳನ್ನೇ ದೂಷಿಸಲಾಗುತ್ತಿರುವುದೇ ಹೊರತು ಸಂಘಟನಾತ್ಮಕವಾಗಿ ಹೊಣೆಗಾರಿಕೆಯನ್ನು ಹೊರುತ್ತಿಲ್ಲ. ಚುನಾವಣಾ ಫಲಿತಾಂಶದ ಹಿನ್ನೆಲೆಯಲ್ಲೇ ಯಶವಂತ್ ಸಿನ್ಹಾ, ಅರುಣ್ ಶೌರಿ, ಅರುಣ್ ಜೈಟ್ಲಿ ಮುಂತಾದವರು ತಮ್ಮ ಭಿನ್ನಾಭಿಪ್ರಾಯಗಳನ್ನು ಹೊರಗೆಡಹಿದ್ದರು. ರಾಜಸ್ಥಾನ ಚುನಾವಣೆಯ ಸೋಲಿನ ನಂತರ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ ಅವರು ಈ ಪಕ್ಷದ ವಿರುದ್ಧ ಬಂಡಾಯ ಹೂಡಿದ್ದಾರೆ. ಆಪರೇಷನ್ ಕಮಲದ ಮೂಲಕ ಶಾಸಕರನ್ನು ಖರೀದಿಸಿ ಸರ್ಕಾರ ರಚಿಸಿದ ನಂತರ ಕರ್ನಾಟಕದಲ್ಲಿ ಬಂಡಾಯದ ಬಿರುಗಾಳಿ ಎದ್ದಿದೆ.

ಜಸ್ವಂತ್ ಅವರು ತಮ್ಮ ಕೃತಿಯಲ್ಲಿ, ದೇಶದ ವಿಭಜನೆಗೆ ಜಿನ್ನಾ ಅವರಷ್ಟೇ, ನೆಹರೂ ಮತ್ತು ಸರ್ದಾರ್ ಪಟೇಲ್ ಅವರೂ ಕಾರಣರು ಎಂದು ಹೇಳಿರುವುದು ವಿವಾದಕ್ಕೆ ಎಡೆ ಮಾಡಿ ಕೊಟ್ಟಿದೆ. ಜಸ್ವಂತ್ ಸಿಂಗ್ ಅವರ ಅಭಿಪ್ರಾಯಗಳನ್ನು ಒಪ್ಪುವುದು, ತಿರಸ್ಕರಿಸುವುದೂ ವೈಯಕ್ತಿಕ ಗ್ರಹೀತಗಳಿಗೆ ಸಂಬಂಧಿಸಿದ ವಿಷಯ. ಆದರೆ ಜಿನ್ನಾ ಅವರನ್ನು ಶ್ಲಾಘಿಸುವುದೇ ಮಹಾಪರಾಧ, ಸರ್ದಾರ್ ಪಟೇಲ್ ಅವರನ್ನು ಟೀಕಿಸುವುದೇ ಅಕ್ಷಮ್ಯ ಅಪರಾಧ ಎಂದು ಪರಿಗಣಿಸುವುದು ಪಕ್ಷದ ಸರ್ವಾಧಿಕಾರಿ ಧೋರಣೆಯನ್ನು ತೋರುತ್ತದೆ.

1948ರ ನಂತರದಲ್ಲಿ ಆರೆಸ್ಸೆಸ್ ಸಂಘಟನೆಯನ್ನು ನಿಷೇಧಿಸಿದಾಗ ಕೇಂದ್ರ ಗೃಹ ಮಂತ್ರಿಗಳಾಗಿದ್ದ ಸರ್ದಾರ್ ಪಟೇಲ್ ಸಂಘಪರಿವಾರಕ್ಕೆ ಯಾವ ಕಾರಣಕ್ಕೆ ಹತ್ತಿರದವರಾಗಿದ್ದಾರೋ ಹೇಳುವುದು ಕಷ್ಟ. ತಮ್ಮ ಕಠಿಣ ನಿಲುವುಗಳಿಗಾಗಿಯೇ ಪ್ರಖ್ಯಾತರಾಗಿದ್ದ ಪಟೇಲ್ ನೆಹರೂ ಅವರ ನೀತಿಗಳನ್ನು ಒಪ್ಪಿಕೊಂಡೇ ಆಳ್ವಿಕೆ ನಡೆಸಿದ್ದವರು. ಹೈದರಾಬಾದ್‌ನ ನಿಜಾಮರ ಆಡಳಿತವನ್ನು ಕೊನೆಗಳಿಸಿ, ಆ ಪ್ರಾಂತ್ಯವನ್ನು ಭಾರತದಲ್ಲಿ ಸೇರ್ಪಡೆಗೊಳಿಸುವ ಕಾರ್ಯದಲ್ಲಿ ಸರ್ದಾರ್ ಪಟೇಲ್ ಯಶಸ್ಸು ಕಂಡಿದ್ದರೆ ಅದರ ಹಿಂದೆ ನೆಹರೂ ಅವರ ಸ್ಪಷ್ಟ ನಿಲುವುಗಳೂ ಪ್ರಮುಖ ಪಾತ್ರ ನಿರ್ವಹಿಸಿವೆ. ನೆಹರೂ ಮತ್ತು ಪಟೇಲ್ ನಡುವೆ ತಾತ್ವಿಕ ಭಿನ್ನಾಭಿಪ್ರಾಯಗಳಿದ್ದರೂ ಆಡಳಿತದ ಸಂದರ್ಭದಲ್ಲಿ ಏಕಾಭಿಪ್ರಾಯ ತಾಳುತ್ತಿದ್ದುದಂತೂ ಸತ್ಯ.

ಆದಾಗ್ಯೂ ಪಟೇಲ್ ಅವರು ಸಂಘಪರಿವಾರಕ್ಕೆ ಹತ್ತಿರದವರಾಗಿ ಗೋಚರಿಸುವುದು, ಹೈದರಾಬಾದ್‌ನ ನಿಜಾಮರ ವಿರುದ್ಧ ಅವರು ಕೈಗೊಂಡ ಉಗ್ರಕ್ರಮಗಳು ಪ್ರಾತ್ತ ಕಾರಣವಾಗಿರಬಹುದು. ಅಥವಾ ಪಟೇಲ್ ಅವರನ್ನು ಗಾಂಧೀಜಿಯವರ ವ್ಯೂಹದಿಂದ ಬೇರ್ಪಡಿಸುವ ಮೂಲಕ ತನ್ನ ಹಿಂದುತ್ವ ಪ್ರತಿಪಾದನೆಗೆ ಉದಾರವಾದಿ ಮುಖವಾಡ ತೊಡಿಸುವ ಮತ್ತೊಂದು ಹುನ್ನಾರವೂ ಆಗಿರಬಹುದು.

ಜಸ್ವಂತ್ ಸಿಂಗ್ ಜಿನ್ನಾ ಅವರನ್ನು ಶ್ಲಾಘಿಸುವ ಮೂಲಕ ಪಕ್ಷದ ಮೂಲ ಸಿದ್ಧಾಂತಕ್ಕೆ ವಿರುದ್ಧವಾಗಿ ಮಾತನಾಡಿದ್ದಾರೆ ಎಂದು ಭಾಜಪ ಆರೋಪಿಸುತ್ತದೆ. ಈ ಮುನ್ನ ಎಲ್.ಕೆ.ಅಡ್ವಾನಿಯವರೂ ಪಾಕಿಸ್ತಾನದಲ್ಲಿ ಜಿನ್ನಾ ಅವರನ್ನು ಶ್ಲಾಘಿಸಿ ಅಪವಾದಕ್ಕೆ ತುತ್ತಾಗಿದ್ದುದನ್ನು ಇಲ್ಲಿ ನೆನೆಯಬಹುದು. ಒಂದು ರೀತಿಯಲ್ಲಿ ಮೊಹಮ್ಮದ್ ಆಲಿ ಜಿನ್ನಾ ಭಾಜಪದ ಮಟ್ಟಿಗೆ ಚೌತಿಯ ಚಂದ್ರನಂತಾಗಿದ್ದಾರೆ. ಅವರ ನಾಮಸ್ಮರಣೆಯೇ ಅಪವಾದ ತರುವಂತಾಗಿದೆ. ಜಸ್ವಂತ್ ಸಿಂಗ್ ಮಾಡಿದ ಮತ್ತೊಂದು ಮಹಾಪರಾಧವೆಂದರೆ ಸರ್ದಾರ್ ಪಟೇಲ್ ಅವರನ್ನು ಟೀಕಿಸಿದ್ದು. ಭಾರತದಲ್ಲಿ ಬೆಳೆಯುತ್ತಿರುವ ಧಾರ್ಮಿಕ–ಸಾಂಸ್ಕೃತಿಕ–ರಾಜಕೀಯ ಅಸಹನೆಯೊಂದಿಗೇ ರಾಜಕೀಯ ಪಕ್ಷಗಳಲ್ಲಿ ವೃದ್ಧಿಸುತ್ತಿರುವ ಸರ್ವಾಧಿಕಾರಿ ಮನೋಭಾವಗಳು ಇಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಜಸ್ವಂತ್ ಸಿಂಗ್ ಜಿನ್ನಾ ಅವರನ್ನು ಶ್ಲಾಘಿಸುವ ಮೂಲಕ ಪಕ್ಷದ ಮೂಲ ಸಿದ್ಧಾಂತಕ್ಕೆ ವಿರುದ್ಧವಾಗಿ ಮಾತನಾಡಿದ್ದಾರೆ ಎಂದು ಭಾಜಪ ಆರೋಪಿಸುತ್ತದೆ. ಈ ಮುನ್ನ ಎಲ್.ಕೆ.ಅಡ್ವಾನಿಯವರೂ ಪಾಕಿಸ್ತಾನದಲ್ಲಿ ಜಿನ್ನಾ ಅವರನ್ನು ಶ್ಲಾಘಿಸಿ ಅಪವಾದಕ್ಕೆ ತುತ್ತಾಗಿದ್ದುದನ್ನು ಇಲ್ಲಿ ನೆನೆಯಬಹುದು. ಒಂದು ರೀತಿಯಲ್ಲಿ ಮೊಹಮ್ಮದ್ ಆಲಿ ಜಿನ್ನಾ ಭಾಜಪದ ಮಟ್ಟಿಗೆ ಚೌತಿಯ ಚಂದ್ರನಂತಾಗಿದ್ದಾರೆ. ಅವರ ನಾಮಸ್ಮರಣೆಯೇ ಅಪವಾದ ತರುವಂತಾಗಿದೆ. ಜಸ್ವಂತ್ ಸಿಂಗ್ ಮಾಡಿದ ಮತ್ತೊಂದು ಮಹಾಪರಾಧವೆಂದರೆ ಸರ್ದಾರ್ ಪಟೇಲ್ ಅವರನ್ನು ಟೀಕಿಸಿದ್ದು. ಭಾರತದಲ್ಲಿ ಬೆಳೆಯುತ್ತಿರುವ ಧಾರ್ಮಿಕ –ಸಾಂಸ್ಕೃತಿಕ–ರಾಜಕೀಯ ಅಸಹನೆಯೊಂದಿಗೇ ರಾಜಕೀಯ ಪಕ್ಷಗಳಲ್ಲಿ ವೃದ್ಧಿಸುತ್ತಿರುವ ಸರ್ವಾಧಿಕಾರಿ ಮನೋಭಾವಗಳು ಇಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ನಾಯಕತ್ವದ ಸಂಘರ್ಷ

ಎರಡು ಚುನಾವಣೆಗಳಲ್ಲಿ ಸತತವಾಗಿ ಸೋಲನುಭವಿಸಿದ ಭಾರತೀಯ ಜನತಾ ಪಕ್ಷದಲ್ಲಿ ಸೈದ್ಧಾಂತಿಕ ಗೊಂದಲ ಹೆಚ್ಚಾಗಿರುವುದು ಪ್ರಸಕ್ತ ಪ್ರಕರಣದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಚುನಾವಣೆಯ ಸಂದರ್ಭದಲ್ಲೇ ಪಕ್ಷದ ಅಧ್ಯಕ್ಷ ರಾಜನಾಥ್ ಸಿಂಗ್ ಮತ್ತು ಅರುಣ್ ಜೈಟ್ಲಿ ನಡುವೆ ಉದ್ಭವಿಸಿದ ಸಂಘರ್ಷ ಜಸ್ವಂತ್ ಪ್ರಕರಣದಲ್ಲಿ ಮತ್ತೊಂದು ರೀತಿಯಲ್ಲಿ ಪ್ರಕಟವಾಗಿರುವುದೂ ಸ್ಪಷ್ಟ. 2009ರ ಸೋಲಿನ ನಂತರ ಅಡ್ವಾನಿ ರಾಜಿನಾಮೆ ನೀಡಿದ್ದು, ಯಶ್ವಂತ್ ಸಿನ್ಹಾ, ಅರುಣ್ ಶೌರಿ ಮುಂತಾದವರು ಪಕ್ಷದ ನಾಯಕತ್ವದ ವಿರುದ್ಧ ಬಂಡಾಯ ಹೂಡಿದ್ದು ಭಾಜಪದ ಸತತ ಸೋಲಿನ ಪರಿಣಾಮವಾಗಿತ್ತು.

ಆರೆಸ್ಸೆಸ್ ಪ್ರೇರಿತ ಪ್ರಣಾಳಿಕೆಯಲ್ಲಿ ಜನತೆಯ ಸಮಸ್ಯೆಗಳಿಗಿಂತಲೂ ಹೆಚ್ಚಾಗಿ ಪಕ್ಷದ ಹಿಂದುತ್ವ ಸಿದ್ಧಾಂತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು ಭಾಜಪ ಸೋಲಿಗೆ ಪ್ರಮುಖ ಕಾರಣವಾಗಿತ್ತು. ಭಯೋತ್ಪಾದನೆ, ಅಲ್ಪಸಂಖ್ಯಾತರ ತುಷ್ಟೀಕರಣ ಮುಂತಾದ ಭಾವನಾತ್ಮಕ ಅಂಶಗಳನ್ನೇ ಕೇಂದ್ರೀಕರಿಸಿದ ಭಾಜಪ ನಾಯಕತ್ವ ನರೇಂದ್ರ ಮೋದಿಯನ್ನು ಪಕ್ಷದ ಭಾವೀ ನಾಯಕ ಎಂದು ಬಿಂಬಿಸಿದ್ದು, ವರುಣ್ ಗಾಂಧಿಯ ದ್ವೇಷ ಪೂರಿತ ಭಾಷಣಗಳನ್ನು ಸಮರ್ಥಿಸಿದ್ದು, ಮುಂಬೈ ಭಯೋತ್ಪಾದಕ ದಾಳಿಯ ಹಿಂದಿನ ಸಾಮಾಜಿಕ–ರಾಜಕೀಯ ಅಂಶಗಳನ್ನು ವಿಶ್ಲೇಷಿಸದೆ, ಕಾಂಗ್ರೆಸ್‌ನ ಮೃದು ಧೋರಣೆಯನ್ನೇ ಕೇಂದ್ರೀಕರಿಸಿದ್ದು ಅಡ್ವಾನಿ–ರಾಜನಾಥ್ ಸಿಂಗ್ ಅವರ ಸಮರ ನೀತಿಯ ವೈಫಲ್ಯವಾಗಿತ್ತು.

2005ರಲ್ಲಿ ಚಿತ್ರಕೂಟದಲ್ಲಿ ನಡೆದ ಭಾಜಪದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಪಕ್ಷವು ತನ್ನ ಮೂಲಸಿದ್ಧಾಂತದಿಂದ ದೂರಸರಿಯುತ್ತಿರುವುದಾಗಿಯೂ, ಪಕ್ಷದಲ್ಲಿ ಸುಧಾರಣೆಗಳನ್ನು ತರುವಲ್ಲಿ ವಿಳಂಬವಾಗುತ್ತಿರುವುದಾಗಿಯೂ ಆರೆಸ್ಸೆಸ್ ಮುಖಂಡ ಮೋಹನ್ ಭಾಗವತ್ ಆರೋಪಿಸಿದ್ದುದನ್ನು ಇಲ್ಲಿ ಸ್ಮರಿಸಬಹುದು. ಅಂದಿನಿಂದಲೂ ಸಂಘಪರಿವಾರ ಭಾಜಪದ ನಾಯಕತ್ವದಲ್ಲಿ ಮತ್ತು ಪಕ್ಷದ ಧೋರಣೆಯಲ್ಲಿ ಬದಲಾವಣೆಗಾಗಿ ಹಾತೊರೆಯುತ್ತಿದೆ.

ಭಾಜಪಕ್ಕೆ ಯುವ ನಾಯಕತ್ವ ಬೇಕಿದೆ ಎಂದು ಪದೇಪದೇ ಹೇಳುವ ಮೂಲಕ ಅಡ್ವಾನಿ–ರಾಜನಾಥ್ ಸಿಂಗ್‌ಗೆ ಎಚ್ಚರಿಕೆಯನ್ನೂ ನೀಡುತ್ತಲೇ ಇದೆ. ಆದರೆ ವಾಸ್ತವವಾಗಿ ಸಂಘಪರಿವಾರಕ್ಕೆ ಯುವ ನಾಯಕತ್ವಕ್ಕಿಂತಲೂ ತನ್ನ ನೆಚ್ಚಿನ ಹಿಂದೂರಾಷ್ಟ್ರ ಪರಿಕಲ್ಪನೆಯನ್ನು ಸಾಕಾರಗೊಳಿಸುವ ಶಿಸ್ತಿನ ಪಡೆಯ ಅವಶ್ಯಕತೆ ಹೆಚ್ಚಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಆರೆಸ್ಸೆಸ್ ಶಾಖೆಗಳಿಗೆ ಸೇರ್ಪಡೆಯಾಗುತ್ತಿರುವ ಯುವಕರ ಸಂಖ್ಯೆ ಕ್ಷೀಣಿಸುತ್ತಿದೆ. ಸಂಘಪರಿವಾರದ ಹಿಂದುತ್ವ ಸಿದ್ಧಾಂತವನ್ನು ಒಪ್ಪಿಕೊಳ್ಳುವವರೂ ಭಾಜಪದ ಮೂಲಕ ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವುದನ್ನೇ ಪ್ರಧಾನವಾಗಿ ಪರಿಗಣಿಸುತ್ತಿರುವುದು ಆರೆಸ್ಸೆಸ್‌ಗೆ ತಲೆಬೇನೆಯಾಗಿದೆ.

ಈ ಸಂದರ್ಭದಲ್ಲಿ ಭಾಜಪ ತನ್ನ ಮೂಲ ಹಿಂದುತ್ವ ಸಿದ್ಧಾಂತದಿಂದ ಜಾರಿಕೊಳ್ಳುವ ಆತಂಕ ಸಂಘಪರಿವಾರವನ್ನು ಆವರಿಸಿರುವುದು ಅಚ್ಚರಿಯ ಅಂಶವೇನಲ್ಲ. ಭಾಜಪಕ್ಕೆ ನಿಷ್ಠೆ ತೋರುವವರೆಲ್ಲರೂ ಸಂಘಕ್ಕೆ ನಿಷ್ಠೆ ತೋರುವ ಪರಂಪರೆ ಕೊನೆಗೊಂಡಿದ್ದು, ಅಧಿಕಾರ ರಾಜಕಾರಣದಲ್ಲಿ ಭಾಜಪ ಎಲ್ಲರನ್ನೂ ತನ್ನ ಬಾಹುಗಳಲ್ಲಿ ಅಪ್ಪಿಕೊಳ್ಳಲು ಮುಂದಾಗಿದೆ. ಕರ್ನಾಟಕದಲ್ಲಿ ನಡೆಯುತ್ತಿರುವ ಆಪರೇಷನ್ ಕಮಲ ಇದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಇತರ ರಾಜ್ಯಗಳಲ್ಲೂ ಭಾಜಪ ಇದೇ ಪ್ರಯತ್ನವನ್ನು ಮುಂದುವರೆಸುವ ಸಾಧ್ಯತೆಗಳಿವೆ. ನರೇಂದ್ರ ಮೋದಿಯ ಹಿನ್ನೆಡೆಯ ಸಂದರ್ಭದಲ್ಲಿ ಉಗ್ರ ಹಿಂದುತ್ವವಾದ ಭಾರತೀಯ ರಾಜಕಾರಣದಲ್ಲಿ ಫಲಕಾರಿಯಾಗದು ಎಂಬ ಸತ್ಯಾಂಶ ಭಾಜಪಕ್ಕೆ ಅರಿವಾಗಿದೆ. ಯಾವುದೇ ಜನಪರ ಕಾರ್ಯಸೂಚಿ ಇಲ್ಲದೆ, ಭಾವನಾತ್ಮಕ ವಿವಾದಗಳನ್ನೇ ಧ್ಯೇಯವನ್ನಾಗಿರಿಸಿಕೊಂಡು ಪ್ರಸ್ತುತ ಸಂದರ್ಭದಲ್ಲಿ ಎಲ್ಲ ಜನಸಮುದಾಯಗಳ ವಿಶ್ವಾಸ ಗಳಿಸುವ ಭಾಜಪದ ಪ್ರಯತ್ನ ವಿಫಲವಾಗಿದೆ.

ಹಾಗಾಗಿಯೇ ಆರೆಸ್ಸೆಸ್ ಭಾಜಪದ ಚಿಂತನ್ ಬೈಠಕ್‌ನಲ್ಲಿ ತನ್ನದೇ ಆದ ಪ್ರಭಾವ ಬೀರಿದ್ದು ಪಕ್ಷದ ಮೂಲ ಸಿದ್ಧಾಂತವನ್ನು ಮತ್ತೆ ಮುಂಚೂಣಿಗೆ ತಂದಿದೆ. ಇದೇ ಸಂದರ್ಭದಲ್ಲಿ ಪ್ರಕಟಗೊಂಡ ಜಸ್ವಂತ್ ಸಿಂಗ್ ಅವರ ಜಿನ್ನ –ಭಾರತ–ವಿಭಜನೆ ಮತ್ತು ಸ್ವಾತಂತ್ರ್ಯ ಎಂಬ ಕೃತಿ ಪ್ರಕಟಗೊಂಡಿದ್ದು ಸಂಘಪರಿವಾರಕ್ಕೆ ಅನುಕೂಲಕರವಾಗಿ ಪರಿಣಮಿಸಿತು. ಜಿನ್ನಾ ಅವರನ್ನು ಶ್ಲಾಘಿಸುವುದು ಪಕ್ಷದ ಮೂಲ ಸಿದ್ಧಾಂತಕ್ಕೆ ವಿರುದ್ಧ ಎಂದು ಹುಯಿಲೆಬ್ಬಿಸುವ ಭಾಜಪ –ಪರಿವಾರದ ನಾಯಕರಿಗೆ, ಹಲವು ವರ್ಷಗಳ ಹಿಂದೆ ಅರುಣ್ ಶೌರಿ ತಮ್ಮ Worshipping Small Gods ಕೃತಿಯಲ್ಲಿ ಅಂಬೇಡ್ಕರ್ ಅವರನ್ನು ಹೀನಾಮಾನವಾಗಿ ಹೀಯಾಳಿಸಿದ್ದು ಪಕ್ಷ ಮೂಲ ಸಿದ್ಧಾಂತಕ್ಕೆ ಧಕ್ಕೆ ತರಲಿಲ್ಲವೇ? ಅಂಬೇಡ್ಕರ್‌ವಾದವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದೇ ಅಲ್ಲದೆ ತಾವೇ ನಿಜವಾದ ಅಂಬೇಡ್ಕರ್ ಸಿದ್ಧಾಂತ ಪ್ರತಿಪಾದಕರೆಂದು ಬೀಗುವ ಭಾಜಪ ನಾಯಕರಿಗೆ ಅರುಣ್ ಶೌರಿ ಅಪ್ಯಾಯಮಾನವಾದರೇಕೆ? ಆಗಲೇ ಅವರನ್ನು ಉಚ್ಚಾಟಿಸಬಹುದಿತ್ತಲ್ಲವೇ?

ಇಲ್ಲಿ ಭಾಜಪ ನಾಯಕತ್ವದ ದ್ವಂದ್ವ ಸ್ಪಷ್ಟವಾಗುತ್ತದೆ. ಪಕ್ಷದ ಮೂಲ ಸಿದ್ಧಾಂತದಲ್ಲಿ ಅಂಬೇಡ್ಕರ್ ಅವರಿಗಿಂತಲೂ ಗೋಲ್ವಾಲ್ಕರ್, ಸಾವರ್‌ಕರ್, ಉಪಾಧ್ಯಾಯ ಅವರುಗಳು ಪ್ರಮುಖ ಸ್ಥಾನ ಗಳಿಸುತ್ತಾರೆ. ಹಿಂದೂ ಧರ್ಮ ರಕ್ಷಣೆಯೊಂದಿಗೇ ಅಲ್ಪಸಂಖ್ಯಾತ ವಿರೋಧಿ ನೀತಿ ಪಕ್ಷದ ತಳಹದಿಯಾಗಿರುತ್ತದೆ. ಬಹುಸಂಸ್ಕೃತಿಯ ಬದಲು ಏಕ ಸಂಸ್ಕೃತಿಯನ್ನು ಪಕ್ಷ ಸಮರ್ಥಿಸುತ್ತದೆ. ಹಾಗಾಗಿಯೇ ಪಕ್ಷದ ಸೋಲಿಗೆ ಕಾರಣರೆಂದು ಹೇಳಲಾಗುವ ವರುಣ್ ಗಾಂಧಿ ಅಥವಾ ನರೇಂದ್ರ ಮೋದಿಯವರನ್ನು ಪ್ರಶ್ನಿಸುವುದಿಲ್ಲ. ಪಕ್ಷದ ಪ್ರಣಾಳಿಕೆ ಪ್ರಭಾವಶಾಲಿಯಾಗಿ ಇರಲಿಲ್ಲ ಎಂದು ಹೇಳಲಾದರೂ ಪ್ರಣಾಳಿಕೆಯನ್ನು ಸಿದ್ಧಪಡಿಸಿದವರ ಮೇಲೆ ಕ್ರಮ ಕೈಗೊಳ್ಳಲಾಗಿಲ್ಲ. ಬದಲಾಗಿ ಚುನಾವಣೆಯ ನಿರ್ವಹಣೆ ಹೊತ್ತಿದ್ದ ಅರುಣ್ ಜೈಟ್ಲಿಗೆ ಪಕ್ಷದಲ್ಲಿ ಪ್ರಮುಖ ಸ್ಥಾನ ನೀಡಲಾಗುತ್ತದೆ.

ಪಕ್ಷದ ನಾಯ ಕತ್ವವನ್ನು ಕಟುವಾಗಿ ಟೀಕಿಸುವ ಅರುಣ್ ಶೌರಿ ಆರೆಸ್ಸೆಸ್‌ಗೆ ಪ್ರಿಯವಾಗುತ್ತಾರೆ. ಏಕೆಂದರೆ ಆರೆಸ್ಸೆಸ್ ಭಾಜಪದ ಮೇಲೆ ಹಿಡಿತ ಸಾಧಿಸಬೇಕು ಎಂದು ಶೌರಿಯ ವರ ಆಗ್ರಹ. ಆದರೆ ಶಿಸ್ತಿನ

[illegible] ತಕ್ಷಣವಾಗಿ ಜಸ್ವಂತ್ ಸಿಂಗ್ ಅವರನ್ನು, ಶಿಸ್ತು [illegible] ಉಲ್ಲಂಘನೆಗಾಗಿ ಪಕ್ಷದಿಂದ ಉಚ್ಚಾಟಿಸಲಾಗುತ್ತದೆ. ರಾಜಸ್ಥಾನದಲ್ಲಿ ನಡೆಯುತ್ತಿರುವ ಬೆಳವಣಿಗೆಗೂ, ಜಸ್ವಂತ್ ಸಿಂಗ್ ಉಚ್ಚಾಟನೆಗೂ ಸೂಕ್ಷ್ಮ ಸಂಬಂಧಗಳಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಪಕ್ಷದ ಎಲ್ಲ ನಿರ್ಣಯಗಳಲ್ಲಿ ಸಂಘಪರಿವಾರದ ಪ್ರಭಾವ ಇರುವುದು ಇದರಿಂದಲೇ ಸ್ಪಷ್ಟವಾಗುತ್ತದೆ. ಭಯೋತ್ಪಾದನೆಯನ್ನೇ ಕೇಂದ್ರೀಕರಿಸಿ, ಅಲ್ಪಸಂಖ್ಯಾತರನ್ನು ದೂರವಿರಿಸಿ, ಹಿಂದುತ್ವ ಧ್ಯೇಯ ಸಾಧಿಸುವ ಸಂಘಪರಿವಾರದ ತಂತ್ರಗಾರಿಕೆಯ ವೈಫಲ್ಯದ ಹಿನ್ನೆಲೆಯಲ್ಲಿ ಈ ನಿರ್ಧಾರಗಳನ್ನು ಕೈಗೊಂಡಿರುವುದು ಸ್ಪಷ್ಟವಾಗುತ್ತದೆ.

17 ವರ್ಷಗಳ ಹಿಂದೆ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ಉದ್ರೇಕಕಾರಿ ಗುಂಪಿನೊಡನೆ ಗುರುತಿಸಿಕೊಂಡಿದ್ದ ಜಸ್ವಂತ್ ಸಿಂಗ್ ಇಂದು ಅದೇ ಗುಂಪಿಗೆ ಅಸ್ಪೃಶ್ಯರಾಗಿದ್ದಾರೆ. ಅರ್ಥಾತ್ ಸ್ಥಾವರಗಳ ಮೇಲೆ ಆಕ್ರಮಣ ಮಾಡುವ ಮೂಲಕ ತನ್ನ ದ್ವೇಷ ರಾಜಕಾರಣವನ್ನು ಹರಡುತ್ತಿದ್ದ ಭಾಜಪ ಈಗ ಚಿಂತನೆಗಳ ಮೇಲೆ ಆಕ್ರಮಣ ಮಾಡುತ್ತಿರುವುದು ಅಸಹಿಷ್ಣುತೆಯ ಪ್ರತೀಕವೇ ಆಗಿದೆ. ಮೂರು ದಶಕಗಳಿಗೂ ಹೆಚ್ಚು ಕಾಲ ಅಸಹಿಷ್ಣುತೆಯ ರಾಜಕೀಯದೊಡನೆ ಗುರುತಿಸಿಕೊಂಡ ಮಾಜಿ ಸೈನಿಕ ಜಸ್ವಂತ್ ಸಿಂಗ್ ತಮ್ಮ ಗತ ಜೀವನದ ಪುಟಗಳನ್ನು ತಿರುವಿಹಾಕಿದಾಗ ಪಶ್ಚಾತ್ತಾಪ ಪಡಬೇಕಾಗುತ್ತದೆ.

ಅಯೋಧ್ಯ ಚಳುವಳಿಯಲ್ಲಿ ಅಲ್ಪಸಂಖ್ಯಾತರ ವಿರುದ್ಧ, ಬುದ್ಧಿಜೀವಿಗಳ ವಿರುದ್ಧ ಪ್ರಹಾರ ಮಾಡಲು ಬಳಸಲಾದ ದಂಡ ತಮ್ಮ ಮೇಲೆಯೇ ಪ್ರಯೋಗಿಸಲ್ಪಡಬಹುದು ಎಂಬ ಕಲ್ಪನೆ ಜಸ್ವಂತ್ ಸಿಂಗ್ ಅವರಿಗೆ ಇದ್ದಿರಲಿಕ್ಕಿಲ್ಲ. ಇತಿಹಾಸ ವನ್ನು ವಿಶ್ಲೇಷಿಸುವುದಕ್ಕೂ ಒಂದು ಸಾಂಸ್ಕೃತಿಕ-ಧಾರ್ಮಿಕ ಚೌಕಟ್ಟನ್ನು ನಿರ್ಮಿಸಲಾಗಿರುವ ಸನ್ನಿವೇಶ ದಲ್ಲಿ ಜಸ್ವಂತ್ ಸಿಂಗ್, ತಸ್ಲೀಮ ನಸ್ರೀನ್, ಸಲ್ಮಾನ್ ರಶ್ದಿ ಮುಂತಾದವರು ಬಲಿಪಶುಗಳಾಗುತ್ತಿರುವುದು ಆಧುನಿಕ ಭಾರತದ ವಿಡಂಬನೆಯಾಗಿದೆ. ಈ ನಿಟ್ಟಿನಲ್ಲಿ ಭಾರತದ ಯಾವುದೇ ಪಕ್ಷವೂ ಸ್ಪಷ್ಟತೆಯನ್ನು ಹೊಂದಿಲ್ಲವೆಂದು ಹೇಳಬಹುದು. ಭಿನ್ನ ಮತದ ದಮನ ಭಾರತೀಯ ರಾಜಕಾರಣದ ಸಂಕೇತವಾಗುತ್ತಿದೆ.

ಪಕ್ಷದ ಸಿದ್ಧಾಂತದ ಹೆಸರಿನಲ್ಲಿ, ದೇಶಪ್ರೇಮದ ಹೆಸರಿನಲ್ಲಿ ಅಭಿವ್ಯಕ್ತಿ-ವಾಕ್ ಸ್ವಾತಂತ್ರ್ಯವನ್ನು ದಮನ ಮಾಡುವುದು ಭಾರತೀಯ ಪ್ರಜಾತಂತ್ರಕ್ಕೆ ಮಾರಕವಾಗಿದ್ದು ಈ ಕುರಿತ ಗಂಭೀರ ಚರ್ಚೆ ನಡೆಯಬೇಕಾಗಿದೆ. ಪ್ರಶ್ನಿಸುವ ಹಕ್ಕನ್ನೇ ಕಳೆದುಕೊಂಡ ನಾಗರಿಕತೆ ಒಂದು ಪ್ರಜಾಸತ್ತಾತ್ಮಕ ಸಮಾಜವಾಗಿ ರೂಪುಗೊಳ್ಳುವುದೇ ಎಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ.

ಜಸ್ವಂತ್ ಸಿಂಗ್ ಪ್ರಕರಣ ಒಂದು ರಾಜಕೀಯ ಪಕ್ಷದ ಆಂತರಿಕ ವಿವಾದವಾದರೂ, ಈ ಪ್ರಕರಣದಿಂದ ಉದ್ಭವಿಸಿರುವ ಪ್ರಶ್ನೆಗಳು ಭಾರತೀಯ ಸಮಾಜವನ್ನು ಬಹುಕಾಲ ಕಾಡಲಿದೆ. ಗುಜರಾತ್ ಸರ್ಕಾರ ಕೃತಿಯನ್ನು ಬಹಿಷ್ಕರಿಸಿರುವ ನಿಲುವನ್ನೇ ಎಲ್ಲೆಡೆಯೂ ಅನುಸರಿಸುವುದಾದರೆ ಭಾರತದಲ್ಲಿ ವಾಕ್ ಸ್ವಾತಂತ್ರ್ಯ-ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಿರುವುದು ಸ್ಪಷ್ಟವಾಗುತ್ತದೆ. □

'ಗಣಿತಶಾಸ್ತ್ರವೆಂಬುದು ಅಂಕಶಾಸ್ತ್ರವಲ್ಲ'

(7ನೇ ಪುಟದಿಂದ)

ದ್ದರೆ, ಬಾಯಿಗೆ ಏನಾದರೂ ಅಡ್ಡ ಹಿಡಿದು ಅದು ಇತರರಿಗೆ ಹರಡದಂತೆ ತಡೆಯಬಹುದಾಗಿತ್ತೋ ಏನೋ! ಆದರೆ ಇದನ್ನು ತಡೆಯುವುದಾದರೂ ಹೇಗೆ? ಅದು ದ.ಕ.ದ ತುಂಬೆಲ್ಲ ಹರಡುತ್ತಿದೆ. ಬಹುಶಃ ಇದರ ದುರ್ನಾತದಿಂದಾಗಿಯೇ ಗೆಲ್ಲಬೇಕಾದ ಸ್ಥಿತಿಯಲ್ಲಿದ್ದ ಜನಾರ್ದನ ಪೂಜಾರಿ ಸೋಲುವಂತೆ ಆದದ್ದು ಮತ್ತು ಸೋಲಬೇಕಾದ ಸ್ಥಿತಿಯಲ್ಲಿದ್ದ ಸದಾನಂದ ಗೌಡ ಗೆಲ್ಲುವಂತೆ ಆದದ್ದು ಎಂದರೆ ರಾಜಶೇಖರ್ ಒಪ್ಪಲಾರರು.

3. ರಹಮತ್ ತರೀಕೆರೆ ಅವರು ಹಸನ್ ನಯೀಂ ಸುರಕೋಡರನ್ನು ಕುರಿತು ತುಂಬು ಪ್ರೀತಿಯಿಂದ ಬರೆದಿದ್ದಾರೆ. ಆದರೆ ರಹಮತ್, ತಾವು ಬಹುಕಾಲ ಹಂಪಿ ವಿಶ್ವವಿದ್ಯಾಲಯದ ಲೋಹಿಯಾ ಅಧ್ಯಯನ ಪೀಠದ ಸಂಚಾಲಕರಾಗಿದ್ದರೂ, ತಾವೀಗ ಬಹು ಹಿರಿಯ ಮತ್ತು ಅಸಲೀ ಲೋಹಿಯಾವಾದಿ ಎಂದು ವಿಸ್ತಾರವಾಗಿ ಮತ್ತು ಕಂಠ ತುಂಬಿ ಪರಿಚಯಿಸಿರುವ ಸುರಕೋಡರನ್ನು ತಮ್ಮ ಆ ವಿಶ್ವವಿದ್ಯಾಲಯದ ಆವರಣಕ್ಕೆ ಒಮ್ಮೆಯೂ ಬಿಟ್ಟುಕೊಂಡಿರಲಿಲ್ಲವೇಕೆ ಎಂಬುದನ್ನೂ ತಿಳಿಸಿದ್ದರೆ ಚೆನ್ನಿತ್ತು. ಬಹುಶಃ ಆಗ ಅವರಿಗೆ ಸುರಕೋಡರು ಇಷ್ಟು ನಿರುಪದ್ರವಿಯಾದ ಜೀವವಷ್ಟೇ ಅಲ್ಲ, ಕಮ್ಯುನಿಸ್ಟರೊಂದಿಗೂ, ಬಂಡಾಯಿಗರೊಂದಿಗೂ ಸ್ವಲ್ಪ ಒಡನಾಟ ಕೂಡಾ ಇಟ್ಟು ಕೊಂಡವರೆಂಬುದು ಗೊತ್ತಿರಲಿಲ್ಲವೆಂದು ಕಾಣುತ್ತದೆ!

ಬಹುಶಃ ಹಾಗಾಗಿಯೇ ಸುರಕೋಡರಿಗೆ ಮಾತ್ರವಲ್ಲ, ಕರ್ನಾಟಕದ ಹೊಸ ತಲೆಮಾರಿನ ಎಲ್ಲ ಸಮಾಜವಾದಿಗಳ ಗುರುವೇ ಆಗಿದ್ದ ಮತ್ತು ತಮ್ಮ ಸಾವಿನ ದಿನಗಳವರೆಗೆ ನಮ್ಮ ರಾಜ್ಯಕ್ಕೆ ಸಾಕಷ್ಟು ನಿಯಮಿತವಾಗಿಯೇ ಭೇಟಿ ನೀಡುತ್ತಿದ್ದ ಲೋಹಿಯಾರ ನೇರ ಹಾಗೂ ಪ್ರತಿಭಾವಂತ ಶಿಷ್ಯ ಕಿಷನ್ ಪಟ್ನಾಯಕ್ ಕೂಡಾ ಲೋಹಿಯಾ ಅಧ್ಯಯನ ಪೀಠದ ಆಹ್ವಾನದ ಮೇಲೆ, ಈ ವಿಶ್ವವಿದ್ಯಾಲಯದೊಳಕ್ಕೆ ಒಮ್ಮೆಯೂ ಕಾಲಿಡಲಾಗಲಿಲ್ಲ. (ತೇಜಸ್ವಿ ಒಂದೆಡೆ, ಲೋಹಿಯಾರ ಆಲೋಚನೆಗಳನ್ನು ಅವರ ಜೀವಿತ ಕಾಲದಲ್ಲಿ ವಿಶ್ವವಿದ್ಯಾಲಯದೊಳಕ್ಕೆ ಪ್ರವೇಶಿಸಿದಂತೆ ನೋಡಿಕೊಂಡ ಬುದ್ಧಿಜೀವಿಗಳ ದುಷ್ಟಕೂಟದ ಬಗ್ಗೆ ಬರೆದಿರುವುದು ಇಲ್ಲಿ ನೆನಪಿಗೆ ಬರುತ್ತಿದೆ.) ಅದೇನೇ ಇರಲಿ, ಈಗ ಎಲ್ಲ ಪೂರ್ವಾಪರಗಳನ್ನು ಖಚಿತಪಡಿಸಿಕೊಂಡ ನಂತರ ಸುರಕೋಡರಿಗೆ ಅಲ್ಲಿ ಪ್ರವೇಶ ಸಿಕ್ಕಿದೆ ಎಂದು ಕೇಳಲ್ಪಟ್ಟಿದ್ದೇನೆ! ಇದಾದರೂ ಸಂತೋಷದ ಸಂಗತಿಯೇ.

ಅಂದಹಾಗೆ, ರಹಮತ್ ಈ ಲೇಖನದಲ್ಲಿ ತಿಳಿಸಿದಂತೆ ಲೋಹಿಯಾ ಬಿಹಾರದವರಲ್ಲ. ಅವರು ಹುಟ್ಟಿ ಬೆಳೆದದ್ದು, ಉತ್ತರ ಪ್ರದೇಶದಲ್ಲಿ. ನಂತರ ಅವರ ಕಾರ್ಯಚಟುವಟಿಕೆ ರಾಷ್ಟ್ರದ ಎಲ್ಲ ಕಡೆ ಹಬ್ಬಿತಷ್ಟೆ. ಇದು ಮಾಹಿತಿಗಾಗಿ ಮಾತ್ರ. □

(9ನೇ ಪುಟದಿಂದ)

ಇಂಥಾ ರಾಜಕೀಯ ಸಂದರ್ಭದಲ್ಲಿ. ಕಮ್ಯುನಿಸಂ ಬಲಗೊಳ್ಳುವುದೇ ಹಸಿವಿರುವಾಗ ಎಂದು ಅರ್ಥ ಮಾಡಿಕೊಂಡ ಅಮೆರಿಕನ್ನರು ಹಸಿವಿಗೆ ತುತ್ತನ್ನ ಒದಗಿಸಿ ಕಮ್ಯುನಿಷ್ಟರ ಪ್ರಭಾವದಲ್ಲಿರುವ ದೇಶಗಳನ್ನು ಮತ್ತೆ ಬಂಡವಾಳಶಾಹಿ ಜಗತ್ತಿಗೆ ಎಳೆದು ತರುವ ಸಂಚಿನ ಭಾಗವಾಗಿಯೇ ಹಸಿರುಕ್ರಾಂತಿ ರೂಪುಗೊಂಡಿತು. ಹೀಗಾಗಿಯೇ 1965 ರಲ್ಲಿ ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಚೆಸ್ಟರ್ ಬೌಲೆಸ್ "ಕೆಂಪು ಕ್ರಾಂತಿಯನ್ನು ಹತ್ತಿಕ್ಕಬೇಕೆಂದರೆ ಹಸಿರು ಕ್ರಾಂತಿ ಅತ್ಯಗತ್ಯ" ಎಂದು ಘೋಷಿಸಿದ್ದರು. ಆದ್ದರಿಂದಲೇ ಬೋರ್ಲಾಗ್‌ಗೆ ನೊಬೆಲ್ ಪ್ರಶಸ್ತಿ ಸಿಕ್ಕಿದ್ದು ಕೃಷಿ ವಿಜ್ಞಾನದ ಕೊಡುಗೆಗಲ್ಲ. ಜಾಗತಿಕ ಶಾಂತಿಗೆ ಕೊಡುಗೆ ನೀಡಿದ್ದಕ್ಕೆ! ಅರ್ಥಾತ್ ಕಮ್ಯುನಿಸಂನ ಆತಂಕದಿಂದ ಕಂಗೆಟ್ಟಿದ್ದ ಬಂಡವಾಳಶಾಹಿ ಜಗತ್ತಿಗೆ ನೆಮ್ಮದಿ ತಂದು ಕೊಟ್ಟಿದ್ದಕ್ಕೆ!

ಹೀಗಾಗಿ ಈ ಮೊದಲೇ ವಿವರಿಸಿದಂತೆ ಹಸಿರು ಕ್ರಾಂತಿಯ ತಂತ್ರಜ್ಞಾನವೂ ಅಮೆರಿಕದ ಬಹುರಾಷ್ಟ್ರೀಯ ಕಂಪನಿಗಳಿಗೆ ಹೊಸ ಮಾರುಕಟ್ಟೆ ತಂದುಕೊಡುವುದು ಎಂದು ಖಾತರಿಯಾದ ಮೇಲೆ ಅಮೆರಿಕ ಅದನ್ನು ಕಡ್ಡಾಯ ಎಲ್ಲಾ ದೇಶಗಳ ಮೇಲೆ ಹೇರತೊಡಗಿತು. ಆವರೆಗೆ ಪ್ರಪಂಚದ ಎಲ್ಲಾ ಬಡ ದೇಶಗಳಿಗೆ ಪಿಎಲ್-480 ಯೋಜನೆಯಡಿಯಲ್ಲಿ ಗೋಧಿಯನ್ನು ಸಬ್ಸಿಡಿ ದರದಲ್ಲಿ ಸರಬರಾಜು ಮಾಡುತ್ತಿದ್ದ ಅಮೆರಿಕದ ನೀತಿಯನ್ನು 1965 ರಲ್ಲಿ ಅಧ್ಯಕ್ಷ ಲಿಂಡನ್ ಜಾನ್ಸನ್ ಬದಲಾಯಿಸಿದ. ಇನ್ನು ಮುಂದೆ ಅಮೆರಿಕದ ಸಬ್ಸಿಡಿ ಗೋಧಿ ಬೇಕೆಂದರೆ ಬಡ ದೇಶಗಳು ತಮ್ಮ ಕೈಗಾರೀಕರಣ ನೀತಿಯನ್ನು ಕೈಬಿಡಬೇಕು. ಕೃಷಿಯಲ್ಲಿ ಹೈಬ್ರೀಡ್ ಕ್ರಿಷಿಯನ್ನು ಅನುಸರಿಸಬೇಕು ಮತ್ತು ಅಮೆರಿಕದ ಬಂಡವಾಳಕ್ಕೆ ತಮ್ಮ ದೇಶದ ಮಾರುಕಟ್ಟೆಯನ್ನು ತೆರೆದಿಡಬೇಕು ಎಂಬ ಶರತ್ತನ್ನು ವಿಧಿಸಿತು ಅಮೆರಿಕನ್ ಸಾಮ್ರಾಜ್ಯಶಾಹಿ.

1965ರಲ್ಲಿ ಭಾರತದಲ್ಲಿ ಹಿಂದೆಂದೂ ಕಾಣದ ಕ್ಷಾಮ ಡಾಮರ ಆವರಿಸಿ ಅಪಾರ ಆಹಾರ ಕೊರತೆ ಎದುರಾಗಿತ್ತು. ಈ ಅವಕಾಶವನ್ನು ಬಳಸಿಕೊಂಡು ಅಮೆರಿಕ ಭಾರತವೂ ಹಸಿರು ಕ್ರಾಂತಿ ಯೋಜನೆಯನ್ನು ಜಾರಿ ಮಾಡಬೇಕೆಂದೂ, ಅಮೆರಿಕದ ಕೃಷಿ ಬಂಡವಾಳಕ್ಕೆ ಮಾರುಕಟ್ಟೆಯನ್ನು ತೆರೆಯಬೇಕೆಂದೂ ಇಲ್ಲದಿದ್ದರೆ ಆಹಾರ ಸರಬರಾಜು ಮಾಡುವುದಿಲ್ಲವೆಂದು ಬ್ಲಾಕ್ ಮೇಲ್ ಮಾಡಿ ಹಸಿರು ಕ್ರಾಂತಿ ಯೋಜನೆಯನ್ನು ಮಂಡಿಬಲವಿಲ್ಲದ ಭಾರತದ ಸರ್ಕಾರದ ಮೇಲೆ ಹೇರಿತು.

ಹೀಗಾಗಿ ಹಸಿರು ಕ್ರಾಂತಿಯೆಂಬುದು ಭಾರತದಂತ ಕೃಷಿ ಪ್ರಧಾನ ದೇಶವನ್ನು ಅಮೆರಿಕನ್ ಸಾಮ್ರಾಜ್ಯಶಾಹಿ ನಿಯಂತ್ರಣಕ್ಕೆ ಒಳಪಡಿಸುವ ಸಂಚೇ ಹೊರತು ರೈತೋದ್ಧಾರದ ಯೋಜನೆಯಲ್ಲ. ಅದರ ಪರಿಣಾಮವೇ ಕೊನೆಯಿಲ್ಲದ ರೈತರ ಆತ್ಮಹತ್ಯೆಗಳು. ಹಸಿವಿನ ಸಾವುಗಳು. ಬತ್ತಿಹೋದ ಕೆರೆಗಳು. ಕುಸಿದುಬಿದ್ದಿರುವ ಅಂತರ್ಜಲದ ಮಟ್ಟ. ಕಂಡು ಕೇಳರಿಯದ ಬೆಳೆ ರೋಗಗಳು. ಅತಂತ್ರ ರೈತ. ಪರಾವಲಂಬಿ ದೇಶ. ಇವೆಲ್ಲದರ ಮೂಲ ಸೂತ್ರಧಾರಿ ನಾರ್ಮನ್ ಬೋರ್ಲಾಗ್. ಸಾಮ್ರಾಜ್ಯಶಾಹಿಯ ಉಗ್ರಾಣ ತುಂಬಿಸಲು ಬಡದೇಶಗಳ ಬಡ ರೈತರ ತಟ್ಟೆಯನ್ನೂ ಕಸಿದುಕೊಂಡ ಕೊಲೆಗಾರ.

ಈಗ ಹೇಳಿ. ಈತ ಸ್ನೇಹಿತನೋ? ಭಾರತದ ರೈತಾಪಿ ಬಡಜನರ ಶತ್ರುವೋ? □

ಹಿಂದಿಂಗಳ ಚಂದು

ಹಿಂದಿಂಗಳಿನಿರುಳು
ಇನ್ನೂ ಮೂಡದ ಚಂದು:
ಕತ್ತಲ ಕಲಬೆರಕೆಯ
ಚಿಕ್ಕಿ ಬೆಳಕು!
ಸುಗ್ಗಿ ಸೂರೆಯ ಬಯಲಲ್ಲಿ
ಮೊಳಗಿದರು, ಮಾರ್ದನಿಸದ ಕಾಕು!

ಅರಿ ಬಡಿದ ಕಣದ ಮೇಟಿಗೆ
ಹೆಣೆ ಬಿಗಿದ ಎಮ್ಮೆ-ದನಗಳ ತೆಕ್ಕೆ:
ತುಳಿವ ಹುಲ್ಲೇ ಹಾಸಿಗೆ!
ಕೊರೆವ ಚಳಿಯೇ ಹೊದಿಕೆ!
ಮನೆಮಡದಿಯ ಕೈಲಾಸ ಮರೆತು
ಬೆಚ್ಚಿಟ್ಟ ಬೆಳಗಾನ, ಹೆಣೆಗಾಣ ತಿರುವಿ
ಮೆರೆಗೋಲಾಡಿಸುವ ಕಂಬಳದಾಳು:
ಕೊರೆವ ಚಳಿಗೂ ಕೇರು ಮಾಡದ ಬೆವರು !
ಇರಬೇಕು, ದಣಿವ ಮೈಗಳೇ
ಅದರ ಕಾಯಂ ತವರು!

ಕಣಗಾವಲಿಗೆ ಬಂದ ಮನೆ ಹೈದ:
ಅಡ್ಡಮೆದೆ ಗೂಡಲ್ಲು ದಕ್ಕದ ನಿದ್ದೆ
ರೋಗಿ ಕೋಳಿಯ ಕುಗುರು!
ಎಣ್ಣೆ ಕಾಣದ ತಲೆ ತುಂಬ
ಮುದಿ ಅಪ್ಪನ ಎಳೆಹಡತಿಯ
ಗುಮ್ಮ:

ಕೈಗೆ ಬಂದವನ ಪರ
ದೂರದೂರಿನ 'ಜೀವದ ಅಕ್ಕ'
ಕೈಕಾಲ್ಹಿಡಿದು ಬೇಳಾಡಿದರು, ಬೇಯಲಿಲ್ಲ
ಕುಲಕ್ಕೆ ಹೊರಗಾದವಳ ಬೇಳೆ
ಹಂಗರು ಹಸಿಯ ಒಲೆಯಲ್ಲಿ!

ಬೇಯಿಸಿ ಬೆನ್ತಿಕ್ಕಲು, ದಿಕ್ಕಿಲ್ಲದ 'ಅನಾದ್ರಿ'ಯ
ನೇವವೇಗೆದ್ದು, ರಾತ್ರೋರಾತ್ರಿ ಮನೆಹೊಕ್ಕ,
ಗುಂಡು ಕಲ್ಲಂತ ಗಂಡನ ತಿಂದುಕೊಂಡೋಳ

ಕೆಂಪು ಸಿರಿಕಂಡದುರಿ ಮಾರಿ ಬಲೆಯಲ್ಲಿ ಬಿದ್ದು
ಸಕ್ಕುಮುಕ್ಕಾದ ಗೊದ್ದ!

ತಿಂಗಳೊಪ್ಪತ್ತಿನಲ್ಲೆ, ತಂಗಳಾದವನ ಕೈಗೆ
ಹಾಕಲಾಗಲಿಲ್ಲ, ನಾಯಿ ಬಾಯಿಗೆ ಬೀಗ!
ಒಂದ ಕಂಡರೆ ಒಂದು ಕಾಣದ ತಬ್ಬಲಿಯ
ನೆರಳಿಗೂ, ಸೆಡೆ ಎತ್ತುವ ಕರಿಯ ನಾಗ!

ಕಣ್ಣಿಲ್ಲದ ಭಗವಂತಾ, ಯಾಕೆ ಕರಕೊಂಡೆ
ಬೆಣ್ಣೆ-ಬೆಲ್ಲದ ಅವ್ವನ, ಇಷ್ಟು ಬ್ಯಾಗ!
ಯಾಕೆ ಬರೆದಿಟ್ಟೆ, ಮನೆ ಮರ್ಯಾದಿ ಸೆರಗಿಗೆ
ಈಪಾಟಿ ಕೆಂಡದ ಭಾಗ್ಯವ!
ನಂಗೂ ಕೊಡಬಾರದಿತ್ತೆ, ಅಕ್ಕನ ಹಾಗೆ
ಹೆಣ್ಣಾಗಿ ಹುಟ್ಟಿ ಹೋಗುವ ಯೇಗವ!......

ಮರಿಕೋಳಿ ಬಳಿ, ಮಂಚದ ಕಾಲು
ನೆಟ್ಟಗಾದ ಸಮಯ
ಕಡೆಗೂ, ಮೂಡಿದ, ಮುರುಕು ದೋಸೆಯ

ಚಂದು!
ಕಗ್ಗಣಿವೆ ಮುಸುಕ ಸರಿಸಲಾಗದ
ಬಂಧು!
ಅಳಿದುಳಿದ ಕುರುಕು ನಿದ್ದೆಗೆ
ನಿಂತ ನಿಲುವಲ್ಲೆ ಕುಸಿದ ರಾಸುಗಳು!
ಮೆದೆ ಸಂಧಿಯ ಮುದ್ದೆಗೆ
'ಅಸ್ಸಂದು', ದಡ ಹತ್ತಿದ
ಮೆರೆಗೋಲಾಳುಗಳು!
ನೆನಪಿನುರಿ ಒಲೆಯಿಂದ,
ಹೊರಕಡೆದ
ಹಸಿದ ಹೈದನಿಗು
ಹಸಿಕಾರ, ಗಸಿರೊಟ್ಟಿಯ 'ರಸಕವಳ':
ಮೋಟು ಬಾಲದ 'ಕರಿಯ'ನ ಜತೆಗೆ!

○ ಬಿ.ರಾಜಣ್ಣ

ಮಾಯಾವತಿ V/S ಬಹುಗುಣ ಜೋಷಿ: ಜಾತಿ ಸಂಬಂಧಗಳ ಮರು ವ್ಯಾಖ್ಯಾನ

ಮನೋರಂಜಿನಿ ಪ್ರವೀಣ್

ಮಾಯಾವತಿ ಮತ್ತು ಬಹುಗುಣ ಜೋಷಿಯವರ ವಿವಾದದ ಸುಳಿಯಲ್ಲಿ ದಲಿತ ಮಹಿಳೆಯ ಗೌರವದಿಂದ ಜೀವಿಸುವ ಹಕ್ಕಿನ ಉಲ್ಲಂಘನೆಯ ಕೆಲವು ಅಂಶಗಳು ಮತ್ತು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡಗಳ ದೌರ್ಜನ್ಯ ಕಾಯಿದೆ -1989ರ ಮಹತ್ವ

ಭಾರತದ ಇತಿಹಾಸದಲ್ಲಿ ಜಾತಿ ವ್ಯವಸ್ಥೆ ಅಂದಿನಿಂದ ಇಂದಿನವರೆಗೂ ಹಲವಾರು ರೂಪಗಳನ್ನು ಪಡೆದು ಭದ್ರವಾಗುತ್ತ ಹೋಗುತ್ತಿದೆ. ಇದಕ್ಕೆ ಪ್ರೋತ್ಸಾಹವನ್ನು ನೀಡುವ ಹಲವಾರು ಹುನ್ನಾರಗಳು ಜಾತಿ ವ್ಯವಸ್ಥೆಯ ವಿರುದ್ಧ ಮಾತನಾಡುವವರ ಮನಃಸ್ಥಿತಿಯಲ್ಲೂ ಕೆಲವೊಮ್ಮೆ ಪರೋಕ್ಷವಾಗಿ ಕಾರ್ಯನಿರ್ವಹಿಸುತ್ತಿರುತ್ತವೆ. ಇತ್ತೀಚಿನ ಮಾಧ್ಯಮಗಳಲ್ಲಿ ಪ್ರಸಾರವಾದ ಮಾಯಾವತಿ ಮತ್ತು ಬಹುಗುಣ ಜೋಷಿಯವರ ಪ್ರಕರಣವು ಕೂಡ ಇಂದಿನ ಮಾಧ್ಯಮಗಳಿಂದ ಜಾತಿಯು ಹೊಸ ಅಯಾಮವನ್ನು ಪಡೆದುಕೊಂಡಿರುವುದನ್ನು ನಾವು ಇಲ್ಲಿ ಕಾಣಬಹುದು. ಹಾಗೆಯೇ ದಲಿತ ಮಹಿಳೆಯ ಘನತೆಯಿಂದ ಜೀವಿಸುವ ಹಕ್ಕು ಮತ್ತು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಂಡದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯ ಚೌಕ್ಕಟ್ಟಿನಲ್ಲಿ ದಲಿತರ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಪರೀಶಿಲಿಸುವುದು ಅವಶ್ಯಕವಾಗಿದೆ.

ಈ ಲೇಖನದ ಮುಖ್ಯ ಅಂಶವನ್ನು ತಿಳಿದುಕೂಳ್ಳುವುದಕ್ಕೆ ಮುಂಚಿತವಾಗಿ ನಾವು ಇತಿಹಾಸದ ಕೆಲವು ಮುಖ್ಯ ಅಂಶಗಳನ್ನು ಸೂಕ್ಷ್ಮವಾಗಿ ಅರ್ಥ ಮಾಡಿಕೂಳ್ಳುವುದು ಕೂಡ ಅಷ್ಟೇ ಮುಖ್ಯವೆನಿಸುತ್ತದೆ. ದಲಿತ ಮಹಿಳೆಯ ಮೇಲಿನ ದೌರ್ಜನ್ಯ ಅತ್ಯಾಚಾರ, ಕೊಲೆ ಲೈಗಿಂಕ ಕಿರುಕುಳಗಳ ನಮ್ಮ ಇತಿಹಾಸದಲ್ಲಿ ಇಂದಿಗೂ ಸಾಮಾನ್ಯ. ಅವರ ಘನತೆಗೆ ಧಕ್ಕೆ ಬರುವಂತಹ ನಡುವಳಿಕೆ, ಜಾತಿ ಅವಮಾನಗಳು ಅವಳನ್ನು ದೇವದಾಸಿಯಂತಹ ನೀಚ ಪದ್ಧತಿಗೆ ತಳ್ಳುವುದಾರ ಮೂಲಕ ಅವಳನ್ನು ವೇಶ್ಯೆ ಸೂಳೆ ಹಣಕ್ಕಾಗಿ ದೇಹ ಮಾರಿಕೊಳ್ಳುವವಳು ಎಂಬುವುದನ್ನು ಚಿತ್ರಿಸಿ ಅವಳನ್ನು ಅರ್ಥಿಕವಾಗಿ ಶೃಕ್ಷಣಿಕವಾಗಿ ರಾಜಕೀಯವಾಗಿ ಸಮಾಜದ ಮೂಲಸ್ತರದಿಂದ ಕೆಳಗೆ ತಳ್ಳಿಹಾಕಿದೆ. ಅದಕ್ಕಾಗಿ ಅವಳ ಶ್ರಮ ಮತ್ತು ದೇಹಕ್ಕೆ ಅಂದಿನಿಂದ ಇಂದಿನವರೆಗೂ ಯಾವ ರೀತಿಯ ಗೌರವ ದೂರೆಯದಾಗಿದೆ. ದಲಿತ ಮಹಿಳೆ ಶಿಕ್ಷಿತಳಾಗಿ ಇವುಗಳನ್ನು ಪ್ರಶ್ನಿಸಿದಾಗ ಅವಳು ದಲಿತ ಮಹಿಳೆಯಾಗಿ ಜಾತಿಯ ಪ್ರತೀಕಾರದಲ್ಲಿ ಬೆಂದು ಹೋಗುತ್ತಾಳೆ. ಆ ಬೆಂಕಿಯಲ್ಲಿಯೂ ಅವಳು ಸೆಟದು ನಿಂತಾಗ ಇತಿಹಾಸ ಪುರುಷಳಾಗುತ್ತಾಳೆ ಎಂಬುವುದು ನೈಜ ಸತ್ಯ.

ಪ್ರತಿಯೊಂದು ದಲಿತ ಮಹಿಳೆಯ ಜೀವನ ಒಂದು ಇತಿಹಾಸ ಏಕೆಂದರೆ ಅವಳ ಸೇವೆ-ಮೌಲ್ಯಗಳು ಸಮಾಜಕ್ಕೆ ಮತ್ತು ಕುಟುಂಬಕ್ಕೆ ದೊಡ್ಡ ಕೊಡುಗೆ. ಸಮಾಜದ ಅವಳ ಜಾತಿ ನಿಂದನೆಯ ಅವಮಾನಕ್ಕೆ ಅವಳು ಹೇಡಿಯಂತೆ ಆತ್ಮಹತ್ಯೆಗೈಯುವ ಪ್ರಕರಣಗಳು ಸಾಮಾನ್ಯ ಮಹಿಳೆಯರಿಗೆ ಹೋಲಿಸಿದಾಗ ತುಂಬ ಕಡಿಮೆ. ಅದಕ್ಕೆ ಬದ್ಲು ಅವ್ಳು ಸಮಾಜದಲ್ಲಿರುವ ಅನ್ಯಾಯವನ್ನು ದಿಟ್ಟತನದಿಂದ ಎದುರಿಸಿ ಆ ಅನ್ಯಾಯಕ್ಕಾಗಿ ತನ್ನ ಪ್ರಾಣವನ್ನು ಬಲಿಕೊಟ್ಟಿರುತ್ತಾಳೆ ಇಲ್ಲವೇ ಆ ಅನ್ಯಾಯವನ್ನು ಮೆಟ್ಟಿ ನಿಂತಿರುತ್ತಾಳೆ. ಇಂತಹ ಮಹಿಳೆಯರನ್ನು ನಮ್ಮ ಸಮಾಜ ವೇಶ್ಯೆಯಾಗಿ ಕೀಳಾಗಿ ಚಿತ್ರಿಸುತ್ತಿರುವುದಕ್ಕೆ ನಮ್ಮ ಇತಿಹಾಸದಲ್ಲಿ ಅನೇಕ ಮೋಸದ ಕುತಂತ್ರದ ಲಿಖಿತ ಸಾಕ್ಷಿಗಳಿವೆ ಮತ್ತು ಅವುಗಳು ಅಂದಿನಿಂದ ಇಂದಿನವರೆಗೂ ವ್ಯವಸ್ಥಿತವಾಗಿ ಎಲ್ಲರ ಮನಸ್ಸಿನಲ್ಲಿ ಜಾತಿ ಪದ್ಧತಿಯನ್ನು ದಲಿತ ಮಹಿಳೆಯ ದೇಹ ಶ್ರಮ ಮತ್ತು ಲೈಗಿಂಕತೆಯನ್ನು ಕೀಳಾಗಿ ನೋಡುವಂತೆ ಮಾಡುತ್ತಿವೆ. ಇಂತಹ ಉದಾಹರಣೆಗಳಲ್ಲಿ ಮುಖ್ಯವಾಗಿ ಎಲ್ಲರ ಗಮನಕ್ಕೆ ಗೋಚರವಾಗುವುದು.

ದಲಿತ ಮಹಿಳೆಯ ಮೇಲಿನ ದೌರ್ಜನ್ಯ ಅತ್ಯಾಚಾರ, ಕೊಲೆ ಲೈಗಿಂಕ ಕಿರುಕುಳಗಳ ನಮ್ಮ ಇತಿಹಾಸದಲ್ಲಿ ಇಂದಿಗೂ ಸಾಮಾನ್ಯ. ಅವರ ಘನತೆಗೆ ಧಕ್ಕೆ ಬರುವಂತಹ ನಡುವಳಿಕೆ, ಜಾತಿ ಅವಮಾನಗಳು ಅವಳನ್ನು ದೇವದಾಸಿಯಂತಹ ನೀಚ ಪದ್ಧತಿಗೆ ತಳ್ಳುವುದರ ಮೂಲಕ ಅವಳನ್ನು ವೇಶ್ಯೆ ಸೂಳೆ ಹಣಕ್ಕಾಗಿ ದೇಹ ಮಾರಿಕೊಳ್ಳುವವಳು ಎಂಬುವುದನ್ನು ಚಿತ್ರಿಸಿ ಅವಳನ್ನು ಅರ್ಥಿಕವಾಗಿ ಶೃಕ್ಷಣಿಕವಾಗಿ ರಾಜಕೀಯವಾಗಿ ಸಮಾಜದ ಮೂಲಸ್ತರದಿಂದ ಕೆಳಗೆ ತಳ್ಳಿಹಾಕಿದೆ. ಅದಕ್ಕಾಗಿ ಅವಳ ಶ್ರಮ ಮತ್ತು ದೇಹಕ್ಕೆ ಅಂದಿನಿಂದ ಇಂದಿನವರೆಗೂ ಯಾವ ರೀತಿಯ ಗೌರವ ದೊರೆಯದಾಗಿದೆ. ದಲಿತ ಮಹಿಳೆ ಶಿಕ್ಷಿತಳಾಗಿ ಇವುಗಳನ್ನು ಪ್ರಶ್ನಿಸಿದಾಗ ಅವಳು ದಲಿತ ಮಹಿಳೆಯಾಗಿ ಜಾತಿಯ ಪ್ರತೀಕಾರದಲ್ಲಿ ಬೆಂದು ಹೋಗುತ್ತಾಳೆ.

ಮನುಸ್ಮೃತಿಯ ಅಧ್ಯಾಯ 3 ವಚನ, 13,14,15

ವಚನ-13ರಲ್ಲಿ, "ಶೂದ್ರನಿಗೆ ಶೂದ್ರಳೇ ಹೆಂಡತಿಯಾಗಬೇಕು. ವೈಶ್ಯನಿಗೆ ವೈಶ್ಯ ಜಾತಿಯ ಹಾಗೂ ಶೂದ್ರ ಜಾತಿಯ ಹೆಣ್ಣಾಗಬಹುದು. ಕ್ಷತ್ರಿಯನಿಗೆ ಕ್ಷತ್ರಿಯ ಜಾತಿಯ್ಯವಳು ಹಾಗು ಶೂದ್ರಜಾತಿಯ ಹೆಂಡತಿ ಯಾಗಬಹುದು. ಬ್ರಾಹ್ಮಣನಿಗೆ ಬ್ರಾಹ್ಮಣ ಸ್ತ್ರೀಯೂ, ಕ್ಷತ್ರಿಯಳು, ವೈಶ್ಯಳೂ ಹಾಗು ಶೂದ್ರಳು ಹೆಂಡತಿಯಾಗಬಹುದು" ಮುಂದುವರೆದು ವಚನ -14ರಲ್ಲಿ, "ಎಂಥ ಅನಿವಾರ್ಯ ಸಂರ್ದಭದಲ್ಲಿಯೂ ಬ್ರಾಹ್ಮಣ ಹಾಗು ಕ್ಷತ್ರಿಯ ವರಗಳು (ಗಂಡುಗಳು) ಶೂದ್ರಜಾತಿಯ ಸ್ತ್ರೀಯನ್ನು ಪ್ರಥಮ ಹೆಂಡತಿಯಾಗಿ ವಿವಾಹ ಮಾಡಿಕೊಳ್ಳಬಾರದು (ಇಂಥ ಉದಾಹರಣೆಗಳು ವೃತ್ತಾಂತದಲ್ಲಿ ಎಲ್ಲಿಯೂ ಇಲ್ಲ)"ಎನ್ನುತ್ತದೆ. ಮತ್ತು ಮುಂದುವರೆದು, ವಚನ-15ರಲ್ಲಿ "ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜಾತಿಗಳವರು ಮೋಹದ ಆವೇಶದಲ್ಲಿ ಹೀನ ಜಾತಿಯ(ಶೂದ್ರ) ಸ್ತ್ರೀಯನ್ನು ಪ್ರಥಮ ಹೆಂಡತಿಯಾಗಿ ಮದುವೆ ಮಾಡಿಕೊಂಡರೆ, ತಮ್ಮ ಕುಲ ಸಂತಾನಗಳೊಡನೆ ತಿರೋಹಿತರಾಗಿ ಶೂದ್ರತ್ವವನ್ನು ಹೊಂದುತ್ತಾರೆ" ಎನ್ನುತ್ತದೆ.

ಹೀಗೆ ದಲಿತ ಮಹಿಳೆಯ ದೇಹ ಮತ್ತು ಲೈಗಿಂಕತೆಯು ಸಾರ್ವಜನಿಕರ ಪುಗಸಟ್ಟೆ ಸ್ವತ್ತಾಗಿ ಅವಳ ಘನತೆಯಿಂದ ಜೀವಿಸುವ ಹಕ್ಕನ್ನು ಕಸಿದುಕೊಳ್ಳುತ್ತದೆ. ಹೀಗಾಗಿ ಅಂದಿನಿಂದ ಹಿಂದಿನವರೆಗೂ ನಡೆಯುವ ದಲಿತರ ಮೇಲಿನ ದೌರ್ಜನ್ಯದ ಬಹುತೇಕ ಪ್ರಕರಣಗಳನ್ನು ನಾವು ಸೂಕ್ಷ್ಮವಾಗಿ ಗಮನಿಸುವಾಗ ಅದರ ಹಿಂದೆ ದಲಿತ ಮಹಿಳೆಯ ಗೌರವಕ್ಕೆ ಧಕ್ಕೆಯಾಗುವಂತಹ ಲೈಗಿಂಕ ಕಿರುಕುಳ, ಜಾತಿ ನಿಂದನೆ, ಅತ್ಯಾಚಾರ ಮತ್ತು ಕೊಲೆಗಳ ಜೊತೆಗೆ ಅವಳು ನೀತಿ ಗೆಟ್ಟವಳು ವ್ಯಭಿಚಾರಿ, ಪರ ಪುರುಷರೂಡನೆ ಅಕ್ರಮಸಂಬಂಧವಿಟ್ಟು ಕೊಂಡವಳು ಅದಕ್ಕಾಗಿ ಈ ಶಿಕ್ಷೆಗಳು ಅವರಿಗೆ ಸಲ್ಲುತ್ತಿವೆ ಎನ್ನುವಂತೆ ಸಮಾಜ ಒಪ್ಪುವ ರೀತಿಯಲ್ಲಿ ಚಿತ್ರಿಸಿ ಮೌನವಾಗುತ್ತದೆ. ಅದಕ್ಕೂ ಮಿಗಿಲಾಗಿ ದಲಿತ ಮಹಿಳೆ ತನ್ನ ಹಕ್ಕುಗಾಳಿಗಾಗಿ ಹೋರಾಡಿದಾಗ ಸಮಾಜದಲ್ಲಿ ನಡೆಯುವ ಅನ್ಯಾಯವನ್ನು ಪ್ರತಿಭಟಿಸಿದಾಗ ಅವಳ ಮೇಲೆ ಸಾಮಾನ್ಯ ಮಹಿಳೆಗಿಂತ ತೀವ್ರ ಸ್ವರೂಪದ ದೌರ್ಜನ್ಯ ಮತ್ತು ಮಾನ ಹಾನಿಯು ಪ್ರಮಾಣ ಜಾತಿಯ ಹೆಸರಿನಲ್ಲಿ ಪ್ರತೀಕಾರದ ಅಥವಾ ಸೇಡಿನ ಸಂಕೇತವಾಗಿರುತ್ತದೆ ಎಂಬುವುದನ್ನು ಸಮಾಜವಾಗಲೀ, ಆಡಳಿತವರ್ಗವಾಗಲೀ, ನ್ಯಾಯಾಂಗವಾಗಲೀ ಗುರುತಿಸಿ ರಕ್ಷಣೆಯನ್ನು ನೀಡುವುದರ ಬದಲು ಅವರ ನೈತಿಕತೆಗೆ ಮತ್ತು ಗೌರವಕ್ಕೆ ಮಸಿ ಬಳಿಯುತ್ತಿರುವ ಮನುವಾದದ ಹಲವಾರು ಉದಾಹರಣೆಗಳಲ್ಲಿ ಈ ಕೆಳಗಿನ ಕೆಲವು ಉದಾಹರಣೆಗಳು ಜೀವಂತ ಸಾಕ್ಷಿಯಾಗುತ್ತವೆ.

2006 ಸೆಪ್ಟಂಬರ್ 29ರಂದು ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ಸುರೇಖಾ ಭೋತ್‌ಮಾಂಗೆ ಮತ್ತು ಅವಳ 18 ವರ್ಷದ ಮಗಳಾದ ಪ್ರಿಯಾಂಕ ಭೋತ್ಮಾಂಗೆಯನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿ ಸತತವಾಗಿ ಸಮೂಹಿಕ ಅತ್ಯಾಚಾರವನ್ನು ಮಾಡಿ ಅವರ ಗುಪ್ತಾಂಗಳಳ್ಲಿ ಕಟ್ಟಿಗೆಗಳನ್ನು ತೂರಿಸಿ ಅವರನ್ನು ಮತ್ತು ಅವರ ಕುಟುಂಬದ ಸದ್ಯಸರನ್ನು ಅಮಾನುಷವಾಗಿ ಕೊಲೆ ಮಾಡಿ ಅವರ ದೇಹವನ್ನು ನೀರಿನಲ್ಲಿ ಬಿಸಾಡುವವರೆಗೂ ಜಾತಿಯ ಕ್ರೌರ್ಯ ಹಟ್ಟಹಾಸ ಮೆರೆಯಿತು. ಇದಕ್ಕೆ ನೈಜ ಕಾರಣ ಎಲ್ಲರಂತೆ ಸುರೇಖಾಳ ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿರುವುದು ಮತ್ತು ಬೇರೆಯವರಂತೆ ಸ್ವಂತ ಜಮೀ

ದಲಿತ ಮಹಿಳೆ ಸಮಾಜದಲ್ಲಿ ತನ್ನ ಕರ್ತವ್ಯವನ್ನು ನಿಷ್ಟೆಯಿಂದ ಮಾಡುವಾಗ ಮತ್ತು ಸಮಾಜದಲ್ಲಿ ನಡೆಯುವ ಅನ್ಯಾಯವನ್ನು ವೀರೋಧಿಸಿದಾಗ ಅವಳು ದಲಿತ ಮಹಿಳೆಯಾಗಿ ಹೆಚ್ಚಿನ ಜಾತಿ ಪ್ರತೀಕಾರವನ್ನು ಪಡೆಯಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ನ್ಯಾಯಾಂಗದ ಜಾತಿ ಮನಃಸ್ಥಿತಿಯ ಪ್ರತಿಕ್ರಿಯೆಯನ್ನು ಇನ್ನೊಂದು ಉದಾಹರಣೆಯಾದ ರಾಜಸ್ಥಾನದ ಬನಾವರಿ ದೇವಿ ಪ್ರಕರಣದಲ್ಲಿ ನೋಡುವುದಾದರೇ, ಬನವಾರಿ ದೇವಿಯ ಪ್ರಕರಣ ಸ್ವಲ್ಪ ಹಳೆಯದು ಎನಿಸಿದರೂ ಅದರಲ್ಲಿನ ಜಾತಿ ದ್ವೇಷ ಮತ್ತು ನ್ಯಾಯಾಂಗದ ಜಾತಿ ಮನಸ್ಥಿತಿ ದಲಿತ ಮಹಿಳೆಯರಿಗೆ ಆದ ಅನ್ಯಾಯ ಮನಸ್ಸಿನಲ್ಲಿ ಇನ್ನುವರೆಗೂ ಮಾಸದ ಘಾಯವಾಗಿರುತ್ತದೆ.

ನನ್ನು ಹೊಂದಿ ಬಿಟ್ಟಿ ಚಾಕರಿ ಮಾಡದೇ ಘನತೆಯಿಂದ ಜೀವಿಸಲು ಪ್ರಯತ್ನಿಸುತ್ತಿರುವುದು. ಈ ನೈಜ ಕಾರಣವನ್ನು ಮರೆಮಾಚಿ ಮಾಧ್ಯಮಗಳು ಮತ್ತು ಅಲ್ಲಿಯ ಕೆಲವು ದಿನಃ ಪತ್ರಿಕೆಗಳು ಸುರೇಖಾ ಭೋತ್‌ಮಾಂಗೆಗೆ ಪರಪುರುಷನೊಡನೆ ಅಕ್ರಮ ಸಂಬಂಧವಿದ್ದ ಕಾರಣ ಅವಳಿಗೆ ಮತ್ತು ಅವಳ ಕುಟುಂಬಕ್ಕೆ ಸರಿಯಾದ ಶಿಕ್ಷೆಯಾಯಿತು ಎಂದು ಅಲ್ಲಿನ ಗ್ರಾಮಸ್ಥರು ಮತ್ತು ಸಮಾಜ ಮೂಕಪ್ರೇಕ್ಷಕರಾಗಿ ನುಡಿದರೇ ಮಾಧ್ಯಮಗಳು ಇದನ್ನು ಲಿಕಿತವಾಗಿ ಪ್ರಕಟಿಸಿ ದಲಿತ ಮಹಿಳೆಯ ಗೌರವಕ್ಕೆ ಕುತ್ತನ್ನು ತಂದವು.

ಇದಕ್ಕೆ ಪ್ರತಿಯಾಗಿ ದಲಿತ ಚಳುವಳಿಗಳು, ಮಹಿಳೆ ಸಂಘಟನೆಗಳು ವಿಚಾರವಂತರು ಮಾನವಹಕ್ಕುಗಳಿಗೆ ಹೋರಾಡುವವರು ಮೌನ ವಹಿಸಿದ್ದರೇ, ನ್ಯಾಯಾಂಗವು ಕೂಡ ಬಹುಶಃ ಸಮಾಜ ತಳೆದ ನಿಲುವನ್ನೇ ತಳೆಯುತ್ತಿದ್ದುದ್ದರಲ್ಲಿ ಅನುಮಾನವಿರುತ್ತಿರಲಿಲ್ಲ. ಈ ಸಂಘಟನೆಗಳ ಒತ್ತಡದ ಮೂಲಕ ನ್ಯಾಯಾಂಗದಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಯಿತು ಎನ್ನುವ ಅಂಶ ಒಂದೆಡೆಯಾದರೇ, ಇನ್ನೊಂದಡೆ ದಲಿತರ ಹಕ್ಕುಗಳನ್ನು ರಕ್ಷಿಸುವುದರಲ್ಲಿ ಅದು ಯಾವ ಪ್ರಯತ್ನವನ್ನು ಮಾಡಲಿಲ್ಲ. ಹೇಗೆಂದರೆ, ದಲಿತರಿಗಾಗಿ ಇರುವ ಪ್ರತ್ಯೇಕ ಕಾಯ್ದೆಯಾದ ಪ.ಜಾತಿ ಮತ್ತು ಪ.ಪಂಗಡಗಳ ದೌರ್ಜನ್ಯ ಕಾಯ್ದೆಯಡಿ ಈ ಅಪರಾಧಿಗಳಿಗೆ ಶಿಕ್ಷೆಯಾಗದೇ, ಸಾಮಾನ್ಯ ಕಾಯ್ದೆಯಾದ ಐ.ಪಿ.ಸಿ ಯಡಿ ಶಿಕ್ಷೆಯಾಗಿದ್ದರಿಂದ ಇದನ್ನು ಸಾಮಾನ್ಯ ಜನರು ಇದು ಜಾತಿ ಹೆಸರಿನಲ್ಲಿ ಆಗಿರುವ ಅಪರಾಧವೆಂದು ಗ್ರಹಿಸುವುದಕ್ಕಿಂತ ಹೆಚ್ಚಾಗಿ ಇದು ಸಾಮಾನ್ಯ ಅಪರಾಧಗಳಲ್ಲಿ ಒಂದು ಎಂದು ಪರಿಗಣಿಸುವಂತೆ ಮಾಡಿತು.

ಹೇಗೆಂದರೆ ಈ ಪ್ರಕರಣದಲ್ಲಿ ಜಾತಿ ನಿಂದನೆಯನ್ನು ಮತ್ತು ದಲಿತ ಮಹಿಳೆಯ ಗೌರವಕ್ಕೆ ದಕ್ಕೆ ಬರುವಂತಹ ಅಂಶಗಳಾದ ಪ.ಜಾತಿ ಮತ್ತು ಪ.ಪಂಗಡಗಳ ಕಾಯ್ದೆಯ ಕಲಂಗಳಾದ 3,1,(10) ಮತ್ತು 3,1,(11) ಇತ್ಯಾದಿಗಳನ್ನು ನಿಷ್ಕ್ರಿಯಗೂಳಿಸಿ ಶಿಕ್ಷೆಯ ಪ್ರಮಾಣವನ್ನು ಕಡಿಮೆಮಾಡಲಾಯಿತು. ಹೀಗೆ ಈ ಕಾಯ್ದೆಯ ಯಾವುದೇ ಕಲಂಗಳನ್ನು ನ್ಯಾಯಾಂಗ ಗಂಭೀರವೆಂದು ಮತ್ತು ಜಾತಿ ಹೆಸರಿನಲ್ಲಿ ನಡೆದಿರುವ ಕ್ರೌರ್ಯವೆಂದು ಪರಿಗಣಿಸದ ಕಾರಣ ಈ ಕಾಯ್ದೆಯಡಿಯಲ್ಲಿ ಸಂತ್ರಸ್ಥರಿಗೆ ಸಿಗುವ ಪುನರ್ವಸತಿ ಮತ್ತು ಪರಿಹಾರವನ್ನು ಕೂಡ ಈ ಕುಂಟುಂಬದ ಸದ್ಯಸರಿಗೆ ದೊರಕದಂತೆ ಮೊಟುತುಗೊಳಿಸಿತು. ಈ ಎಲ್ಲದಕ್ಕೂ ಮಿಗಿಲಾಗಿ ಈ ಕಾಯ್ದೆಯಲ್ಲಿ ದಾಖಲಾಗುವ ಪ್ರಕರಣಗಳು ಸುಳ್ಳು ಎಂಬ ಹೇಳಿಕೆಯನ್ನು ಪರೋಕ್ಷವಾಗಿ ಸಮಾಜಕ್ಕೆ ಎತ್ತಿ ತೋರಿಸಿತು ಮತ್ತು ಈ ಕಾಯ್ದೆಯನ್ನು ಬಲಹೀನಗೊಳಿಸಿ ಸಮಾಜದಲ್ಲಿ ನಡೆಯುವ ಜಾತಿವ್ಯಸ್ಥೆಯನ್ನು ಭದ್ರಪಡಿಸಲು ತನ್ನ ಜಾತಿ ಮನಃಸ್ಥಿತಿಯನ್ನು ಪ್ರದರ್ಶಿಸುವುದರಲ್ಲಿ ಸಾಕ್ಷಿಯಾಯಿತು.

ದಲಿತ ಮಹಿಳೆ ಸಮಾಜದಲ್ಲಿ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ಮಾಡುವಾಗ ಮತ್ತು ಸಮಾಜದಲ್ಲಿ ನಡೆಯುವ ಅನ್ಯಾಯವನ್ನು ವಿರೋಧಿಸಿದಾಗ ಅವಳು ದಲಿತ ಮಹಿಳೆಯಾಗಿ ಹೆಚ್ಚಿನ ಜಾತಿ ಪ್ರತೀಕಾರವನ್ನು ಪಡೆಯಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ನ್ಯಾಯಾಂಗದ ಜಾತಿ ಮನಃಸ್ಥಿತಿಯ ಪ್ರತಿಕ್ರಿಯೆಯನ್ನು ಇನ್ನೊಂದು ಉದಾಹರಣೆಯಾದ ರಾಜಸ್ಥಾನದ ಬನಾವರಿ ದೇವಿ ಪ್ರಕರಣದಲ್ಲಿ ನೋಡುವುದಾದರೇ, ಬನವಾರಿ ದೇವಿಯ ಪ್ರಕರಣ ಸ್ವಲ್ಪ ಹಳೆಯದು ಎನಿಸಿದರೂ ಅದರಲ್ಲಿನ ಜಾತಿ ದ್ವೇಷ ಮತ್ತು ನ್ಯಾಯಾಂಗದ ಜಾತಿ ಮನಸ್ಥಿತಿ ದಲಿತ ಮಹಿಳೆಯರಿಗೆ ಆದ ಅನ್ಯಾಯ ಮನಸ್ಸಿನಲ್ಲಿ ಇನ್ನುವರೆಗೂ ಮಾಸದ ಘಾಯವಾಗಿರುತ್ತದೆ.

ಬನವಾರಿದೇವಿ ರಾಜಸ್ಥಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿದ್ದಳು. ಸರ್ಕಾರದ ಅದೇಶದಂತೆ ಬಾಲ್ಯ ವಿವಾಹ ಪದ್ಧತಿಯನ್ನು ನೀರ್ಮೂಲ ಮಾಡುವ ಜವಬ್ದಾರಿಯನ್ನು ಹೊತ್ತು ಗ್ರಾಮದಲ್ಲಿ ನಡೆಯುತ್ತಿದ್ದ ಬಾಲ್ಯ ವಿವಾಹವನ್ನು ತಡೆದಳು. ಇದಕ್ಕೆ ಪ್ರತೀಕಾರವೆನ್ನುವಂತೆ ಅಲ್ಲಿನ ಗುಜ್ಜಾರ ಸಮುದಾಯದವರು ಅವಳ ಮೇಲೆ ಸಮೂಹಿಕ ಅತ್ಯಾಚಾರವನ್ನು ಎಸಗಿದರು. ಪೊಲೀಸರು ಅವಳ ಪ್ರಕರಣವನ್ನು ದಾಖಲಿಸಿ ಅಪರಾಧಿಗಳನ್ನು ಬಂಧಿಸಲು ಮೊದಲ ಹಂತದಲ್ಲಿ ನಿರಾಕರಿಸಿದರಾದರೂ ಕೆಲವು ಮಹಿಳಾ ಸಂಘಟನೆಗಳ ಮೂಲಕ ಈ ಪ್ರಕರಣ ದಾಖಲಾಯಿತ್ತು, ಆದರೆ ಅಲ್ಲಿನ ನ್ಯಾಯಾಂಗ ಅವಳಿಗೆ ನ್ಯಾಯ ದೊರಕಿಸಿಕೊಡುವುದರ ಬದಲು ಅಪರಾಧಿಗಳನ್ನು ಬಿಡುಗಡೆ ಮಾಡಿದ್ದು ಮಾತ್ರವಲ್ಲದೇ ತೆರೆದ ನ್ಯಾಯಾಲಯದಲ್ಲಿ "ಬನವಾರಿ ದೇವಿ ದಲಿತ ಮಹಿಳೆ ಮತ್ತು ಮಧ್ಯವಯಸ್ಕಳು ಇಂತವಳನ್ನು ಈ ಮರ್ಯಾದಸ್ಥ ಮೇಲ್ಜಾತಿಯ ಪುರುಷರು ಅತ್ಯಾಚಾರ ಮಾಡಿರುವುದಿಲ್ಲ"ವೆಂದು ಬಹಿರಂಗವಾಗಿ ಜಾತಿ ನಿಂದನೆ ಮತ್ತು ಅವಳ ಗೌರವಕ್ಕೆ ಧಕ್ಕೆ ಬರುವಂತಹ ಮಾತುಗಳನ್ನಾಡಿದರು. ಈ ನ್ಯಾಯಧೀಶರ ಈ ಹೇಳಿಕೆಯ ಮೇಲೆ ಯಾವ ಕಾಯ್ದೆ ಕಾನೂನು ಕೂಡ ಕ್ರಮ ವಹಿಸಲಿಲ್ಲ.

ಅದರೂ ಈ ಕೆಳ ನ್ಯಾಯಾಂಗದ ತೀರ್ಪನ್ನು ಪ್ರಶ್ನಿಸಿ ಉಚ್ಚನ್ಯಾಯಲಕ್ಕೆ ಪುನಃ ಮನವಿಯನ್ನು ಮಾಡಿಕೊಂಡಾಗ ಉಚ್ಚ ನ್ಯಾಯಲಯವು ಬನವಾರಿ ದೇವಿಯ ಮೇಲಿನ ಅತ್ಯಾಚಾರದ ಕ್ರೌರ್ಯತೆಗೆ ಜಾತಿಯ ಲೇಪನವಿತ್ತು. ಅವಳು ಶಿಕ್ಷಿತ ದಲಿತ ಮಹಿಳೆಯಾಗಿ ಸ್ವಲ್ಪ ಕಾನೂನಿನ ಅರಿವನ್ನು ಪಡೆದವಳಾಗಿದ್ದುದರಿಂದ ಅವಳಿಗೆ ಸಮಾ

[illegible] ಮಾಡುತ್ತಿರುವ ಶಕ್ತಿ [illegible] ಪ್ರಾನ್ಸ್ ಮತ್ತು ಕೆಳ ನ್ಯಾಯಾಲಯದ ತರೆದ ನ್ಯಾಯಾಲಯದಲ್ಲಿ [illegible] ಜಾತಿ ನಿಂದನೆಯನ್ನು, ಉಚ್ಚನ್ಯಾಯಾಂಗ [illegible] ಈ ಅಪರಾಧ [illegible] ಅಪರಾಧವೆಂದು ಹೇಳಿಕೆಯನ್ನು [illegible] ಅಪರಾಧಿಗಳನ್ನು ಬಿಡುಗಡೆ ಮಾಡಿತು.

ಮಹಿಳಾ ಸಂಘಟನೆಗಳು ಕೂಡ ಇದನ್ನು ಸಾಮಾನ್ಯ ಮಹಿಳೆಯ ಸಮಸ್ಯೆಯಾಗಿ ಗುರುತಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ದುಡಿಯುವ ಮಹಿಳೆಗೆ ಕೆಲಸದ ಸ್ಥಳದಲ್ಲಿ ರಕ್ಷಣೆಯನ್ನು ನೀಡಬೇಕು ಮತ್ತು ಅವಳ ಘನತೆಯಿಂದ ಜೀವಿಸುವ ಹಕ್ಕನ್ನು ರಕ್ಷಿಸಬೇಕೆಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಮನವಿಯನ್ನು ಸಲ್ಲಿಸಿದರ ಪರಿಣಾಮವಾಗಿ 1997ರಂದು 'ಕೆಲಸದ ಸ್ಥಳದಲ್ಲಿ ಮಹಿಳೆಯರನ್ನು ಲೈಗಿಂಕ ಕಿರುಕುಳದಿಂದ ರಕ್ಷಿಸಬೇಕೆಂಬ ಆದೇಶ ಇಂದಿಗೂ ಜಾರಿಯಲ್ಲಿದೆ.

ಈ ಆದೇಶವು ದಲಿತ ಮಹಿಳೆಯರಿಗಿಂತ ಹೆಚ್ಚಾಗಿ ಸಾಮಾನ್ಯ ಮಹಿಳೆಯರಿಗೆ ಹೆಚ್ಚಿನ ಲಾಭವನ್ನು ತಂದು ಕೊಟ್ಟಿತು. ಆದೇಶವು ಅಸಂಘಟಿತ ವಲಯಗಳಲ್ಲಿ ಕೂಲಿ ಕಾರ್ಮಿಕಳಾಗಿ ದುಡಿಯುತ್ತಿರುವ 80% ದಲಿತ ಮಹಿಳೆಯರಿಗಿಂತ ಸಾಮಾನ್ಯ ಮಹಿಳೆಯರಿಗೆ ಹೆಚ್ಚಿನ ಲಾಭವಾಯಿತು. ದಲಿತ ಮಹಿಳೆಯ ದುಡಿಯುತ್ತಿರುವ ಸ್ಥಳದಲ್ಲಿ ಮಾಲಿಕರು ತಮ್ಮ ಜಾತಿ ಆಧಿಕಾರದಿಂದ ಅವಳ ಜಾತಿ ಬಡತನ ಅನಕ್ಷರತೆಯನ್ನು ಬಳಸಿಕೊಂಡು ಅವಳನ್ನು ಲೈಗಿಂಕ ಗುಲಾಮಳನ್ನಾಗಿ ದುಡಿಸಿಕೊಳ್ಳುತ್ತಿದ್ದಾರೆ. ಅವಳಿಗೆ ಬೆದರಿಕೆಯನ್ನು ಮತ್ತು ಆಸೆ ಆಮಿಷಗಳನ್ನು ಒಡ್ಡಿ ಅತ್ಯಾಚಾರ ಮಾಡಿ ಅವಳ ಗೌರವಕ್ಕೆ ಧಕ್ಕೆ ತರುವಂತಹ ಲೈಗಿಂಕ ಕಿರುಕುಳವನ್ನು ಮತ್ತು ಅಸ್ಪೃಶ್ಯತೆಯನ್ನು ಜಾರಿಗೊಳಿಸಿರುವುದನ್ನು ಗುರುತಿಸಿಲ್ಲ.

ಕನಿಷ್ಟ ಪಕ್ಷ ಈ ಅದೇಶವು ಪ.ಜಾತಿ ಮತ್ತು ಪ.ಪಂಗಡದ ದೌರ್ಜನ್ಯ ತಡೆಕಾಯ್ದೆಯಲ್ಲಿ ದಲಿತ ಮಹಿಳೆಯ ಗೌರವಕ್ಕೆ ದಕ್ಕೆ ತರುವಂತಹ ಕಲಂಗಳಾದ 3.1(11)ರ (ಪ.ಜಾತಿ ಮತ್ತು ಪ.ಪಂಗಡದ ಮಹಿಳೆಯ ಮಾನಕ್ಕೆ ಅಗೌರವವನ್ನುಂಟು ಮಾಡುವ ಅಥವಾ ಅವಳ ಮೇಲೆ ಲಜ್ಜಾಭಂಗ ಮಾಡುವ ಉದ್ದೇಶದಿಂದ. ಅವಳ ಮೇಲೆ ಹಲ್ಲೆ ಮಾಡಿದರೇ ಅಥವಾ ಬಲ ಪ್ರಯೋಗಿಸಿದರೇ) ಮತ್ತು 3.1(12)(ಪ.ಜಾತಿ ಮತ್ತು ಪ.ಪಂಗಡಕ್ಕೆ ಸೇರಿದ ಮಹಿಳೆಯ ಮನಸ್ಸಿನ ಮೇಲೆ ಪ್ರಭಾವ ಬೀರುವ ಸ್ಥಾನದಲ್ಲಿದ್ದು ಮತ್ತು ಯಾವುದಕ್ಕೆ ಅವಳು ಅನ್ಯಥಾ ಒಪ್ಪಿಕೊಳ್ಳುತ್ತಿರಲಿಲ್ಲವೋ ಅದಕ್ಕಾಗಿ ಅವಳನ್ನು ಲೈಗಿಂಕವಾಗಿ ಶೋಷಿಸಲು ಆ ಸ್ಥಾನವನ್ನು ಬಳಸಿದರೆ) ಈ ಕಾಯ್ದೆಯಡಿಯಲ್ಲಿ ಶಿಕ್ಷಿಸಲಾಗುತ್ತದೆ, ಎಂದು ಕೂಡ ತೋರಿಸಲಿಲ್ಲ. ಈ ರೀತಿಯಾಗಿ ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವ ದಲಿತ ಮಹಿಳೆಯರಿಗೇ ಈ ಆದೇಶದಿಂದ ಯಾವ ಪ್ರಯೋಜನವು ಇಲ್ಲದಾಗಿದೆ.

ಇಂದು ದಲಿತ ಮಹಿಳೆಯರ ಮೇಲೆ ಪ್ರತಿ 18 ನಿಮಿಷಕ್ಕೊಂದು ದಲಿತ ಮಹಿಳೆಯ ಮೇಲೆ ಅತ್ಯಚಾರವಾಗುತ್ತದೆಂದು ನ್ಯಾಷನಲ್ ಕ್ರೈಮ್ ಬ್ಯೂರೋ ತಿಳಿಸುತ್ತದೆ. ಈ ಪ್ರಕರಣಗಳಲ್ಲಿ ಅರ್ಧದಷ್ಟು ಪ್ರಕರಣಗಳು ಬೆಳಕಿಗೆ ಬರುತ್ತವೆ, ಬೆಳಕಿಗೆ ಬಂದ ಪ್ರಕರಣಗಳಲ್ಲಿ ಬೆರಳಣಿಕೆಯಷ್ಟು ಪ್ರಕರಣಗಳಲ್ಲಿ ಕೇಸು ನೊಂದಾಣಿ ಆಗುತ್ತವೆ. ನೊಂದಾಣಿಯಾದ ಪ್ರಕರಣಗಳಲ್ಲಿ ಶೇಕಡಾ 2% ಮಾತ್ರ ಶಿಕ್ಷೆಯಾಗುತ್ತದೆ. ಶಿಕ್ಷೆಯಾದ ಪ್ರಕರಣಗಳನ್ನು ನೋಡುವಾಗ 1% ಮಾತ್ರ ಪ.ಜಾತಿ ಮತ್ತು ಪ.ಪಂಗಡದವರ ದೌರ್ಜನ್ಯ ಕಾಯ್ದೆಯಡಿಯಲ್ಲಿ ಆಗಿರುತ್ತವೆ. ಈ ಪ್ರಕರಣಗಳಲ್ಲಿ ಶಿಕ್ಷೆಯಾಗಬೇಕಾದರೇ ಮಲೀನ ಊದಾಹರಣೆಗಳಲ್ಲಿ ತಿಳಿಸಿದಂತೆ ದಲಿತ ಸಂಘಟನೆಗಳ ಮತ್ತು ಮಾನವ ಹಕ್ಕುಗಳ ಹೋರಾಟಗಾರರ ತೀವ್ರ ಹೋರಾಟದ ಫಲವಾಗಿರುತ್ತದೆ ಎಂಬುವುದು ಸತ್ಯ.

ದಲಿತರ ದೌರ್ಜನ್ಯದ ಪ್ರಕರಣಗಳಲ್ಲಿ ಪ.ಜಾತಿ ಮತ್ತು ಪ.ಪಂಗಡದವರ ದೌರ್ಜನ್ಯ ತಡೆ ಕಾಯ್ದೆಯಡಿಯಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಾದೆ ಇರುವುದಕ್ಕೆ ಮುಖ್ಯ ಕಾರಣಗಳನ್ನು ನಾವು ಗಮನಿಸುವ ಮೊದಲು ದಲಿತರ ಮೇಲೆ ದೌರ್ಜನ್ಯಗಳು ಯಾಕಾಗುತ್ತವೆ ಎಂಬುವುದನ್ನು ಸ್ಪಷ್ಟವಾಗಿ ನಾವು ಇಲ್ಲಿ ತಿಳಿದುಕೊಳ್ಳಬೇಕಾಗುತ್ತದೆ. ದಲಿತರು ತಮ್ಮ ಸಂವಿಧಾನಬದ್ಧ ಮೂಲಭೂತ ಹಕ್ಕುಗಳಾದ ಜಾತಿ ವಿರುದ್ದದ ಹಕ್ಕು, ಶಿಕ್ಷಣದ ಹಕ್ಕು, ವಸತಿ ಮತ್ತು ಉದ್ಯೋಗದ ಹಕ್ಕು ಇತ್ಯಾದಿಗಳನ್ನು ಪಡೆಯಲು ಪ್ರಯತ್ನಿಸಿ ತಾವು ಎಲ್ಲರಂತೆ ಘನತೆಯಿಂದ ಬದುಕಲು ಪ್ರಯತ್ನಿಸುವುದು ದೌರ್ಜನ್ಯಕ್ಕೆ ಮೂಲ ಕಾರಣವಾಗುತ್ತದೆ. ಇಂತಹ ದೌರ್ಜನ್ಯಗಳನ್ನು ದಲಿತರು ಮೌನವಾಗಿ ಸಹಿಸದೇ ಪ್ರಶ್ನಿಸಿದರೇ, ದೌರ್ಜನ್ಯದ ರೂಪಗಳು ಅಮಾನುಷಕರ ರೂಪವನ್ನು ಪಡೆಯುತ್ತದೆ. ಈ ತೀವ್ರತೆ ಅವರು ಅರ್ಥಿಕವಾಗಿ ಶೈಕ್ಷಣಿಕವಾಗಿ ಎಷ್ಟೂ ಬಲಹೀನರಾಗಿರುತ್ತಾರೋ ಅಷ್ಟು ಕ್ರೂರವಾಗಿರುತ್ತದೆ ಎಂಬುವುದನ್ನು ನಾವೆಲ್ಲರೂ ಅರಿಯಬೇಕು.

ಇಂದು ದಲಿತ ಮಹಿಳೆಯರ ಮೇಲೆ ಪ್ರತಿ18 ನಿಮಿಷಕ್ಕೊಂದು ದಲಿತ ಮಹಿಳೆಯ ಮೇಲೆ ಅತ್ಯಚಾರವಾಗುತ್ತದೆಂದು ನ್ಯಾಷನಲ್ ಕ್ರೈಮ್ ಬ್ಯೂರೋ ತಿಳಿಸುತ್ತದೆ. ಈ ಪ್ರಕರಣಗಳಲ್ಲಿ ಅರ್ಧದಷ್ಟು ಪ್ರಕರಣಗಳು ಬೆಳಕಿಗೆ ಬರುತ್ತವೆ, ಬೆಳಕಿಗೆ ಬಂದ ಪ್ರಕರಣಗಳಲ್ಲಿ ಬೆರಳಣಿಕೆಯಷ್ಟು ಪ್ರಕರಣಗಳಲ್ಲಿ ಕೇಸು ನೊಂದಾಣಿ ಆಗುತ್ತವೆ. ನೊಂದಾಣಿಯಾದ ಪ್ರಕರಣಗಳಲ್ಲಿ ಶೇಕಡಾ 2% ಮಾತ್ರ ಶಿಕ್ಷೆಯಾಗುತ್ತದೆ.

ಇನ್ನು ಈ ಪ್ರಕರಣಗಳಲ್ಲಿ ಯಾಕೆ ನ್ಯಾಯಾಂಗದಲ್ಲಿ ನ್ಯಾಯದೊರೆಯುವುದಿಲ್ಲ ಎಂಬುವುದಕ್ಕೆ ಕಾರಣಗಳನ್ನು ಹುಡುಕುವಾಗ ದೌರ್ಜನ್ಯದ ಪ್ರಕರಣದಲ್ಲಿರುವ ಸಾಕ್ಷಿಗಳಿಗೆ ಮತ್ತು ಪಿರ್ಯಾದುದಾರರಿಗೆ ಮತ್ತು ಅವರ ಕುಟುಂಬಗಳಿಗೆ ಜೀವ ಬೆದರಿಕೆ ಬರುವುದು, ಕಾನೂನಿನ ಪ್ರಕಾರ ಇಂತಹವರಿಗೆ ರಕ್ಷಣೆ ನೀಡದಿರುವುದು, ಈ ಕಾಯ್ದೆಯ ಪ್ರಕಾರ ದಲಿತರಿಗೆ ಕಾನೂನಿನ ಅರಿವನ್ನು ಮೂಡಿಸದಿರುವುದು ಮತ್ತು ಕೆಲವೊಮ್ಮೆ ಮೇಲ್ಜಾತಿಯ ಜನರ ದೌರ್ಜನ್ಯವನ್ನು ಪ್ರಶ್ನಿಸುವ ಮಾನವ ಸಂಪನ್ಮೂಲವಾದ ಶಿಕ್ಷಣ, ಹಣ, ಅಧಿಕಾರ, ಉದ್ಯೋಗದ ಕೊರತೆ ದಲಿತರಿಗಿರುವುದು. ಈ ನೈಜ ಕಾರಣಗಳನ್ನು ಮೇಲ್ಜಾತಿಯ ಜನರು ಮುಚ್ಚಿ ಹಾಕಿ ಈ ಕಾಯ್ದೆಯ ಅಂಶವಾದ "ಪರಿಹಾರ" ಮತ್ತು "ಪುನರ್ವಸತಿ" ಎಂಬ ಅಂಶಗಳನ್ನು ಮತ್ತು ನ್ಯಾಯಾಂಗದಲ್ಲಿ ನ್ಯಾಯ ದೊರೆಯದೇ ಅಪರಾಧಿಗಳಿಗೆ ಬಿಡುಗಡೆಯಾಗುತ್ತಿರುವ ಅಂಶಗಳನ್ನು ತಮ್ಮ ಹಿತಾಸಕ್ತಿಗೆ ತಕ್ಕಂತೆ ಬಳಸಿಕೊಳ್ಳುತ್ತಿರುವ ಪ್ರಮುಖ ಅಂಶಗಳಲ್ಲಿ ದಲಿತ ಮುಖಂಡರು ಹಣಕ್ಕಾಗಿ ಸುಳ್ಳು ಕೇಸನ್ನು ಹಾಕುತ್ತಾರೆ ಎಂಬುವುದು, ಈ ಅಂಶವನ್ನು ನಾವು ಎರಡು ರೀತಿಯಲ್ಲಿ ಪರಿಶೀಲಿಸುವುದು ಮುಖ್ಯ.

ಮೊದಲನೇಯದಾಗಿ:

ಈ ಕಾಯ್ದೆಯ ಪ್ರಕಾರ ದೌರ್ಜನ್ಯದಲ್ಲಿ ಸಂತ್ರಸ್ಥರಾದ ವ್ಯಕ್ತಿಗಳಿಗೆ ಮತ್ತು ಕುಟುಂಬಗಳಿಗೆ ಪರಿಹಾರ ಧನವನ್ನು ಮತ್ತು ಪುನರ್ವಸತಿಯನ್ನು ಕಲ್ಪಿಸುವುದು. ಈ ಪರಿಹಾರಧನವನ್ನು ಪ್ರಕರಣ ದಾಖಲಾತಿಯಾದಗ ಶೇಕಡಾ 25% (ಈ ಕಾಯಿದೆಯಡಿಯಲ್ಲಿ ಅಪರಾಧಗಳಿಗೆ ತಕ್ಕಂತೆ ಇರುತ್ತದೆ)ದೋಷರೋಪಣ ಪಟ್ಟಿಯನ್ನು ಹಾಕಿದಾಗ 25% ಮತ್ತು ಪ್ರಕರಣ ಇತ್ಯಾರ್ಥವಾಗಿ ಅಪರಾಧಿಗಳಿಗೆ ಶಿಕ್ಷೆಯಾದಗ 50% ಪರಿಹಾರ ಧನವನ್ನು ನೀಡಬೇಕೆಂದು ಈ ಕಾಯಿದೆ ಹೇಳುತ್ತದೆ.

ಆದರೆ, ಈ ಕಾಯಿದೆಯಡಿಯಲ್ಲಿ ಹೆಚ್ಚಿನ ಪ್ರಕರಣಗಳು ಪೋಲಿಸ್ ಸ್ಟೇಷನ್ನಲ್ಲಿ ದಾಖಲಾಗುವುದಿಲ್ಲ. ದಾಖಲಾತಿಯಾದ ಕೆಲವೇ ಕೆಲವು ಕೇಸುಗಳಲ್ಲಿ ಪೋಲಿಸರು (ಬಿ ರಿಪೋರ್ಟ್ ಹಾಕುತ್ತಾರೆ ಅಂದರೆ ದೌರ್ಜನ್ಯ ನಡೆದಿಲ್ಲ

ವೆಂದು) ದೋಷರೋಪಣ ಪಟ್ಟಿಯನ್ನು ಸಲ್ಲಿಸಿದರು ನ್ಯಾಯಾಂಗದಲ್ಲಿ ಹಲವರು ಕಾರಣಗಳಿಂದ ಅರೋಪಿಗಳಿಗೆ ಶಿಕ್ಷೆಯಾಗುವುದಿಲ್ಲ. ಇನ್ನಿ ಶಿಕ್ಷೆಯಾದ 2% ಆ ಪ್ರಕರಣಗಳಲ್ಲಿಯೂ ಕೂಡ ಸಂತ್ರಸ್ಥರಿಗೆ ಪರಿಹಾರ ಮತ್ತು ಪುನರ್ವಸತಿ ದೂರೆತಿರುವುದಿಲ್ಲ. ಹೀಗಾಗಿ ದಲಿತರು ಈ ಕಾಯ್ದೆಯಡಿ ಹಣಕ್ಕಾಗಿ ಮತ್ತು ಪರಿಹಾರಕ್ಕಾಗಿ ಸುಳ್ಳು ಕೇಸು ಹಾಕುತ್ತರೆಂಬುವುದು ವಾಸ್ತವಕ್ಕೆ ದೂರದ ಸಂಗತಿಯಾಗಿದೆ.

ಇನ್ನು ದಲಿತರು ಹಣಕ್ಕಾಗಿ ಮೇಲ್ಜಾತಿಯವರೊಡನೆ ರಾಜಿಯಾಗುತ್ತಾರೆ, ಅವರು ಸಾರಾಯಿಗಾಗಿ ರಾಜಿ ಮಾಡಿಕೊಳ್ಳುತ್ತಾರೆ ಎಂಬುವುದನ್ನು ನೋಡುವಾಗ, ಭಾರತದಲ್ಲಿ 80% ದಲಿತರು ಶ್ರಮ ಜೀವಿಗಳು ಮತ್ತು ಕಾರ್ಮಿಕ ವರ್ಗಕ್ಕೆ ಸೇರಿದವರು. ಇವರು ಬಹುತೇಕ ಮೇಲ್ಜಾತಿಯ ಜನರ ಹಿಡಿತದಲ್ಲಿ ಕೆಲಸ ಮಾಡಿಕೊಂಡು ಬದುಕುತ್ತಿರುವವರು. ಇವರು ತಮ್ಮ ಹಳ್ಳಿಗಳಲ್ಲಿ ಶಾಂತಿಯುತವಾಗಿ ಬದುಕಲು ಆಸೆ ಪಡುವವರು. ಮೇಲ್ಜಾತಿಯ ಜನರ ದೌರ್ಜನ್ಯವನ್ನು ದಲಿತರು ಪ್ರತಿಭಟಿಸುವಾಗ ಅವರಿಗೆ ಊರಿನ ಮೇಲ್ಜಾತಿಯ ಜನರಿಂದ ದೌರ್ಜನ್ಯ ಬಹಿಷ್ಕಾರ ಮತ್ತು ಅವರ ಊಟಕ್ಕೆ ಮತ್ತು ಕುಡಿಯುವ ನೀರಿಗೂ ಸಂಚಕಾರ ಬರುವುದು ಸಹಜ. ಇಂಥ ಅನಿವಾರ್ಯ ಸಮಯದಲ್ಲಿ ಅವರು ಮೇಲ್ಜಾತಿಯವರೊಡನೆ ಮೇಲ್ಜಾತಿಯ ಜನರೊಡನೆ ದ್ವೇಷ ಬೆಳೆಸಿಕೊಂಡು ಊರಿನಲ್ಲಿ ಬದುಕುವುದು ದುಸ್ತರವಾಗುತ್ತದೆ. ಈ ಅನಿವಾರ್ಯ ಪರಿಸ್ಥಿತಿಗಳಲ್ಲಿ ರಾಜಿಯಾಗದೇ ಬೇರೆ ಮಾರ್ಗವಿರುವುದಿಲ್ಲ ಒಂದು ವೇಳೆ ಅವರು ರಾಜಿಗೆ ಒಪ್ಪದಿದ್ದಾಗ ಅವರು ಇನ್ನೊಂದು ಮಾರಣಾಂತಿಕ ದೌರ್ಜನ್ಯಕ್ಕೆ ಸಿದ್ದರಾಗಿರಬೇಕಾಗಿರುತ್ತದೆ ಎಂಬುವುದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಇಂತಹ ಸಂದರ್ಭಗಳಲ್ಲಿ ರಾಜಿ ಮಾಡಲು ಕರೆಯುವ ಮುಖಂಡರು ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ಬದಿಗಿಟ್ಟು ದಲಿತರಿಗೆ ನಿಜವಾದ ನ್ಯಾಯ ದೊರಕಿಸಬೇಕು ಮತ್ತು ತಮ್ಮತಮ್ಮ ಹಳ್ಳಿಗಳಲ್ಲಿ ಜಾತಿ ಪದ್ಧತಿ ಜಾರಿಯಾದಂತೆ ನೋಡಿಕೊಳ್ಳಬೇಕೆಂಬುವುದನ್ನು ಗುರಿಯಾಗಿ ರಾಜಿ ಮಾಡಿಸಿದರೆ, ಅದಕ್ಕೆ ಒಂದು ಅರ್ಥವಿರುತ್ತದೆ ಅದಕ್ಕೆ ಬದಲಾಗಿ ಅಪರಾಧಿಗಳಿಗೆ ಅನುಕೂಲವಾಗುವಂತೆ ದಲಿತರಿಗೆ ಪರಿಹಾರವೆಂತಲೋ ಅಥವ ಅಪರಾಧಿಗಳಿಗೆ ದಂಡವೆಂತಲೋ ನಿಗದಿ ಮಾಡಿದ ಹಣವನ್ನು ದಲಿತರಿಗೆ ಕೊಟ್ಟಾಗ ಸಾಮಾನ್ಯ ಜನರಲ್ಲಿ ದಲಿತರು ಹಣಕ್ಕಾಗಿ ರಾಜಿಯಾಗುತ್ತಾರೆ ಎಂಬ ಸುಳ್ಳು ಅಂಶವನ್ನು ಎದ್ದು ಕಾಣುವಂತೆ ಮಾಡುತ್ತದೆ.

ರಾಜಿ ಮಾಡಿಸುವ ಮುಂಖಡರು ಮತ್ತು ಅಧಿಕಾರಿಗಳು ದೌರ್ಜನ್ಯಗಳು ನಡೆದಾಗ ರಾಜಿ ಮತ್ತು ಶಾಂತಿ ಸಭೆಗಳನ್ನು ನಡೆಸುವ ಉದ್ದೇಶ, ಜಾತಿ ಪದ್ಧತಿಯನ್ನು ತೆಗೆದು ಹಾಕಬೇಕೆ ಹೊರತು ಅಪರಾಧಿಗಳನ್ನು ರಾಜಿ ಅಥವ ಶಾಂತಿ ಸಭೆಯ ಮೂಲಕ ಶಿಕ್ಷೆಯಿಂದ ಮುಕ್ತಗೊಳಿಸುವ ದುರುದ್ದೇಶದಿಂದಲ್ಲ. ಈ ಕಾಯ್ದೆಯಲ್ಲಿ ದೌರ್ಜನ್ಯಕ್ಕೊಳಗಾದವರು ನ್ಯಾಯಾಂಗದ ಮೂಲಕ ನ್ಯಾಯ ಪಡೆಯಬೇಕು. ದೌರ್ಜನ್ಯ ನಡೆವಾಗ ರಾಜಿ ಮಾಡುವ ಅಧಿಕಾರಿ ಈ ಕಾಯ್ದೆಯಲ್ಲಿ ಯಾರಿಗೂ ಇಲ್ಲ ಎಂಬ ಅಂಶವನ್ನು ದಲಿತರು ಮನಗಾಣಬೇಕು.

ಇನ್ನು ಎಷ್ಟೋ ಪ್ರಕರಣಗಳಲ್ಲಿ ದಲಿತರು ಮೇಲ್ಜಾತಿಯ ಜನರೊಡನೆ ರಾಜಿಗೆ ಒಪ್ಪದಿದ್ದಾಗ ದೌರ್ಜನ್ಯ ನಡೆಸಿದ ಮೇಲ್ಜಾತಿಯ ಜನರು ದೌರ್ಜನ್ಯಗೊಳಗಾದವರ ಮೇಲೆ ಸುಳ್ಳು ಕೇಸು ದಾಖಲಿಸುತ್ತಾರೆ (ಕೌಂಟರ್ ಕೇಸು) ಇಂತಹ ಪರಿಸ್ಥಿತಿಯಲ್ಲಿ ಕಾನೂನಿನ ಅರಿವಿಲ್ಲದ ದಲಿತರು ಪೋಲೀಸ್ ಮತ್ತು ನ್ಯಾಯಾಂಗದ ಹಾವ ಭಾವಗಳಿಗೆ ಭಯಪಟ್ಟು ಮತ್ತು ತಮ್ಮ ಕೂಲಿಯನ್ನು ಬಿಟ್ಟು ಕೋರ್ಟುಗಳಿಗೆ ಅಲೆದಾಡದೆ ದೌರ್ಜನ್ಯ ನಡೆಸಿದ ಮೇಲ್ಜಾತಿಯರೊಡನೆ ರಾಜಿಯಾಗಿ ತಮ್ಮ ಮೇಲೆ ಹಾಕಿದ ಕೇಸುಗಳಿಂದ ಬಿಡುಗಡೆಯಾಗುವಂತೆ, ನ್ಯಾಯಾಂಗ ವಿಚಾರಣೆ ಸಮಯದಲ್ಲಿ ಉದ್ದೇಶಪೂರ್ವಕವಾಗಿ ಅರೋಪಿಗಳ ಪರವಾಗಿ ಪ್ರತಿಕೂಲ ಸಾಕ್ಷಿಗಳಾಗಿ ಬದಲಾಗುವಂತೆ ಅವರಿಗೆ ತಿಳಿಸಿ ಕೊಡುತ್ತಾರೆ. ಅನೇಕ ಸಾರಿ ಸಾಕ್ಷಿಗಳಿಗೆ ಮೇಲ್ಜಾತಿಯವರಿಂದ ಅವರಿಗೆ ಮತ್ತು ಅವರ ಕುಟುಂಬದ ಸದ್ಯಸರಿಗೆ ಜೀವ ಬೆದರಿಕೆ ಬರುವುದರಿಂದ ಅಪರಾಧಿಗಳಿಗೆ ಶಿಕ್ಷೆಯಾಗದಂತೆ ಪ್ರತಿಕೂಲ ಸಾಕ್ಷಿಗಳಾಗಿ ಬದಲಾಗುತ್ತಾರೆ.

ದಲಿತರ ದೌರ್ಜನ್ಯದ ಪ್ರಕರಣಗಳಲ್ಲಿ ಪ.ಜಾತಿ ಮತ್ತು ಪ.ಪಂಗಡದವರ ದೌರ್ಜನ್ಯ ತಡೆ ಕಾಯ್ದೆಯಡಿಯಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಾದೆ ಇರುವುದಕ್ಕೆ ಮುಖ್ಯ ಕಾರಣಗಳನ್ನು ನಾವು ಗಮನಿಸುವ ಮೊದಲು ದಲಿತರ ಮೇಲೆ ದೌರ್ಜನ್ಯಗಳು ಯಾಕಾಗುತ್ತವೆ ಎಂಬುವುದನ್ನು ಸ್ಪಷ್ಟವಾಗಿ ನಾವು ಇಲ್ಲಿ ತಿಳಿದುಕೊಳ್ಳಬೇಕಾಗುತ್ತದೆ. ದಲಿತರು ತಮ್ಮ ಸಂವಿಧಾನಬದ್ದ ಮೂಲಭೂತ ಹಕ್ಕುಗಳಾದ ಜಾತಿ ವಿರುದ್ದದ ಹಕ್ಕು, ಶಿಕ್ಷಣದ ಹಕ್ಕು, ವಸತಿ ಮತ್ತು ಉದ್ಯೋಗದ ಹಕ್ಕು ಇತ್ಯಾದಿಗಳನ್ನು ಪಡೆಯಲು ಪ್ರಯತ್ನಿಸಿ ತಾವು ಎಲ್ಲರಂತೆ ಘನತೆಯಿಂದ ಬದುಕಲು ಪ್ರಯತ್ನಿಸುವುದು ದೌರ್ಜನ್ಯಕ್ಕೆ ಮೂಲ ಕಾರಣವಾಗುತ್ತದೆ.

ಇಂತಹ ಸಮಯದಲ್ಲಿ ಈ ಕಾಯಿದೆಯಡಿ ದಾಖಲಾದ ಪ್ರಕರಣಗಳಲ್ಲಿ ಶಿಕ್ಷೆಯಾಗದೇ ಅಪರಾಧಿಗಳು ಬಿಡುಗಡೆಯನ್ನು ಹೊಂದುತ್ತಾರೆ. ಹೀಗೆ ನ್ಯಾಯಾಂಗದಲ್ಲಿ ದಲಿತರ ಪರವಾಗಿ ದೌರ್ಜನ್ಯದ ಪ್ರಕರಣಗಳಲ್ಲಿ ತನಿಖೆ ನಡೆಸಬೇಕಾಗಿರುವ ಪೊಲೀಸ್ ಅಧಿಕಾರಿಗಳು ಅವರ ಪರವಾಗಿ ವಾದಿಸಬೇಕಾಗಿರುವ ಸರ್ಕಾರಿ ಅಯೋಜಕರು ದಲಿತರ ಪರವಾಗಿ ಅರಿವಿಗೆ ಸೂಕ್ತ ಮಾರ್ಗದರ್ಶನ ಮತ್ತು ಬೆಂಬಲವನ್ನು ನೀಡದೆ ಇರುವ ಕಾರಣ ಎಷ್ಟೊ ಪ್ರಕರಣಗಳು ಬಿದ್ದು ಹೋಗುತ್ತವೆ. ಹೀಗಾಗಿ ಇಂದು ಸಮಾಜದಲ್ಲಿ ಮೇಲ್ಜಾತಿಯ ಜನರಿಂದ ಅಧಿಕಾರಿ ವರ್ಗದವರಿಗೂ ದಲಿತರು ಹಣಕ್ಕಾಗಿ ಸುಳ್ಳು ಕೇಸುಗಳನ್ನು ಹಾಕುತ್ತಾರೆ ಮತ್ತು ರಾಜಿಯಾಗುತ್ತಾರೆ. ಅದು ದಲಿತ ಮಹಿಳೆಯ ವಿಷಯಕ್ಕೆ ಬಂದಾಗ ಅವಳ ನೈತಿಕತೆಯ ಕೂಗು ನ್ಯಾಯಾಲಯಗಳಿಂದ ಹಿಡಿದು ಅಧಿಕಾರಿ ವರ್ಗ ಮತ್ತು ಸಾಮಾನ್ಯ ಜನರವರೆಗೂ ಕೇಳಿ ಬರುತ್ತದೆ.

ಈ ಮೇಲಿನ ಅಂಶಗಳನ್ನು ಪರೀಕ್ಷಿಸಿದ ನಂತರ ಎಲ್ಲರೂ ತಿಳಿದುಕೊಳ್ಳಬೇಕಾಗಿರುವುದು ದಲಿತರ ಮೇಲಿನ ದೌರ್ಜನ್ಯ ಕೇವಲ ಹಣದಿಂದ ಅಥವಾ ಆಮಿಷಗಳಿಂದ ಬಗೆಹರಿಸುವಂತಹದಲ್ಲ. ದಲಿತರು ಬಡವರು ಎನ್ನುವ ಕಾರಣಕ್ಕಾಗಿ ಅವರ ಘನತೆಗೆ ನೈತಿಕತೆಗೆ ಮತ್ತು ಮಾನಕ್ಕೆ ಬೆಲೆಯನ್ನು ನಿಗದಿಪಡಿಸುವ ನೀಚ ಮನುವಾದ ಇದು ಎಂದು ತಿಳಿಯಬೇಕಾಗುತ್ತದೆ.

ಈ ಕಾಯಿದೆಯಲ್ಲಿ ನಿಗದಿ ಪಡಿಸಿರುವ ಪರಿಹಾರ ಮೊತ್ತವು ದೌರ್ಜನ್ಯಕ್ಕೊಳಗಾದ ದಲಿತರಿಗೆ ಪುನರ್ವಸತಿ ನೀಡುವ ಉದ್ದೇಶವೇ ಹೊರತು ದಲಿತರ ದೌರ್ಜನ್ಯಕ್ಕೆ ನಿಗದಿ ಪಡಿಸಿರುವ ಬೆಲೆಯಲ್ಲ ಎಂಬುವುದನ್ನು ಎಲ್ಲರು ಅರಿಯಬೇಕು. ದಲಿತರ ಮೇಲಿನ ದೌರ್ಜನ್ಯದ ತೀವ್ರತೆಗೆ ತಕ್ಕಂತೆ ಬೆಲೆಯನ್ನು ನಿಗದಿ ಪಡಿಸುವುದಾದರೇ, ಇಂದು ದಲಿತರು ವಿಶೇಷವಾಗಿ ದಲಿತ ಮಹಿಳೆಯರು ಹಣಕ್ಕಾಗಿಯೇ ತಮ್ಮ ಪ್ರಾಣ ಮತ್ತು ಮಾನವನ್ನು ನೀಡುತ್ತಿದ್ದರು. ದಲಿತರಿಗೆ ಬೇಕಾಗಿರುವುದು. ಹಣವಲ್ಲ ಬದಲಿಗೆ ಘನತೆಯಿಂದ ಸಮಾಜದಲ್ಲಿ ಜೀವಿಸುವ ಅವಕಾಶವೆನ್ನುವುದನ್ನು ಈ ಕಾಯಿದೆ ಪ್ರೋತ್ಸಾಹಿಸುತ್ತದೆ.

ಈ ರೀತಿ ಈ ಕಾಯಿದೆ [illegible] ಕಂಡುಬರುವ "ಪರಿಹಾರ" ಮತ್ತು "ಪುನರ್ವಸತಿ" ಎನ್ನುವ ಅಂಶಗಳು ನಿಜವಾದ ಅರ್ಥವನ್ನು ಕಳೆದುಕೊಂಡು ದಲಿತರ ದೌರ್ಜನ್ಯಕ್ಕೆ ಮತ್ತು ಅವರ ಮಾನಕ್ಕೆ ಬೆಲೆಯನ್ನು ಕಟ್ಟಿದ ತಪ್ಪು ಅಭಿಪ್ರಾಯ ಜನರಲ್ಲಿ ಮೂಡುತ್ತದೆ ಎಂತಲೇ, ಈ ಕಾಯಿದೆಯನ್ನು ಕಾಂಗ್ರೆಸ್ ಸರ್ಕಾರ ಜಾರಿ ಮಾಡುವಾಗ ಮಾಯಾವತಿಯು ದಲಿತ ಮಹಿಳೆಯಾಗಿ ಈ ಕಾಯಿದೆಯಲ್ಲಿ ಹಣವನ್ನು ಪರಿಹಾರ ಗುರುತಿಸುವುದನ್ನು ನಮ್ಮ ಪಕ್ಷ ತಿರಸ್ಕರಿಸುತ್ತದೆ ಎಂದು ತಿಳಿಸಿ ಎಲ್ಲರ ಟೀಕೆಗೆ ಪಾತ್ರರಾಗಿದ್ದರು. ಅದಕ್ಕಾಗಿ ಇಂದು ಸಮಾಜದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಒಂದೇ ಸ್ವರೂಪವನ್ನು ಪಡೆದು ಇಂಥಹ ರೀತಿಯಲ್ಲಿ ಬೆಳೆದು ಬರುತ್ತವೆ ಎಂದು ಹೇಳಲಾಗುವುದಿಲ್ಲ.

ಇದಕ್ಕೆ ಸಾಕ್ಷಿಯಾಗಿ ಇತ್ತೀಚಿನ ದಿನಗಳಲ್ಲಿ ತೀವ್ರ ವಿವಾದಕ್ಕೆ ಚರ್ಚೆಗೆ ಗುರಿಯಾದ ಎರಡು ಪ್ರಮುಖ ರಾಜಕೀಯ ವ್ಯಕ್ತಿಗಳಾದ ಮಾಯಾವತಿ ಮತ್ತು ಬಹುಗುಣ ಜೋಷಿಯವರ ಹೇಳಿಕೆಯ ಹಿಂದಿನ ಅಂಶಗಳನ್ನು ಸ್ವಲ್ಪ ಸೂಕ್ಷ್ಮವಾಗಿ ನೋಡುವಾಗ ನಮಗೆ ಮೇಲೆ ಚರ್ಚಿಸಿದ ಎಲ್ಲ ಅಂಶಗಳು ನಮಗೆ ಸ್ಪಷ್ಟವಾಗಿ ಕಂಡುಬರುತ್ತವೆ. ಬಹುಗುಣ ಜೋಷಿಯವರ ಹೇಳಿಕೆ ಮೇಲ್ಜಾತಿಯ ಮೇಲ್ವರ್ಗದ ರಾಜಕೀಯ ಉದ್ದೇಶದಿಂದ ದಲಿತ ಸಮುದಾಯವನ್ನು ಅದರಲ್ಲೂ ವಿಶೇಷವಾಗಿ ದಲಿತ ಮಹಿಳೆಯನ್ನು ಅವಮಾನಪಡಿಸುವಂತಾದ್ದಾಗಿದ್ದರೂ ಅದನ್ನು ಯಾವುದೇ ಮಾಧ್ಯಮಗಳು ಪ್ರಚಾರ ಪಡಿಸಲಿಲ್ಲ.

ಇದನ್ನು ಮೇಲ್ಜಾತಿ ಮತ್ತು ಮೇಲ್ವರ್ಗದ ಜನ ಮಾತ್ರವಲ್ಲ ಜವಾಬ್ದಾರಿಯುತ ಸ್ಥಾನದಲ್ಲಿರುವ ಮಾಧ್ಯಮಗಳು ಮತ್ತು ಅಧಿಕಾರಿಗಳು ಈ ವಿಷಯವನ್ನು ರೋಗಗ್ರಸ್ಥ ಜಾತಿ ಮನಸ್ಥಿತಿಯಿಂದ ಹೇಗೆ ಅರ್ಥ ಮಾಡಿಕೊಂಡರು ಚಿತ್ರಿಸಿದರು ಎಂಬುವುದು ಮುಖ್ಯವಾಗಿರುತ್ತದೆ. ಈ ಅಂಶದಲ್ಲಿ ಎರಡು ಪಕ್ಷಗಳ ರಾಜಕೀಯ ಮತ್ತು ವೈಯಕ್ತಿಯ ಹಿತಾಸಕ್ತಿಗಳೇನೆ ಯಿದ್ದರೂ ದಲಿತ ಮಹಿಳಾ ಸಮುದಾಯವನ್ನು ನೋಡುವ ದ್ರಷ್ಟಿಕೋನ ಮನುವಾದದಿಂದ ಬಂದಿರುವುದು ಸತ್ಯವಾಗಿರುತ್ತದೆ ಎಂಬುವುದನ್ನು ನಾವು ಈ ಕೆಳಗಿನ ಅಂಶಗಳಲ್ಲಿ ಕಾಣಬಹುದು.

ಮಾಯಾವತಿಯು ದಲಿತ ಮಹಿಳೆಯಾಗಿ ಉತ್ತರ ಪ್ರದೇಶದ ಮುಖ್ಯ ಮಂತ್ರಿಯಾಗಿ ತನ್ನ ಕರ್ತವ್ಯಗಳಲ್ಲಿ ಒಂದಾದ ದಲಿತರ ರಕ್ಷಣೆಗಾಗಿರುವ ಪ.ಜಾತಿ ಮತ್ತು ಪ.ಪಂಗಡಗಳ ದೌರ್ಜನ್ಯ ತಡೆ ಕಾಯಿದೆಯಡಿ ಅತ್ಯಾಚಾರ ಮತ್ತು ಕೊಲೆಗೆ ಒಳಗಾದ ಕುಟುಂಬಗಳಿಗೆ ಕಾಯಿದೆಯಡಿ ಮುಖ್ಯ ಮೊದಲನೇಯ ಹಂತದಲ್ಲಿ ನೀಡಬೇಕಾಗಿರುವ ಪರಿಹಾರ 25,000 ರೂಪಾಯಿಯನ್ನು ಪ್ರತಿ ಕುಟುಂಬಗಳಿಗೆ ನೀಡಬೇಕೆಂಬ ಅದೇಶವನ್ನು ಅಲ್ಲಿನ ಅಧಿಕಾರಿಗಳಿಗೆ ನೀಡಿ ಅದನ್ನು ಅನುಷ್ಠಾನಗೊಳಿಸುತ್ತಿರುವಾಗ, ಕಾಂಗ್ರೆಸ್ಸಿನ ಸಂಸದೆ ಬಹುಗುಣ ಜೋಷಿಯವರು ಅದಕ್ಕೆ ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ 25,000 ರೂಪಾಯಿಯೇ? ಅದೇ ಮಾಯಾವತಿಗೆ ಈ ಪರಿಸ್ಥಿತಿ ಬಂದಿದ್ದರೇ ನಮ್ಮ ಸರ್ಕಾರ ಒಂದು ಕೋಟಿ ಹಣವನ್ನು ನಿಗದಿ ಪಡಿಸುತ್ತಿತ್ತು, ಎಂದು ಹೇಳುವುದು ಅತಿರೇಕದಿಂದ ದಲಿತ ಮಹಿಳಾ ಸಮುದಾಯವನ್ನು ಅಗೌರವದಿಂದ ಕಾಣುವ ಮಾತು ಎಂದು ಎಲ್ಲರಿಗೂ ಅನಿಸುವಂತದ್ದು. ಅದರೂ ಅವರನ್ನು ಮತ್ತು ಅವರ ಹೇಳಿಕೆಯನ್ನು ಸಾಭೀತುಪಡಿಸಲು ಹೊರಟಿರುವ ರೋಗಗ್ರಸ್ಥ ಮನಸ್ಥಿತಿಗಳು ನಮ್ಮ ದೇಶದ ಅಧಿಕಾರವನ್ನು ಹಿಡಿದಿರುವುದು ಅಪಾಯಕಾರಿಯಾಗಿರುವಂತಹದ್ದು.

ಬಹುಗುಣ ಜೋಶಿಯವರು ಮೇಲ್ಜಾತಿಯ ಮಹಿಳೆಯಾಗಿ ತನಗಿರುವಂತೆ ಗೌರವ ದಲಿತ ಮಹಿಳೆಯರಿಗೂ ಇದೆ ಎನ್ನುವುದನ್ನು ಅರ್ಥಮಾಡಿಕೊಳ್ಳದೆ ಇರುವುದು ದು:ಖದ ವಿಷಯವಾಗಿದೆ. ಬಹುಗುಣ ಜೋಷಿ ಮತ್ತು ಮಾಯಾವತಿಯ ವೈಯಕ್ತಿಕ ಮತ್ತು ರಾಜಕೀಯ ಕಾರಣಗಳೇನೆ ಇದ್ದರೂ ಅದು ಒಂದು ಸಮುದಾಯದ ಮೇಲೆ ದುಷ್ಪರಿಣಾಮವನ್ನು ಬೀರಬಾರದು. ಹೇಗೆಂದರೆ ಮಾಯಾವತಿಯು ದಲಿತ ಸಮುದಾಯವನ್ನು ಅದರಲ್ಲೂ ವಿಶೇಷವಾಗಿ ದಲಿತ ಮಹಿಳಾ ಸಮುದಾಯವನ್ನು ಪ್ರತಿನಿಧಿಸುವವರಾಗಿದ್ದಾರೆ. ಬಹುಗುಣ ಜೋಷಿಯವರ ಹೇಳಿಕೆಯು ದಲಿತರನ್ನು ಅವಮಾನ ಪಡಿಸುವ ಅನೇಕ ಅಂಶಗಳನ್ನು ಈ ಹೇಳಿಕೆಯಲ್ಲಿ ನಾವು ಕಾಣಬಹುದು.

ದಲಿತರ ಮತ್ತು ದಲಿತ ಮಹಿಳೆಯರ ಗೌರವವನ್ನು ಮತ್ತು ಅವರ ಬಡತನವನ್ನು ಹಣದಿಂದ ಬೆಲೆ ಕಟ್ಟುವುದು ಪ್ರಮುಖ ಅಂಶವಾದರೂ, ಪ.ಜಾತಿ-ಪ.ಪಂಗಡದವರ ಮೇಲೆ ನಡೆಯುತ್ತಿರುವ ಮಾರಣಾಂತಿಕ ದೌರ್ಜನ್ಯಗಳಿಗೆ ಪರಿಹಾರ ಹಣವೆಂಬುವುದು ಮತ್ತು ದಲಿತರಿಗೆ ಅವರ ಗೌರವ ನೈತಿಕತೆ ಮತ್ತು ಪ್ರಾಣಕ್ಕಿಂತ ಹಣ ಮುಖ್ಯವೆಂಬ ತಪ್ಪು ಕಲ್ಪನೆಯನ್ನು ಜನರಲ್ಲಿ ತುಂಬುವುದು ಮತ್ತು ಈ ಪ.ಜಾತಿ ಮತ್ತು ಪ.ಪಂಗಡಗಳ ಕಾಯಿದೆಯ ಮೂಲ ಉದ್ದೇಶವನ್ನು ತೆಗೆದು ಹಾಕಿ ಈ ಕಾಯಿದೆಯನ್ನು ಬಲಹೀನಗೊಳಿಸುವುದು ಮಾತ್ರವಲ್ಲ ದಲಿತರಿಗೆ ಶಿಕ್ಷಣ ಅದರಲ್ಲೂ ಪ.ಜಾತಿ ಮತ್ತು ಪ.ಪಂಗಡದ ದೌರ್ಜನ್ಯ ಕಾಯಿದೆಯನ್ನಾಗಲೀ ಅಥವ ಕನೂನಿನ ಮಾಹಿತಿಯನ್ನಾಗಲೀ ನೀಡುತ್ತಿರುವುದು ಜಾತಿವಾದಿ ಮನಸ್ಸುಗಳಿಗೆ ಸಹಿಸದಾಗಿರುವುದು ಈ ಪ್ರಕರಣದಿಂದ ಕಂಡುಬರುತ್ತದೆ.

ಕಾಂಗ್ರೆಸ್ಸಿಗೆ ನಿಜವಾಗಿಯೂ ದಲಿತರ ಅರ್ಥಿಕ ಸಬಲೀಕರಣದ ಬಗ್ಗೆ ಅಷ್ಟು ಕಾಳಜಿ ಇದ್ದಿದ್ದರೇ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಇವರ ಸರ್ಕಾರ ದಲಿತರ ಮತಗಳ ಮೇಲೆ ಎಷ್ಟೂ ಸಾರಿ ಅಧಿಕಾರಕ್ಕೆ ಬಂತು, ಗಾಂಧಿಜೀಯು ದಲಿತರಿಗೆ ಪ್ರತ್ಯೇಕ ಮತದಾನ ಪದ್ಧತಿ ಬೇಡವೆಂದು ಅಂದು ದುಂಡು ಮೇಜಿನ ಸಭೆಯಲ್ಲಿ ನಿರಾಕರಿಸಿ ಕಾಂಗ್ರೆಸ್ ದಲಿತರ ಹಕ್ಕುಗಳಿಗಾಗಿ ಶ್ರಮಿಸುತ್ತಿದೆ ಎಂದು ಹೇಳಿದರು. ಅಂತಹ ಸರ್ಕಾರವು ಜಾತಿ ವ್ಯವಸ್ಥೆಯನ್ನು ನಮ್ಮ ದೇಶದಿಂದ ಬೇರು ಸಹಿತ ಕಿತ್ತು ಹಾಕಲು ಪ್ರಮಾಣಿಕವಾಗಿ ಯಾವುದೇ ಪ್ರಯತ್ನವನ್ನು ಮಾಡಲಿಲ್ಲ ಎಂಬುವುದು ಸತ್ಯ. ಅದಕ್ಕಾಗಿ ಬಹುಗುಣ ಜೋಶಿ ಕಾಂಗ್ರೆಸ್ಸಿನ ಹುನ್ನತ ಹುದ್ದೆಯಲ್ಲಿರುವವರು ಈ ಹೇಳಿಕೆಯನ್ನು ನೀಡಿರುವುದು, ಮತ್ತು ಈ ಹೇಳಿಕೆಗೆ ಈ ಪಕ್ಷದ ಎಲ್ಲರು ಬೆಂಬಲ ಸೂಚಿಸಿರುವುದು.

ಈ ಹೇಳಿಕೆ ಜಾತಿ ನಿಂದನೆ ಜೊತೆಗೆ ದಲಿತ ಮಹಿಳೆಯ ಗೌರವಕ್ಕೆ ದಕ್ಕೆ ತರುವಂತಹದ್ದು. ಅದಕ್ಕಾಗಿ ಅವರಿಗೆ ಕಾನೂನಿನ ಪ್ರಕಾರ ಕ್ರಮವನ್ನು ತೆಗೆದುಕೊಳ್ಳಲಾಯಿತು. ಇದು ಪ.ಜಾತಿ ಮತ್ತು ಪ.ಪಂಗಡಗಳ ದೌರ್ಜನ್ಯ ಕಾಯಿದೆಯಡಿಯಲ್ಲಿ ಕಲ್ಂ 3,1(10) 3,1(11)ರಲ್ಲಿ ಅಪರಾಧವಾಗಿರುತ್ತದೆ. ಅದಕ್ಕಾಗಿ ಅವರನ್ನು ಈ ಕಾಯಿದೆಯ ಮತ್ತು ಐ.ಪಿ.ಸಿ. ಕಾಯ್ದೆಯಲ್ಲಿ ಬಂಧಿಸಲಾಗಿದೆ. ಮತ್ತು ಈ ಹೇಳಿಕೆಯಿಂದ ರೊಚ್ಚಿಗೆದ್ದ ಬಹುಜನ ಸಮಾಜ ಪಾರ್ಟಿಯ ಕಾರ್ಯಕರ್ತರು ಬೆಂಕಿ ಹಚ್ಚಿದರು ಎಂಬ ತಿರುಳಿಲ್ಲದ ಅಂಶವನ್ನು ನಾವು ಕಾಣುತ್ತೇವೆ.

ಇದಕ್ಕೆ ಪ್ರತಿ ಕ್ರಿಯಿಸಿದ ಮಾಧ್ಯಮಗಳು ಬಹುಗುಣ ಜೋಶಿಯರ ಹೇಳಿಕೆಯ ಅಪರಾಧ ದಲಿತ ಸಮುದಾಯದ ಮೇಲೆ ಮಾಡಿದ ಹಲ್ಲೆ ಮಾತ್ರವಲ್ಲ ದಲಿತರ ಮೂಲಭೂತ ಹಕ್ಕುಗಳಿಂದ ವಂಚಿಸುತ್ತಿರುವುದು ಎಂಬ ಅಂಶವನ್ನು ಎತ್ತಿ ಹಿಡಿಯದೇ, ಬಹುಜನ ಸಮಾಜ ಪಾರ್ಟಿಯವರು ಬಹುಗುಣ ಜೋಶಿಯವರ ಮನೆಗೆ ಬೆಂಕಿಹಚ್ಚಿದರು ಎಂಬ ಅಂಶವನ್ನು ಎತ್ತಿ ಹಿಡಿಯುವುದರ ಮೂಲಕ ತಮ್ಮ ಜಾತಿ ಮನಸ್ಥಿತಿಗಳನ್ನು ಪ್ರದರ್ಶಿಸಿದರು.

ಇಂತಹ ಅಂಶಗಳಲ್ಲಿ ಮಾಯವತಿಯ ಸರ್ಕಾರವನ್ನು ವಜಾಮಾಡಬೇಕೆಂದು ಕೇಳಿರುವುದು, ದಲಿತರ ಅಧಿಕಾರವನ್ನು ಸಹಿಸದ ಜಾತಿ ಮನಸ್ಥಿತಿಗಳ ಮಾತಿದು. ಈ ಪ್ರಕರಣದಲ್ಲಿ ಮಾಯವತಿ ದಲಿತ ಮಹಿಳೆಯಾಗಿ ದಲಿತರ ಹಕ್ಕುಗಳ ಬಗ್ಗೆ ಕಾನೂನಿನ ಅರಿವನ್ನು ಮೂಡಿಸುತ್ತಿರುವುದು ಕೆಲವರಿಗೆ ಸಹಿಸದಾಗಿದೆ. ಅದಕ್ಕಾಗಿ ಅವರ ರೋಗಗ್ರಸ್ಥ ಜಾತಿ ಮನಸ್ಸು ಈ ರೀತಿಯ ಹೇಳಿಕೆ ನೀಡುತ್ತಿದೆ. ಇನ್ನು ಕೆಲವರು ಬಹುಗುಣಜೋಶಿಯವರು ತಮ್ಮ ಹೇಳಿಕೆಗೆ ಕ್ಷಮಯನ್ನು ಯಾಚಿಸಿದರೂ ಮಾಯವತಿ ಇದನ್ನು ಕ್ಷಮಿಸುವ ಬದಲು ಇದನ್ನು ಕ್ಷಮಿಸಲಾರ್ಹವಾದ ಅಪರಾಧವೆನ್ನುತ್ತಾರೆ ಎನ್ನುವಂತೆ ಅವರನ್ನು ಅಮಾನುಷವಾಗಿ ಚಿತ್ರಿಸುವುದರ ಮೂಲಕ ದಲಿತರು ಕ್ರೂರಿಗಳು ಎಂಬ ಸಂದೇಶವನ್ನು ನೀಡುತ್ತಿದ್ದಾರೆ.

> **ಬಹುಗುಣ ಜೋಶಿಯವರು ಮೇಲ್ಜಾತಿಯ ಮಹಿಳೆಯಾಗಿ ತನಗಿರುವಂತೆ ಗೌರವ ದಲಿತ ಮಹಿಳೆಯರಿಗೂ ಇದೆ ಎನ್ನುವುದನ್ನು ಅರ್ಥಮಾಡಿಕೊಳ್ಳದೆ ಇರುವುದು ದು:ಖದ ವಿಷಯವಾಗಿದೆ. ಬಹುಗುಣ ಜೋಷಿ ಮತ್ತು ಮಾಯವತಿಯ ವೈಯಕ್ತಿಕ ಮತ್ತು ರಾಜಕೀಯ ಕಾರಣಗಳೇನೆ ಇದ್ದರೂ ಅದು ಒಂದು ಸಮುದಾಯದ ಮೇಲೆ ದುಷ್ಪರಿಣಾಮವನ್ನು ಬೀರಬಾರದು. ಹೇಗೆಂದರೆ ಮಾಯವತಿಯು ದಲಿತ ಸಮುದಾಯವನ್ನು ಅದರಲ್ಲೂ ವಿಶೇಷವಾಗಿ ದಲಿತ ಮಹಿಳಾ ಸಮುದಾಯವನ್ನು ಪ್ರತಿನಿಧಿಸುವವರಾಗಿದ್ದಾರೆ.**

ಕ್ಷಮೆಯ ಬಗ್ಗೆ ಮಾತನಾಡುವ ರೋಗಗ್ರಸ್ಥ ಜಾತಿ ಮನಸ್ಥಿತಿಗಳು ಕ್ಷಮೆಯನ್ನು ತಮ್ಮ ಅನುಕೂಲಕ್ಕೆ ಉಪಯೋಗಿಸದೇ ತಮ್ಮ ಮನಸ್ಸನ್ನು ಅವಲೋಕನ ಮಾಡಿಕೊಳ್ಳಬೇಕಾಗಿದೆ. ಇತಿಹಾಸದಿಂದಲೂ ದಲಿತರು ಒಂದು ತೊಟ್ಟು ನೀರಿಗಾಗಿ ಪರದಾಡಿ ಶೋಷಣೆಯ ನೆರಳಿನಲ್ಲಿ ನೊಂದು ಬೆಂದು ಮಲ ಹೋರುವ ಪದ್ಧತಿಯಿಂದ ಹಿಡಿದು ಬೆತ್ತಲೆ ಸೇವೆಯವರೆಗೂ ಬಿಟ್ಟಿ ಸೇವೆಯನ್ನು ಜಾತಿ ಹೆಸರಿನಲ್ಲಿ ಅನುಭವಿಸುತ್ತಲೇ ಇದ್ದಾರೆ.

ದಲಿತರು ಬೆಂಕಿಯಲ್ಲಿ ಸುಟ್ಟ ಬೂದಿಯಾಗಿ ಬಹಿರಂಗವಾಗಿ ಸಾಮೂಹಿಕ ಅತ್ಯಾಚಾರಗಳಿಗೆ ಒಳಗಾದರೂ ಕ್ಷಮೆ ಮತ್ತು ಶಾಂತಿಯ ಹೆಸರಿನಲ್ಲಿ ರಾಜಿ ಮಾಡಿಸಿ ಜಾತಿ ವ್ಯವಸ್ಥೆಯನ್ನು ಕ್ಷಮೆ ಮತ್ತು ಶಾಂತಿಯ ಹೆಸರಿನಲ್ಲಿ ಬದ್ರಪಡಿಸುತ್ತಿರುವವರು ಇದನ್ನು ಅರ್ಥಮಾಡಿ ಕೊಳ್ಳಬೇಕು. ಹೆತ್ತವಳಿಗೆ ಗೊತ್ತು ಹೆರಿಗೆ ನೋವು ಎನ್ನುವಂತೆ ಅವರಿಗೆ ದಲಿತರ ನೋವು ಅರ್ಥವಾಗಿದ್ದರೇ, ಈ ರೀತಿಯ ಮಾತುಗಳನ್ನು ಇಲ್ಲಿ ಆಡುತ್ತಿರಲಿಲ್ಲ.

ಇನ್ನು ರಾಷ್ಟ್ರೀಯ ಪ.ಜಾತಿ ಮತ್ತು ಪ.ಪಂಗಡಗಳ ಅಯೋಗದ ಸದಸ್ಯರ ಮನಸ್ಥಿತಿಯನ್ನು ನೋಡುವಾಗ ಅವರು ಈ ಉನ್ನತ ಅಧಿಕಾರದಲ್ಲಿ ತಮ್ಮ ವೈಯಕ್ತಿಕ ಹಿತಾಸಕ್ತಿಯನ್ನು ನೋಡಿಕೊಳ್ಳಲು ಇರುವವರಂತೆ, ಮಾಯವತಿಯು ಈ ಕಾಯಿದೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬುವುದು ಈ ಕಾಯಿದೆಯಡಿಯಲ್ಲಿ ಅವರನ್ನು ತಪ್ಪಿತಸ್ಥರನ್ನಾಗಿ ಮಾಡುತ್ತದೆ. ಇಂತಹ ಅಧಿಕಾರಯುತ ಸ್ಥಾನದಲ್ಲಿರುವವರ ಬಾಯಿಂದ ಬರುವ ಮಾತುಗಳು ತಮ್ಮ ಜವಬ್ದಾರಿಯ ಉಡಾಪೆಯನ್ನು ತೋರಿಸುತ್ತದೆ.

ಅದಕ್ಕಾಗಿ ಜನಸಾಮಾನ್ಯರು ಈ ಮಾತುಗಳನ್ನು ಸತ್ಯವೆಂದು ನಂಬಿ ದಲಿತರು ಕಾಯ್ದೆ ಕಾನೂನುಗಳನ್ನು ದುರುಪಯೋಗ ಮಾಡಿಕೊಳ್ಳುತ್ತಾರೆಂದು ಅವರ ಹಕ್ಕುಗಳನ್ನು ಮೊಟಕುಗೊಳಿಸುತ್ತಾ ಅವರ ಮೇಲೆ ದೌರ್ಜನ್ಯಗಳನ್ನು ಪ್ರತಿನಿತ್ಯ ಮಾಡುತ್ತಾರೆ. ದಲಿತರ ಅಭಿವೃದ್ಧಿ ಮತ್ತು ಗೌರವವನ್ನು ಹಣದಿಂದಲೇ ಅಳೆಯುತ್ತಿರುವರು. ದಲಿತರು ಕಾನೂನುಗಳನ್ನು ದುರುಪಯೋಗ ಮಾಡಿಕೊಳ್ಳುತ್ತಾರ ಮತ್ತು ದಲಿತರು ಹಣಕ್ಕಾಗಿ ಸುಳ್ಳು ಕೇಸುಗಳನ್ನು ಹಾಕುತ್ತಾರೆವೆನ್ನುವವರೇ ದಲಿತರ ಹೆಸರಿನಲ್ಲಿ ಮತ ಮತ್ತು ಕೋಟಿ ಕೋಟಿ ಹಣವನ್ನು ಕೊಳ್ಳೆಹೊಡೆಯುತ್ತಿರುವರು.

ಈ ಎಲ್ಲ ವಿಶ್ಲೇಷಾತ್ಮಕ ಅಂಶಗಳಲ್ಲಿ ದಲಿತ ಪುರುಷರಿಗಿಂತ ದಲಿತ ಮಹಿಳೆಯರ ಹೋರಾಟ ಅಧಿಕವಾಗಿದೆ ಎಂದು ಎಲ್ಲರೂ ತಿಳಿಯಬೇಕು. ದಲಿತ ಮಹಿಳೆ ಸಂಘಟಿಂತಳಾಗಿ ಶಿಕ್ಷಿತಳಾದಾಗ ಅವಳು ಸಮಾಜಕ್ಕೆ ದೊಡ್ಡ ಸವಾಲಾಗುತ್ತಾಳೆ ಮತ್ತು ಅವಳು ಮನಸ್ಸು ಮಾಡಿದಲ್ಲಿ ಸಮಾಜದಲ್ಲಿ ಹೊಸ ಕ್ರಾಂತಿಯನ್ನೆ ನಿರ್ಮಿಸುತ್ತಾಳೆಂಬುವುದನ್ನು ನಾವು ಮೇಲಿನ ಉದಾಹರಣೆಗಳಿಂದ ಕಂಡುಕೊಳ್ಳಬಹುದು. ☐

ಪುರದಮ್ಮ

ಪುರ
ಆ ಬಾರೆಯಲಿ ಪುರದಮ್ಮ
ಮನೆಮಾರು ಛತ್ರಚಾಮರಗಳೇನಿಲ್ಲ
ಇವಳಿಗೆ.

ಬಟಾಬಯಲ ಬೆಂಗಾವಲು
ಕೆಬ್ಬೆಮೂಲ ಕುರಚಲು
ನೆಗೆವ ಸೀಳಿದ ಕಿಸಿದ
ಚದುರು ಮೂರು ಮೂಡುಕಲ್ಲುಗಳು

ಪಕ್ಕ ಜಲದೊರತೆ
ಹೆಜ್ಜೇನು ಸಿಹಿನೀರ ಜರಿಹಳ್ಳ
ಪೂಜಾರಿ ಇಲ್ಲ. ಅವರಿಗವರದೆ ಪೂಜೆ
ಇಲ್ಲಿಲ್ಲ(ಕು)ಖ್ಯಾತಿ ದೇವರುಗಳಿಗಿರುವ
ಮಧ್ಯವರ್ತಿ ಕಪಟಿ ಕಾಟ
ಕೀಲೂ ಇಲ್ಲ ಮೇಲೂ ಇಲ್ಲ
ಸಂಭ್ರಮ ತಾಣವಷ್ಟೆ.

ಥಕ್ಕತೈ ಜೋಡಿ ಜೂಲು ಹುಂಜ
ಉಂಡಾಡು ವರಾಹವತಾರ
ಸರ್ಪಸಿಂಬಿ ಕೊಂಬ ಟಗರು
ಛಂಗನೆಗೆತ ಗಡ್ಡದೋತ
ಭರ್ಜರಿ ರಕ್ತದೋಕುಳಿ ಹರಕೆ
ನಿರಾಭರಣೆ ಪುರದಮ್ಮಗೆ

ನೆನ್ನೆಮೊನ್ನೆಯದಲ್ಲ ಈ ತರ್ಪಣೆ
ಭೂಮಿ ತಾಯಿ ತಂಗಿಯಾಗಿ
ಪುರದಮ್ಮ ಹುಟ್ಟಿದಾರಭ್ಯ

ಅಡರುತ್ತದೆ ಕರಿವ ನೆಲ್ಲಕರಿ ಘಮಲು
ಧೂಪಧೂಮ ಜಾಡಿಸಿ
ಉರಿಬಿಸಿಲಲೂ ಸೂರ್ಯನೆದೆ ಮೀಟಿ
ಬಡಿಗೆ ಎಡೆ ಹಬೆಯಾಗಿ

ಮಾಯವಾಗುತ್ತವೆ
ಕನಕರ ಚೆಂಡುಗಳು
ಹಂಡೆಸಾರು ರಾಶಿ ಅನ್ನ ಥರ ತುಂಡುಗಳು
ಎಡಗೈ ತಾಯಿಯೊಂದಿಗೆ
ಹಕ್ಕೊತ್ತಾಯದಿ ಹೊಂಚಾಕುವ
ಯೋಗಿ ಶ್ವಾನದಳ ಕಡೆ ಚಿತ್ತ ಹರಿಸದೆ

ಜೋಡೆತ್ತುಗಾಡಿ ಪಯಣದ
ಮೂಲ ಭಕ್ತರದೊಂದು ಬಗೆ
ಅವರ ಕುಡಿಗಳದೆ ಒಂದು ಬಗೆ
ಸ್ಥಿತ್ಯಂತರಗೊಂಡಿದ್ದಾಳೆ ಪುರದಮ್ಮ
ತರೇವಾರಿ ಭಕ್ತಾದಿಗಳಿಂದ

ಸರ್ಕಾರಿ ನೌಕರಿ ಬಾರಿ ಕಂಟ್ರಾಕ್ಟು
ಹರಕೆ ಹೊತ್ತ ಯುವ ಪಡೆಯದೆ
ಗರಿಗರಿಯ ಜರಿರಂಗು
ಕಮಾಯಿ ಜೋರಿದ್ದರೆ
ಹರಕೆ ಕದರ್‍ರೆ ಬೇರೆ.

ಬೈಕು ವ್ಯಾನು ಕಾರು
ಸರದಿ ಆಟೋಗಳೇನು
ಐನಾತಿ ಕೂಲಿಂಗ್ ಗ್ಲಾಸೊಳಗೆ
ವ್ಯಾಪಾರ, ಟೀಚಿಂಗು, ಕ್ಲರಿಕಲ್ಲು
ಸ್ಟಾಪುಗಳಿಗೆ ಹೇಳಿ ಮಾಡಿಸಿದ ಬಿಡುವು
ಹೆಬ್ಬೆಟ್ಟಗಲ ಗರಿನಾಮ ಇಟ್ಟ
ಬ್ರಾಂದಿ ವಿಸ್ಕಿಯ ಪೇಟೆ ಭಕ್ತರದೆ ಕಾರುಬಾರು
ಪಕ್ಷಾತೀತವಾಗಿ ಸಬ್ಜೆಕ್ಟ್‌ದಾಟಿ

ಇತ್ತೀಚೆಗೆ: ಬೆಳ್ಳಿನೆರೆ ಸಮಾಜವಾದಿಗಳು
ದಸಂಸ–ರೈಸ ಕಾಮ್ರೇಡುಗಳೊಂದಿಗೆ
ದಾಳಿ ಇಡುತ್ತಿದ್ದಾರೆಂಬ ಸುದ್ದಿ
ಛೇ.... ಅನ್ಯಥಾ ಲಾಸಾಯ್ತಲ್ಲ
ಕೆಲವರ್ಷಗಳು ಎಂಬ ವಿಷಾದದಿಂದ
ಗಡ್ಡದಾರಿ ಮೇಷ್ಟ್ರ ಗೈಡಲ್ಲಿ
ಸಾಂಸ್ಕೃತಿಕ ಅಧ್ಯಯನ ಬೇರೆ ನಡೆದಿದೆಯಂತೆ

ಹಾಲುಮೊಸರ ತನಿ ಎರೆತ
ವೆಜ್ ಬಾಂದವರಿಂದ
ಉಳುಮೆ ಎತ್ತುಗಳ ರಜದ ಸಣ್ಣಸೋಮವಾರ
ವಾರದ ಶಾಖ ತನುವಾಗಲಿ
ತಾಯಿ ಪುರದಮ್ಮಗೆ ಎಂದು

ಜಲಸ್ವಾಗಿ: ಸುದ್ದಿ ತಲುಪಿದೆಯಂತೆ
ಭಿನ್ನಭೇದತಾಣ
ನಸುಗುನ್ನಿದೇವಾಲಯಗಳಿಗೆಲ್ಲ
ರಜವಿಲ್ಲದೆ ನಡೆಯುವ
ಪುರದಮ್ಮನ ಸಿರಿ ಪರಸೆ ಕಂಡು.

❍ ಡಾ. ಎಂ. ಎಸ್. ಶೇಖರ್

ಬರ್ಬರ 'ಚೌರಿ ಸೇವೆ'

ಡಾ. ಸುಲೋಚನ ನಾರಾಯಣ್

ಪ್ರಸ್ತಾವನೆ:

ನಮ್ಮ ದೇಶವು ಬಹುಸಂಸ್ಕೃತಿಯನ್ನು ವಿವಿಧ ಸಾಂಸ್ಕೃತಿಕ ಪದ್ಧತಿ ಹಾಗೂ ಧಾರ್ಮಿಕ ಆಚರಣೆಗಳನ್ನು ಹೊಂದಿರುವ ದೇಶವೆಂದು ಗುರುತಿಸಲ್ಪಡುವ ಸಂದರ್ಭದಲ್ಲಿ 'ಮಹಿಳೆಯರ ಅಸ್ತಿತ್ವ'ವನ್ನು ಕುರಿತಂತೆ ಹಲವಾರು ವಿಶ್ಲೇಷಣೆಗಳು ನಡೆದಿವೆ. ಈ ದೇಶದ ಇತಿಹಾಸದೊಳಗೆ ಮಹಿಳೆಯರ ಬದುಕು ತಾತ್ಸಾರ-ನಿರ್ಲಕ್ಷ್ಯತೆಗೆ ಒಳಗಾಗುತ್ತಲೇ ಬಂದಿದೆ ಎನುವುದನ್ನು ಸಾಕ್ಷಿಕರಿಸಿದ ಹಲವಾರು ಸಾಮಾಜಿಕ ಪದ್ಧತಿಗಳ ಬಗ್ಗೆ ಸಾಕಷ್ಟು ಅಧ್ಯಯನವೂ ನಡೆದಿದೆ. ಸತಿ, ದೇವದಾಸಿ ಪದ್ಧತಿ, ವೇಶ್ಯಾವಾಟಿಕೆ, ಬಾಲ್ಯ ವಿವಾಹ, ಪರದಾ ಇತ್ಯಾದಿಗಳು ಸಂಸ್ಕೃತಿ ಮತ್ತು ಸಾಮಾಜಿಕ ಪದ್ಧತಿಗಳ ಸ್ತರಗಳಲ್ಲಿ ಮಹಿಳೆಯರನ್ನು ಶೋಷಿಸಿದ ರೀತಿಗಳಾದರೆ, ದೈಹಿಕ ಹಿಂಸೆ, ಅತ್ಯಾಚಾರ ಹೆಣ್ಣು ಮಗುವಿನ ಭ್ರೂಣ ಹತ್ಯೆ, ಶಿಶುಹತ್ಯೆ, ಅಪ್ರಾಪ್ತ ಬಾಲಕಿಯರ ಮಾರಾಟ ಮುಂತಾದವುಗಳು ದೈನಂದಿನ ಕ್ರೌರ್ಯಗಳಾಗಿವೆ. ಇದಕ್ಕೆ ಸ್ಥಾಪಿತ ಮೌಲ್ಯ ಹಾಗೂ ಸಂಪ್ರದಾಯಕ ದೃಷ್ಟಿಕೋನಗಳೇ ಕಾರಣವಾಗಿದೆ.

ಸಾಮೂಹಿಕವಾಗಿ ಧಾರ್ಮಿಕ ಆಚರಣೆಗಳಲ್ಲಿ ಮಹಿಳೆಯರು ಸದಾ ಭಾಗವಹಿಸುತ್ತಲೇ ಬಂದಿರುವರು. ಇಂತಹ ಆಚರಣೆಗಳಲ್ಲಿ ಮಹಿಳೆಯರ ಪಾತ್ರ, ಸ್ಥಾನಮಾನಗಳಿಗೆ ಧಾರ್ಮಿಕ ಗ್ರಂಥಗಳು ವಿವಿಧ ನಿರೂಪಣೆಗಳನ್ನು ನೀಡಿದೆ. ಈ ಆಚರಣೆಗಳ ಪೈಕಿ ಹಿಂದೆ ನಾವೆಲ್ಲರೂ ತಿಳಿದಿದ್ದ 'ದೇವದಾಸಿ ಪದ್ಧತಿ'ಯೂ ಒಂದು. ಇದನ್ನು 'ದೇವಾಲಯದ ವೇಶ್ಯಾವಾಟಿಕೆ' ಎಂದು ಗುರುತಿಸಿ ಸಾಮಾಜಿಕ ಅಧ್ಯಯನಗಳು ನಡೆದಿವೆ. "ದೇವರ ಮುಂದೆ ಹಾಡುವಿಕೆ, ವಿವಿಧ ಕಾಮೋದ್ರೇಕ ಭಂಗಿಗಳ ನರ್ತನ, ಮುಂತಾದವುಗಳಲ್ಲಿ ಮಹಿಳೆಯರನ್ನು ತೊಡಗಿಸಿಕೊಳ್ಳಲಾಗುತ್ತಿತ್ತು. ಆಂತಹ ಮಹಿಳೆಯರಿಗೆ ಪ್ರತ್ಯೇಕ ವಾಸಸ್ಥಳವಿರುತ್ತಿತ್ತು. ದೇವಸ್ಥಾನಕ್ಕೆ ಭಕ್ತರಾಗಿ ಬಂದ ಪುರುಷರು ಈ ಮಹಿಳೆಯರ ಮೇಲೆ ಲೈಂಗಿಕ ಅಪಚಾರವನ್ನೆಸಗುತ್ತಿದ್ದರು. ಹದಿಹರೆಯದ ಹೆಣ್ಣುಮಕ್ಕಳನ್ನು ತಾಯಂದಿರು ಮುಂದಾಗಿ ಶ್ರೀಮಂತ ಪುರುಷರಿಗೆ ಸಮರ್ಪಿಸುತ್ತಿದ್ದರು. ವಧುವಿನಂತೆ ಅವರ ಶರೀರವನ್ನು ಎಣ್ಣೆ ಅರಸಿನ ಮುಂತಾದವುಗಳಿಂದ ಉಪಚರಿಸಿ ಸುಂದರಗೊಳಿಸುತ್ತಿದ್ದರು." ಎಂದು ಬಾಪ್ಟಿಸ್ಟ್ ಮಿಶನರಿಯಾಗಿದ್ದ ಬ.ವಾರ್ಡ್ ಎನ್ನುವವರ ಬರಹಗಳಲ್ಲಿ ಉಲೇಖಗಳು ದೊರೆಯುತ್ತದೆ.

ಈಗ ಅಂತಹ ಆಚರಣೆಗಳು ಕಾನೂನು ಬಾಹಿರವಾದರೂ ಜಾತ್ರೆ ಉತ್ಸವಗಳಲ್ಲಿ ಹೆಣ್ಣು ಮಕ್ಕಳ ಶೋಷಣೆ, ದೌರ್ಜನ್ಯಗಳು ಯಾವ ಅಡೆತಡೆಗಳೂ ಇಲ್ಲದೆ ಸಾರ್ವಜನಿಕವಾಗಿ ನಡೆಯುತ್ತಿದೆ ಎನ್ನುವುದಕ್ಕೆ ಇತ್ತೀಚೆಗೆ ಪತ್ರಿಕೆಗಳಲ್ಲಿ ವರಿದಿಯಾಗಿದ್ದ 'ಚೌರಿ ಸೇವೆ' ಯೇ ಸಾಕ್ಷಿಯಾಗಿದೆ.

ಚೌರಿ ಸೇವೆಯ ವಿಶೇಷತೆ ಏನು?

ದಾವಣಗೆರೆಯಲ್ಲಿ ಮಾರ್ಚ್ ತಿಂಗಳ ಆರಂಭದಲ್ಲಿ ಗೋಣಿ-ಬಸವೇಶ್ವರ ದೇವಾಲಯದ ಜಾತ್ರೆ ನಡೆಯತ್ತದೆ. ಹರಪನ ಹಳ್ಳಿಯಿಂದ ಸುಮಾರು 9ಕೊ.ಮೀ. ದೂರದಲ್ಲಿರುವ 'ಕೂಲಹಳ್ಳಿ' ಎಂಬಲ್ಲಿ ಈ ಜಾತ್ರೆ ಹತ್ತು ದಿನಗಳ ಕಾಲ ನಡೆಯುತ್ತದೆ. ಜಾತ್ರೆಯ ಕೊನೆಯ ದಿನದಲ್ಲಿ ದೇವಾಲಯದ ಪೂಜಾರಿಯು 'ವರನ' ವೇಷವನ್ನು ಗೋಣಿ ಬಸನವ ಹೆಸರಿನಲ್ಲಿ ಹಾಕುತ್ತಾನೆ. ಬಸಪ್ಪ ತನ್ನ ಪುರುಷ ಸೇವಕರನ್ನು 'ಕಡುಬು-ಕಾಳಗ'ವನ್ನು ಮಾಡಲು ಆದೇಶವನ್ನು ನೀಡುತ್ತಾನೆ. 'ಚೌರಿ-ಸೇವೆ' ಎಂಬ ಹೆಸರಿನಲ್ಲಿ ಹಲವಾರು ಮಹಿಳೆಯರನ್ನು ಮೀಸಲಾಗಿಟ್ಟು ಅವರ ಮೇಲೆ ದೈಹಿಕ ಮತ್ತು ಮಾನಸಿಕ ಶೋಷಣೆಯನ್ನು ನಡೆಸಲಾಗುತ್ತದೆ. ಲೈಂಗಿಕವಾಗಿ ದುರ್ಬಳಕೆ ಮಾಡಲಾಗುತ್ತದೆ.

ಕರ್ನಾಟಕದ ರಾಜ್ಯದ ಈ ಭಾಗದಲ್ಲಿ ದೇವದಾಸಿ ಪದ್ಧತಿಗೆ ಪರ್ಯಾಯ ವಾಗಿರುವ ಚೌರಿ-ಸೇವೆ ಯಾವ ಅಡೆ-ತಡೆ ಇಲ್ಲದೆ ನಡೆಯುತ್ತಿದೆ. ಪ್ರತಿ ವರ್ಷ ನೂರಾರು ಹುಡುಗಿಯರನ್ನು ಈ ಆಚರ

ದಾವಣಗೆರೆಯಲ್ಲಿ ಮಾರ್ಚ್ ತಿಂಗಳ ಆರಂಭದಲ್ಲಿ ಗೋಣಿ-ಬಸವೇಶ್ವರ ದೇವಾಲಯದ ಜಾತ್ರೆ ನಡೆಯುತ್ತದೆ. ಹರಪನ ಹಳ್ಳಿಯಿಂದ ಸುಮಾರು ೯ ಕಿ.ಮೀ. ದೂರದಲ್ಲಿರುವ 'ಕೂಲ ಹಳ್ಳಿ' ಎಂಬಲ್ಲಿ ಈ ಜಾತ್ರೆ ಹತ್ತು ದಿನಗಳ ಕಾಲ ನಡೆಯುತ್ತದೆ. ಜಾತ್ರೆಯ ಕೊನೆಯ ದಿನದಲ್ಲಿ ದೇವಾಲಯದ ಪೂಜಾರಿಯು 'ವರನ' ವೇಷವನ್ನು ಗೋಣಿ ಬಸವನ ಹೆಸರಿನಲ್ಲಿ ಹಾಕುತ್ತಾನೆ. ಬಸಪ್ಪ ತನ್ನ ಪುರುಷ ಸೇವಕರನ್ನು 'ಕಡುಬು-ಕಾಳಗ'ವನ್ನು ಮಾಡಲು ಆದೇಶವನ್ನು ನೀಡುತ್ತಾನೆ. 'ಚೌರಿ-ಸೇವೆ' ಎಂಬ ಹೆಸರಿನಲ್ಲಿ ಹಲವಾರು ಮಹಿಳೆಯರನ್ನು ಮೀಸಲಾಗಿಟ್ಟು ಅವರ ಮೇಲೆ ದೈಹಿಕ ಮತ್ತು ಮಾನಸಿಕ ಶೋಷಣೆಯನ್ನು ನಡೆಸಲಾಗುತ್ತದೆ. ಲೈಂಗಿಕವಾಗಿ ದುರ್ಬಳಕೆ ಮಾಡಲಾಗುತ್ತದೆ.

ಣೆಗೆ ತಳ್ಳಲಾಗುತ್ತದೆ. ಈ ಸೇವೆಗೆ ಒಮ್ಮೆ ಸೇರ್ಪಡೆಯಾಯಿತೆಂದರೆ ಅವರು 'ವಿವಾಹ'ವಾಗುವಂತಿಲ್ಲ. ಅನಕ್ಷರಸ್ಥೆ, ಮೂಢ ನಂಬಿಕೆಗಳು ಮಹಿಳೆಯರನ್ನು ಈ ಪದ್ಧತಿಗೆ ಒಳಗ್ಗಾಗಿಸುವ ಅಂಶಗಳು ಎನ್ನುವುದನ್ನು ನಾವಿಲ್ಲಿ ಗಮನಿಸಬೇಕಾಗಿದೆ.

ಇತ್ತೀಚೆಗಷ್ಟೆ ನಡೆದ ಆಚರಣೆಯಲ್ಲಿ "ಬಾಜ್ರ ಕಡುಬುಗಳನ್ನು ಎಸೆಯುವ ಯುದ್ಧ"ದಲ್ಲಿ ಸಿಕ್ಕಿಹಾಕಿ ಕೊಂಡು ದೈಹಿಕ, ಭಾವನಾತ್ಮಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯೊಬ್ಬರು ಅಸಹಾಯಕರಾಗಿ ಅಳತೊಡಗಿದಾಗ ಯಾರೋ ಒಂದಿಬ್ಬರು ಪುರುಷರು ಧಾರ್ಮಿಕ ಆಚರಣೆಗೆ ಮಹಿಳೆಯರ ನೈತಿಕತೆಯನ್ನು ತ್ಯಾಗ ಮಾಡಿಸುವಂತಿರಬಾರದು ಎಂಬ ಕಳಕಳಿಯನ್ನು ತೋಡಿಕೊಂಡರೂ ಒಟ್ಟು ಪರಿಸ್ಥಿತಿಯಲ್ಲಿ ಅವುಗಳು ಪ್ರಭಾವ ಬೀರಿರಲಿಲ್ಲವೆನ್ನುವುದು ಪತ್ರಿಕಾ ವರದಿಯಾಗಿತ್ತು.

ಧಾರ್ಮಿಕತೆಯ ಹೆಸರಿನಲ್ಲಿ ಮಹಿಳೆಯರ ವ್ಯಕ್ತಿ ಗೌರವಕ್ಕೆ ಅಪಚಾರ ವೆಸಗುತ್ತಿರುವುದು ಎಷ್ಟು ಸರಿ?

ಈ ಮೇಲಿನ ಘಟನೆಗಳು ನಾಗರೀಕ ಸಮಾಜಕ್ಕೆ, ಪ್ರಜ್ಞಾವಂತ ಜನರಿಗೆ ಬಹುದೊಡ್ಡ ಸವಾಲೇ ಆಗಿದೆ. ಮಾರ್ಚ್ 8ರಂದು ಮಹಿಳಾ ದಿನವನ್ನು ಆಚರಿಸಿದ್ದೇವೆ. ಆಧುನಿಕ ಜಗತ್ತಿನಲ್ಲಿ ಮಹಿಳೆಯರು ತಮ್ಮನ್ನು ತೊಡಗಿಸಿಕೊಳ್ಳುತ್ತಿರುವ ರೀತಿ ಅವರ 'ಅಸ್ತಿತ್ವ'ವನ್ನು ಅರ್ಥೈಸಿಕೊಂಡಿರುವ ಬಗ್ಗೆ ವಿವಿಧ ಅಭಿಪ್ರಾಯಗಳು ವಿಮೋಚನೆ, ಸಬಲೀಕರಣ ಮುಂತಾದ ಚರ್ಚೆಗಳು ಭಾಷಣಗಳ ವರದಿಗಳ ಹಲವಾರು ಪತ್ರಿಕೆ, ಮ್ಯಾಗಝಿನ್‌ಗಳಲ್ಲಿ ಪ್ರಕಟಗೊಂಡಿರುವುದನ್ನು ಓದಿಕೊಂಡಿದ್ದೇವೆ. ಗಂಡು-ಹೆಣ್ಣಿನ ನಡುವಣ ಭೇದಭಾವವು ಇಂದು ಬಹುತೇಕ ನೀಗಿವೆ. ಜಾಗತೀಕರಣದಂತಹ ಆರ್ಥಿಕ ಬೆಳವಣಿಗೆಗಳು ಮಹಿಳೆಯರ ಬದುಕಿನಲ್ಲಿ ಮಹತ್ತರವಾದ ಬದಲಾವಣೆಗಳನ್ನು ತಂದಿರುವ ಹಿಂದೆ, ಚೌರಿಸೇವೆಯಂತಹ ಶೋಷಣಾತ್ಮಕ ಆಚರಣೆಗಳು ನಾಗರೀಕ ಜನರನ್ನು ತಲೆತಗ್ಗಿಸುವಂತೆ ಮಾಡುತ್ತಿರುವುದು ಎಷ್ಟೊಂದು ವಿಷಾದಕರವಲ್ಲವೆ?

ಭಗವತ್ ಶರಣ ಉಪಾಧ್ಯಾಯರು ಒಂದೆಡೆ ಬರೆದದ್ದು ಹೀಗೆ..." ಧಾರ್ಮಿಕ ಆಚರಣೆಯಲ್ಲಿ ಕೆಲವೆಡೆ ಮಹಿಳೆಯರನ್ನು ಸಾಮೂಹಿಕ ಸಂಪತ್ತಾಗಿ ಪರಿಗಣಿಸಲಾಗಿದೆ. ಭೋಗ್ಯಳಾದ ನಾರಿಯನ್ನು ವೇಶ್ಯೆ ದೇವದಾಸಿ ಎನ್ನಲಾಗುತ್ತದೆ. ಇಂತಹ ಹೀನ ಪದ್ಧತಿಗಳು ಮಹಿಳೆಯ ಬರ್ಬರ ಬದುಕಿನ ಸೆಣಸಾಟವೇ ಸರಿ. ಪುರುಷ ಪ್ರಧಾನ್ಯತೆ ಇರುವ ಸಮಾಜದಲ್ಲಿ ಮಹಿಳೆಯರು ಪುರುಷರ ವಿಶಿಷ್ಠ ದಾಸಿಯರಾಗುತ್ತಾರೆ" ಚೌರಿ ಸೇವೆ ಈ ಮೇಲಿನ ಹೇಳಿಕೆಗಳ ವಾಸ್ತವಿಕ ಪ್ರತಿರೂಪವೆಂದರೆ ತಪ್ಪಾಗಲಾರದು.

ಕಾನೂನುಗಳ ವೈಫಲ್ಯತೆ:

ಈ ಪದ್ಧತಿಗಳು ಪ್ರಗತಿಪರ ಕಾಲಘಟ್ಟದಲ್ಲಿಯೂ ಜೀವಂತವಾಗಿದ್ದು ಮಹಿಳೆಯರ ವ್ಯಕ್ತಿಗೌರವದ ಹರಣವಾಗುತ್ತಿರುವುದು ಕಾನೂನುಗಳ ವೈಫಲ್ಯತೆಯನ್ನು ತೋರಿಸುತ್ತದೆ. ಕೆಲವಾರು ಕಾನೂನುಗಳನ್ನು ಅಂಗೀಕರಿಸಿದರೆ ಅವುಗಳು ಮ್ಯಾಜಿಕ್‌ನಂತೆ ಕೆಲಸ ಮಾಡಿ ಇಂತಹ ಆಚರಣೆಗಳನ್ನು ತಡೆಯಬಹುದು ಎಂಬ ಕರ್ನಾಟಕ ಸರ್ಕಾರಗಳ ಪರಿಕಲ್ಪನೆ ಎಷ್ಟೊಂದು ಸುಳ್ಳಾಗಿದೆ? ದೇವದಾಸಿ, ಚೌರಿ ಸೇವೆ ಇತ್ಯಾದಿ ಸಮಾಜದಲ್ಲಿ ಆಳವಾಗಿ ಬೇರೂರಿದ ಧಾರ್ಮಿಕ ನಂಬಿಕೆಗಳು. 1984ರಲ್ಲಿ ದೇವದಾಸಿ ಕಾಯ್ದೆ ಎಂದು ಸರ್ಕಾರವು ಘೋಷಣೆ ಮಾಡಿದಾಗ ಹೆಣ್ಣುಮಕ್ಕಳನ್ನು ಈ ಸೇವೆಗಾಗಿ ಸಮರ್ಪಿಸುವುದು ಸರ್ವಜನಿಕ

ಗೋಣಿ ಬಸಪ್ಪನ ಹೆಸರಿನಲ್ಲಿ ಲೈಂಗಿಕ ಶೋಷಣೆಗೆ ಪೂಜಾರಿಯು ವರನ ವೇಷದಲ್ಲಿ ನೀಡುವ 'ಕಡುಬು ಕಾಳಗ' ವೆಂಬ ಪರವಾನಿಗೆಯು ಧಾರ್ಮಿಕ ಮಾನ್ಯತೆಯನ್ನು ಪಡೆದ ಪುರುಷಾಧಿಕಾರವನ್ನು ಅಸಹಾಯಕ, ಅಮಾಯಕ ಮಹಿಳೆಯರ ಮೇಲೆ ಅಧಿಪತ್ಯವನ್ನು ಸಾರುವ ಸಂಕೇತವೆಂದು ನಾವು ಒಪ್ಪಿಕೊಳ್ಳಬಹುದು. ಅದಕ್ಕೊಂದು ಸಾಮಾಜಿಕ ಮಾನ್ಯತೆ ಇದೆ. ಆದರೆ ಸಂವಿಧಾನದಲ್ಲಿ ಮಹಿಳೆಯರಿಗೆ ನೀಡಲ್ಪಟ್ಟ ಜೀವಿಸುವ ಹಕ್ಕು, ಕೌಟುಂಬಿಕ ಹಕ್ಕು, ಶೈಕ್ಷಣಿಕ ಹಕ್ಕು, ಸಮಾನತೆಯ ಹಕ್ಕು, ವಿವಾಹದ ಹಕ್ಕು ಮುಂತಾದವುಗಳಿಗೆ ಈ ಹೀನ ಸೇವೆ ಯಾವ ಮಾನ್ಯತೆ ನೀಡಿವೆ?

ಮಾನ್ಯತೆ ಕಳೆದುಕೊಂಡಿತು. ಆದರೂ ಒಳಗೊಳಗೆ ಚಿಕ್ಕ ದೇವಸ್ಥಾನಗಳಲ್ಲಿ ಪೂಜಾರಿಯ ಗೃಹದಲ್ಲಿ ಇದು ನಡೆಯುತ್ತಿತ್ತು. ಮುಗ್ಧ ಬಾಲೆಯರನ್ನು ಪೂಜಾರಿಗಳು ಕುತಂತ್ರವಾಗಿ ಓಲೈಸುವ ಕಾರ್ಯ ಮುಂದುವರಿಯುತ್ತಿದೆ ಎಂದು ಮಹಿಳಾ ಸಂಘಟನೆಗಳು ಆರೋಪಿಸಿದೆ. ಆದರೆ ಅದರ ವಿರುದ್ಧ ಕಾನೂನನ್ವಯ ಯಾವುದೇ ಕ್ರಮಗಳು ಜರುಗಿಸಲ್ಪಡಲಿಲ್ಲ. ದೂರುಗಳು ಮೂಲೆಯ ಬುಟ್ಟಿ ಸೇರುತ್ತಿರುವುದು ಎಂತಹ ನಿರ್ಲಕ್ಷಿತ ಮನೋಭಾವ!

ದೇವದಾಸಿ ಕಾಯ್ದೆಯಡಿಯಲ್ಲಿ ಕೇಸುಗಳು ದಾಖಲೀಕರಣಗೊಳ್ಳದಿರುವುದು ಕಾನೂನುಗಳ ಹಿನ್ನಡೆಗೆ ಸಾಕ್ಷಿಯಾಗಿವೆ. ಹಲ್ಲಿದ್ದರೂ ಕಚ್ಚಲಾಗದ ಸ್ಥಿತಿಯಲ್ಲಿ ಕಾನೂನುಗಳ ಕಾರ್ಯಾಚರಣೆಗಳು ಆಗುತ್ತಿರುವುದರಿಂದಲೇ ದೇವದಾಸಿ ಎಂಬ ಹೆಸರಿನ ಬದಲಿಗೆ 'ಚೌರಿ ಸೇವೆ' ಎಂಬ ಹೆಸರನ್ನು ಇಟ್ಟುಕೊಂಡು ಶೋಷಣೆ ಅವ್ಯಾವಹತವಾಗಿ ನೆಲೆಗೊಂಡಿದೆ.

ಈ ಪರಿಸ್ಥಿತಿಗಳ ಸುಧಾರಣೆಗಾಗಿ ಮಾಡಬೇಕಾದುದೇನು?

ಗೋಣಿ ಬಸಪ್ಪನ ಹೆಸರಿನಲ್ಲಿ ಲೈಂಗಿಕ ಶೋಷಣೆಗೆ ಪೂಜಾರಿಯು ವರನ ವೇಷದಲ್ಲಿ ನೀಡುವ 'ಕಡುಬು ಕಾಳಗ'ವೆಂಬ ಪರವಾನಿಗೆಯು ಧಾರ್ಮಿಕ ಮಾನ್ಯತೆಯನ್ನು ಪಡೆದ ಪುರುಷಾಧಿಕಾರವನ್ನು ಅಸಹಾಯಕ, ಅಮಾಯಕ ಮಹಿಳೆಯರ ಮೇಲೆ ಅಧಿಪತ್ಯವನ್ನು ಸಾರುವ ಸಂಕೇತವೆಂದು ನಾವು ಒಪ್ಪಿಕೊಳ್ಳಬಹುದು. ಅದಕ್ಕೊಂದು ಸಾಮಾಜಿಕ ಮಾನ್ಯತೆ ಇದೆ. ಆದರೆ ಸಂವಿಧಾನದಲ್ಲಿ ಮಹಿಳೆಯರಿಗೆ ನೀಡಲ್ಪಟ್ಟ ಜೀವಿಸುವ ಹಕ್ಕು, ಕೌಟುಂಬಿಕ ಹಕ್ಕು, ಶೈಕ್ಷಣಿಕ ಹಕ್ಕು, ಸಮಾನತೆಯ ಹಕ್ಕು, ವಿವಾಹದ ಹಕ್ಕು ಮುಂತಾದವುಗಳಿಗೆ ಈ ಹೀನ ಸೇವೆ ಯಾವ ಮಾನ್ಯತೆ ನೀಡಿವೆ?

1. ಇಂತಹ ಜಾತ್ರೆಗಳಾದಾಗ ಪೊಲೀಸ್ ಬಂದೋಬಸ್ತ್ ತೀರ ಅಗತ್ಯ. ಮಹಿಳೆಯರನ್ನು ಅವಮಾನಿಸುವ ಯಾವ ಕ್ರಿಯೆಗಳಿರಲಿ, ಅವುಗಳನ್ನು ಅಪರಾಧವೆಂದು ಪರಿಗಣಿಸಿ ಅದಕ್ಕೆ ಜವಾಬ್ದಾರರಾಗಿರುವ ದೇವಾಲಯದ ಆಡಳಿತ ವರ್ಗ, ಪುರೋಹಿತ, ಬೆಂಬಲ ನೀಡುವ ನಾಯಕರ ಮೇಲೆ ಕೇಸು ದಾಖಲಿಸುವುದು ಅತ್ಯಾಗತ್ಯ.

2. ದೇವದಾಸಿ ಪದ್ಧತಿ ಹಾಗೂ ಚೌರಿ ಸೇವೆಯನ್ನು ನಿರ್ಮೂಲನ ಮಾಡುವ ಕಾಯ್ದೆ ಕುರಿತಂತೆ ಹೆಚ್ಚಿನ ಜಾಗೃತಿ/ಅರಿವು ಮೂಡಿಸುವುದು ಅಗತ್ಯ. ಸ್ಥಳೀಯ ಅಧಿಕಾರಿಗಳಿಗಾಗಲೀ ಸಮಾಜ ಕಲ್ಯಾಣ ಇಲಾಖೆಯವರಿಗಾಗಲೀ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಇಲಾಖೆಯವರಿಗಾಗಲೀ ಈ ಕಾಯ್ದೆ ಕುರಿತಂತೆ ಸ್ಪಷ್ಟವಾದ ತಿಳುವಳಿಕೆ ಇಲ್ಲ. ಈ ಹಿಂದೆ ಯಲ್ಲಾಪುರದ ಜಾತ್ರೆಯಲ್ಲಿ ಈ ಬಗ್ಗೆ ಪೊಲೀಸ್ ಅಧಿಕಾರಿಗಳು ತಮ್ಮ ಅಜ್ಞಾನವನ್ನು ಮೆರೆದಿರುವುದು ನಿಜ ಸತ್ಯ. ಆದುದರಿಂದಲೇ ಕಣ್ಣೆದುರಿನಲ್ಲಿಯೇ ಹೀನವಾದ ದೌರ್ಜನ್ಯಗಳಾಗುತ್ತಿದ್ದರೂ ಅಧಿಕಾರಿ ವರ್ಗ ಮೌನವಾಗಿರುವುದು. ದೃಶ್ಯ ಹಾಗೂ ಪ್ರಿಂಟ್ ಮಾಧ್ಯಮಗಳು ಇಂತಹ ಪ್ರಮುಖ ಕಾನೂನುಗಳಿಗೆ ಜೀವ ನೀಡಬೇಕಾಗಿರುವುದು ಅಗತ್ಯ.

3. ರಾಜ್ಯ ಮಹಿಳಾ ಆಯೋಗ, ಮಹಿಳ ಸಂಘಟನೆಗಳು ಸ್ವಯಂ ಸೇವಾ ಘಟಕಗಳು ಸಾರ್ವಜನಿಕವಾಗಿ ಮಹಿಳೆಯರ ಮೇಲೆ ಧಾರ್ಮಿಕಾಚರಣೆಯ ಹೆಸರಿನಲ್ಲಿ ಶೋಷಣೆಗಳಾದಾಗ ಕಾರ್ಯ ಪ್ರವರ್ತರಾಗಬೇಕಾಗಿದೆ. ಸಾರ್ವಜನಿಕ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಸರ್ಕಾ

(ಇಳನೇ ಪುಟಕ್ಕೆ)

ಜನಪದ ಕಥನದ ಮಿಸ್ಸಿಂಗ್ ಅಂಕುಗಳು

ಮೊಗಳ್ಳಿ ಗಣೇಶ್

ಜನಪದ ಸಾಹಿತ್ಯದಲ್ಲಿ ತುಂಬಿರುವುದೆಲ್ಲ ಮುತ್ತು ರತ್ನವಲ್ಲ. ಅದರಲ್ಲೂ ಅನೇಕ ವಿರೂಪಗಳಿವೆ, ಸುಳ್ಳು ದನಿಗಳಿವೆ, ಪರರ ಮಾತುಗಳಿವೆ, ಹೇರಲ್ಪಟ್ಟ ಅರ್ಥಗಳಿವೆ. ಹಿಡಿಯಾಗಿ ಜನತೆಯೆ ಭಾಗ ವಹಿಸಿ ಜನಪದ ಸಾಹಿತ್ಯವನ್ನು ಸಮಷ್ಠಿಯಾಗಿ ಕಟ್ಟಿದ್ದಾರೆ ಎಂಬ ಒಂದೇ ಒಂದು ಗುಣದಿಂದ ಆ ಯಾವುದೆ ಒಂದು ಅಭಿ ವ್ಯಕ್ತಿಯು ಅತ್ಯುತ್ತಮ ಮಾನವ ದನಿಯಾಗಿ ಮಾರ್ದನಿಸಿದೆ ಎಂದು ಹೇಳಲಾಗದು. ಯಾವುದೇ ಅಭಿವ್ಯಕ್ತಿಯು, ಅದು ಮಾರ್ಗವಿರಲಿ ಅಥವಾ ದೇಶಿಯಾಗಿರಲಿ ತಂತಾನೆ ಸ್ವಯಂ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವಿಲ್ಲ. ಎಲ್ಲ ಅಭಿವ್ಯಕ್ತಿಗಳು ತಮ್ಮ ಕಾಲದ ಅಸ್ತಿತ್ವದ ಅಂಕುಷದಲ್ಲೇ ನಿಯಂತ್ರಣದ ಆವರಣದಲ್ಲೆ ಸಂಬಂಧಗಳನ್ನು ಕಂಡುಕೊಳ್ಳುತ್ತವೆ. ಇದು ಅಭಿವ್ಯಕ್ತಿಯ ಅಪರಿಪೂರ್ಣತೆಯ ಒಂದು ಸ್ಥಿತಿ. ಮೌಖಿಕ ಪರಂಪರೆಯ ಜನಪದ ಸಾಹಿತ್ಯವು ಕೂಡ ಇದೇ ಬಗೆಯ ಹಾದಿಯಲ್ಲಿ ಸಾಗಿ ಬಂದಿದೆ. ಹೀಗೆ ಕಾಲಾನು ಸಂಧಾನದ ಭಾಗವಾಗಿ ಬರುವಾಗ ಜನಪದ ಸಾಹಿತ್ಯವು ತನ್ನ ಸಮಷ್ಠಿ ಪ್ರಜ್ಞೆಯನ್ನು ಹೇಗೆ ವಿಭಿನ್ನ ಕಾಲಘಟ್ಟಗಳಲ್ಲಿ ರೂಪಾಂತರಿಸಿ ಕೊಂಡು ಬಂದಿದೆ ಎಂಬುದನ್ನು ಗಮನಿಸಿದರೆ ಅನೇಕ ಪ್ರಶ್ನೆಗಳು ಎದುರಾಗುತ್ತವೆ. ಈ ಹಿನ್ನೆಲೆಯಲ್ಲಿ ಹೇಗೆ ಜನಪದ ಸಾಹಿತ್ಯ ರೂಪುಗೊಂಡು ಯಾವ ಸ್ವರೂಪದ ಇಕ್ಕಟ್ಟುಗಳನ್ನು ತನ್ನಲ್ಲಿ ಉದುಗಿಸಿ ಕೊಂಡಿದೆ ಎಂಬುದನ್ನು ಚರ್ಚಿಸಬಹುದು.

ಕನ್ನಡ ಜನಪದ ಸಾಹಿತ್ಯ ವನ್ನು ಪ್ರಧಾನವಾಗಿ ನಾಲ್ಕು ಹಂತಗಳಲ್ಲಿ ಗುರುತಿಸಿ ಹೇಗೆ ಅದು ಜನತೆಯ ದನಿಯನ್ನು ವ್ಯಕ್ತಪಡಿಸಿದೆ ಎಂಬುನ್ನು ಗಮನಿಸುವ ಮೊದಲಿಗೆ ಅಭಿವ್ಯಕ್ತಗೊಂಡ ಜಾನ ಪದವನ್ನು ಆದಿಮ ಜಾನಪದ ಎಂದು ಕರೆಯುವ ಈ ಹಂತದಲ್ಲಿ ಇದ್ದ ಅಭಿವ್ಯಕ್ತಿಯ ವೈಶಿಷ್ಟ್ಯ ಏನೆಂದರೆ; ಅದು ನಿಸರ್ಗಾರಾಧನೆಯ ಮಾಂತ್ರಿಕ ಅಭಿವ್ಯಕ್ತಿ. ಇಲ್ಲಿ ಆರಾಧನೆ, ಆಚರಣೆ, ಮಂತ್ರವಿಧಿ ಮತ್ತು ನೃತ್ಯ ಪ್ರಧಾನವಾಗಿದ್ದ ಅಂಶಗಳು ನಿಜವಾದ ಸಮಷ್ಠಿ ಪ್ರಜ್ಞೆ ಇಲ್ಲಿ ವ್ಯಕ್ತವಾಗುವುದನ್ನು ಕಾಣಬಹುದು. ಸಮಷ್ಠಿ ಪ್ರಜ್ಞೆ ಎಂದರೆ ತಮ್ಮ ಅಸ್ತಿತ್ವದ ಮೂಲ ನೆಲೆಯನ್ನು ಆತ್ಯಂತಿಕವಾಗಿ ಮೈದುಂಬಿ ಅದರ ಪ್ರೇರಣೆಯಲ್ಲಿ ಯಾವುದೆ ಒಂದು ಅಭಿವ್ಯಕ್ತಿಯನ್ನು ಸಾಧಿಸಿಕೊಳ್ಳುವುದು. ಆದಿಮ ಜಾನಪದದ ಇನ್ನೊಂದು ಶಕ್ತಿ ಏನೆಂದರೆ ಅದು ಮಾತೃ ನೆಲೆಯ ಮಾಂತ್ರಿಕ ಸಂವೇದನೆಯನ್ನು ನಿಸರ್ಗದ ಸೃಷ್ಠಿಯ ಜೊತೆಗೆ ಸಮೀಕರಿಸಿ ಕೊಂಡು ಬೆಳೆದುಬಂದದ್ದು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಎಂದರೆ ಆದಿಮ ಹಂತದ ಜಾನಪದದಲ್ಲಿ ಯಾವ ಧರ್ಮಗಳೂ ಬೆಳೆದಿರಲಿಲ್ಲ. ಮಾಂತ್ರಿಕ ವಿಧ್ಯೆ ಅಸ್ಪಷ್ಟವಾಗಿ ಪುರುಷವರ್ಗದ ಆಲೋಚನೆಯಾಗಿ ರೂಪುಗೊಳ್ಳುತ್ತಿತ್ತು.

ಮಾಂತ್ರಿಕ ಶಕ್ತಿಗೆ ಮೂಲ ದೈವವಾಗಿ ಸ್ತ್ರಿಯನ್ನೆ ಪ್ರಧಾನವಾಗಿ ಭಾಪಿಸಲಾಗಿತ್ತು. ಒಟ್ಟಿನಲ್ಲಿ ಆಗ ತಾನೆ ಕುಲ ಮೂಲದ ಸಂಸ್ಕೃತಿಗಳು ನಿಸರ್ಗದ ಜೊತೆ ಮಾನವ ಸಂಬಂಧಗಳನ್ನು ಬೆಸೆದುಕೊಳ್ಳುತ್ತಿದ್ದವು. ವಿಶೇಷವಾಗಿ ಈ ಹಂತಗಳನ್ನು ಆಧರಿಸಿಯೆ ಜಗತ್ತಿನ ಉದ್ದಕ್ಕೂ ಸಂಸ್ಕೃತಿ ವ್ಯಾಖ್ಯೆ ಹಾಗು ಸಿದ್ಧಾಂತಗಳು ನಿರೂಪಿತವಾಗಿರುವುದು.

ಮೊದಲ ಹಂತದ ಮುಂದುವರಿಕೆಯಾದ ಎರಡನೆ ಹಂತದ ಜಾನಪದವನ್ನು ಸ್ಥೂಲವಾಗಿ ಗ್ರಾಮಜಾನಪದ ಎಂದು ಭಾಪಿಸುವ. ನವಶಿಲಾಯುಗವನ್ನು ದಾಟಿದ ಪಶುಪಾಲಕ ಸಮುದಾಯಗಳು ಕರ್ನಾಟಕದ ಬಯಲು ಪ್ರದೇಶಗಳನ್ನು ವ್ಯಾಪಿಸಿಕೊಂಡವು. ಪಶುಪಾಲಕ ಸಮುದಾಯಗಳು ಪಶು ಆಹಾರದ ಭಾಗವಾಗಿಯೆ ಕೃಷಿ ವ್ಯವಸ್ಥೆಯನ್ನು ವಿಸ್ತರಿಸಿ ಭೂಮಿಯ ಮೇಲಿನ ಹಿಡಿತವನ್ನು ಸಾದಿಸಿದವು. ವಿಶೇಷವಾಗಿ ವಕ್ಕಲುತನ ಮಾಡುವ ಸಮುದಾಯಗಳು ಬೇಟೆ ಮತ್ತು ಪಶುಪಾಲನೆಯ ಗಡಿಗಳನ್ನು ದಾಟಿ ಬೇಸಾಯದ ಗಡಿಗಳನ್ನು ಸ್ಥಾಪಿಸಿಕೊಂಡವು. ಇದರ ಭಾಗವಾಗಿಯೆ ಗ್ರಾಮ ಸಮಾಜ ಪಣಸಮಾಜದ ಕಲ್ಪನೆಯಲ್ಲಿ ಮುಂದೆ ಬೇರೆ ಆಯಾಮ ಪಡೆದುಕೊಂಡವು. ಗ್ರಾಮ ಜಾನಪದವು ಮುಖ್ಯವಾಗಿ ನಿಸರ್ಗದ ಆರಾಧನೆಯನ್ನೆ ಮುಂದುವರಿಸಿಕೊಂಡು ಅದು ನೈಸರ್ಗಿಕ ಹಾಗು ಮಾನವ ಸಂಪತ್ತಿನ ಸಂಬಂಧಗಳನ್ನು ಅಭಿವ್ಯಕ್ತಿಸಲು ಮೌಖಿಕವಾದ ದಾರಿಗಳನ್ನು ಕಂಡುಕೊಂಡಿತು.

ಬಹು ಸೂಕ್ಷ್ಮವಾಗಿ ಈ ಹಂತದಲ್ಲಿಯೆ ಬಲಿಷ್ಟ ಬಹುಸಂಖ್ಯಾತ ವಕ್ಕಲು ಸಮುದಾಯಗಳು ಕರ್ನಾಟಕದ ಆದಿಪತ್ಯದ ಮೇಲಿನ ಹಿಡಿತವನ್ನು ದುರುದ್ದೇಶವಿಲ್ಲದೆಯೆ ಸಹಜವಾಗಿ ಸಾಧಿಸಿಕೊಂಡು ಬಿಟ್ಟಿದ್ದವು. ನಿಸರ್ಗದ ಸೌಲ ಭ್ಯಗಳನ್ನು ಮುಂದಾಗಿ ಪಡೆದುಕೊಳ್ಳುವ ಅವಕಾಶವನ್ನು ವಕ್ಕಲು ಸಮುದಾಯಗಳು ಪಡೆದ ಕಾರಣವಾಗಿಯೆ ಗ್ರಾಮ ಸಮಾಜದ ರಚನೆಯಲ್ಲಿ ಅದರ ನಿರ್ವಹಣೆಯಲ್ಲಿ ಅಧಿಕಾರದಲ್ಲಿ ಅನೇಕ ನಿರ್ಣಾಯಕ ಸಂದರ್ಭಗಳಲ್ಲಿ ಯಜಮಾನಿಕೆಯು ತಂತಾನೆ ಬಂದುಬಿಟ್ಟಿತು. ಸಾಮಾಜಿಕ ರಚನೆ ರೂಪುಗೊಳ್ಳುವಾಗ ಎಷ್ಟೋ ವಿಷಯಗಳಲ್ಲಿ ಇದು ಬೇರೆ ಸ್ವರೂಪಗಳಲ್ಲಿ ಮುಂದುವರಿದದ್ದನ್ನು ಕಾಣಬಹುದು.

ಇಲ್ಲೇ ಇನ್ನೊಂದು ವಿಷಯವನ್ನು ಪ್ರಸ್ತಾಪಿಸುವುದು ಸೂಕ್ತ. ಗ್ರಾಮಸಮಾಜ ರೂಪುಗೊಂಡು ವಕ್ಕಲತನಕ್ಕೆ ಪೂರಕವಾಗಿದ್ದ ಜೀವನ ವಿಧಾನಗಳ ಮೇಲೆ ಆರ್ಯರ ಪ್ರವೇಶದಿಂದ ಅನೇಕ ಪಲ್ಲಟಗಳು ಉಂಟಾದವು. ದೀರ್ಘಕಾಲೀನ ಸಾಮಾಜಿಕ ರಚನೆಯ ಕಾಲಮಾನದ ಬದಲಾವಣೆಗಳನ್ನು ಇಲ್ಲಿ ಸೂಕ್ಷ್ಮವಾಗಿ ಮಾತ್ರ ಹೊಂದಿಸುತ್ತಿರುವೆ. ಹರಪ್ಪ ಮೊಹೆಂಜದಾರೊ ಬಗೆಯಲ್ಲೆ ಭಾರತದ ಉದ್ದಕ್ಕೂ ಸ್ಥಳೀಯ ಪರಿಸರಗಳ ನೆಲೆಯಲ್ಲಿ ನೂರಾರು ನಾಗರೀಕತೆಗಳು ರೂಪುಗೊಂಡು ಪ್ರಾದೇಶಿಕ

ಕನ್ನಡ ಜನಪದ ಸಾಹಿತ್ಯವನ್ನು ಪ್ರಧಾನವಾಗಿ ನಾಲ್ಕು ಹಂತಗಳಲ್ಲಿ ಗುರುತಿಸಿ ಹೇಗೆ ಅದು ಜನತೆಯ ದನಿಯನ್ನು ವ್ಯಕ್ತಪಡಿಸಿದೆ ಎಂಬುನ್ನು ಗಮನಿಸುವ ಮೊದಲಿಗೆ ಅಭಿವ್ಯಕ್ತಗೊಂಡ ಜಾನಪದವನ್ನು ಆದಿಮ ಜಾನಪದ ಎಂದು ಕರೆಯುವ ಈ ಹಂತದಲ್ಲಿ ಇದ್ದ ಅಭಿವ್ಯಕ್ತಿಯ ವೈಶಿಷ್ಟ್ಯ ಏನೆಂದರೆ; ಅದು ನಿಸರ್ಗಾರಾಧನೆಯ ಮಾಂತ್ರಿಕ ಅಭಿವ್ಯಕ್ತಿ. ಇಲ್ಲಿ ಆರಾಧನೆ, ಆಚರಣೆ, ಮಂತ್ರವಿಧಿ ಮತ್ತು ನೃತ್ಯ ಪ್ರಧಾನವಾಗಿದ್ದ ಅಂಶಗಳು ನಿಜವಾದ ಸಮಷ್ಠಿ ಪ್ರಜ್ಞೆ ಇಲ್ಲಿ ವ್ಯಕ್ತವಾಗುವುದನ್ನು ಕಾಣಬಹುದು. ಸಮಷ್ಠಿ ಪ್ರಜ್ಞೆ ಎಂದರೆ ತಮ್ಮ ಅಸ್ತಿತ್ವದ ಮೂಲ ನೆಲೆಯನ್ನು ಆತ್ಯಂತಿಕವಾಗಿ ಮೈದುಂಬಿ ಅದರ ಪ್ರೇರಣೆಯಲ್ಲಿ ಯಾವುದೆ ಒಂದು ಅಭಿವ್ಯಕ್ತಿಯನ್ನು ಸಾಧಿಸಿಕೊಳ್ಳುವುದು.

ಪ್ರಭೇದಗಳಂತೆ ಬೆಳೆದದ್ದು ಬೇರೆ ಬೇರೆ ಕಾಲ ಮತ್ತು ಕಾರಣಗಳ ಹಿನ್ನೆಲೆಯಿಂದ. ಅಂತವುಗಳಲ್ಲಿ ಕನ್ನಡನಾಡಿನ ಜನಪದ'ಳು ಕೂಡ ಸೇರಿಕೊಳ್ಳುತ್ತವೆ.

ವ್ಯವಸ್ಥಿತವಾಗಿ ರೂಪುಗೊಂಡ ವಾಸನೆಲೆಗಳೆ ಅಂದಿನ ಗ್ರಾಮಗಳೂ ಆಗಿದ್ದವು. ಕಾಲದ ಬಹು ಅಂತರಗಳ ಈ ವಿಕಾಸದಲ್ಲಿ ಕನ್ನಡ ಜನಪದಗಳು ಗ್ರಾಮ ರಚನೆಯ ಸ್ಥಾನಮಾನಗಳಲ್ಲಿ ಉತ್ಪಾದನಾಕ್ರಮಗಳಲ್ಲಿ ಜೀವನ ಕ್ರಮವಾದ ಸಂಸ್ಕೃತಿಯ ರೀತಿ ನೀತಿಗಳಲ್ಲಿ ನೂರಾರು ರೂಪಾಂತರಗಳನ್ನು ಮಾಡಿಕೊಂಡು ಬಂದ ಕಾರಣವಾಗಿಯೆ ಅವು ಏಕಕಾಲಕ್ಕೆ ಆದಿಮ ಜಾನಪದದ ಲಕ್ಷಣಗಳನ್ನೂ ಆನಂತರದ ರೂಪಗಳನ್ನೂ ಅಂತರ್ಗತಿಸಿಕೊಂಡಿರುವುದು. ಈ ದೂರ ಪಯಣದಲ್ಲಿ ಕನ್ನಡ ಜನಪದಗಳು ತಮ್ಮ ಅಖಂಡ ಚಹರೆಯನ್ನೂ ಕುಲದನೆಲೆಯ ಚಹರೆಯನ್ನೂ ಸ್ಥಾಪಿಸಿಕೊಳ್ಳುವಾಗ ಎದುರಿಸಿರುವ ಅಭಿವ್ಯಕ್ತಿಯ ಸವಾಲುಗಳು ಮಾರ್ಗ ಸಾಹಿತ್ಯ ಪರಂಪರೆಯ ಲೇಖಕರಿಗಿಂತ ಸಂಕೀರ್ಣವಾದವು.

ಗ್ರಾಮ ಜಾನಪದದ ಒಳಗೇ ಹಲವಾರು ಕಾಲಘಟ್ಟಗಳನ್ನು ವಿಂಗಡಿಸಿಕೊಳ್ಳಲು ಸಾಧ್ಯ. ಹರಪ್ಪ ಮೊಹೆಂಜದ್ದಾರೊ ನಾಗರೀಕತೆಗೆ ಭಿನ್ನವಾಗಿ ಬೆಳೆದಿದ್ದ ಸ್ಥಳೀಯ ನಾಗರೀಕತೆಗಳು ಗ್ರಾಮ ಸಂರಚನೆಯವು ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ. ಮೂಲತಃ ಗ್ರಾಮಜಾನಪದವು ಹರಪ್ಪ ಮೊಹೆಂಜದಾರೊ ಹಾಗು ಆರ್ಯ ಪರಂಪರೆಗಳಿಗಿಂತಲು ವಿಭಿನ್ನವಾಗಿದ್ದವು ಎಂಬುದಕ್ಕೆ ಈ ವಿವರ ನೀಡಬೇಕಾಯಿತು. ಗ್ರಾಮ ನಾಗರೀಕತೆಗಳು ಹೊರಗಿನ ಎಲ್ಲ ಆಕ್ರಮಣಗಳಿಗೂ ಒಳಗಾಗಿಯೇ ಬಹಳ ಕಾಲದ ತನಕ ವಿಸ್ತರಿಸಿಕೊಂಡು ಬಂದ ಬಗೆಯಲ್ಲಿ ಕರ್ನಾಟಕದ ಚರಿತ್ರೆಯ ಅನೇಕ ಪ್ರಶ್ನೆಗಳು ಕಳೆದುಹೋಗಿವೆ. ಗ್ರಾಮ ನಾಗರೀಕತೆಗಳ ಕಳಚಿದ ಕೊಂಡಿಗಳು ಜಾನಪದ ಪರಂಪರೆಗಳಲ್ಲಿ ಜೀವಂತ ಪಳೆಯುಳಿಕೆಯಂತೆ ರೂಪಾಂತರ ಮಾದರಿಗಳಲ್ಲಿ ಕಂಡುಬರುತ್ತವೆ. ಮೌಖಿಕ ಪರಂಪರೆಯ ಸಾಹಿತ್ಯದಿಂದ ಆ ರೀತಿಯ ಎಳೆಗಳನ್ನು ಎಟುಕಿಸಿಕೊಳ್ಳಲು ಸಾಧ್ಯವಿದೆ.

ಸಂಸ್ಕೃತಿ ವಿಕಾಸದ ವಿರಾಟ್ ಕಥನಗಳ ಈ ಪ್ರಕ್ರಿಯೆಲ್ಲಿ ಒಂದೊಂದು ಸಮುದಾಯವೂ ಸಾಂಸ್ಕೃತಿಕ ಚಹರೆಯ ಪರವಾನಗಿ ಆಚರಣೆ, ಸಂಪ್ರದಾಯ ರೀತಿನೀತಿಗಳನ್ನು ರೂಡಿಸಿಕೊಳ್ಳುವಾಗ ಲಿಂಗಭೇಧ ವರ್ಗಬೇಧ ಜಾತಿಬೇಧ ಕುಲಬೇಧ ಮುಂತಾದ ಹತ್ತಾರು ತಾರತಮ್ಯಗಳು ಪೂರ್ವಾಗ್ರಹಗಳು ಘಟಿಸಿವೆ. ಇವನ್ನೆಲ್ಲ ಮೌಖಿಕ ಪರಂಪರೆ ಬಹುರೂಪಿಯಾಗಿ ವ್ಯಕ್ತಪಡಿಸುತ್ತಿರುತ್ತವೆ. ಇಂತಹ ಸೂಕ್ಷ್ಮ ವಿಕಾಸದ ಅಖಂಡ ಚಲನೆಯನ್ನು ಕೇವಲ ಕೆಲವೇ ತೀರ್ಮಾನಗಳಿಂದ ಅರ್ಥೈಸುವುದು ತಪ್ಪು. ಜನಪದ ಸಾಹಿತ್ಯದ ಬಗೆಗಿನ ಉದಾರನಿಲುವು ಆ ಅಭಿವ್ಯಕ್ತಿಗಳ ಒಳಗಿನ ಅರ್ಥಗಳನ್ನು ತಪ್ಪಾಗಿ ಗ್ರಹಿಸಲು ದಾರಿ ಮಾಡಿದೆ.

ಗ್ರಾಮ ಜಾನಪದದ ಕಾಲ ಬಹು ವಿಸ್ತಾರವಾದದ್ದು. ಅಂದಾಜು ಈ ಐದು ಸಾವಿರ ವರ್ಷಗಳ ಹಿಂದಿನ ಅವಧಿಯಿಂದಲೇ ಗ್ರಾಮನಾಗರೀಕತೆ ಆರಂಭವಾಗಿತ್ತು ಎಂದು ಭಾವಿಸಬಹುದು. ಸ್ಪಷ್ಟವಾಗಿ ಗ್ರಾಮ ಜಾನಪದ ಕಾಲಘಟ್ಟವನ್ನು ನಿರ್ಧರಿಸಲು ಸಾಧ್ಯವಿಲ್ಲದಿದ್ದರೂ ಅನುಕೂಲಕ್ಕಾಗಿ ಅದನ್ನು ಐದುಸಾವಿರ ವರ್ಷಗಳ ಹಿಂದಿನ ಪ್ರಕ್ರಿಯೆ ಎಂದೇ ಸದ್ಯಕ್ಕೆ ಇಟ್ಟುಕೊಳ್ಳುವ ಹಳೆಯ ಶಿಲಾಯುಗದಿಂದ ಹಿಡಿದು ಕಬ್ಬಿಣದಯುಗದ ತನಕ ಗ್ರಾಮ ಪರಂಪರೆಗಳ ಕುರುಹುಗಳನ್ನು ಪ್ರಾಕ್ತನ ಶಾಸ್ತ್ರಜ್ಞರು ಗುರುತಿಸಿದ್ದಾರೆ. ಈ ವಿಚಾರಗಳನ್ನಿಲ್ಲಿ ವಿಸ್ತರಿಸಲಾಗದು. ಗ್ರಾಮ ಜಾನಪದದ ವ್ಯಾಪ್ತಿ ವಿಸ್ತಾರವಾದುದು. ದೀರ್ಘಕಾಲದ ವಿಕಾಸದಲ್ಲಿ ಅದಕ್ಕೆ ಅದರದೇ ಆದ ಅಂತಿಮ ರೂಪಗಳಿಲ್ಲ.

ಗ್ರಾಮ ಜಾನಪದದ ಕಾಲ ಬಹು ವಿಸ್ತಾರವಾದದ್ದು. ಅಂದಾಜು ಈ ಐದು ಸಾವಿರ ವರ್ಷಗಳ ಹಿಂದಿನ ಅವಧಿಯಿಂದಲೇ ಗ್ರಾಮ ನಾಗರೀಕತೆ ಆರಂಭವಾಗಿತ್ತು ಎಂದು ಭಾವಿಸಬಹುದು. ಸ್ಪಷ್ಟವಾಗಿ ಗ್ರಾಮ ಜಾನಪದ ಕಾಲಘಟ್ಟವನ್ನು ನಿರ್ಧರಿಸಲು ಸಾಧ್ಯವಿಲ್ಲದಿದ್ದರೂ ಅನುಕೂಲಕ್ಕಾಗಿ ಅದನ್ನು ಐದುಸಾವಿರ ವರ್ಷಗಳ ಹಿಂದಿನ ಪ್ರಕ್ರಿಯೆ ಎಂದೇ ಸದ್ಯಕ್ಕೆ ಇಟ್ಟುಕೊಳ್ಳುವ ಹಳೆಯ ಶಿಲಾಯುಗದಿಂದ ಹಿಡಿದು ಕಬ್ಬಿಣದ ಯುಗದ ತನಕ ಗ್ರಾಮ ಪರಂಪರೆಗಳ ಕುರುಹುಗಳನ್ನು ಪ್ರಾಕ್ತನ ಶಾಸ್ತ್ರಜ್ಞರು ಗುರುತಿಸಿದ್ದಾರೆ. ಈ ವಿಚಾರಗಳನ್ನಿಲ್ಲಿ ವಿಸ್ತರಿಸಲಾಗದು. ಗ್ರಾಮಜಾನಪದದ ವ್ಯಾಪ್ತಿ ವಿಸ್ತಾರವಾದುದು. ದೀರ್ಘಕಾಲದ ವಿಕಾಸದಲ್ಲಿ ಅದಕ್ಕೆ ಅದರದೇ ಆದ ಅಂತಿಮ ರೂಪಗಳಿಲ್ಲ. ಏಕಕಾಲಕ್ಕೆ ಹಲವು ಸಮುದಾಯಗಳು ಅಸ್ತಿತ್ವ ರೂಪಿಸಿಕೊಳ್ಳುತ್ತಿದ್ದವು. ಒಂದು ವಿಧದಲ್ಲಿ ಸಂಸ್ಕೃತಿಗಳ ಪೈಪೋಟಿಯೂ ಸಂಘರ್ಷವೂ ಒಪ್ಪಂದಗಳೂ ಒಟ್ಟಿಗೇ ಘಟಿಸುತ್ತಿದ್ದವು.

ಏಕಕಾಲಕ್ಕೆ ಹಲವು ಸಮುದಾಯಗಳು ಅಸ್ತಿತ್ವ ರೂಪಿಸಿಕೊಳ್ಳುತ್ತಿದ್ದವು. ಒಂದು ವಿಧದಲ್ಲಿ ಸಂಸ್ಕೃತಿಗಳ ಪೈಪೋಟಿಯೂ ಸಂಘರ್ಷವೂ ಒಪ್ಪಂದಗಳೂ ಒಟ್ಟಿಗೇ ಘಟಿಸುತ್ತಿದ್ದವು. ಹರಪ್ಪ ಮೊಹೆಂಜದಾರೊ ನಾಗರೀಕತೆಗಳು ಅವಸಾನದ ಅಂಚಿಗೆ ತಲುಪುತ್ತಿದ್ದ ವೇಳಗಾಗಲೆ ದಕ್ಷಿಣಭಾರತದ ನದಿ ದಂಡೆಗಳಲ್ಲಿ ಆಗ ತಾನೆ ಸ್ಥಳೀಯ ಗ್ರಾಮನಾಗರೀಕತೆಗಳು ರೂಪುತಳೆಯುತ್ತಿದ್ದವು. ಅಂತೆಯೆ ನಮ್ಮಲ್ಲೇಗ್ರಾಮ ನಾಗರೀಕತೆಗಳು ನಗರವಾಗುಯೂ ಪಲ್ಲಟಗೊಳ್ಳುತ್ತಿದ್ದವು. ಈ ವಿಕಾಸಪ್ರಕ್ರಿಯೆ ಈಗಲೂ ಮುಂದುವರಿದಿದೆ. ದೆಹಲಿ ಇದ್ದಲ್ಲಿಯೆ ಆದಿವಾಸಿ ಅಲೆಮಾರಿಗಳ ನೆಲೆಗಳೂ ಬದುಕಿನ ಪೈಪೋಟಿಯಲ್ಲಿ ತೊಡಗಿರುತ್ತವೆ. ಸಂಸ್ಕೃತಿ ವಿಕಾಸಗಳ ಈ ಮೇಲು ಕೆಳಗಿನ ಹಿಂದು ಮುಂದಿನ ಪ್ರಕ್ರಿಯೆಗಳು ವರ್ತಮಾನದ ಅನೇಕ ಸಮಸ್ಯೆಗಳಿಗೂ ಕಾರಣವಾಗಿವೆ. ಈ ವಿರಾಟ್ ಪಯಣದಲ್ಲಿ ಒಳ್ಳೆಯದು ಕೆಟ್ಟದ್ದು ಎಂಬ ದ್ವಂದ್ವ ಮಾನ ಮೌಲ್ಯಗಳ ಆಚೆಗಿನ ಮಾನವ ಸಂಬಂಧಗಳು ಘಟಿಸುತ್ತಲೆ ಬಂದಿವೆ. ಅವು ಚರಿತ್ರೆಯಲ್ಲಿ ಕಳಚಿದ ಕೊಂಡಿಗಳಾಗಿವೆ.

ಕನ್ನಡ ಜನಪದಗಳ ನಡುವೆ ಆಗಿರುವ ಇಂತಹ ಸಂಗತಿಗಳು ದಾಖಲೆಗಳನ್ನು ಉಳಿಸಿ ಮುಂದೆ ಹೋಗಿಲ್ಲ. ಭಾಗಶಃ ಇಂತಹ ಪ್ರಕ್ರಿಯೆಯೇ ದಾಖಲೆಯ ಸ್ವರೂಪದ ಆಚೆಗಿನ ಸ್ವಭಾವವೆಂದು ಕಾಣುತ್ತದೆ. ಹೊಸದೊಂದು ಆಯಾಮ ಅವಕಾಶ ಸಂದರ್ಭ ಮತ್ತು ಅಭಿವ್ಯಕ್ತಿಯನ್ನು ಕಂಡುಕೊಳ್ಳುವಾಗಲೆಲ್ಲ ತನ್ನ ಹಿಂದಿನ ಆವರಣವನ್ನು ದಾಟಿ ಅಳಿಸಿಕೊಳ್ಳುವ ಪ್ರವೃತ್ತಿಯು ಎಲ್ಲ ಇಕ್ಕಟ್ಟುಗಳ ಸಾಮಾಜಿಕ ನೆಲೆಯ ಸ್ಥಿತಿಯಿರಬಹುದು. ಜಾನಪದವೂ ಇದಕ್ಕೆ ಹೊರತಲ್ಲ. ಬದುಕುಳಿಯುವ ಜೀವನ ವಿಧಾನಗಳು ಯಾವತ್ತೂ ಕೂಡ ತನ್ನ ಮೌಲ್ಯಗಳನ್ನು ಪ್ರತಿಪಾದಿಸುತ್ತಲೆ ಇರುತ್ತವೆ. ಈ ಪ್ರತಿಪಾದನೆಯ ಅಭಿವ್ಯಕ್ತಿಯು ಪೈಪೋಟಿಯಲ್ಲಿ ಹಿಂದೆ ಅಥವಾ ದೂರ ಸರಿದ ಸಮುದಾಯಗಳ ಪ್ರಧಾನಧಾರೆಗೆ ವಿಮುಖವಾಗಿರುತ್ತವೆ.

ಮಾರ್ಗ ಮತ್ತು ದೇಸಿಯ ಅಭಿವ್ಯಕ್ತಿಗಳ ತನಕ ಈ ಸ್ವಭಾವವನ್ನು ವಿಸ್ತರಿಸಿ ಚರ್ಚಿಸಬಹುದು. ವಿಮುಖವಾದ ಅಭಿವ್ಯಕ್ತಿ ಹಿಂದೆ ಸರಿದರೆಲ್ಲ ಆ ಸಮುದಾಯ ಅಥವಾ ಅದರ ಒಂದು ಭಾಷಿಕ ಸಮೂಹ ಯಾವ ಬಗೆಯ ವೈಫಲ್ಯಗಳನ್ನು ಎದುರಿಸುತ್ತದೆ? ಅಥವಾ ಇದಕ್ಕೆ ಈ ಸ್ಥಿತಿಯು ಸವಾಲೇ ಅಲ್ಲ ಎನಿಸಿ ತನ್ನ ಹಿಂದುಳಿಯುವಿಕೆಯೇ ಸುರಕ್ಷಿತ ನೆಲೆ ಎನಿಸಬಹುದೇ? ಅವತ್ತಿನ ಈ ಸುರಕ್ಷಿತ ಭಾವ ಈ ಕಾಲದಲ್ಲಿ ಯಾವ ಗತಿಗೆ ಬಂದು ನಿಂತಿರುತ್ತದೆ? ಮೌಖಿಕ ಪರಂಪರೆ ಹಿಂದಕ್ಕೂ ಈ ಎಲ್ಲ ಇಕ್ಕಟ್ಟುಗಳನ್ನು ನಿಭಾಯಿಸಿದೆಯೇ? ವರ್ತಮಾನದ ಅಧ್ಯಯನಕಾರರು ಈ ಬಗೆಯ ಸಮಸ್ಯೆಗಳಿಗೆ ನೀಡುತ್ತಿರುವ ನಿರ್ವಚನಗಳು ಎಷ್ಟರ ಮಟ್ಟಿಗೆ ಸೂಕ್ತವಾಗಿವೆ? ತಮ್ಮದೇ ಗತ ಪರಂಪರೆಗಳನ್ನು ಮರೆತಂತಿರುವ ವರ್ತಮಾನದ ಗ್ರಾಮಸಮಾಜ ನಿರೀಕ್ಷಿಸುತ್ತಿರುವ ಪರಿಹಾರಗಳೇನು? ಒಂದೇ ಉಸಿರಿಗೆ ಇವನ್ನೆಲ್ಲ ಯಾಕೆ ಕೇಳಬೇಕಿದೆ ಎಂದರೆ ನೆನ್ನೆಯ ಜನಪದ ಪರಂಪರೆಗಳ ಉಸಿರುಗಟ್ಟಿಸುವ ಪರಿಸ್ಥಿತಿಯ ಪರಿಣಾಮವಿರಬಹುದು. ಈ ಎಲ್ಲವೂ ಬೇರೆ ಬೇರೆ ಅಲ್ಲ. ಅಸ್ತಿತ್ವದ ಒಂದೇ ವಿಷಯವು ಬಹುಕಾಲ ಮಾನಗಳಲ್ಲಿ ಮಾತ್ರ ಬೇರೆ ಬೇರೆ ಯತ್ನಗಳನ್ನು ಮಾಡಿದೆ.

ಕರ್ನಾಟಕದ ಸಂಸ್ಕೃತಿಗಳ ವಿಕಾಸದ ಪೈಪೋಟಿಯಲ್ಲಿ ತಮಗೆ ಬೇಕಾದ ಉತ್ತರಗಳನ್ನು ಎಷ್ಟೋ ಸಮುದಾಯಗಳು ಈಗಲೂ ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೆ ಅಷ್ಟರಲ್ಲಾಗಲೇ ಅಂತಹ ಸಮುದಾಯಗಳು ಹೊಸ ಸವಾಲುಗಳನ್ನು ಎದುರಿಸಬೇಕಾಗಿದೆ. ಕಾಲದ ಉದ್ದಕ್ಕೂ ಪರಿಹಾರಗೊಳ್ಳದ ಪ್ರಶ್ನೆಗಳು ಸವಾಲುಗಳು ಒಂದರೊಳಗೊಂದು ಬೆರೆತು ಅಂಚಿನ ಸಮುದಾಯಗಳನ್ನು ತೀವ್ರವಾಗಿ ಬಾಧಿಸಿವೆ. ಸೋತ ಸಮುದಾಯಗಳ ಸಂಸ್ಕೃತಿಗಳು ಒಟ್ಟಾಗಿಯೇ ಈಗಲೂ ಯಾವ ಬಗೆಯ ರಾಜಕೀಯ ಆರ್ಥಿಕ ಶಕ್ತಿಯನ್ನು ವರ್ತಮಾನದ ಸಮಾಜದಲ್ಲಿ ಪಡೆಯಲಾಗಿಲ್ಲ. ಆದರೆ ನೆನ್ನೆಯ ವಿಜೇತರಾದ ಸಮುದಾಯಗಳು ತಮ್ಮ ಸಂಸ್ಕೃತಿಗಳ ಮೂಲಕವೇ ವಾಸ್ತವ ಅಧಿಕಾರವನ್ನು ಪಡೆದಿರುತ್ತವೆ. ಅಧಿಕಾರವಿಲ್ಲದ ಸಂಸ್ಕೃತಿಯನ್ನು ಹೊತ್ತುಕೊಂಡು ಬಂದಿರುವ ಸಮುದಾಯಗಳು ಮೃತ ಸಂಪತ್ತಿಗೆ ಮಾತ್ರ ಒಡೆಯರಾಗಿರುತ್ತವೆ. ಭೂಮಿಯ ಮೇಲಿನ ಆಧಿಪತ್ಯವನ್ನು ಸ್ಥಾಪಿಸಿದ್ದ ಸಮುದಾಯಗಳು ಗ್ರಾಮನಾಗರೀಕತೆಯ ಕಾಲದಿಂದಲೂ ಬಲಿಷ್ಠವಾಗಿಯೆ ಉಳಿದುಕೊಂಡು ಬಂದಿವೆ.

ಮೇಲಿನ ಈ ವಿವರಗಳು ಗ್ರಾಮ ಜಾನಪದದ ತತ್ವವಾಗಿ ಸೂತ್ರವಾಗಿ ಅಂಖಿತ ಸಂವಿಧಾನವಾಗಿ ಅಥವಾ ಮೌಖಿಕ ಸಂವಿಧಾನವಾಗಿ ಕಾರ್ಯ ನಿರ್ವಹಿಸಿವೆ. ಸಂಸ್ಕೃ

ತಿಯ ಹೆಸರಿನ ಯಜಮಾನ್ಯ ಮೌಲ್ಯಗಳ ಮೌಖಿಕ ಸಂವಿಧಾನ ಯಾವುದೇ ಸಂವಿಧಾನಕ್ಕಿಂತಲು ಬಲಶಾಲಿಯಾದುದು. ಗೆದ್ದವರ ಮಾತೇ ಯಾವತ್ತೂ ನಡೆಯುವುದರಿಂದ ಅಂತವರ ಗೆಲುವು ಅನ್ಯಾಯಗಳಿಗೂ ದಾರಿ ಮಾಡುತ್ತದೆ. ಮೌಖಿಕ ಪರಂಪರೆ ಈ ಪರಿಯಲ್ಲಿ ಯಾವ ಮಾತನ್ನು ಆಡಿದೆ ಯಾವ ದನಿಯನ್ನು ನುಂಗಿಕೊಂಡಿದೆ ಎಂಬುದನ್ನು ಪರಿಭಾವಿಸದೆ; ಜನಪದ ಸಾಹಿತ್ಯ ಜನತೆಯ ಸಮಷ್ಟಿಭಾವದ ಸಾಹಿತ್ಯ ಎಂದು ಸಾರಾಸಗಟಾಗಿ ಉದಾರ ಅರ್ಥವನ್ನು ನೀಡಲಾಗದು. ಮೌಖಿಕ ಪರಂಪರೆಯು ಇಂತಹ ಇಕ್ಕಟ್ಟಿನಲ್ಲೇ ತನ್ನದಲ್ಲದ ಕಥನವನ್ನು ಹಾಡಿ ತನ್ನದಲ್ಲದ ಚಹರೆಯನ್ನು ಧರಿಸಿ ತನ್ನದೇ ಅಲ್ಲದ ನೀತಿಯನ್ನು ಸಾರಿರುವುದು. ಗೆದ್ದವರ ಪರವಾಗಿ ಗೆದ್ದವರದೇ ಕಥನವನ್ನು ನುಡಿಸಬೇಕಾದ ಅನೇಕ ಪ್ರಕಾರಗಳು ಮೌಖಿಕ ಪರಂಪರೆಯಲ್ಲಿ ಸಾಗಿಬಂದಿವೆ.

ಹೀಗಾಗಿಯೆ ಬಡವರೇ ಕಟ್ಟಿಹಾಡಿದ ಪದಗಳಲ್ಲಿ ಕಲೆಗಳಲ್ಲಿ ಕಥೆಗಳಲ್ಲಿ ಅವರ ನಿಜದನಿಯೇ ದಾಖಲಾಗದೆ ಪಲಾಯನದ ಪರಾಧೀನದ ಅನಾಮದೇಯವಾದ ಅಭಿವ್ಯಕ್ತಿ ಹೆಚ್ಚಿನ ಪ್ರಮಾಣದಲ್ಲಿ ವ್ಯಕ್ತವಾಗಿರುವುದು. ಅಪರೂಪಕ್ಕೆ ಸಿಗುವ ಪ್ರತಿರೋಧದ ಅಂಶಗಳನ್ನೆ ಪ್ರತಿ ಸಂಸ್ಕೃತಿ ಎಂದು ತೀರ್ಮಾನಿಸುವುದು ಕೂಡ ಅನ್ಯಾಯವಾಗಿ ಬಿಡಬಲ್ಲದು. ಹಾಗೆಯೆ ಜನವಾಣಿ ಬೇರು ಕವಿವಾಣಿ ಹೂವು ಎಂಬ ದೇಶಿ ಮತ್ತು ಮಾರ್ಗಗಳ ಬಗೆಗಿನ ಉದಾರ ನಿಲುವು ಕೂಡ ನಮ್ಮ ದಾಹಕ್ಕೆ ಬರದ ಮರೀಚಿಕೆಯಂತೆ ತೋರುತ್ತದೆ.

ಗ್ರಾಮ ಜಾನಪದದ ನೆಲೆಯಲ್ಲೆ ಪ್ರಾಚೀನ ಕರ್ನಾಟಕದ ಸಂಸ್ಕೃತಿ ವಿಕಾಸದ ವಿಷಯಗಳನ್ನು ಮೇಲೆ ಸ್ಥೂಲವಾಗಿ ಪ್ರಸ್ತಾಪಿಸಿದ್ದು ಮುಂದಿನ ಚರ್ಚೆಯ ವಿಷಯದ ಕಾರಣಕ್ಕಾಗಿ. ಗ್ರಾಮ ಜಾನಪದ ಮಧ್ಯಕಾಲೀನ ಕಾಲಘಟ್ಟದ ವೇಳೆಗೆ ಬರುವಷ್ಟರಲ್ಲಿ ನಿಚ್ಚಳವಾಗಿ ಕೆಲವು ಸಮುದಾಯಗಳು ಯಜಮಾನ ಜಾತಿಗಳಾಗಿ ಮಾರ್ಪಟ್ಟಿದ್ದವು. ವೈದಿಕ ಪರಂಪರೆ ಗ್ರಾಮ ನಾಗರೀಕತೆಯ ದೇವಾಲಯಗಳ ಗರ್ಭ ಗುಡಿಗೆ ಬಂದಾಗಿತ್ತು. ಗ್ರಾಮದೈವಗಳು ಆ ಮೊದಲೆ ಪುರಷ ಪ್ರಧಾನ ದೈವಗಳ ಅವತಾರವನ್ನು ಒಪ್ಪಿಕೊಂಡಿದ್ದವು. ಸ್ತ್ರೀದೈವ, ಮಾತೃದೈವಗಳು ಅಧಿಕಾರ ಕಳೆದುಕೊಂಡಿದ್ದವು. ಆದಿಮ ಜಾನಪದಲ್ಲಿದ್ದ ಸ್ತ್ರೀ ಮೌಲ್ಯಗಳು ಅರ್ಥಹೀನವಾಗಿದ್ದವು. ನಿಸರ್ಗವನ್ನು ಮಂತ್ರದಿಂದ ಗೆಲ್ಲಬಹುದು ಎಂದು ತಂತ್ರ ಹುಡುಕುತ್ತಿದ್ದ ಪುರುಷ ಸ್ತ್ರೀಯ ಶಕ್ತಿಗಿಂತಲೂ ಮೀರಿದ್ದು ಯಾವುದೆಂಬ ವಿಚಾರದಲ್ಲಿ ಸ್ವಸಾಮರ್ಥ್ಯವನ್ನು ಕಂಡುಕೊಂಡಿದ್ದ.

ಸೃಷ್ಟಿಯ ಶಕ್ತಿ ತನ್ನ ಬಲದಿಂದಲೇ ಘಟಿಸುವುದೆಂದು ಘೋಷಿಸಿದ್ದ. ಹೆಣ್ಣಿನ ಮೇಲಿನ ಅಧಿಕಾರವನ್ನು ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯಿಂದ ಸಾಧಿಸಿಕೊಂಡಿದ್ದ ಇವೆಲ್ಲ ಸಂಸ್ಕೃತಿ ವಿಕಾಸದ ದೂರ ದೂರದ

ಗ್ರಾಮ ಜಾನಪದದ ನೆಲೆಯಲ್ಲೆ ಪ್ರಾಚೀನ ಕರ್ನಾಟಕದ ಸಂಸ್ಕೃತಿ ವಿಕಾಸದ ವಿಷಯಗಳನ್ನು ಮೇಲೆ ಸ್ಥೂಲವಾಗಿ ಪ್ರಸ್ತಾಪಿಸಿದ್ದು ಮುಂದಿನ ಚರ್ಚೆಯ ವಿಷಯದ ಕಾರಣಕ್ಕಾಗಿ. ಗ್ರಾಮ ಜಾನಪದ ಮಧ್ಯಕಾಲೀನ ಕಾಲಘಟ್ಟದ ವೇಳೆಗೆ ಬರುವಷ್ಟರಲ್ಲಿ ನಿಚ್ಚಳವಾಗಿ ಕೆಲವು ಸಮುದಾಯಗಳು ಯಜಮಾನ ಜಾತಿಗಳಾಗಿ ಮಾರ್ಪಟ್ಟಿದ್ದವು. ವೈದಿಕ ಪರಂಪರೆ ಗ್ರಾಮ ನಾಗರೀಕತೆಯ ದೇವಾಲಯಗಳ ಗರ್ಭ ಗುಡಿಗೆ ಬಂದಾಗಿತ್ತು. ಗ್ರಾಮದೈವಗಳು ಆ ಮೊದಲೆ ಪುರಷ ಪ್ರಧಾನ ದೈವಗಳ ಅವತಾರವನ್ನು ಒಪ್ಪಿಕೊಂಡಿದ್ದವು. ಸ್ತ್ರೀದೈವ, ಮಾತೃದೈವಗಳು ಅಧಿಕಾರ ಕಳೆದುಕೊಂಡಿದ್ದವು. ಆದಿಮ ಜಾನಪದಲ್ಲಿದ್ದ ಸ್ತ್ರೀ ಮೌಲ್ಯಗಳು ಅರ್ಥಹೀನವಾಗಿದ್ದವು. ನಿಸರ್ಗವನ್ನು ಮಂತ್ರದಿಂದ ಗೆಲ್ಲಬಹುದು ಎಂದು ತಂತ್ರ ಹುಡುಕುತ್ತಿದ್ದ ಪುರುಷ ಸ್ತ್ರೀಯ ಶಕ್ತಿಗಿಂತಲೂ ಮೀರಿದ್ದು ಯಾವುದೆಂಬ ವಿಚಾರದಲ್ಲಿ ಸ್ವಸಾಮರ್ಥ್ಯವನ್ನು ಕಂಡುಕೊಂಡಿದ್ದ.

ಸಂಬಂಧಗಳು. ಮಂತ್ರ ವಿದ್ಯೆ ಕೊನೆಗೆ ಸಂಸ್ಕೃತಿ ಹಾಗು ಧರ್ಮ ಇವೆರಡೂ ರೀತಿಗೂ ತಾನು ಬೇರೆ ಎಂಬಂತೆ ಬೇರೊಂದು ಜ್ಞಾನವಾಗಿ ರೂಪುಗೊಂಡ ವಿಧಾನ ಬೆರೆಯೇ ಇದೆ. ಇಲ್ಲು ಕೂಡ ಮಂತ್ರವಿದ್ಯೆಯನ್ನು ಧರ್ಮ ಮತ್ತು ಸಂಸ್ಕೃತಿಗಳು ತಮಗೆ ಬೇಕಾದಂತೆ ಬಳಸಿಕೊಂಡವು. ಗ್ರಾಮ ಸಮಾಜದ ಆಚೆ ಮರೆಗಿದ್ದ ಆದಿವಾಸಿಗಳು ಮಂತ್ರವಿದ್ಯೆಯನ್ನೆ ಪ್ರಧಾನವಾಗಿ ಉಳಿಸಿಕೊಂಡರು. ಗ್ರಾಮ ಜಾನಪದದ ಒಳಗೆ ಏಕಕಾಲಕ್ಕೆ ಕಾಲದ ಬಹು ಅಲೆಗಳು ಒಂದೊಂದು ಸಮುದಾಯದ ಅಗತ್ಯಕ್ಕೆ ತಕ್ಕಂತೆ ಬಳಕೆಯಾಗುತ್ತಿದ್ದವು. ಈ ಸ್ಥಿತಿಗಳನ್ನೆಲ್ಲ ಜೋಡಿಸಿಕೊಳ್ಳುವುದರಲ್ಲಿ ಅಧ್ಯಯನದ ಗೊಂದಲಗಳಿವೆ. ಕಿರಿಯರಿಗೆ ಸರಳವಾಗಿ ಬಿಡಿಸಿ ಹೇಳುವ ಕನ್ನಡದ ನಿರೂಪಣೆಗಳು ಇಲ್ಲದೆ ಇರುವುದರಿಂದ ಪ್ರಾಥಮಿಕ ವಿಷಯಗಳೇ ಮನವರಿಕೆ ಆಗದಂತಿವೆ.

ಮೇಲೆ ವಿವರಿಸುತ್ತಿದ್ದ ವಿಷಯಕ್ಕೆ ಬರುವೆ. ವೈದಿಕ ಧರ್ಮ ತನ್ನ ಪೂರ್ವ ಕಾಲದಲ್ಲಿ ಅಂದರೆ ವೇದಗಳ ಕಾಲದಲ್ಲಿಟ್ಟುಕೊಂಡಿದ್ದ ನಂಬಿಕೆಗಳನ್ನು ಚೌಕಟ್ಟಿನಲ್ಲಿ ಬಂಧಿಸಿ ವೇದೋತ್ತರ ಕಾಲದ ಜನಾಂಗೀಯ ಪ್ರತಿಷ್ಠೆಯ ಆಚಾರ ವಿಚರಗಳನ್ನು ಮುಂದು ಮಾಡಿದ್ದರಿಂದ ಜಾತಿ ಪದ್ಧತಿ ತಂತಾನೆ ಬೆಳೆಯಿತೆಂಬುದನ್ನು ಈಗಾಗಲೆ ಮನಗಂಡಿದ್ದೇವೆ. ಜಾತಿ ಪದ್ಧತಿಯು ಕೇವಲ 'ವೈದಿಕ' ಬ್ರಾಹ್ಮಣರೊಬ್ಬರಿಂದಲೇ ಬೃಹತ್ ಪ್ರಮಾಣದಲ್ಲಿ ಬೆಳೆಯಲಿಲ್ಲ. ಅದು ವಿವಿಧ ಕಾಲಗಳಲ್ಲಿ ಗ್ರಾಮನಾಗರೀಕತೆಯ ಗ್ರಾಮಸಮಾಜದ ಮೂಲಕವೇ ವೈದಿಕೇತರರಿಂದಲೂ ವ್ಯಾಪಕವಾಗಿ ಬೆಳೆದಿದೆ. ಪಣ ಬಣ ಕುಲ ಬೆಡಗು ಪ್ರಕಾರ ಆರ್ಥಿಕ ವ್ಯವಸ್ಥೆಯ ರಚನೆಯಲ್ಲಿ ಜೀವಿಸುತ್ತಿದ್ದ ವೃತ್ತಿಗಳು ಮಲತಃ ಜಾತಿಗಳಾಗಿರಲಿಲ್ಲ. ಅವು ಯಾವತ್ತಿನಿಂದ ಜಾತಿಗಳಾಗಿ ಮಾರ್ಪಟ್ಟವು? ಜಾತಿ ವ್ಯವಸ್ಥೆಯ ಉಪ ಜಾತಿಗಳು ಹೇಗೆ ಕವಲೊಡೆದವು. ಪ್ರತಿಯೊಂದು ಜಾತಿಯು ಶ್ರೇಣಿಗಳಿಂದ ವಿಭಾಗಗೊಂಡದ್ದು ಕೇವಲ ವರ್ಗಾಶ್ರಮ ಮಂತ್ರಗಳಿಂದಲೇ ಸಾಧ್ಯವಾಯಿತೆ?

ಕೇವಲ ನಾಲ್ಕು ವರ್ಣಗಳು ಇಷ್ಟು ಸಾವಿರ ಜಾತಿಗಾಳಗಿ ವಿಭಜನೆಗೊಳ್ಳುತ್ತಲೇ ಇರುವುದರ ಮರ್ಮವೇನು? ಪ್ರತಿಯೊಂದು ಕಾಲಘಟ್ಟದಲ್ಲು ಹೊಸ ಜಾತಿಗಳು ಹೇಗೆ ಹುಟ್ಟಿಕೊಳ್ಳುತ್ತವೆ? ಗ್ರಾಮನಾಗರೀಕತೆ ಮತ್ತು ಅಲ್ಲಿನ ಜಾನಪದ, ಸಂಸ್ಕೃತಿ ಇವುಗಳು ಜಾತಿ ವ್ಯವಸ್ಥೆಯನ್ನು 'ಮೌಲ್ಯ'ದ ಹೆಸರಲ್ಲಿ ಹೇಗೆ ವೃದ್ಧಿಸಿವೆ? ಗ್ರಾಮ ಸಮಾಜ ವಿಸ್ತಾರಗೊಂಡು ಬಲಿಷ್ಟವಾದಂತೆ ಅದರ ಮೂಲದಿಂದಲೇ ಹುಟ್ಟಿದ ಸಾಮ್ರಾಜ್ಯ ವ್ಯವಸ್ಥೆ ಜಾತಿ ವ್ಯವಸ್ಥೆಯನ್ನು ಇನ್ನಷ್ಟು ಸ್ಥಾಪಿಸಿತಲ್ಲವೆ? ಪುರೋಹಿತಾಹಿಯು ಸಾಮ್ರಾಜ್ಯದ ನೀತಿ ನಿರ್ದೇಶನಗಳನ್ನು-ತನ್ನ ಧರ್ಮದ ಮೂಲಕವೇ ತಾನೆ ಬಿತ್ತುತ್ತಿದ್ದುದು? ಇದರಿಂದ ಗ್ರಾಮ ಜಾನಪದ ಯಾವ ಯಾವ ಮೌಲ್ಯಗಳನ್ನು ಅಂಗೀಕರಿಸಿತು? ಸಾಮ್ರಾಜ್ಯಶಾಹಿಯ ಮುಂದುವರಿಕೆಯಾಗಿಯೆ ತಾನೆ ಊಳಿಗಮಾನ್ಯ ವ್ಯವಸ್ಥೆ ಗ್ರಾಮನಾಗರೀಕತೆಯನ್ನು ಕಟ್ಟಿಬೆಳೆಸಿ ಆಳಿದ್ದುದು? ಈ ಎಲ್ಲ ಪ್ರಕ್ರಿಯೆಗಳು ಹೊಸಕಾಲದ ರಾಜಕಾರಣ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಯಾವ ಸ್ವರೂಪದಲ್ಲಿ ಮುಂದುವರಿದಿವೆ?

ಈ ಎಲ್ಲ ಪ್ರಶ್ನೆಗಳಿಗೆ ಮಧ್ಯಕಾಲೀನ ಸಮಾಜದ ಇತಿಹಾಸಲ್ಲಿ ಅನೇಕ ಮಿಸ್ಸಿಂಗ್ ಲಿಂಕ್‌ಗಳು ಸಿಗುತ್ತವೆ. ಬಹಳ ಹಿಂದೆಯೆ ಜೈನ ಬೌದ್ಧ ಧರ್ಮಗಳ ಪ್ರಭಾವಳಿಯಿಂದ ಹಿಂದೂ ಧರ್ಮವೇ ದಿಕ್ಕಟ್ಟಿತ್ತು. ತನ್ನಲ್ಲೇ ಅದು

ಪರಿವರ್ತನೆ ಮಾಡಿಕೊಳ್ಳುವ ತಂತ್ರಗಳನ್ನು ಹುಡುಕುತ್ತಿತ್ತು. ಚಾತುರ್ವರ್ಣ ವ್ಯವಸ್ಥೆಯನ್ನು ಮತ್ತೆ ಮತ್ತೆ ಛಿದ್ರಗೊಳಿಸಿದರೆ ಮಾತ್ರ ಹಿಂದೂ ಧರ್ಮ ಬದುಕುಳಿಯಲು ಸಾಧ್ಯ ಎಂಬ ಹುನ್ನಾರ ಮಂತ್ರ ಅವರಿಗೆ ತಿಳಿಯಿತು. ಬೌದ್ಧ ಧರ್ಮ ಮತಾಂತರ ಮಾಡುತ್ತಿದ್ದರೆ ಹಿಂದೂಧರ್ಮ ಮತಾಂತರ ಮಾಡಿಸುವ ಸಾಧ್ಯತೆಯೆ ಅದಕ್ಕೆ ಇರಲಿಲ್ಲ.

ಜಾತಿಗಳಿಗೆ ಯಾರೂ ಮತಾಂತರವಾಗಲು ಅವಕಾಶವಿರಲಿಲ್ಲ. ಎಲ್ಲರೂ ಬ್ರಾಹ್ಮಣ ಜಾತಿಗೆ ಸೇರಿಸಿಕೊಳ್ಳಿ ಎಂದು ದೀಕ್ಷೆ ಕೋರಿದರೆ ಇವತ್ತಿಗೂ ಆ ಅವಕಾಶ ಅಸಾಧ್ಯ. ತನ್ನ ಶ್ರೇಷ್ಠತೆಯೂ ಉಳಿಯಬೇಕು, ಜಾತಿಯೂ ಸೀಳಿಕೊಂಡು ಬೆಳೆಯಬೇಕು, ಹಿಂದೂ ಧರ್ಮದ ರಕ್ಷಣೆಯೂ ಆಗಬೇಕು ಎಂದರೆ ವೈದಿಕರಿಗೆ ಇದ್ದ ಏಕ ಮಾತ್ರ ದಾರಿ ಎಂದರೆ ನಾಲ್ಕೇ ನಾಲ್ಕು ವರ್ಣಗಳನ್ನು ಸಾವಿರಾರು ಜಾತಿಗಳಾಗಿ ವಿಂಗಡಿಸುವ ಅಧಿಕಾರವನ್ನು ತನ್ನ ನಂತರದ ಕ್ಷತ್ರಿಯ ಸಮುದಾಯಗಳಿಗೆ ನೀಡಿತು. ರಾಜಶಾಹಿಯು ಇದನ್ನು ಯಶಸ್ವಿಯಾಗಿ ಮುಂದುವರಿಸಿ ತನ್ನ ಸ್ಥಳೀಯ ಪ್ರತಿನಿಧಿಗಳಾದ ಭೂಮಾಲೀಕ ಜಾತಿಗಳಿಗೆ ಜಾತಿ ನಿಯಂತ್ರಣದ ದಂಡಾಧಿಕಾರವನ್ನು ವರ್ಗಾಯಿಸಿತು. ಗ್ರಾಮ ನಾಗರೀಕತೆಯಲ್ಲಿದ್ದ ವೃತ್ತಿಗಳನ್ನೆಲ್ಲ ಜಾತಿಗಳಾಗಿ ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ಭೂಮಾಲೀಕ ಜಾತಿಗಳಿಗೆ ಅನುಕೂಲವೆ ಆಯಿತು. ಇದನ್ನು ಅನುಸರಿಸಿಯೆ ಗ್ರಾಮ ಜಾನಪದ ಅಭಿವ್ಯಕ್ತಿಗಳಲ್ಲಿ ತನ್ನದಲ್ಲದ ಎಷ್ಟೋ ಅಂಶಗಳನ್ನು ಅಳವಡಿಸಿಕೊಂಡಿತು.

ಮಧ್ಯಕಾಲೀನ ಕರ್ನಾಟಕದ ಗ್ರಾಮ ಜಾನಪದ ಹೊಸ ಬಗೆಯ ಅಭಿವ್ಯಕ್ತಿಗಳನ್ನು ಮೌಖಿಕ ಪರಂಪರೆಯಲ್ಲಿ ಕಂಡುಕೊಳ್ಳುವಾಗ ಪುರುಷ ಪ್ರಧಾನ ತತ್ವ ಪ್ರಧಾನ ಧೋರಣೆಯಾಯಿತು. ಮಾತೃ ಸಂವೇದನೆಯ ನೈಸರ್ಗಿಕ ಭಾವದ ತತ್ವ ಅಧಿಕಾರ ಕಳೆದುಕೊಂಡು ಅದು ಕೇವಲ ಗರತಿಯ ಮುಖವಾಣಿಯಾಗಲು ತೊಡಗಿತು. ಅಂದರೆ ಪುರುಷಾಧಿಪತ್ಯದ ಅಂಕೆಶಂಕೆಯ ಗರತಿಯ ಗುಣಗಳನ್ನು ಸ್ತುತಿಸಿ ಪುರುಷ ಪಾರಮ್ಯವನ್ನು ಕೊಂಡಾಡಬೇಕಾಯಿತು. ಪುರುಷ ದೈವಗಳು ಸ್ತ್ರೀದೈವಗಳ ಮೇಲೆ ಇದೇ ಕಾಲದಲ್ಲಿ ದಿಗ್ವಿಜಯ ಸಾಧಿಸಿದವು. ಕರ್ನಾಟಕದ ರಾಜವಂಶಗಳು ಸಾಮ್ರಾಜ್ಯದ ಕದನಗಳಲ್ಲಿ ಮುಳುಗಿ ದಿಗ್ವಿಜಯವನ್ನೊ ಸೋಲನ್ನೊ ಸಂಧಾನವನ್ನೊ ಮಾಡಿಕೊಳ್ಳುತ್ತಿದ್ದ ಕಾಲದಲ್ಲೆ ಸಮುದಾಯಗಳು ತಮ್ಮೊಳಗೇ ಮಾಡಿಕೊಳ್ಳುತ್ತಿದ್ದ ಸಾಂಸ್ಕೃತಿಕ ಯುದ್ಧಗಳು ಅದರ ಸೋಲು ಹಾಗು ಒಪ್ಪಂದಗಳು ಮತ್ತು ಲಿಂಗ ತಾರತಮ್ಯದ ನೀತಿಗಳು ಕಳೆದು ಹೋಗಿರುವ ಕೊಂಡಿಗಳಂತೆ ಬಾಸವಾಗುತ್ತವೆ.

ಈ ಬಗ್ಗೆ ಚರಿತ್ರಕಾರರ ಮೌನವನ್ನು ಏನೆಂದು ಕರೆಯುವುದು? ಗ್ರಾಮದೈವಗಳು ಹಿಂದೆ ಸರಿದಂತೆ ಕೇವಲ ಅವು ಅಧಿಕಾರ ರಹಿತ ಆಚರಣೆಯ ಭಾಗವಾಗಿ ಆದರೆ ಪುರುಷಾಧಿಕಾರದ ಮುಖವಾಣಿಯಾಗಿ ನಿಂತದ್ದನ್ನು ಹೇಗೆ ಭಾವಿಸುವುದು? ಗ್ರಾಮದೈವ ಸ್ತ್ರೀಯೇ ಆಗಿದ್ದರೂ ಆ ಸ್ತ್ರೀದೈವದ ಪೂಜಾರಿ ಪುರುಷನೇ ಆಗಿದ್ದ ನೆಂಬುದನ್ನು ಉಪೇಕ್ಷಿಸಲಾಗದು. ಬಹುಪಾಲು ಎಲ್ಲ ಗ್ರಾಮದೈವಗಳ ಪೂಜಾರಿಗಳು ಆ ಗ್ರಾಮದ ಭೂಮಾಲೀಕನ ಆಣತಿಯಂತೆಯೆ ಸಾಂಸ್ಕೃತಿಕ ನೀತಿನಿಯಮಗಳನ್ನು ನಿರೂಪಿಸಬೇಕಾಗಿತ್ತು. ಇನ್ನೂ ಒಂದು ಮುಖ ಇಲ್ಲಿದೆ. ಗ್ರಾಮದೈವಗಳು ಹೆಚ್ಚಿನ ಪ್ರಮಾಣದಲ್ಲಿ ಪಶುಪಾಲಕ ಸಮುದಾಯಗಳ ಮೂಲದವು ಹಾಗೆಯೆ ತಳಸಮುದಾಯಗಳ ಕೇರಿಗಳಿಂದ ಬಂದವುಗಳು. ಏಕಕಾಲಕ್ಕೆ ತಳಜಾತಿ ಹಾಗು ಆ ಜಾತಿಗಳ ನಿಸರ್ಗನಿಷ್ಠ ಗ್ರಾಮದೈವಗಳ ಸ್ತ್ರೀ ಸಂಕೇತಗಳನ್ನು ಊಳಿಗಮಾನ್ಯ ವ್ಯವಸ್ಥೆಯು ಗೆದ್ದುಕೊಂಡು ತನ್ನ ವ್ಯವಸ್ಥೆಯನ್ನಾಗಿ ಮಾಡಿಕೊಂಡಿದೆ. ಈ ದಿಸೆಯಲ್ಲಿ ಮೌಖಿಕ ಪರಂಪರೆಯು ತನಗೆ ತಾನೇ ನಿಷ್ಠವಾಗದೆ ಹಾಡುವ ಹಾಡಿನಲ್ಲಿ ತನ್ನನ್ನು ತಾನೇ ಮರೆಮಾಚಿಕೊಳ್ಳುವ ಈ ಪರಿಯನ್ನು ಅಪ್ಪಟ ಜನತೆಯ ಸಾಹಿತ್ಯ ಎಂದು ಹೇಗೆ ಕರೆಯುವುದು?

ಸೋತ ಸ್ತ್ರೀದೈವಗಳು ಪುರುಷಾಧಿಪತ್ಯದ ಒಪ್ಪಂದಕ್ಕೆ ಸಿಲುಕಿದಾಗ ಗ್ರಾಮ ಸಮಾಜದ ಮನಸ್ಥಿತಿಯ ಮೇಲೆ ಅದರಲ್ಲೂ ಮಹಿಳೆಯರ ಮೇಲೆ ತೀವ್ರತರನಾದ ಆಘಾತವಾಗಿರುವುದನ್ನು ಗಮನಿಸಬಹುದು. ಸ್ತ್ರೀ ಕೇಂದ್ರಿತ ಆಚರಣೆಗಳು ಭಗ್ನವಾದಾಗ ಕೌಟುಂಬಿಕ ವ್ಯವಸ್ಥೆಯ ಮೇಲೆ ಏನೆಲ್ಲ ಪರಿಣಾಮಗಳು ಉಂಟಾಗಿರಬಹುದು? ಗರತಿಯ ಗೌರವದ ಹುಸಿಗೂ ಅವಕಾಶವಿಲ್ಲದಾದಾಗ ಆಕೆ ಯಾವ ಬಗೆಯ ದೈವದ ಮೋರೆ ಹೊಕ್ಕಳು. ವೀರಭದ್ರ, ಹನುಮಂತರಂತಹ ವೀರ ಪುರುಷ ದೈವಗಳು ಮಧ್ಯಕಾಲೀನ ಕರ್ನಾಟಕದ ಸಾಮ್ರಾಜ್ಯಶಾಹಿ ಇತಿಹಾಸದಲ್ಲಿ ಜಾತಿಯ ಪತಾಕೆಗಳನ್ನೂ ಧರಿಸಿ ವಿಜೃಂಭಿಸುವುದನ್ನು ನೋಡಬಹುದು. ಇಂತಹ ದೈವಗಳಿಗೆ ವಿರುದ್ಧವಾಗಿ ಮಹಿಳೆ ಎದುರು ನಿಲ್ಲಲು ಸಾಧ್ಯವಿರಲಿಲ್ಲ.

ಎಲ್ಲಮ್ಮ, ಸಿರಿ.ಯಂತಹ ಸ್ತ್ರೀದೈವಗಳು ಕೂಡ ಪುರುಷಾಧಿಪತ್ಯದ ಲೈಂಗಿಕ ಶೋಷಣೆಗೆ ಪರವಾನಗಿ ಕೊಡುವಂತೆ ನಿಯಂತ್ರಣ ಆಗಿ ಹೋಗಿತ್ತು. ಈ ಸ್ಥಿತಿಯಲ್ಲಿ ಮಾನಸಿಕ ಹಿಂಸೆಗೆ ಒಳಗಾದ ಮಹಿಳೆ ಭೂತ ಪಿಶಾಚಿ ದೆವ್ವ ಗಾಳಿಯಂತಹ 'ದುಷ್ಟ'ಶಕ್ತಿಗಳನ್ನೆ ತನ್ನನ್ನು ಕಾಯುವ ಶಕ್ತಿಗಳು ಎಂಬಂತೆ ಭ್ರಮಿಸುವ ಇಚ್ಛಿತ ವಿಕಲ್ಪನೆಗಳಿಗೆ ಒಳಗಾಗಬೇಕಾಯಿತು. ಮೈಮೇಲೆ ದೆವ್ವ ಪಿಶಾಚಿ ಬರುವ ನಂಬಿಕೆ ಆಚರಣೆಗಳು ಇದರಿಂದ ಮೈದಳೆದವು. ಗಂಡನ ಮನೆಯಲ್ಲೂ ಸ್ವಾತಂತ್ರ್ಯವಿಲ್ಲದೆ; ತವರಿನಲ್ಲೂ ನೆಲೆ ಇಲ್ಲದೆ ಅತಂತ್ರರಾದ ಮಹಿಳೆಯರು ದೆವ್ವ ಎಂಬ ದೈವವನ್ನು ಸೃಷ್ಟಿಸಿಕೊಂಡದ್ದನ್ನು ಕೇವಲ ಮೂಢನಂಬಿಕೆ.

ಜಾತಿಗಳಿಗೆ ಯಾರೂ ಮತಾಂತರವಾಗಲು ಅವಕಾಶವಿರಲಿಲ್ಲ. ಎಲ್ಲರೂ ಬ್ರಾಹ್ಮಣ ಜಾತಿಗೆ ಸೇರಿಸಿಕೊಳ್ಳಿ ಎಂದು ದೀಕ್ಷೆ ಕೋರಿದರೆ ಇವತ್ತಿಗೂ ಆ ಅವಕಾಶ ಅಸಾಧ್ಯ. ತನ್ನ ಶ್ರೇಷ್ಠತೆಯೂ ಉಳಿಯಬೇಕು, ಜಾತಿಯೂ ಸೀಳಿಕೊಂಡು ಬೆಳೆಯಬೇಕು, ಹಿಂದೂ ಧರ್ಮದ ರಕ್ಷಣೆಯೂ ಆಗಬೇಕು ಎಂದರೆ ವೈದಿಕರಿಗೆ ಇದ್ದ ಏಕ ಮಾತ್ರ ದಾರಿ ಎಂದರೆ ನಾಲ್ಕೇ ನಾಲ್ಕು ವರ್ಣಗಳನ್ನು ಸಾವಿರಾರು ಜಾತಿಗಳಾಗಿ ವಿಂಗಡಿಸುವ ಅಧಿಕಾರವನ್ನು ತನ್ನ ನಂತರದ ಕ್ಷತ್ರಿಯ ಸಮುದಾಯಗಳಿಗೆ ನೀಡಿತು. ರಾಜಶಾಹಿಯು ಇದನ್ನು ಯಶಸ್ವಿಯಾಗಿ ಮುಂದುವರಿಸಿ ತನ್ನ ಸ್ಥಳೀಯ ಪ್ರತಿನಿಧಿಗಳಾದ ಭೂಮಾಲೀಕ ಜಾತಿಗಳಿಗೆ ಜಾತಿ ನಿಯಂತ್ರಣದ ದಂಡಾಧಿಕಾರವನ್ನು ವರ್ಗಾಯಿಸಿತು. ಗ್ರಾಮ ನಾಗರೀಕತೆಯಲ್ಲಿದ್ದ ವೃತ್ತಿಗಳನ್ನೆಲ್ಲ ಜಾತಿಗಳಾಗಿ ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ಭೂಮಾಲೀಕ ಜಾತಿಗಳಿಗೆ ಅನುಕೂಲವೆ ಆಯಿತು. ಇದನ್ನು ಅನುಸರಿಸಿಯೆ ಗ್ರಾಮ ಜಾನಪದ ಅಭಿವ್ಯಕ್ತಿಗಳಲ್ಲಿ ತನ್ನದಲ್ಲದ ಎಷ್ಟೋ ಅಂಶಗಳನ್ನು ಅಳವಡಿಸಿಕೊಂಡಿತು.

[illegible] ಬುದ್ಧಿವಂತಿಕೆಯನ್ನು [illegible]ವುದು ಎಷ್ಟು ಸರಿ? ಇಲ್ಲು ಕೂಡ ದೆವ್ವ ಭೂತಗಳನ್ನು ಬಿಡಿಸಲು ಪುರುಷ ಪೂಜಾರಿ ಉಗ್ರವಾಗಿ ದೆವ್ವ ಹಿಡಿದಿದೆ ಎಂದು ತೋರಿದ ಮಹಿಳೆಯನ್ನು ದಂಡಿಸುವ ಪರಾಕ್ರಮವಿದೆಯಲ್ಲಾ....

ಗ್ರಾಮ ಜಾನಪದದ ಅಂತರಂಗದಲ್ಲಿ ಸಂಸ್ಕೃತಿಯ ವಿಚಿತ್ರ ರೂಪಗಳನ್ನು ಧರಿಸಿ ಇಂತಹ ಅಸಂಖ್ಯ ಆಚರಣೆಗಳು ತುಂಬಿಕೊಂಡಿವೆ. ಕೆಳಜಾತಿಯ ಹೆಣ್ಣು ಮಕ್ಕಳೇ ದೆವ್ವ ಭೂತ ಹಿಡಿದಿದೆ ಎಂದು ನರಳಾಡಿ ಸವೆಯುವ ಪ್ರಸಂಗಗಳು ಇಂದಿಗೂ ಗ್ರಾಮಸಮಾಜದಲ್ಲಿ ಮುಂದುವರಿದಿವೆ. ಮಾರಿ ಮಸಣಿ ಮಹಾಮಾಯಿಯ ಅಸಂಖ್ಯ ಸ್ತ್ರೀ ಗ್ರಾಮದೈವಗಳು ಪುರುಷ ದೈವಗಳ ಅಧೀನದಲ್ಲಿ ಗ್ರಾಮ ಸಂಸ್ಕೃತಿಯ ಯಜಮಾನಿಕೆಯನ್ನು ಒಪ್ಪಿಕೊಂಡಿವೆ. ಇಲ್ಲೆಲ್ಲ ಗಮನಿಸಬೇಕಾದ ಮುಖ್ಯವಾದ ಒಂದು ಅಂಶವಿದೆ. ಗ್ರಾಮ ಜಾನಪದ, ಗ್ರಾಮ ಸಂಸ್ಕೃತಿ ಪರಂಪರೆಗಳಲ್ಲಿ 'ಹಿಂದೂ' ಧರ್ಮದ ಗುಣಗಳು ಹೆಚ್ಚಾಗಿ ಇರುವುದಕ್ಕಿಂತಲೂ ಸ್ಥಳೀಯ ಯಜಮಾನ್ಯ ಸಂಸ್ಕೃತಿಗಳ ನಿಯಂತ್ರಣಗಳೆ ಅಧಿಕವಾಗಿವೆ.

ಈ ಹಂತದಲ್ಲಿ ಆದಿಮ ಹಂತದ ಸಂಸ್ಕೃತಿಯ ಆರಾಧನೆಗಳೆಲ್ಲ ಲೌಖಿಕದ ಅಧಿಕಾರದಲ್ಲಿ ಕರಗಿಹೋಗಿದ್ದವು. ಅಷ್ಟರಲ್ಲಾಗಲೆ ವರ್ಣಾಶ್ರಮ ಧರ್ಮವು ಜಾತಿ ಎಂಬ ಉಪಕರಣಗಳು ಸದಾ ಹರಿತವಾಗಿ ತಮ್ಮೊಳಗೆ ಸಂಘರ್ಷ ಕಾಯ್ದುಕೊಳ್ಳುವಂತೆ ಮಾಡಲು ಲಿಖಿತ ಪರಂಪರೆಯ ಪುರಾಣಗಳನ್ನು ವೈದಿಕರು ವ್ಯವಸ್ಥಿತವಾಗಿ ಬಿತ್ತಿದ್ದರು. ಅಂತಹ ಲಿಖಿತ ಪುರಾಣಗಳ ಸಾರವನ್ನು ಸ್ಥಳೀಯ ವೃತ್ತಿ ಹಾಗು ಕುಲದ ನೆಲೆಗಳ ಜಾತಿಗಳಿಂದಲೆ ಮೌಖಿಕ ಪರಂಪರೆಯು ಮರುರೂಪಗೊಳಿಸಿ ಹಾಡಬೇಕಾದದ್ದು ಕೇವಲ ಮಾರ್ಗ ಮತ್ತು ದೇಶಿಗಳ 'ಕೊಳುಕೊಡೆ' ಸಂಬಂಧವನ್ನಷ್ಟೇ ಧ್ವನಿಸುತ್ತಿಲ್ಲ. ಲಿಖಿತ ಪರಂಪರೆ ತನ್ನ ಪ್ರಭುತ್ವವನ್ನು ಸ್ಥಾಪಿಸುತ್ತಿದ್ದರೆ ಅದೇ ಮೌಖಿಕ ಪರಂಪರೆಯು ವೈದಿಕ ವ್ಯವಸ್ಥೆಯ ವಿರುದ್ಧ ಹಾಡಲಾರದೆ ಕಲ್ಪಿತ ಚಹರೆಗಳಲ್ಲಿ ತನಗೆ ತಾನೇ ಅಪವ್ಯಾಖ್ಯಾನ ಮಾಡಿಕೊಳ್ಳುತ್ತಿತ್ತು. ದೂರ ಸರಿದ ತತ್ವಪದಕಾರರು ಲೌಖಿಕದ ಈ ಎಲ್ಲ ಇಕ್ಕಟ್ಟಿನ ಮೌನವನ್ನು ರೂಪಕಗಳಲ್ಲಿ ಹಾಡಿಕೊಂಡು ವಿಶ್ವಾತ್ಮಕವಾದ ಅನನ್ಯತೆಯ ಬೆಟ್ಟ ಗುಡ್ಡ ಕಾಡು ಮೇಡು ಸೇರಿಕೊಂಡದ್ದು ವಿಪರ್ಯಾಸವೇ ಸರಿ.

ಈ ಸ್ಥಿತಿಯಲ್ಲಿ ಲಿಖಿತ ಪುರಾಣಗಳ ಪ್ರಭಾವದಲ್ಲಿ ಪುರುಷ ಪ್ರಧಾನ ಗ್ರಾಮದೈವಗಳು ವೈದಿಕ ದೇವಾನುದೇವತೆಗಳ ಸ್ಥಳೀಯ ಪ್ರಭೇದಗಳಂತೆ ಅಸಂಖ್ಯ ಅವತಾರ ವೆತ್ತಿದವು. ವಿಷ್ಣು ಕೇವಲ ಹತ್ತು ಅವತಾರ ಎತ್ತಿದ ಎಂದು ಪುರಾಣಗಳು ಹೇಳಿದರೆ ಆ ಹತ್ತು ಅವತಾರಗಳು ವೈದಿಕರ ಪುನರುತ್ಥಾನದ ಅವತಾರಗಳಾಗಿ ಮಾರ್ಪಟ್ಟಾಗ ಗ್ರಾಮ ಸಂಸ್ಕೃತಿಗಳ ಮೇಲೆ ಧರ್ಮ ಬಂದು ಸವಾರಿ ಮಾಡಿತು. ಇದಕ್ಕೆ ತಕ್ಕಂತೆ ಜಾತಿ ಉಪಜಾತಿ ಒಳಜಾತಿಗಳು ತಮ್ಮ ತಮ್ಮಿಂದಲೆ ಸೀಳಿಕೊಂಡು ದೂರ ಸರಿದವು.

ವಿಚಿತ್ರ ಎಂದರೆ ವೈದಿಕ ಧರ್ಮದ ಜೀವನ ಕ್ರಮವನ್ನು ಪಾಲಿಸದ ಗ್ರಾಮ ಸಂಸ್ಕೃತಿಗಳು ಜಾತಿಯನ್ನು ಮಾತ್ರ ಯಾಕೆ ಆಚರಿಸಿದವು? ಜಾತಿ ವ್ಯವಸ್ಥೆಯ ಯಜಮಾನರು ಬ್ರಾಹ್ಮಣರೇ ಒಂದು ಕಾಲಕ್ಕೆ ಆಗಿದ್ದರಾದರೂ ಆನಂತರ ಬೇರೆ ಬೇರೆ ಕಾಲಘಟ್ಟಗಳಲ್ಲಿ ಇದರ ನಿರ್ವಹಣೆಯನ್ನು ಸ್ವತಃ ಮಧ್ಯಮ ಮತ್ತು ಕೆಳಮಧ್ಯಮ ಜಾತಿಗಳೆ

ಹೇಗೆ ಜಾರಿಗೊಳಿಸಿದವು? ಜಾತಿಯನ್ನು ಒಂದು ಜೀವನ ವಿಧಾನ ಎಂದು ಸಾರ್ವತ್ರಿಕವಾಗಿ ಒಪ್ಪಿಕೊಂಡಿದ್ದರಿಂದಲೇ ಇವತ್ತಿನವರಿಗೆ ಜಾತಿ ವ್ಯವಸ್ಥೆ ಎಂಬುದೇ ಇರಲಿಲ್ಲ ಎಂಬ ಅಭಿಪ್ರಾಯ ಬಂದಿದೆಯೆ? ಜಾತಿ ವ್ಯವಸ್ಥೆಯನ್ನು ಜಾತಿಗಳ ಕೈಗೇ ಕೊಟ್ಟುಬಿಟ್ಟರೆ ಆಗ ಅದು 'ಜಾತಿ ವ್ಯವಸ್ಥೆ' ಆಗುವುದಿಲ್ಲ. ಬದಲಿಗೆ ಅದೊಂದು ಸಮುದಾಯಗಳ ಒಪ್ಪಂದದ ಜೀವನ ಕ್ರಮ ಎನಿಸಿಬಿಡುತ್ತದೆ. ತಪ್ಪನ್ನು ಮಾಡುವುದಕ್ಕಿಂತಲು ತಪ್ಪು ಮಾಡಿಸುವುದು ಹೆಚ್ಚು ಸುರಕ್ಷಿತ ಹಾಗು ಲಾಭಕರವಾಗಿ ವೈದಿಕ ಪ್ರಭುತ್ವಕ್ಕೆ ಕಂಡಿದೆ.

ಗ್ರಾಮ ನಾಗರೀಕತೆಗಳ ಮೂಲಕ ಜಾತಿ ವ್ಯವಸ್ಥೆಯನ್ನು ಧರ್ಮದ ಜೊತೆಗೆ ಬೆಸೆದ ಪರಿಣಾಮವೇ ಎಲ್ಲ ಅವೈದಿಕರೂ ವೈದಿಕರಿಗಿಂತಲೂ ಮಿಗಿಲಾಗಿ ಜಾತಿ ವ್ಯವಸ್ಥೆಯನ್ನು ಭದ್ರವಾಗಿ ಕವಚ ಎಂಬಂತೆ ಭ್ರಮಿಸಿ ದರಿಸಿಕೊಂಡದ್ದು. ಈಗ ಈ ಕವಚ ನಿಮ್ಮದಲ್ಲ ನಿಮ್ಮ ಅವಶ್ಯಕತೆಯಲ್ಲ ಎಂದು ವೈದಿಕರೇ ಹೇಳಿದರೂ ಅದನ್ನು ನಿರಾಕರಿಸಲಾರದ ಆಚೆ ತುದಿಗೆ ಈಗ ಜಾತಿಗಳು ಹೋಗಿ ನೆಲಸಿವೆ. ಈಗ ಇವು ವರ್ಗವೂ ಆಗದೆ ಜನಾಂಗವೂ ಆಗದೆ ಸಮೂಹಗಳೂ ಆಗದೆ ವಿಚಿತ್ರ ಸನ್ನಿವೇಶದಲ್ಲಿ ಆಕ್ರಮಣ ಪ್ರವೃತ್ತಿಯನ್ನು ವೃದ್ಧಿಸಿಕೊಳ್ಳುತ್ತಿವೆ. ಇಂದಿನ ಹಿಂಸೆಯ ಅನೇಕ ಅವತಾರಗಳಲ್ಲಿ ನೆನ್ನೆಯ ಆ ಎಲ್ಲ ನೆರಳುಗಳನ್ನು ಗಮನಿಸಬಹುದಾಗಿದೆ.

ಗ್ರಾಮ ನಾಗರೀಕತೆಗಳ ಮೂಲಕ ಜಾತಿ ವ್ಯವಸ್ಥೆಯನ್ನು ಧರ್ಮದ ಜೊತೆಗೆ ಬೆಸೆದ ಪರಿಣಾಮವೇ ಎಲ್ಲ ಅವೈದಿಕರೂ ವೈದಿಕರಿಗಿಂತಲೂ ಮಿಗಿಲಾಗಿ ಜಾತಿ ವ್ಯವಸ್ಥೆಯನ್ನು ಭದ್ರವಾಗಿ ಕವಚ ಎಂಬಂತೆ ಭ್ರಮಿಸಿ ದರಿಸಿಕೊಂಡದ್ದು. ಈಗ ಈ ಕವಚ ನಿಮ್ಮದಲ್ಲ ನಿಮ್ಮ ಅವಶ್ಯಕತೆಯಲ್ಲ ಎಂದು ವೈದಿಕರೇ ಹೇಳಿದರೂ ಅದನ್ನು ನಿರಾಕರಿಸಲಾರದ ಆಚೆ ತುದಿಗೆ ಈಗ ಜಾತಿಗಳು ಹೋಗಿ ನೆಲೆಸಿವೆ. ಈಗ ಇವು ವರ್ಗವೂ ಆಗದೆ ಜನಾಂಗವೂ ಆಗದೆ ಸಮೂಹಗಳೂ ಆಗದೆ ವಿಚಿತ್ರ ಸನ್ನಿವೇಶದಲ್ಲಿ ಆಕ್ರಮಣ ಪ್ರವೃತ್ತಿಯನ್ನು ವೃದ್ಧಿಸಿಕೊಳ್ಳುತ್ತಿವೆ. ಇಂದಿನ ಹಿಂಸೆಯ ಅನೇಕ ಅವತಾರಗಳಲ್ಲಿ ನೆನ್ನೆಯ ಆ ಎಲ್ಲ ನೆರಳುಗಳನ್ನು ಗಮನಿಸಬಹುದಾಗಿದೆ.

ಗ್ರಾಮ ಜಾನಪದದ ಹಿನ್ನೆಲೆಯಲ್ಲಿ ಗ್ರಾಮ ಸಮಾಜದ ಒಳಗಿನ ಅನೇಕ ವೈರುಧ್ಯಗಳನ್ನು ತುಸುವೆ ವಿವರವಾಗಿಯೆ ಪ್ರಸ್ತಾಪಿಸಿದ್ದುದು ಹೇಗೆ ಗ್ರಾಮಜಾನಪದವು ಜಾತಿ ಜಾನಪದವಾಗಿ ರೂಪಾಂತರಗೊಂಡಿದೆ ಎಂಬುದನ್ನು ಸೂಚಿಸಲು ಈ ಜಾನಪದವೇ ಮೂರನೆ ಹಂತದ ಜಾನಪದ ಜಾತಿಯಿಂದ ಹೊರತಾದುದು ಜಾನಪದ ಎಂದು ಅನೇಕರು ವಾದಿಸುವುದಿದೆ. ಅದು ನಿಜವೆಂದು ನಾನು ಕೂಡ ಒಪ್ಪಿಕೊಂಡಿದ್ದೆ. ಬಹಳ ತಡವಾಗಿ ಇದನ್ನು ಹೇಳಬೇಕಾದದ್ದಕ್ಕೆ ಅನೇಕ ಹಿಂಜರಿಕೆಗಳೇ ಕಾರಣ. ವ್ಯವಸ್ಥಿತವಾದ ಯಜಮಾನ್ಯ ಮಾದರಿಯ ಅಧ್ಯಯನದ ತೀರ್ಮಾನಗಳನ್ನು ಅನುಸರಿಸುವುದು ರೂಢಿಯಾಗಿಬಿಟ್ಟಿದೆ. ಸಮುದಾಯದ ಪ್ರಜ್ಞೆಯಾಗಿ ಅದರ ಅಸ್ತಿತ್ವದ ಕಥನವನ್ನು ನಿರೂಪಿಸುತ್ತಿದ್ದ ಆದಿಮ ಜಾನಪದವು ಗ್ರಾಮಜಾನಪದದ ಹೊತ್ತಿಗೆ ಹೇಗೆ ಬದಲಾಯಿತು ಎಂಬುದನ್ನು ಮೇಲೆ ವಿವರಿಸಲಾಗಿದೆ. ಗ್ರಾಮಜಾನಪದವು ವೈದಿಕ ವ್ಯವಸ್ಥೆಯಿಂದ ಸೀಳಿಕೊಂಡಾಗ ಅಸಂಖ್ಯಾತ ಜಾತಿಗಳು ಜನಿಸಿದವು. ನಿಮ್ಮ ನಿಮ್ಮ ಅನನ್ಯತೆಯನ್ನು ಸ್ಥಾಪಿಸಿಕೊಳ್ಳಿ ಎಂಬಂತೆ ಮೌಖಿಕ ಪರಂಪರೆಗಳ ಮೂಲಕ ಕರೆಕೊಟ್ಟದ್ದು ಕೂಡ ಒಂದು ಪವಾಡವೆ.

ಈ ಸ್ಥಿತಿಯಲ್ಲಿ ಎಷ್ಟೋ ಕಥನಗಳು ಅತ್ತ ಪೂರ್ಣ ಜಾತಿಕಥನಗಳೂ ಆಗದೆ ಇತ್ತ ಲೌಖಿಕದ ಮಾನವ ಕಥನಗಳೂ ಆಗದೆ ಪವಾಡಗಳಲ್ಲಿ, ಮಾಂತ್ರಿಕ ರೂಪಕಗಳಲ್ಲಿ, ಕನಸಿನ ಪ್ರತಿಬಿಂಬಗಳಲ್ಲಿ ಮಾತ್ರ ಅಸ್ಪಷ್ಟ ನುಡಿಗಳನ್ನು ನುಡಿಸಿದವು. ಸಾಹಿತ್ಯ ಪರಂಪರೆಗಳಲ್ಲಿ ಇದು ಅಭಿವ್ಯಕ್ತಿಯ ಮಾಂತ್ರಿಕತೆ ಎಂದು ಗುರುತಿಸಿಕೊಳ್ಳುವುದು ಬೇರೆ. ಪ್ರಾಚೀನ ಕನ್ನಡ ಸಾಹಿತ್ಯವಾದರೂ ಅದು ನಿರ್ದಿಷ್ಟವಾಗಿ

ಮತಧರ್ಮಗಳ ಲೌಕಿಕ ಅಲೌಕಿಕ ನೀತಿಗಳನ್ನು ಅಧಿಕೃತವಾಗಿ ಹೇಳಿಕೊಂಡಿತು. ಮಧ್ಯಕಾಲೀನ ಗ್ರಾಮನಾಗರೀಕತೆಗಳು ಜಾತಿಗಳ ವಿಭಜನೆಯನ್ನು ಹಿಂದೆಂದೂ ಆಗದಷ್ಟು ವಿರಾಟ್ ಸ್ವರೂಪದಲ್ಲಿ ಮಾಡಿದ್ದರಿಂದ ಅದು ಆ ಮಟ್ಟಿಗೆ ಹಿಂದೂ ಜಾತಿ ವ್ಯವಸ್ಥೆಯ ಪುನರುಜ್ಜೀವನವೇ ಇರಬೇಕು. ಇದೇ ಕಾಲಕ್ಕೆ ಯುರೋಪಿನಲ್ಲಿ ಜ್ಞಾನದ ಬೇರೊಂದು ಪುನರುಜ್ಜೀವನದ ಪ್ರಕ್ರಿಯೆ ಘಟಿಸುತ್ತಿತ್ತು.

ಮಧ್ಯಕಾಲೀನ ಗ್ರಾಮ ಭಾರತದಲ್ಲಿ ಉಂಟಾದ ಇಂತಹ ಜಾತಿಗಳ ಪುನರುತ್ಥಾನದ ಪರಿಣಾಮವೇ ಹಿಂದುತ್ವ ಧರ್ಮದ ಬೃಹತ್ ವ್ಯವಸ್ಥೆಯಾಗಿ ಬೇರುಬಿಡಲು ಸಾಧ್ಯವಾದದ್ದು. ಇಲ್ಲದಿದ್ದರೆ ಹಿಂದೂ ಧರ್ಮ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ. ಬೌದ್ಧ ಹಾಗು ಜೈನಧರ್ಮಗಳು ಬಹಳ ಕಡಿಮೆ ಅವಧಿಯಲ್ಲಿ ಕರ್ನಾಟಕದ ಗ್ರಾಮನಾಗರೀಕತೆಗಳಲ್ಲಿ ತಂಗಿದ್ದು ಅವುಗಳು ಕಣ್ಮರೆಯಾದದ್ದು ನಿಗೂಢವೇ. ಆರ್ಯರು ದಕ್ಷಿಣಕ್ಕೆ ಬರುವ ಪೂರ್ವದಲ್ಲಿ ಅಕ್ಷರಲ್ಲಾಗಲೆ ಕರ್ನಾಟಕದಲ್ಲಿ ಬೌದ್ಧಧರ್ಮವು ವ್ಯಾಪಕವಾಗಿ ಹಬ್ಬಿತ್ತು. ಹಿಂದಿನ ಬೌದ್ಧ ಧರ್ಮದ ಪಳೆಯುಳಿಕೆಗಳು ಈಗಲೂ ನಿಚ್ಚಳವಾಗಿ ಸಿಗುತ್ತವೆ. ಆದರೆ ಗ್ರಾಮ ಜಾನಪದದಲ್ಲಿ ಬೌದ್ಧಧರ್ಮದ ಕುರುಹುಗಳು ಕಾಣದಂತೆ ಮಾಯವಾಗಿವೆ. ಹಾಗೆ ನೋಡಿದರೆ ಹಿಂದೂ ಜೈನ ಬೌದ್ಧ ಈ ಮೂರು ಧರ್ಮಗಳ ತತ್ವಗಳನ್ನು ಗ್ರಾಮ ಜಾನಪದ ಆತ್ಯಂತಿಕವಾಗಿ ಪಾಲಿಸಲು ವಿಶೇಷ ಉತ್ಸಾಹವನ್ನು ತೋರಿದಂತೆ ಕಾಣುವುದಿಲ್ಲ.

ಇದಕ್ಕೆ ಏನಾದರೂ ಗ್ರಾಮಗಳ ಜಾತಿ ವ್ಯವಸ್ಥೆಯ ಸಂಬಂಧವಿರಬಹುದೇ... ಹುಡುಕಬೇಕು. ಆಯಾಯ ಜಾತಿಗಳ ತತ್ವವೇ ಕಸುಬೇ ಸಾಮಾಜಿಕ ಸ್ಥಾನಮಾನವೇ ಅವುಗಳ ಧರ್ಮವಾಗಿತ್ತೇ... ನಿರ್ಧಿಷ್ಟ ಧರ್ಮದ ಹಂಗಿಗೆ ಒಳಪಡದೆ ಗ್ರಾಮ ಜಾನಪದವು ಜಾತಿಯ ತತ್ವಕ್ಕೆ ಬದ್ಧವಾಗಿತ್ತೇ... ವಚನ ಚಳುವಳಿ ಮುಗಿಯುತ್ತಿದ್ದಂತೆ ಶೈವ ಧರ್ಮವೂ ಸಾಧ್ಯವಾಗದೆ ಆಯಾಯ ಜಾತಿಗಳು ಮತ್ತೆ ತಮ್ಮ ಮೂಲ ಜಾತಿಗಳಿಗೆ ಹಿಂತಿರುಗಿ ಸಾಂಸ್ಕೃತಿಕ ನಾಯಕರನ್ನು ಗುರುತಿಸಿಕೊಂಡದ್ದು ಧರ್ಮನಿರಪೇಕ್ಷ ಸ್ವಭಾವ ಎಂದು ಕರೆಯುವುದೇ... ಹಾಗೆ ನೋಡಿದರೆ ಗ್ರಾಮ ದೈವಗಳ ಗ್ರಾಮ ಜಾನಪದವೇ ಒಂದು ಬಗೆಯ ಧರ್ಮವಾಗಿತ್ತೇ... ಈ ಜನಪದ ಧರ್ಮಕ್ಕೆ ಜಾತಿಗಳು ಹೊಂದಾಣಿಕೆ ಮಾಡಿಕೊಂಡು ಜಾತಿ ಜಾನಪದವನ್ನು ಕಟ್ಟಿಕೊಳ್ಳಲಿಲ್ಲವೇ... ಇಂತಹ ಪ್ರಶ್ನೆಗಳು ಸಂಸ್ಕೃತಿ ವಿಕಾಸದ ನಾಯಕ ಪ್ರತಿನಾಯಕ, ದುಷ್ಟ ಶಿಷ್ಟ, ಒಳ್ಳೆಯ ಕೆಟ್ಟ, ಶ್ರೇಷ್ಠ ನೀಚ ಎಂಬ ವೈರುಧ್ಯ ರೂಪಿ ಉತ್ತರಗಳನ್ನು ಕಂಡುಕೊಳ್ಳುವುದಕ್ಕೆ ಮಂಡಿಸುತ್ತಿರುವುದಿಲ್ಲ. ದ್ವಂದ್ವ ಮಾನ ತತ್ವಗಳ ಆಚೆಗೆ ಮಾನವ ಪ್ರಯತ್ನಗಳು ವಿಕಾಸದೆಡೆಗೆ ಸಾಗುತ್ತಿರುತ್ತವೆ. ಆ ಪ್ರಕ್ರಿಯೆಯಲ್ಲಿ ಸಂಸ್ಕೃತಿಗಳ ರೂಪಾಂತರಗಳನ್ನು ವಿಶಾಲವಾಗಿ ಗ್ರಹಿಸಬೇಕಾಗುತ್ತದೆ.

ಜಾತಿ ಜಾನಪದದ ಒಳಗೆ ಜಾನಪದಗಳು ಲೀನವಾಗಿವೆ. ವೃತ್ತಿ ಧರ್ಮವೆ ಇಲ್ಲಿ ಮುಖ್ಯನೀತಿ. ಈ ಎಲ್ಲ ಜಾತಿಜಾನಪದಗಳನ್ನು ಕೂಡ ಹಿಡಿಯಾಗಿ ನೋಡಬಹುದಾದರು ಸಾಂಸ್ಕೃತಿಕ ಅನನ್ಯತೆಯ ಗಡಿಗಳಿವೆ. ಒಂದರೊಳಗೊಂದನ್ನು ಬೆರೆಸಿದರೆ ಅವುಗಳ ದನಿ ಕಲಸು ಮೇಲೋಗರವಾಗುವ ಅಪಾಯವಿದೆ.
ಒಂದೊಂದು ಜಾತಿಯೂ ಒಳಜಾತಿಯೂ ತಮ್ಮನ್ನು ಪ್ರತಿನಿಧಿಸುವ ಒಬ್ಬ ನಾಯಕನನ್ನು ಅತಿಮಾನುಷವಾಗಿ ಬಿಂಬಿಸಿ ಆತನಿಗೆ ದೈವಿಕ ನೆಲೆ ಒದಗಿಸಿ ತಮ್ಮ ಪಾಲಿಗೂ ಒಬ್ಬ ಇದ್ದಾನೆ ಎಂಬ ಸ್ವಾಭಿಮಾನವನ್ನು ನಿರೂಪಿಸುವುದು ಸರಿಯಾದುದೇ. ಆದರೆ ಈ ನಾಯಕ ದೈವಿಕ ಆಯಾಮದಲ್ಲಿ ಏನನ್ನು ಭೋಧಿಸುತ್ತಿದ್ದಾನೆ? ಆ ಸಾಂಸ್ಕೃತಿಕ ನಾಯಕನ ಆಶಯಗಳೇನು?

ಜಾತಿ ಜಾನಪದದ ಒಳಗೆ ಜಾನಪದಗಳು ಲೀನವಾಗಿವೆ. ವೃತ್ತಿ ಧರ್ಮವೆ ಇಲ್ಲಿ ಮುಖ್ಯನೀತಿ. ಈ ಎಲ್ಲ ಜಾತಿ ಜಾನಪದಗಳನ್ನು ಕೂಡ ಹಿಡಿಯಾಗಿ ನೋಡಬಹುದಾದರು ಸಾಂಸ್ಕೃತಿಕ ಅನನ್ಯತೆಯ ಗಡಿಗಳಿವೆ. ಒಂದರೊಳಗೊಂದನ್ನು ಬೆರೆಸಿದರೆ ಅವುಗಳ ದನಿ ಕಲಸು ಮೇಲೋಗರವಾಗುವ ಅಪಾಯವಿದೆ. ಒಂದೊಂದು ಜಾತಿಯೂ ಒಳಜಾತಿಯೂ ತಮ್ಮನ್ನು ಪ್ರತಿನಿಧಿಸುವ ಒಬ್ಬ ನಾಯಕನನ್ನು ಅತಿಮಾನುಷವಾಗಿ ಬಿಂಬಿಸಿ ಆತನಿಗೆ ದೈವಿಕ ನೆಲೆ ಒದಗಿಸಿ ತಮ್ಮ ಪಾಲಿಗೂ ಒಬ್ಬ ಇದ್ದಾನೆ ಎಂಬ ಸ್ವಾಭಿಮಾನವನ್ನು ನಿರೂಪಿಸುವುದು ಸರಿಯಾದುದೇ. ಆದರೆ ಈ ನಾಯಕ ದೈವಿಕ ಆಯಾಮದಲ್ಲಿ ಏನನ್ನು ಭೋಧಿಸುತ್ತಿದ್ದಾನೆ? ಆ ಸಾಂಸ್ಕೃತಿಕ ನಾಯಕನ ಆಶಯಗಳೇನು? ಆತನ ಹೆಸರಿನ ಕಾವ್ಯವಗಳು ಜಾತಿಯನ್ನು ಯಾವ ಸ್ವರೂಪದಲ್ಲಿ ನಿರಾಕರಿಸುತ್ತಿವೆ ಹಾಗೆಯೆ ಯಾವ ನೀತಿಯಲ್ಲಿ ಸ್ವಜಾತಿಯನ್ನು ಬಿಂಬಿಸಿಕೊಳ್ಳುತ್ತಿವೆ?

ಅಂತಹ ಸಾಂಸ್ಕೃತಿಕ ನಾಯಕರಿಂದ ಲಿಂಗ ಸಂಬಂಧಗಳು ಸುಧಾರಿಸಲ್ಪಟ್ಟವೊ ಇಲ್ಲವೆ ಮತ್ತಷ್ಟು ಯಜಮಾನಿಕೆಯನ್ನು ಮುಂದುವರಿಸಿದವೋ? ಅತ್ಯಂತ ಕೆಳಗಿನ ಹೊಲೆಮಾದಿಗ ಜಾತಿಗಳು ರೂಪಿಸಿಕೊಂಡ ಮಲೆಮಾದೇಶ್ವರ ಮಂಟೇಸ್ವಾಮಿಯಂತಹ ಸಾಂಸ್ಕೃತಿಕ ನಾಯಕರು ಅತಿಸೂಕ್ಷ್ಮ ಪ್ರತಿರೋಧವನ್ನು ಜಾತಿ ವ್ಯವಸ್ಥೆಯ ಬಗ್ಗೆ ಒಡ್ಡುತ್ತಿರುವುದನ್ನು ಗಮನಿಸಬಹುದು. ಪವಾಡಗಳ ಮೂಲಕ ಜಾತ್ಯಾತೀತ ಧರ್ಮವೊಂದನ್ನು ಹಾಡಲು ಮುಂದಾದ ಇಂತವರನ್ನು ಕೂಡ ಹಿಂದೂ ಜಾತಿಧರ್ಮ ಕಾಡಿದೆ, ಪ್ರಭಾವಿಸಿದೆ. ಈ ಯಾವ ಇಕ್ಕಟ್ಟಿಗೂ ಸಿಲುಕದಂತೆ ಕಾಡು ಸೇರಿದ ಹಾಗು ಮೊದಲೆ ಕಾಡಿನಲ್ಲಿದ್ದ ಆದಿವಾಸಿಗಳು ಜಾತಿಗೆ ಬದಲು ಜನಾಂಗೀಯ ಸ್ವಭಾವದ ಜಾನಪದವನ್ನು ಸೃಷ್ಟಿಸಿ ಕೊಂಡವು.

ಆದಿಮ ಜಾನಪದದ ಸ್ತ್ರೀನಿಷ್ಠ ಅಭಿವ್ಯಕ್ತಿಗಳು ಜಾತಿ ಜಾನಪದದಲ್ಲಿ ಕೊಂಚ ನಿರಾಳವಾದಂತೆ ಕಾಣುತ್ತವೆ. ಗ್ರಾಮದೇವತೆಗಳನ್ನು ಮತ್ತೆ ಹಾಡಲು ಇಲ್ಲಿ ಕೆಳಜಾತಿಗಳ ಮಹಿಳೆಯರಿಗೆ ಅವಕಾಶ ಸಿಕ್ಕಿದೆ. ಅಂತೆಯೆ ಎಷ್ಟೋ ನಿಸರ್ಗನಿಷ್ಠ ನಿರೂಪಣೆಗಳನ್ನು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ವಿಶೇಷವಾಗಿ ಈ ಹಂತದಲ್ಲಿ ಜನಪದ ಕಥೆಗಳನ್ನು ಮಹಿಳೆಯರು ಕಟ್ಟಿದ್ದಾರೆ. ಕತೆಗಳ ಪ್ಯಾಂಟಸಿಯಲ್ಲಿ ನೊಂದ ಸಮುದಾಯಗಳು ಗೆಲುವು ಪಡೆದು ಸ್ವಾತಂತ್ರ್ಯದಲ್ಲಿ ವಿಹರಿಸಿವೆ. ಒಂದು ರೀತಿಯಲ್ಲಿ ಜಾತಿ ಜಾನಪದಗಳಿಗೆ ವಾಕ್ ಸ್ವಾತಂತ್ರ್ಯ ಸಿಕ್ಕಿದ್ದು ಮೌಖಿಕ ಪರಂಪರೆಯ ಪುನರ್ ನಿರ್ಮಾಣದಿಂದಲೇ. ಆದರೆ ಈ ವಾಕ್‌ಪರಂಪರೆ ಅನಾಮ ದೇಶಾತೀತ ಉದಾರವಾದ ನಿಲುವನ್ನು ಬಿಟ್ಟುಕೊಡಲು ಸಾಧ್ಯವಿರಲಿಲ್ಲವಾದ್ದರಿಂದ ಆ ಎಲ್ಲ ನಿರೂಪಣೆಗಳೂ ಒಂದು ನಿರ್ಧಿಷ್ಟಗುರಿಗೆ ತಲುಪುವುದಿಲ್ಲ.

ಹೀಗಾಗಿಯೆ ಮೌಖಿಕ ಪರಂಪರೆಯ ಎಲ್ಲ ಕಥನಗಳನ್ನು ಹೊಣೆಗಾರಿಕೆಯನ್ನು ವ್ಯಕ್ತಿ ನಿಷ್ಠೆಯಲ್ಲಿ ಹೆದರಿಸುವುದಿಲ್ಲ. ಸಮುದಾಯ ಜಾನಪದವಾಗಿ ರೂಪುಗೊಳ್ಳಬೇಕಿದ್ದ ಕಥನಗಳು ಆ ಬಗೆಯ ಅವಕಾಶವನ್ನು ತಾವಾಗಿಯೆ ಕಳೆದುಕೊಂಡವೆ? ಸಮೂಹ ಸೃಷ್ಟಿ, ಕಾಯಕ ನಿಷ್ಠೆ ಜೀವಪರ ಧೋರಣೆ, ಸ್ತ್ರೀ ಸಂವೇದನೆ ಮುಂತಾದ ಅರ್ಥದ ಅಲಂಕಾರಗಳಿಂದ ಜನಪದ ಸಾಹಿತ್ಯ ಸಂಸ್ಕೃತಿಗಳನ್ನು ವ್ಯಾಖ್ಯಾನಿಸಿದ್ದರಿಂದ ಏನಾದರೂ ಆ ಸಮಾಜಗಳ ಸ್ಥಿತಿ ಬದಲಾಗಿದೆಯೆ? ನಮ್ಮ ಬೌದ್ಧಿಕ ಅಧ್ಯಯನಗಳ ಅರ್ಥಕ್ಕೂ ವಾಸ್ತವದಲ್ಲಿ ಅಂತಹ ಸಂಸ್ಕೃತಿಗಳು ಹೊತ್ತುಕೊಂಡು ಬಂದ ಸಮುದಾಯಗಳ ಅರ್ಥಗಳಿಗೂ ಯಾಕೆ ಇಷ್ಟೊಂದು ಅಂತರ? ಹೊಸಕಾಲದ ಸವಾಲುಗಳ ನಡುವೆ ರೂಪುಗೊಳ್ಳುತ್ತಿರುವ ಜಾನಪದ ಯಾವ ಸ್ವರೂಪದ್ದು?

ಹಳೆಯ ಜಾನಪದ ಪರಂಪರೆಗಳಿಗಿಂತ ಹೊರತಾದ ಹೊಸಯುಗದ ಜಾನಪದದಲ್ಲಿ ಆರ್ಥಿಕ ರಾಜಕೀಯ ಹಾಗು ತಾಂತ್ರಿಕ ಸಂಗತಿಗಳೇ ಅವುಗಳ ಮಾರುಕಟ್ಟೆಗಳ ಮಾನದಂಡವಾಗುತ್ತಿರುವಾಗ ಈ ಎಲ್ಲ ವರ್ತಮಾನದ ಸಂಸ್ಕೃತಿಗಳನ್ನು ಹೇಗೆ ಪರಿಭಾಷಿಸುವುದು? ನವ ಮೌಖಿಕತೆಯ ಮೌಲ್ಯಗಳನ್ನು ಜಾಗತೀಕರಣದ ಪ್ರಕ್ರಿಯೆಯಿಂದಲೇ ಗುರುತಿಸಿಕೊಳ್ಳುವುದಾದರೆ ಸಮೂಹ ಮಾಧ್ಯಮಗಳು ಕಲಿಸುತ್ತಿರುವ ತೋಲಿಸುತ್ತಿರುವ ಹಾಡಿಸುತ್ತಿರುವ ನವ ಜಾನಪದವು ನಮ್ಮ ಬಹುರೂಪಿ ಸಮಾಜಗಳನ್ನು ಎಲ್ಲಿ ತನಕ ಕೊಂಡೊಯ್ಯಬಹುದು. ಈ ನವ ಮೌಖಿಕತೆಯ ಕಥನಗಳ ನೆನಪಿನಿಂದ ಬೆಳೆವ ಹೊಸ ಪೀಳಿಗೆಯ ಅಭಿವ್ಯಕ್ತಿಗಳು ಅಖಂಡವಾದ ಮಾನವನಿಷ್ಠೆಯನ್ನು ಸಾಧಿಸಬಲ್ಲವೇ? ಇಷ್ಟೆಲ್ಲ ಪ್ರಶ್ನೆಗಳನ್ನು ಯಾಕೆ ಕೇಳುತ್ತಿರಿ ಎಂದು ಉಪೇಕ್ಷಿಸಬೇಡಿ. ಎಷ್ಟೋ ಬಾರಿ ನಮ್ಮ ಪ್ರಶ್ನೆಗಳೇ ಉತ್ತರವೂ ಆಗಿ ಮಾರ್ಪಡಬಲ್ಲವು. ಹಾಗೆಯೆ ಉಳಿದವರು ಆ ಪ್ರಶ್ನೆಗಳಿಗೆ ಮರುಪ್ರಶ್ನೆಗಳನ್ನು ಎತ್ತುವ ಮೂಲಕ ಮತ್ತಾರೂ ಉತ್ತರದ ದಾರಿಯನ್ನು ತೋರಿಸುವುದೂ ಸಾಧ್ಯವಾಗಬಹುದು.

ಕರ್ನಾಟಕದ ಸಂಸ್ಕೃತಿ ವಿಕಾಸದ ವಿರಾಟ್ ಕಥನಗಳನ್ನು ಈ ದಾರಿಯಿಂದ ನಾವು ಭಾವಿಸುತ್ತ ಹೊಸ ಕಾಲಕ್ಕೆ ಬೇಕಾದ ಮಾನವ ಕಥನಗಳನ್ನು ಸೃಷ್ಟಿಸಿಕೊಳ್ಳುವ ಕಾಲ ಇದಾಗಿದೆ. ಜನಪದ ಸಂಸ್ಕೃತಿಯನ್ನು ಈಗಲೂ ಯುರೋಪಿನಲ್ಲಿ ಪಾಪ್ಯುಲರ್ ಕಲ್ಚರ್ ಹೆಸರಿನಲ್ಲಿ ಪ್ರತಿಸೃಷ್ಟಿಸಿಕೊಳ್ಳತ್ತಲೆ ಬರಲಾಗಿದೆ. ಗ್ರಾಮ ನಾಗರೀಕತೆಗಳ ಮೂಲ ಗುಣ ಇದು. ಭಾರತೀಯ ಗ್ರಾಮಗಳು ಯಾವ ಕಾಲಕ್ಕೂ ಬೇಕಾದಂತೆ ತಮ್ಮ ಅಭಿವ್ಯಕ್ತಿಗಳನ್ನು ರೂಪಿಸಿಕೊಳ್ಳುತ್ತಲೇ ಬರುವ ಜಾಯಮಾನದವಾದ್ದರಿಂದ ಈ ಎಲ್ಲ ಸ್ಥಿತಿಗಳಲ್ಲಿ ಕಳೆದುಹೋಗುವ ಮಾನವ ಕೊಂಡಿಗಳನ್ನು ಯಾವತ್ತೂ ಕೂಡ ಕಂಡುಕೊಳ್ಳುತ್ತಿರಬೇಕು.

ಗ್ರಾಮ ನಾಗರೀಕತೆ ಈಗ ಜಾಗತೀಕರಣದ ನಾಗರೀಕತೆಯ ಬಾಗಿಲಲ್ಲಿ ನಿಂತಿರುವಾಗ ಗತಕಾಲದ ಈ ಎಲ್ಲ ಸಂಗತಿಗಳನ್ನು ಗ್ರಹಿಸಿಯೆ ವರ್ತಮಾನದ ಕಥನಗಳನ್ನು ನಿರೂಪಿಸಬೇಕಾಗಿದೆ. □

ಯಂತ್ರಗಳನ್ನು ಕಳಚುವುದು ಇಷ್ಟು ಸುಲಭವಲ್ಲ!

ದೇ [illegible] ...ನಾಯಕ ಪುಸ್ತಕವನ್ನು ನೀಡಿದ ಪ್ರಸನ್ನ ಈಗ '...ತ್ರಗಳನ್ನು ಕಳಚೋಣ ಬನ್ನಿ' ಎಂಬ ಕುತೂಹಲದಾ...ಯಕ ಶೀರ್ಷಿಕೆಯ ಪುಸ್ತಕವನ್ನು ಪ್ರಕಟಿಸಿದ್ದಾರೆ. ಈ ಶೀರ್ಷಿಕೆ ಒಂದು ಸಾರ್ವಜನಿಕ ಕರೆಯಂತೆಯೂ ಇದ್ದು, ಅಂತಹ ಕರೆ ನೀಡಲು ಪ್ರಸನ್ನ ಎಲ್ಲ ರೀತಿಯಿಂದಲೂ ಅರ್ಹರೇ ಆಗಿದ್ದಾರೆ. ಅವರು ಭೀಮನಕೋಣೆಯಲ್ಲಿ ಈ ಯಂತ್ರಗಳನ್ನು ಕಳಚುವ ಕೆಲಸವನ್ನೇ ಮಾಡಿ, ಕೈಮಗ್ಗ ಮತ್ತು ಹೊಲಿಗೆ ಮುಂತಾದ ಕೈಕಸುಬುಗಳ ಕೇಂದ್ರವೆನಿಸಿದ 'ಚರಕ'ವನ್ನು ಸ್ಥಾಪಿಸಿ ತೋರಿಸಿದ್ದಾರೆ. ಈ ಪ್ರಯೋಗದ ಯಶಸ್ಸಿನ ಹುಮ್ಮಸ್ಸಿನಿಂದಲೋ ಏನೋ, ಯಂತ್ರ ಕಳಚುವ ಚಳುವಳಿಯೊಂದನ್ನು ಆರಂಭಿಸುವ ಅಗತ್ಯವನ್ನು ಈ ಪುಸ್ತಕದ ಮೂಲಕ ಪ್ರತಿಪಾದಿಸಲು ಯತ್ನಿಸಿದ್ದಾರೆ. ಅತ್ಯಾಧುನಿಕ ಯಂತ್ರ ಆವಿಷ್ಕಾರಗಳ ಮತ್ತು ಅವುಗಳ ವೈವಿಧ್ಯಮಯ ಮತ್ತು ಮೋಹಕ ಉತ್ಪನ್ನಗಳೇ ಮಾರುಕಟ್ಟೆಯನ್ನು ತುಂಬಿಕೊಂಡಿರುವ ಈ ದಿನಗಳಲ್ಲಿ ಯಂತ್ರಗಳ ವಿರುದ್ಧ ಮಾತಾಡಲು, ಅಪಹಾಸ್ಯಕ್ಕೀಡಾಗುವ ಆತಂಕದ ಮಧ್ಯೆ ಸ್ವಲ್ಪ ಧೈರ್ಯವೂ-ಇದನ್ನು ಭಂಡ ಧೈರ್ಯವೆಂದೂ ಕರೆಯಬಹುದೇನೋ-ಬೇಕು. ಇಂತಹ ಧೈರ್ಯವನ್ನು ಪ್ರಸನ್ನ ಇಲ್ಲಿ ಪ್ರದರ್ಶಿಸಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ.

ಹಾಗೆ ನೋಡಿದರೆ, ಯಂತ್ರ ವಿರೋಧಿ ಆಲೋಚನೆಗಳು, ಮಾತುಗಳು, ಚಳುವಳಿಗಳು ಹೊಸದೇನಲ್ಲ. ಯಂತ್ರಗಳ ಆವಿಷ್ಕಾರದ ಆರಂಭ ಕಾಲದಲ್ಲೇ ಪೂರ್ವ-ಪಶ್ಚಿಮಗಳೆರಡೂ ಕಡೆಯಿಂದ ಅದಕ್ಕೆ ವಿರೋಧ ವ್ಯಕ್ತವಾಯಿತು. ಈ ವಿರೋಧಕ್ಕೆ ಒಂದು ತಾತ್ವಿಕತೆಯ, ಕಾರ್ಯಕ್ರಮದ ರೂಪ ನೀಡಿದವರು ಮಹಾತ್ಮ ಗಾಂಧಿ. ಅವರ ಮೊದಲ ಕೃತಿ 'ಹಿಂದ್ ಸ್ವರಾಜ್' ಮೂಲತಃ ಈ ಯಂತ್ರ ಸಂಸ್ಕೃತಿಯ ಅನಾಹುತಗಳನ್ನು ಕುರಿತ ಎಚ್ಚರಿಕೆಯೇ ಆಗಿದೆ. ಪ್ರಸನ್ನ ಈ ಪುಸ್ತಕದಲ್ಲಿ ಅದನ್ನು ಪ್ರಸ್ತಾಪಿಸುತ್ತಾರೆ. ಅಷ್ಟೇ ಅಲ್ಲ, ಗಾಂಧೀಜಿಯ ವಿರೋಧವಿದ್ದುದು, ಆತಂಕವಿದ್ದುದು, ಯಂತ್ರದ ಪರಿಕಲ್ಪನೆ ಬಗೆಗಲ್ಲ; ಅದು ಒಂದು ನಾಗರೀಕತೆಯ ಸಾಧನವಾಗಿ ಬೆಳೆಯುವ ಬಗೆಗೆ ಎಂಬುದನ್ನೂ ಸೂಚಿಸುತ್ತಾರೆ. ಆದರೂ ಯಂತ್ರಗಳು, ಹೊಸ ಹೊಸ ಯಂತ್ರಗಳು ನಮ್ಮ ಬದುಕನ್ನು ಆಳುತ್ತಿವೆ; ನಮ್ಮ ರಾಜಕಾರಣವನ್ನು ನಿರೂಪಿಸುತ್ತಲೇ ಇವೆ. ಏಕೆ? ಈ ಪ್ರಶ್ನೆಯನ್ನು ಮುಖಾಮುಖಿ ಮಾಡಿಕೊಳ್ಳದ ಯಾವುದೇ ಯಂತ್ರ ವಿರೋಧಿ ವಾದವೂ ಜನರ ಮನಸ್ಸನ್ನು ತಟ್ಟಲಾರದು.

ಈ ಪುಸ್ತಕದಲ್ಲಿ ಪ್ರಸನ್ನ ಈ ಯಂತ್ರ ನಾಗರೀಕತೆ ನಮ್ಮನ್ನು ಆವರಿಸುವ ಮುನ್ನ ಭಾರತ ಹೇಗೆ ಕೈಗಾರಿಕೆಯ ವಿಷಯದಲ್ಲಿ ಜಗತ್ತಿನ ಮುಂಚೂಣಿಯಲ್ಲಿತ್ತು ಎಂಬುದನ್ನು ವಿವರಿಸುವುದಲ್ಲದೆ, ಇದರ ಆಗಮನದಿಂದಾಚೆಗೆ ಭಾರತದ ಬದುಕು ಹೇಗೆ ಎಲ್ಲ ವಲಯಗಳಲ್ಲಿ ಹಸೆಗೆಟ್ಟು ಹೋಗಿದೆ ಎಂಬುದನ್ನೂ ಉದಾಹರಣೆಗಳ ಸಹಿತ ವಿಷದೀಕರಿಸುತ್ತಾರೆ. ಕೊನೆಗೆ, ಯಂತ್ರ ನಾಗರೀಕತೆ ಎಂಬುದು ಹೇಗೆ ದೇವರಿಲ್ಲದ ಬದುಕನ್ನು ಸೃಷ್ಟಿಸಿದೆ ಎಂಬುದನ್ನು ನಿರೂಪಿಸುತ್ತಾ, ರಾಮಾಯಣದ ರಾಮನನ್ನು ಕಳೆದುಕೊಂಡುದೇ ಅಥವಾ ವಿರೂಪಗೊಳಿಸಿಕೊಂಡುದುದೇ ನಾವು ಯಂತ್ರ ನಾಗರೀಕತೆಗೆ ಸಿಕ್ಕಿ ಹಾಕಿಕೊಳ್ಳಲು ಕಾರಣವೆಂದು ಹೀಗ ಪರೋಕ್ಷವಾಗಿ ಸೂಚಿಸುವವರೆಗೂ ಹೋಗುತ್ತಾರೆ: 'ರಾಮನ ಆದರ್ಶವನ್ನು ಮೆಚ್ಚುವವರು ಯಂತ್ರ ನಾಗರೀಕತೆಯನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ'!(ಪು:180).

ಈ ಸಂಬಂಧವಾಗಿ ಅವರು ರಾಮಾಯಣವನ್ನು ಅದರ 'ಉತ್ತರ ರಾಮ ಚರಿತೆ'ಯ ಆವೃತ್ತಿಯನ್ನು ನೆಪವಾಗಿರಿಸಿಕೊಂಡು ಚರ್ಚಿಸುತ್ತಾ, ವಿವಾಹ, ಕುಟುಂಬ ಇತ್ಯಾದಿ ಪರಿಕಲ್ಪನೆಗಳ ಬಗ್ಗೆ ತಮ್ಮದೇ ಆದ-ಕೆಲವೊಮ್ಮೆ ಅಸಂಬದ್ಧವೆನಿಸುವ-ವ್ಯಾಖ್ಯಾನಗಳನ್ನೂ(ಉದಾ: 'ಪರಪುರುಷನ ಬಂಧನದಲ್ಲಿದ್ದ ಮಡದಿಯನ್ನು ಸ್ವೀಕರಿಸಲಿಕ್ಕೆ ಚಕ್ರವರ್ತಿ ರಾಮ ನಿರಾಕರಿಸುತ್ತಾನೆ...... ಒಂದು ಹೆಣ್ಣನ್ನು, ಒಂದೇ ಹೆಣ್ಣನ್ನು ಪ್ರೀತಿಸಿದ ಗಂಡು ನಡೆದುಕೊಳ್ಳುವ ರೀತಿಯದು. ಒಪ್ಪಲಾರದ ನಡವಳಿಕೆ. ಆದರೆ ಸಹಜ ನಡವಳಿಕೆ.' (ಪು:173)), ಮತ್ತೆ ಕೆಲವೊಮ್ಮೆ ತಮಾಷೆ ಎನಿಸುವ ಅಭಿಪ್ರಾಯಗಳನ್ನೂ (ಉದಾ: 'ವೈಯುಕ್ತಿಕ ಉದಾಹರಣೆಯ ಮೂಲಕ ಸಮಾಜವನ್ನು ಬದಲು ಮಾಡಹೊರಟವನು ರಾಮ. ಅವನು ಬದಲಾಗಿದ್ದಾನೆ. ಆದರೆ ಸಮಾಜ ಬದಲಾಗಿಲ್ಲ.ಮಿಕ್ಕವರೇಕೆ, ರಾಮನ ತಂದೆಯೇ ಬದಲಾಗಿಲ್ಲ.

ಹಲವು ಪತ್ನಿಯರನ್ನು ಹೊಂದಿದ್ದವನು ತಾನೇ ದಶರಥ!'(ಪು:174), 'ರಾಮನ ಪಡೆಯಲ್ಲಿ ರಾಮ ಹಾಗೂ ಅವನ ತಮ್ಮ ಲಕ್ಷ್ಮಣನನ್ನು ಬಿಟ್ಟರೆ, ಮಿಕ್ಕವರಾರೂ ಮಾನವರಲ್ಲ, ಸಸ್ಯಾಹಾರಿ ಕಾಡುಪ್ರಾಣಿಗಳು! ಅಹಿಂಸೆಯ ಆತ್ಯಂತಿಕ ಪ್ರತೀಕವಿದು. ರಾಮನ ಕಡೆಯಿರುವ ಏಕ ಮಾತ್ರ ಮಾಂಸಾಹಾರಿ ಪ್ರಾಣಿ ಜಟಾಯು ಸಹಿತ ಮುದಿಯಾಗಿರುವುದರಿಂದ, ಬೇಟೆಯಾಡದ ಹದ್ದು, ಹಾಗಾಗಿ ಮಾಂಸಾಹಾರಿಯಲ್ಲ.'(ಪು:193), 'ರಾಮ ಕ್ಷತ್ರಿಯ. ರಾವಣನನ್ನು ಸೋಲಿಸಲು ಅವನು ಸೈನಿಕರನ್ನು ಸಂಘಟಿಸಬಹುದಿತ್ತು; ಭರತನ ನೆರವು ಯಾಚಿಸಬಹುದಿತ್ತು. ಆದರೆ ಅವನು ಹಾಗೆ ಮಾಡಲಿಲ್ಲ.'(ಪು:177) ಇತ್ಯಾದಿ..) ನೀಡುತ್ತಾ ತಮ್ಮದೇ ಅತಿ ವ್ಯಾಖ್ಯಾನಗಳ ಜಾಲದಲ್ಲಿ ಕಳೆದು ಹೋಗಿದ್ದಾರೆ.

ರಾಮಾಯಣ ಕುರಿತ ಇಂತಹ ಚರ್ಚೆಯ ಮೂಲಕ ಇಂದಿನ ಕೋಮು ರಾಜಕಾರಣದವರೆಗೂ ತಮ್ಮ ಯಂತ್ರ ವಿರೋಧಿ ಸಂಕಥನವನ್ನು ಹಬ್ಬಿಸಲು ಯತ್ನಿಸಿರುವ ಲೇಖಕರು, ಇದಕ್ಕೆ ಪೂರಕವಾಗಿ ಐರೋಪ್ಯ ಪುನರುಜ್ಜೀವನ ಯುಗದಿಂದಾಚೆಗೆ ನಡೆದ ಎಲ್ಲ ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಬೆಳವಣಿಗೆಗಳ ಸಮೀಕ್ಷೆ ಮಾಡುವ ಭರದಲ್ಲಿ ಅಲ್ಲಲ್ಲಿ ಗಾಬರಿ ಹುಟ್ಟಿಸುವಂತಹ, ಪರಸ್ಪರ ಸಂಬಂಧವಿಲ್ಲದ ದಪ್ಪ ದಪ್ಪನಾದ ಹೇಳಿಕೆಗಳನ್ನೂ, ತೀರ್ಮಾನಗಳನ್ನೂ ದಾಖಲಿಸುತ್ತಾ ಹೋಗುತ್ತಾರೆ. ಉದಾ:'ಅಲ್ ಖೈದ, ಭಜರಂಗ ದಳ, ಕೂಕ್ಲುಕ್ಸ್ ಕ್ಲ್ಯಾನ್... ಇತ್ಯಾದಿ ಅನೇಕ ಸಂಘಟನೆಗಳು ಯಂತ್ರ ನಾಗರೀಕತೆಗೆ ಪ್ರತಿಕ್ರಿಯೆಯಾಗಿ ಬಂದವುಗಳು.'(ಪು:42), 'ಬಡವರು ನಗರಗಳಿಗೆ ಗುಳೇ ಹೋಗುವುದು ಬಡತನದ ಕಾರಣಕ್ಕಾಗಿ ಮಾತ್ರವೇ ಅಲ್ಲ, ಹಳ್ಳಿಗಳೆಂಬ ದುಸ್ಸಹ ಸಾಮಾಜಿಕ ಸಂದರ್ಭವನ್ನು ಮೀರಲಿಕ್ಕಾಗಿಯೂ ಹೌದು.

ದಲಿತರು ಮಾತೃಭಾಷೆಗಳ ಜೊತೆಗೆ ಇಂಗ್ಲಿಷ್ ಭಾಷೆಯನ್ನೂ ಕಲಿಯ ಬಯಸುತ್ತಿದ್ದಾರೆ ಎಂಬ ಅರಿವಾಗಿದೆ ನಮಗೆ'(ಪು:34), 'ಆರಂಭದ ಒಂದು ಶತಮಾನ ಅತ್ಯಂತ ಸ್ನೇಹಿಯೂ ಸಹಿಷ್ಣುವೂ ಆಗಿದ್ದ ಇಸ್ಲಾಂ

ಯಂತ್ರ ವಿರೋಧಿ ಆಲೋಚನೆಗಳು, ಚಳುವಳಿಗಳು ಹೊಸದೇನಲ್ಲ. ಯಂತ್ರಗಳ ಆವಿಷ್ಕಾರದ ಆರಂಭ ಕಾಲದಲ್ಲೇ ಪೂರ್ವ-ಪಶ್ಚಿಮಗಳೆರಡೂ ಕಡೆಯಿಂದ ಅದಕ್ಕೆ ವಿರೋಧ ವ್ಯಕ್ತವಾಯಿತು. ಈ ವಿರೋಧಕ್ಕೆ ಒಂದು ತಾತ್ವಿಕತೆಯ, ಕಾರ್ಯಕ್ರಮದ ರೂಪ ನೀಡಿದವರು ಮಹಾತ್ಮ ಗಾಂಧಿ. ಅವರ ಮೊದಲ ಕೃತಿ 'ಹಿಂದ್ ಸ್ವರಾಜ್' ಮೂಲತಃ ಈ ಯಂತ್ರ ಸಂಸ್ಕೃತಿಯ ಅನಾಹುತಗಳನ್ನು ಕುರಿತ ಎಚ್ಚರಿಕೆಯೇ ಆಗಿದೆ.

ಪುಸ್ತಕ ಅವಲೋಕನ



ಲೇ: ಪ್ರಸನ್ನ, ಪುಟ: 235
ಬೆಲೆ: ರೂ.140/-
ಪ್ರ: ಒಂಟಿದನಿ ಪ್ರಕಾಶನ,
ಕವಿಕಾವ್ಯ ಟ್ರಸ್ಟ್,
ಹೆಗ್ಗೋಡು- 577417 (ಸಾಗರ ತಾ॥)

ಡಿ.ಎಸ್.ನಾಗಭೂಷಣ

ಧರ್ಮವು ಸಹಜವಾಗಿಯೇ ಕೆಳವರ್ಗದ ಜನರನ್ನು ಆಕರ್ಷಿಸಿತು. ಆದರೆ ನಿಧಾನವಾಗಿ ಅದು ಅಸಹಿಷ್ಣುವೂ, ಬಲವಂತ ಹೇರುವ ಧರ್ಮವೂ ಆಗಿ ಪರಿವರ್ತಿತವಾಯಿತು ಎನ್ನುವುದೂ ಸತ್ಯವೇ. ಮುಸಲ್ಮಾನ ದೊರೆಗಳು ನಮ್ಮಲ್ಲಿ ರಾಜ್ಯವಾಳಿದ್ದು ನಂತರದಲ್ಲಿ.'(ಪು:141), '....ಅಪ್ಪಟ ಸೈತಾನನನ್ನು ಸೃಷ್ಟಿಸುವುದು ಭಾರತೀಯರಿಗೆ ಒಪ್ಪಿಗೆಯಿಲ್ಲ. ರಾವಣ, ಧುರ್ಯೋಧನ, ಭರತ... ಯಾರೂ ಸೈತಾನರಲ್ಲ...'(ಪು:193) ಇತ್ಯಾದಿ!

ಈ ಎಲ್ಲ ಗೋಜಲುಗಳ ಮಧ್ಯೆ, ಒಟ್ಟಿನಲ್ಲಿ ಅವರಿಗೆ ಅನ್ನಿಸಿರುವುದು: 'ಯಂತ್ರ ನಾಗರೀಕತೆಯ ಒಳನಿಂತು ಯಂತ್ರಗಳನ್ನು ತಿರಸ್ಕರಿಸುವುದು ಕಷ್ಟದ ಕೆಲಸವಲ್ಲ. ಯಂತ್ರಗಳ ತಿಪ್ಪೆಯು ನಮ್ಮ ಮುಂದಿದೆ. ತಿಪ್ಪೆಯ ದುರ್ನಾತವು ಮೂಗಿಗೆ ಬಡಿಯುತ್ತಿದೆ. ಯಂತ್ರಗಳ ಕರ್ಕಶ ಕೂಗು ಕಿವಿಗೆ ಬಡಿಯುತ್ತಿದೆ. ಹಾಗಾಗಿ ತಿರಸ್ಕರಿಸಲಿಕ್ಕೆ ಯಾವುದೇ ಸೂಕ್ಷ್ಮಮತಿಯ ಅಗತ್ಯವಿಲ್ಲ. ಗಟ್ಟಿ ಮನಸ್ಸಿನ ನಿರ್ಧಾರದ ಅವಶ್ಯಕತೆಯಿದೆ ಅಷ್ಟೆ'(ಪು:165). ಆದರೆ ಪ್ರಶ್ನೆ: ಸೂಕ್ಷ್ಮಮತಿಯ ಅಗತ್ಯವೂ ಇಲ್ಲದ ಈ ನಿರ್ಧಾರವನ್ನು ತೆಗೆದುಕೊಳ್ಳುವ ಗಟ್ಟಿ ಮನಸ್ಸು ಜಗತ್ತಿಗೇಕೆ, ನಿರ್ದಿಷ್ಟವಾಗಿ ಭಾರತಕ್ಕೇಕೆ ಸಾಧ್ಯವಾಗಿಲ್ಲ? ಇದಕ್ಕೆ ಉತ್ತರ, ಯಂತ್ರಗಳನ್ನು ಕಟ್ಟಿದ ರಾಜಕಾರಣದಲ್ಲಿದೆ. ಅದನ್ನು ಪ್ರಸನ್ನ ಬಹು ಸರಳೀಕರಿಸಿ ಮತ್ತು ತಮ್ಮ ಹಳೆಯ ಮಾರ್ಕ್ಸ್‌ವಾದಿ ಕಣ್ಣಟ್ಟಿಯನ್ನು ಬಿಚ್ಚಿಕೊಳ್ಳದೆ ವಿವರಿಸಿಕೊಳ್ಳಲು ಹೋಗಿ ದಾರಿ ತಪ್ಪಿದ್ದಾರೆ.

ಹಾಗಾಗಿಯೇ ಅವರು ಯಂತ್ರ ನಾಗರೀಕತೆಯ ವೈರುಧ್ಯಗಳನ್ನು ವಿವರಿಸಲು, ಚಿತ್ರಗಳೂ, ಸಾಹಿತ್ಯ ಕೃತಿಗಳೂ ಸೇರಿದಂತೆ ಬಹುವಾಗಿ ಐರೋಪ್ಯ ಉದಾಹರಣೆಗಳನ್ನೇ ಅವಲಂಬಿಸಿದ್ದಾರೆ. ಇಂತಹ ವಿವರಣೆಯ ಪರಿಣಾಮವಾಗಿ, ಯಂತ್ರ ನಾಗರೀಕತೆ ಸೃಷ್ಟಿಸಿದ ಸಮಾನತೆಯ ಆಶಯ ಹಾಳಾಗಲು ಕಾರ್ಮಿಕ ಪ್ರಭುಗಳು(ಅಂದರೆ ಕಮ್ಯೂನಿಸ್ಟ್ ಪ್ರಭುತ್ವಗಳು) ಐಶಾರಾಮಿ ಜೀವನದಿಂದ ಆಕರ್ಷಿತರಾಗಿ ಪ್ರಭುತ್ವ ನಿರ್ವಹಣೆಯಲ್ಲಿ ಸೋತಿದ್ದೇ ಕಾರಣವೆಂಬ ಸುಲಭ ಉತ್ತರವನ್ನು ಕಂಡುಕೊಂಡಿದ್ದಾರೆ (ಪು:38-39).

ಇದು ಸುಲಭ ಉತ್ತರ ಏಕೆಂದರೆ, ಈ ಸಮಾನತೆಯ ಆಶಯವನ್ನು ವೈಜ್ಞಾನಿಕವಾಗಿ ನಿರೂಪಿಸಿ ಎತ್ತಿ ಹಿಡಿದ ಸಿದ್ಧಾಂತಗಳೇಕೆ ಈ ಅಪಾಯವನ್ನು ಮುನ್ನೋಡಲಾಗಲಿಲ್ಲ ಎಂಬ ಪ್ರಶ್ನೆಯನ್ನು ಇದು ಎದುರಿಸಿಲ್ಲವಾದ್ದರಿಂದ. ಯಂತ್ರಗಳನ್ನು ವಶಪಡಿಸಿಕೊಂಡ ಹೊಸ ವರ್ಗ, ಯಾವ ಯಂತ್ರಗಳು ಇವರ ಶೋಷಣೆಗೆ ಕಾರಣವಾಗಿದ್ದವೋ ಆ ಶೋಷಣೆ ಮುಂದುವರೆಯದಂತೆ ಆ ಯಂತ್ರಗಳ ತತ್ವವನ್ನು ಬದಲಾಯಿಸದಿದ್ದುದೇ; ಆ ವರ್ಗದ ಪ್ರಭುತ್ವದ(ಅಂದರೆ ಕಮ್ಯೂನಿಸ್ಟ್ ಆಳ್ವಿಕೆಗಳ) ಅವನತಿಗೆ-ಸಮಾನತೆಯ ಆಶಯದ ಸಾಧನೆಯ ವೈಫಲ್ಯಕ್ಕೆ-ಕಾರಣವಾಯಿತೆಂಬುದನ್ನು ಲೇಖಕರು ಗುರುತಿಸಲು ನಿರಾಕರಿಸಿದ್ದಾರೆ.

ಹಾಗಾಗಿಯೇ ಅವರು ತಮ್ಮ ಮುನ್ನುಡಿಯಲ್ಲಿ, 'ಒಟ್ಟಾರೆಯಾಗಿ ಗ್ರಾಮ ಜೀವನದ ಬಗ್ಗೆಯೇ ಬಡವರಿಗೆ ಅನುಮಾನಗಳಿವೆ. ಯಂತ್ರ ನಾಗರೀಕತೆ ಹಾಗೂ ನಗರ ಸಂಸ್ಕೃತಿಯು ನಮ್ಮಲ್ಲ ಪರಂಪರೆಗಳಿಗಿಂತಲೂ ಹೆಚ್ಚು ಪ್ರಜಾಸತ್ತಾತ್ಮಕವಾದುದೆಂದು ಬಡವರು ನಂಬುತ್ತಾರೆ.... ಯಂತ್ರ ನಾಗರೀಕತೆಯು ಒಳತಂದ ವೈಚಾರಿಕ ಕ್ರಾಂತಿಯನ್ನು ತಿರಸ್ಕರಿಸದೆ, ತಂತ್ರಜ್ಞಾನದ ಕಸ ಹಾಗೂ ಅನೈತಿಕತೆಗಳನ್ನು ತಿರಸ್ಕರಿಸಬಯಸುತ್ತದೆ ಇಲ್ಲಿನ ವಿಚಾರಗಳು' ಎಂದು ತಮ್ಮ ಪುಸ್ತಕವನ್ನು, ಬಡವರು ಮತ್ತು ಯಂತ್ರ ನಾಗರೀಕತೆ ಕುರಿತು ಅರ್ಧ ಸತ್ಯಗಳನ್ನಷ್ಟೇ ಹೇಳುತ್ತಾ ಸಮರ್ಥಿಸಿಕೊಳ್ಳಲು ಯತ್ನಿಸಿದ್ದಾರೆ.

ಪ್ರಸನ್ನ ಯೂರೋಪಿನ ಸಮಾಜವಾದಿಗಳ ಬಗ್ಗೆ ಮಾತನಾಡುತ್ತಾರೆ. ಆದರೆ ಶೂಮೇಕರ್‌ರಿಂದ ಆರಂಭವಾದ 'ಸಣ್ಣದು ಸುಂದರ'('Small is Beautiful') ಪರಿಕಲ್ಪನೆ ಮತ್ತು ಚಳುವಳಿಯ ಪ್ರಸ್ತಾಪವನ್ನೂ ಮಾಡದೆ, ಅವರೆಲ್ಲ ಯಂತ್ರಗಳ ವಕ್ತಾರರೇ ಆಗಿದ್ದರೆಂದು ಆರಾಮವಾಗಿ ಘೋಷಿಸುತ್ತಾರೆ! ದಾಖಲೆಯ ದೃಷ್ಟಿಯಿಂದ ಇದು ಸಣ್ಣ ಅಪರಾಧವೇನೂ ಅಲ್ಲ! ಇನ್ನು ಯಂತ್ರಗಳನ್ನು ಕುರಿತಂತೆ ಭಾರತದ ಸಮಾಜವಾದಿಗಳ ನಿಲುವೇನಾಗಿತ್ತು ಎಂಬುದರ ಬಗ್ಗೆ ಸಣ್ಣ ಮಾಹಿತಿಯನ್ನೂ ನೀಡದೆ, ಅವರು ತಮ್ಮ ಯಂತ್ರ ವಿರೋಧಿ ಪ್ರಚಾರದ ಗಾಡಿಯನ್ನು ಹೊಡಕೊಂಡು ಹೋಗಿದ್ದಾರೆ! ಇದು ಉದ್ದೇಶಪೂರ್ವಕವೋ, ಮಾಹಿತಿಯ ಕೊರತೆಯೋ ತಿಳಿಯದು.

ಮಾಹಿತಿಯ ಕೊರತೆಯೇ ಆಗಿದ್ದರೆ, ಅದು ಅಕ್ಷಮ್ಯವೇ ಸರಿ. ಏಕೆಂದರೆ, ಯಂತ್ರ ನಾಗರೀಕತೆ ಕುರಿತು ಇಷ್ಟು ದೊಡ್ಡ ಮತ್ತು ಮಹತ್ವಾಕಾಂಕ್ಷೆಯ ಪುಸ್ತಕ ಬರೆಯ ಹೊರಡುವವರು, ತಾವು ಬರೆಯ ಹೊರಟಿರುವ ವಿಷಯದ ಬಗ್ಗೆ ಸಮಗ್ರ-ಅದೂ ಎಡಪಂಥೀಯ ಚಳುವಳಿಯೊಂದಿಗೆ ದೀರ್ಘಕಾಲ ಗುರುತಿಸಿಕೊಂಡಿದ್ದವರು ಗಮನಿಸಲೇ ಬೇಕಾಗಿದ್ದಂತಹ-ಮಾಹಿತಿಯನ್ನು ಸಂಗ್ರಹಿಸಿಕೊಳ್ಳಬೇಕಾದ ಜವಾಬ್ದಾರಿಯನ್ನೂ ಹೊಂದಿರಬೇಕಾಗುತ್ತದೆ. ನಾನು ಈ ಮಾತನ್ನು ಇಷ್ಟು ಚೂಪಾಗಿ ಹೇಳುವ ಅಗತ್ಯವೇನೆಂದರೆ, ಯಂತ್ರ ನಾಗರೀಕತೆ ಕುರಿತಂತೆ ಗಾಂಧೀಜಿ ನಂತರ ಅತ್ಯಂತ ಮುಖ್ಯ ವ್ಯಾಖ್ಯಾನಗಳನ್ನು ಮಾಡಿದ್ದು, ರಾಜಕೀಯ ಕಾರ್ಯಕ್ರಮಗಳನ್ನು ರೂಪಿಸಿದ್ದು ಭಾರತೀಯ ಸಮಾಜವಾದಿ ಚಳುವಳಿಯೇ. ವಿಶೇಷವಾಗಿ ಲೋಹಿಯಾ ವಿಚಾರ ಧಾರೆ. ಪ್ರಸನ್ನ ಅವರ ಈ ಪುಸ್ತಕದ ಓದಿನ ಸಂದರ್ಭದಲ್ಲಿ ಅದನ್ನು ವಿಸ್ತಾರವಾಗಿ ಪರಿಚಯಿಸುವುದು ಅನುಚಿತವಾದರೂ, ಅದರ ಮುಖ್ಯ ಆಶಯವನ್ನು ಹೇಳುವುದು ಅನಿವಾರ್ಯವಾಗಿದೆ.

ಪ್ರಸನ್ನ ತಮ್ಮ ಈ ಪುಸ್ತಕದಲ್ಲಿ ಏನೆಲ್ಲ ಚರ್ಚಿಸಿ, ಯಂತ್ರ ನಾಗರೀಕತೆಯ ವಿರುದ್ಧದ ಆಂದೋಲನದಲ್ಲಿನ ಈ ಒಂದು ಸೃಜನಶೀಲ ಅಧ್ಯಾಯವನ್ನೇ ಕೈಬಿಟ್ಟು, ತಮ್ಮ ನೆರವಿಗಾಗಿ ದೇವರು, ಧರ್ಮ, ಜಾತಿಗಳನ್ನೆಲ್ಲ ಎಳೆದು ತಂದು ಎಲ್ಲರನ್ನೂ ಓಲೈಸುವ ಅನಗತ್ಯ ಕಸರತ್ತಿಗೆ ಕೈ ಹಾಕಿದ್ದಾರೆ. ಹಾಗಾಗಿಯೇ ಅವರು ಪುಸ್ತಕದ ಆರಂಭದಲ್ಲಿ ಮಿಶ್ರ ಆರ್ಥಿಕ ನೀತಿಯ ಪ್ರಯೋಜನಗಳನ್ನು 'ಸಹಬಾಳ್ವೆ' ಯ ಹೆಸರಲ್ಲಿ ಗುರುತಿಸಿದವರು, ಪುಸ್ತಕದ ಮಧ್ಯಭಾಗಕ್ಕೆ ಬರುವ ಹೊತ್ತಿಗೆ ಅದನ್ನು ಆರ್ಥಿಕ ದೊಂಬರಾಟ ಎಂದು ಕರೆಯುವ ತರ್ಕದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೆ.

ಭಾರತೀಯ ಸಮಾಜವಾದ ಗಾಂಧೀಜಿಯಂತೆ ಯಂತ್ರವನ್ನು 'ಶತ್ರು'ವಿನಂತೆ ನೋಡದೆ(ಗಾಂಧೀಜಿ ಯಂತ್ರಾಧಾರಿತ ಆಧುನಿಕ ನಾಗರೀಕತೆಯನ್ನು 'ರೋಗ' ಎಂದು ಕರೆದಿದ್ದರು), ಅದನ್ನು 'ಮಿತ್ರ'ನನ್ನಾಗಿ ಮಾಡಿಕೊಳ್ಳುವ ಉಪಾಯಗಳನ್ನು ಯೋಚಿಸಿತು. ಏಕೆಂದರೆ, ಯಂತ್ರ ಹೊಸ ಕಾಲದ ಮನುಷ್ಯನ ಅನೇಕ ಸಹಜ ಆಸೆ-ಆಕಾಂಕ್ಷೆಗಳ ಪ್ರತೀಕವೂ ಆಗಿತ್ತು. ಸಮಾಜವಾದದ ಮೂಲ ಆಶಯವಾದ ಸಮಾನತೆಯ ಸಾಮಾಜಿಕ ಸಾಕ್ಷಾತ್ಕಾರಕ್ಕಾಗಿ ಯಂತ್ರವೂ ಉತ್ಪಾದನೆಯ ವೇಗ ಮತ್ತು ಹೆಚ್ಚಳಗಳ ಒಂದು ಸಾಧನವಾಗಬಲ್ಲುದು ಎಂದು ಇವರು ಭಾವಿಸಿದ್ದರು. ಆದರೆ ಯಂತ್ರದ ಆವಿಷ್ಕಾರ ವಸಾಹತುಶಾಹಿಗೂ ಕಾರಣವಾಗಿ, ಜಗತ್ತನ್ನು ಅತಿ ಸಮೃದ್ಧಿ ಮತ್ತು ಅತಿ ದಾರಿದ್ರ್ಯಗಳ ಎರಡು ಖಂಡಗಳನ್ನಾಗಿ ಒಡೆದಿದ್ದುದನ್ನೂ ಅವರು ಗಮನಿಸಿದ್ದರು. ಹಾಗಾಗಿ ಅವರು ಈ ಎರಡು ಖಂಡಗಳ ನಡುವಣ ಕಂದಕವನ್ನು ಮುಚ್ಚಬಲ್ಲ ಸಮಾನೀಕರಣದ ಯಂತ್ರ ತತ್ವಕ್ಕಾಗಿ ಅವರು ಹುಡುಕಾಡಿದರು.

ಲೋಹಿಯಾ ಪ್ರತಿಪಾದಿಸಿದ ಸ್ಥಳೀಯ ಅಗತ್ಯ, ಸ್ಥಳೀಯ ಬಂಡವಾಳ ಮತ್ತು ಸ್ಥಳೀಯ ನಿರ್ವಹಣೆಗಳನ್ನಾಧರಿಸಿದ ತೈಲ ಅಥವಾ ವಿದ್ಯುತ್ ಚಾಲಿತ ಯಂತ್ರಗಳ ಕಲ್ಪನೆ ಈ ಹುಡುಕಾಟದ ಒಂದು ಫಲ. ಇದನ್ನು ಲೋಹಿಯಾ ಸಣ್ಣ ಘಟಕಗಳ ಯಂತ್ರ(Small unit machine) ಎಂದು ಕರೆದರು. ಇದಕ್ಕಾಗಿ ಭಾರತದಲ್ಲಿ ಬೃಹತ್ ತಂತ್ರಜ್ಞಾನಕ್ಕೆ ಬದಲಾಗಿ ಮಧ್ಯಸ್ಥ ತಂತ್ರಜ್ಞಾನ (Intermediate Technology)ದ ಕ್ಷೇತ್ರದಲ್ಲಿ ಸಂಶೋಧನೆಯ ಕೆಲಸಗಳಾಗಬೇಕು;ಭಾರತಕ್ಕೆ ಅದೇ ಬಿಡುಗಡೆಯ ದಾರಿ ಎಂದು ಕರೆಕೊಟ್ಟರು. ಇದರ ವಿಕಸಿತ ರೂಪವೇ ಇಂದು ಐರೋಪ್ಯ ದೇಶಗಳಲ್ಲಿ ಸುಸಂಗತ ತಂತ್ರಜ್ಞಾನ (Appropriate technology)ದ ಹೆಸರಿನಲ್ಲಿ ಪರಿಸರ ಸ್ನೇಹಿ ಯಂತ್ರಗಳ ತಯಾರಿಕೆಗೆ ಸ್ಫೂರ್ತಿಯಾಗಿರುವುದು.

ಅದೇನೇ ಇರಲಿ, ಇದು ಗಾಂಧೀಜಿಯ ಖಾದಿ-ಗ್ರಾಮೋದ್ಯೋಗ ಕೈಗಾರಿಕೆಗಳ ಕಲ್ಪನೆಯನ್ನು ಆಧುನೀಕರಿಸುವ ದೇಸೀ ಪ್ರಯತ್ನವೇ ಆಗಿತ್ತು. ಹಾಗಾಗಿಯೇ ಲೋಹಿಯಾ ಗಾಂಧೀಜಿಯ ಆದರ್ಶವಾದಿ 'ಗ್ರಾಮ ಸ್ವರಾಜ್ಯ'ದ ಬದಲಿಗೆ ಅದರ ವಾಸ್ತವವಾದಿ ಪರಿಷ್ಕರಣೆಯಂತಿದ್ದ ಚತುಸ್ತಂಭ(ನಾಲ್ಕು ಹಂತಗಳಲ್ಲಿ ಅಧಿಕಾರ ವಿಕೇಂದ್ರೀಕರಣಗೊಂಡ) ರಾಷ್ಟ್ರದ ಕಲ್ಪನೆ ಮಂಡಿಸಿದರು. (ಇದರ ವಿಸ್ತರಣೆಯಾಗಿಯೇ ಅವರು ವಿಶ್ವ ಸರ್ಕಾರದ ಕಲ್ಪನೆಯನ್ನೂ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಮಂಡಿಸಿದ್ದು) ಇವುಗಳ ಜೊತೆಗೆ ಜಾತಿ ವಿನಾಶ ಹಾಗೂ ಇಂಗ್ಲಿಷ್ ತೊಲಗಿಸಿ ಅಥವಾ ಭಾರತೀಯ ಭಾಷಾ ಆಂದೋಲನಗಳನ್ನು ಬೆಸೆದರು. ಇಂತಹ ಬಹುಮುಖಿ ರಾಜಕಾರಣ ಮಾತ್ರ ಯಂತ್ರವೇ ಒಂದು ಒಂದು ನಾಗರೀಕತೆಯನ್ನು ರೂಪಿಸಿ ಉಂಟುಮಾಡಬಹುದಾದ ಅನಾಹುತಗಳನ್ನು ತಡೆಯಬಹುದೆಂದು ಅವರು ಭಾವಿಸಿದರು. ಇದೊಂದು ರೀತಿಯ ಪರಸ್ಪರ ಆಂತರಿಕ ನಿಯಂತ್ರಣಗಳುಳ್ಳ (ರಾಜಕೀಯ) ವ್ಯವಸ್ಥೆ. ಇದಕ್ಕೆ ಇನ್ನೊಂದು ಹೆಸರಷ್ಟೇ ಭಾರತೀಯ ಸಮಾಜವಾದ ಎಂಬುದು.

ಈ ವ್ಯವಸ್ಥೆ, ಲೋಹಿಯಾ ಚಳುವಳಿಯಂತೆಯೇ, ಕಳೆದ ಶತಮಾನದ ಎಪ್ಪತ್ತರ ದಶಕದ ಜನತಾ ಸರ್ಕಾರದ

ಕರ್ಪೂರಿ ಠಾಕೂರ್ ಬಿಹಾರದ ಮುಖ್ಯಮಂತ್ರಿಯಾಗಿ ಆರಂಭಿಸಿದ ಕೃಷಿ ಕೈಗಾರಿಕಾ ಅಭಿವೃದ್ಧಿ ಕಾರ್ಯಕ್ರಮ ಮತ್ತು ಜಾರ್ಜ್ ಫರ್ನಾಂಡೀಸ್ ಕೇಂದ್ರದ ಕೈಗಾರಿಕಾ ಮಂತ್ರಿಯಾಗಿ ಆರಂಭಿಸಿದ ಜಿಲ್ಲಾ ಕೈಗಾರಿಕಾ ಕೇಂದ್ರಗಳ ರೂಪದಲ್ಲಿ ನಡೆದ ಕೆಲವು ಪ್ರಯತ್ನಗಳ ಹೊರತಾಗಿ, ಪ್ರಾಯೋಗಿಕ ಯಶಸ್ಸನ್ನು ಕಾಣಲಿಲ್ಲ. ಹಾಗೆ ನೋಡಿದರೆ, ಗಾಂಧಿಜಿಯ ಯಂತ್ರ ವಿರೋಧಿ ಚಳುವಳಿಯಾಗಲೀ, ಅದರ ಆಧಾರವೆನಿಸಿದ ಗ್ರಾಮ ಸ್ವರಾಜ್ಯ ಚಳುವಳಿಯಗಲೀ ಎಲ್ಲಿ, ಎಷ್ಟು ಯಶಸ್ಸು ಕಂಡಿದೆ? ಹಾಗಾಗಿ ನಾವು ಯಂತ್ರಗಳನ್ನು ಕಳಚಬೇಕೆಂದು ಹೊರಟಾಗ ಭಾರತೀಯ ಸಮಾಜವಾದದ ಈ ತಾತ್ವಿಕ ಕೊಡುಗೆಯನ್ನೂ, ಸಂಬಂಧಿತ ರಾಜಕೀಯ ಕಾರ್ಯಕ್ರಮಗಳನ್ನೂ ನಿರ್ಲಕ್ಷಿಸಿ ಮುಂದೆ ಹೋಗುವಂತೆಯೇ ಇಲ್ಲ. ಏಕೆಂದರೆ, ಈ ಚಳುವಳಿ ಪ್ರಸನ್ನರ ಯಂತ್ರಗಳನ್ನು ಕಳಚುವ ಅಸಾಧ್ಯವೆನ್ನಿಸುವ ಗುರಿಗೆ ಹೋಲಿಸಿದರೆ, ಅವನ್ನು ಪುನರ್ರೂಪಿಸುವ, ಪಳಗಿಸುವ ಕಷ್ಟ ಸಾಧ್ಯ ಮತ್ತು ಸೃಜನಶೀಲ ಸಾಹಸದ ಮಾರ್ಗವನ್ನು ಪ್ರತಿಪಾದಿಸುತ್ತದೆ.

ಆದರೆ ಪ್ರಸನ್ನ ತಮ್ಮ ಈ ಪುಸ್ತಕದಲ್ಲಿ ಏನೆಲ್ಲ ಚರ್ಚಿಸಿ, ಯಂತ್ರ ನಾಗರೀಕತೆಯ ವಿರುದ್ಧದ ಆಂದೋಲನದಲ್ಲಿನ ಈ ಒಂದು ಸೃಜನಶೀಲ ಅಧ್ಯಾಯವನ್ನೇ ಕೈಬಿಟ್ಟು, ತಮ್ಮ ನೆರವಿಗಾಗಿ ದೇವರು, ಧರ್ಮ, ಜಾತಿಗಳನ್ನೆಲ್ಲ ಎಳೆದು ತಂದು ಎಲ್ಲರನ್ನೂ ಓಲೈಸುವ ಅನಗತ್ಯ ಕಸರತ್ತಿಗೆ ಕೈ ಹಾಕಿದ್ದಾರೆ. ಹಾಗಾಗಿಯೇ ಅವರು ಪುಸ್ತಕದ ಆರಂಭದಲ್ಲಿ ಮಿಶ್ರ ಆರ್ಥಿಕ ನೀತಿಯ ಪ್ರಯೋಜನಗಳನ್ನು 'ಸಹಬಾಳ್ವೆ'ಯ ಹೆಸರಲ್ಲಿ ಗುರುತಿಸಿದವರು, ಪುಸ್ತಕದ ಮಧ್ಯಭಾಗಕ್ಕೆ ಬರುವ ಹೊತ್ತಿಗೆ ಅದನ್ನು ಆರ್ಥಿಕ ದೊಂಬರಾಟ ಎಂದು ಕರೆಯುವ ತರ್ಕದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೆ(ಪು:127).

ಹಾಗೇ, ಪಟ್ಟಣಿಗರು ತಾವು ಕೊಳ್ಳಲೇಬೇಕಾದ್ದನ್ನೆಲ್ಲ ಗ್ರಾಮ ಕೈಗಾರಿಕೆಗಳಿಂದಲೇ ಕೊಳ್ಳಬಹುದಲ್ಲವೇ ಎಂದು ಕೇಳುವ ಹುಂಬತನವನ್ನು ಪ್ರದರ್ಶಿಸುತ್ತಾರೆ(ಪು:151). ಪಟ್ಟಣಿಗರು ತಮಗೆ ಬೇಕಾದ್ದನ್ನೆಲ್ಲ ಹಳ್ಳಿಯವರಿಂದಲೇ ಪಡೆಯುವಂತಾದರೆ, ಪಟ್ಟಣಿಗರ ಆರ್ಥಿಕ ಚಟುವಟಿಕೆ ಅಂದರೆ ಉತ್ಪಾದನೆ ಯಾರಿಗಾಗಿ ನಡೆಯಬೇಕು? ಪ್ರಸನ್ನರೇನಾದರೂ ಪಟ್ಟಣಿಗರು ಎಂದರೆ ನೋಟು ಮತ್ತು ನಾಣ್ಯಗಳ ತಯಾರಕರಷ್ಟೇ ಎಂದು ಭಾವಿಸಿದ್ದಾರೋ? ಹೀಗೆ ಇವರ ಚಿಂತನೆ, ಉತ್ಪಾದನೆಯ ಈ ನೆಲೆಯ(ಹಳ್ಳಿ–ಪಟ್ಟಣಗಳ) ಒಡಕನ್ನು ನಿವಾರಿಸಿಕೊಳ್ಳುವ ಮಾರ್ಗಗಳ ಗೋಜಿಗೇ ಹೋಗದಿರುವುದರಿಂದ ಇವರು ಯಂತ್ರಗಳನ್ನು ಕಳಚುವುದು ಸುಲಭ, ಅದಕ್ಕೆ ಗಟ್ಟಿ ಮನಸ್ಸು ಬೇಕಷ್ಟೆ ಎಂಬ ಸರಳ ತೀರ್ಮಾನಕ್ಕೆ ಬರುತ್ತಾರೆ.

ಹಾಗೆ ನೋಡಿದರೆ ಪ್ರಸನ್ನರ 'ಚರಕ' ನಿಂತಿರುವುದೇ ಈ ಒಡಕಿನ ಪ್ರಯೋ ಜನ ಪಡೆದೇ; ಯಂತ್ರ ಸಂಸ್ಕೃತಿಯ ಬದುಕಿನಲ್ಲಿ ಹುಟ್ಟುವ ಪಟ್ಟಣಿಗರ ಹೆಚ್ಚುವರಿ ಕೊಳ್ಳುವ ಶಕ್ತಿಯ ಮೇಲೇ. ಹಾಗಾಗಿ, ಯಂತ್ರಗಳನ್ನು ಕಳಚೋಣ ಆಂದೋಲನದ ಮೂಲಕ ಪಟ್ಟಣಿಗರಿಗೇಕೆ ಹೆಚ್ಚುವರಿಕೊಳ್ಳುವ ಶಕ್ತಿ ಎಂದು ಕೇಳಿದೊಡನೆ, 'ಚರಕ' ತಿರುಗುವುದು ನಿಂತು ಹೋದೀತು ಎಂಬ ಅರಿವು ಪ್ರಸನ್ನರಿಗಿದೆ ಎಂದು ನಾನು ಭಾವಿಸಿದ್ದೇನೆ. ಪ್ರಸನ್ನರ 'ದೇಸಿ ಜೀವನ ಪದ್ಧತಿ' ಸಹಜ ಸರಳ ನಡಿಗೆಯಂತಿದ್ದರೆ, ಈ ಪುಸ್ತಕ ಮಾತ್ರ ಯಾವುದೋ ಅವಸರದ ತಾರಾಟದಂತಿದೆ. □



ಸೃಜನಾತ್ಮಕ ಹಾಗೂ ವೈಚಾರಿಕ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು–೫೬೦ ೦೯೦

ಬರ್ಬರ 'ಚೌರಿ ಸೇವೆ'

(೨೫ನೇ ಪುಟದಿಂದ)

ರದ ಮೇಲೆ ಒತ್ತಡ ಹೇರಲು ಸಂಘಟಿತ ಪ್ರಯತ್ನಗಳು ಹೆಚ್ಚು ಸೂಕ್ತ.

4. ಆಚರಣೆ ನಡೆಯುವ ಪ್ರದೇಶದಲ್ಲಿರುವ ಪ್ರಜ್ಞಾವಂತ ಮಹಿಳೆಯರು, ಹಿರಿಯರು ಮುಂದಾಗಿ ಇದನ್ನು ತಡೆಯುವ ಪ್ರಯತ್ನ ಮಾಡಿದರೆ ಎಷ್ಟು ಒಳ್ಳೆಯದು! ಅಸಕ್ಷರಸ್ಥ ಮಹಿಳೆಯರಲ್ಲಿರುವ ಮೂಡನಂಬಿಕೆಗಳನ್ನು ತೊರೆಯುವ ಜವಾಬ್ದಾರಿ ಸುಶಿಕ್ಷಿತ ಮಹಿಳೆಯರದ್ದು ಎನ್ನುವುದನ್ನು ಅಲ್ಲಗಳೆಯುವಂತಿಲ್ಲ.

5. ಚೌರಿಸೇವೆಯಲ್ಲಿ ಸಮರ್ಪಿಸಿಕೊಂಡಿರುವ ಮಹಿಳೆಯರು ವಿವಾಹವಾಗಬಾರದು ಎಂಬ ಕಟ್ಟಲೆ ಇದ್ದರೂ, ಸಮಾಜ ಕಲ್ಯಾಣ ಇಲಾಖೆ, ಕೆಲವು ಪ್ರಗತಿಪರ ನಾಗರೀಕ ವೇದಿಕೆಗಳು ಇಂತಹ ಮಹಿಳೆಯರಿಗೆ ಸಾಮೂಹಿಕ ವಿವಾಹ, ಕುಟುಂಬ ಜೀವನಕ್ಕೆ ಸಹಕರಿಸಿ ಸಾಮಾಜಿಕ ಮತ್ತು ವೈಯಕ್ತಿಕ ನ್ಯಾಯಕೊಡಿಸುವಂತಾದರೆ ಮಾನವೀಯತೆಯನ್ನು ತೋರಿದಂತಾಗುತ್ತದೆ.

6. ವಿಮೋಚನದಂತಹ ಸಂಸ್ಥೆಗಳು ಮನೆಮನೆಯ ಸರ್ವೆಯನ್ನು ಮಾಡಿ ಆರ್ಥಿಕ ಸ್ಥಿತಿಗಳು ಶಿಕ್ಷಣ ಕುರಿತಾದ ಮಾಹಿತಿಯನ್ನು ಸಂಗ್ರಹಿಸಿ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಸಲಹೆ, ಸರ್ಕಾರದ ಗಮನ ಸೆಳೆಯುವ ಕೆಲಸಗಳನ್ನು ಮಾಡಬೇಕಾಗುತ್ತದೆ.

7. ವಯಸ್ಕ ಶಿಕ್ಷಣ ಕೇಂದ್ರ, ಮಹಿಳಾ ಮಂಡಲಗಳನ್ನು ತೆರೆದು ಇಲಾಖೆಗಳ ಸಹಭಾಗಿತ್ವದಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವುದರಿಂದ ಕೆಲವು ಮಹಿಳೆಯರಾದರೂ ಚೌರಿಸೇವೆಗೆ ಬಲಿಯಾಗದಿರ್ಬಹುದು.

8. ಬೆಂಬಲಿತ ವ್ಯವಸ್ಥೆಗಳಾದ ಮಾನ ಹಕ್ಕು ಆಯೋಗ, ರಾಜ್ಯ ಮಹಿಳಾ ಆಯೋಗ, ಪರಿಶಿಷ್ಟ ಜಾತಿ, ವರ್ಗ ಆಯೋಗ ಮುಂತಾದವುಗಳು ಕಟ್ಟುನಿಟ್ಟಾಗಿ ಕಾನೂನು ಕ್ರಮ ಜರಗಿಸಲು ಪ್ರಯತ್ನಿಸಿದಲ್ಲೂ ಈ ಹೀನ ಆಚರಣೆಯನ್ನು ತಡೆಗಟ್ಟಬಹುದು.

ಕೊನೆಯಮಾತು:

ಕತ್ತಲು ತುಂಬಿದ ಬದುಕಿಗೆ ಬೆಳಕನ್ನು ನೀಡಲು ನೂರಾರು ದಾರಿಗಳಿವೆ. ಬೇಕಾಗಿರುವುದು ಸಕಾರಾತ್ಮಕವಾದ ಕ್ರಿಯಾಶೀಲತೆ ಮತ್ತು ಮಾನವೀಯ ಮನಸ್ಸುಗಳಷ್ಟೇ. ಬಹು ಮುಖ್ಯವಾಗಿ ಆಚಾರ, ಪದ್ಧತಿ, ಸಂಪ್ರದಾಯ ಮೂಡನಂಬಿಕೆಗಳ ಕೊರಕಲುಗಳನ್ನು ಮಹಿಳೆಯರೇ ಪಾಲಿಸಿಕೊಂಡು ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂತರಿಸುವುದು ಶೋಷನೀಯವಲ್ಲವೆ? ಅವುಗಳು ನಿರರ್ಥಕವಾದ ಹಾಗೂ ಶೋಷಣಾತ್ಮಕವಾದ ವಿಚಾರಗಳೆನ್ನುವುದು ಬಹಳಷ್ಟು ಮಹಿಳೆಯರಿಗೆ ತಿಳಿದಿಲ್ಲ.

ಸಂವಿಧಾನವು ಜಾರಿಗೆ ಬಂದ ನಂತರ ಮಹಿಳೆಯರಿಗೆ ಕಾನೂನಿನ ರಕ್ಷಣೆ, ಸಮಾನ ಅವಕಾಶ ಹಕ್ಕು ಎಲ್ಲ ದೊರೆತರೂ ಕೂಲಹಳ್ಳಿಯಂತಹ ಗ್ರಾಮದಲ್ಲಿ ಮಹಿಳೆಯರು ಹೀನ ಪರಿಸ್ಥಿತಿಯಲ್ಲಿ ಜೀವಿಸುವುದು ನಿಜಸತ್ಯ. ಮಹಿಳೆಯರ ಪ್ರಶ್ನೆ ಕುರಿತಂತೆ ಒಂದೆಡೆ ಜ್ಞಾನೋದಯ ಪಡೆದ ಮಹಿಳೆಯರು... ಇನ್ನೊಂದೆಡೆ ಅಜ್ಞಾನ ಮತ್ತು ಸಂಪ್ರದಾಯಗಳಿಂದ ಹೊರಬರಲಾಗದ ಮಹಿಳೆಯರು... ಇದೊಂದು ವಿಪರ್ಯಾಸವಲ್ಲವೆ? ನೀವು ಹೇಗೆ ಆಲೋಚಿಸುವಿರಿ?..... □



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು





ಶ್ರೀ ವೆಂಕಟರಮಣಪ್ಪ
ಸನ್ಮಾನ್ಯ ಸಣ್ಣ ಕೈಗಾರಿಕೆ ಮತ್ತು
ರೇಷ್ಮೆ ಸಚಿವರು

ಕರ್ನಾಟಕ ರೇಷ್ಮೆ ಉದ್ಯಮಕ್ಕೆ ಪ್ರಶಸ್ತವಾದ ತಾಣ. ಸರ್ಕಾರವು ರೇಷ್ಮೆ ಕೃಷಿ ಅಭಿವೃದ್ಧಿಗೆ ಎಲ್ಲಾ ರೀತಿಯ ನೆರವು ಪ್ರೋತ್ಸಾಹ ನೀಡುತ್ತಿದೆ. ಕೃಷಿ ಬೆಳೆಗಾರರು ಮತ್ತು ಉದ್ಯಮದಲ್ಲಿ ತೊಡಗಿರುವ ರೀಲರ್‌ಗಳ ಹಿತರಕ್ಷಣೆಗೆ ಪೂರಕವಾದ ನೀತಿ ನಿಯಮಗಳನ್ನು ರೂಪಿಸಿ ಜಾರಗೊಳಿಸಿದೆ.

- ರೇಷ್ಮೆ ವರದಾನ ಯೋಜನೆಯಡಿ 1200 ಹೆಕ್ಟೇರ್ ಪ್ರದೇಶದಲ್ಲಿ ಹೊಸದಾಗಿ ಹಿಪ್ಪುನೇರಳೆ ನಾಟಿಗೆ ರೂ.140.50 ಲಕ್ಷಗಳನ್ನು ಪ್ರೋತ್ಸಾಹ ಧನವಾಗಿ ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 1900 ಹೆಕ್ಟೇರ್ ಹಿಪ್ಪುನೇರಳೆ ಪ್ರದೇಶದಲ್ಲಿ ಹನಿ ನೀರಾವರಿ ಘಟಕಗಳ ಅಳವಡಿಕೆಗೆ ರೂ.697.00 ಲಕ್ಷಗಳ ಸಹಾಯಧನ ನೀಡಲಾಗಿದೆ
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 2510 ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ರೂ.1632.00 ಲಕ್ಷಗಳ ಸಹಾಯಧನ ನೀಡಲಾಗಿದೆ.
- ರೇಷ್ಮೆ ವರದಾನ ಯೋಜನೆಯಡಿ 375 ಹಣ್ಣು ಹುಳುವಿನ ಮನೆ (ಮೌಂಟಿಂಗ್ ಹಾಲ್) ಗಳ ನಿರ್ಮಾಣಕ್ಕೆ ರೂ.140.45 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 773 ಫಲಾನುಭವಿಗಳಿಗೆ ಚಾಕಿ ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ರೇಷ್ಮೆ ಹುಳು ಸಾಕುವ ಸಲಕರಣೆಗಳ ಖರೀದಿಗೆ ರೂ.127.68 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಇಬ್ಬರು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಸ್ವಯಂಚಾಲಿತ ರೀಲಿಂಗ್ ಯಂತ್ರಗಳನ್ನು ಅಳವಡಿಸಲು ರೂ.150 ಲಕ್ಷಗಳ ಸಹಾಯ ಧನವನ್ನು ನೀಡಲಾಗಿದೆ.
- ಆರೋಗ್ಯ ವಿಮೆ ಯೋಜನೆಯಡಿ 10,000 ರೇಷ್ಮೆ ಬೆಳೆಗಾರರು ಹಾಗೂ ರೀಲರ್‌ಗಳಿಗೆ ರೂ.72.60 ಲಕ್ಷಗಳನ್ನು ವಿಮಾ ಕಂತಾಗಿ ಸಂದಾಯ ಮಾಡಲಾಗಿದೆ.
- ವಿವಿಧ ಯೋಜನೆಗಳಡಿ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ರೂ.590.00 ಲಕ್ಷಗಳ ಪ್ರೋತ್ಸಾಹ / ಸಹಾಯಧನ ನೀಡಲಾಗಿದೆ.
- ಮೈಸೂರು ಬಿತ್ತನೆ ಪ್ರದೇಶದ ರೇಷ್ಮೆ ಬೆಳೆಗಾರರ ಹಿತರಕ್ಷಣೆಗಾಗಿ ರೂ.107.40 ಲಕ್ಷಗಳನ್ನು ಬೋನಸ್ / ಸಹಾಯಧನವಾಗಿ ನೀಡಲಾಗಿದೆ.
- ಪರಿಶಿಷ್ಟ ಜಾತಿ / ಪಂಗಡದ ರೇಷ್ಮೆ ಬೆಳೆಗಾರರು / ರೀಲರುಗಳಿಗೆ ಪ್ರತ್ಯೇಕ ಯೋಜನೆಗಳಡಿ ರೂ.315.00 ಲಕ್ಷಗಳ ಸೌಲಭ್ಯಗಳನ್ನು ಒದಗಿಸಲಾಗಿದೆ.
- ಸಾಲ ಯೋಜನೆಯಡಿ ರೇಷ್ಮೆ ಕೃಷಿ ಚಟುವಟಿಕೆಗಳಿಗೆ 3120 ಫಲಾನುಭವಿಗಳಿಗೆ ವಾಣಿಜ್ಯ ಸಂಸ್ಥೆಗಳ ಮೂಲಕ ರೂ.2547.10 ಲಕ್ಷಗಳ ಸಾಲವನ್ನು ಒದಗಿಸಲಾಗಿದೆ.
- ರಾಜ್ಯ / ಜಿಲ್ಲಾ ಮಟ್ಟದ ಪ್ರಗತಿಪರ ರೇಷ್ಮೆ ಕೃಷಿಕರ / ರೀಲರುಗಳ ಪ್ರಗತಿಯನ್ನು ಆಧರಿಸಿ ಇಲಾಖೆಯಿಂದ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

2009-10ನೇ ಸಾಲಿನಲ್ಲೂ ಮೇಲ್ಕಂಡ ಯೋಜನೆಗಳು ಅನುಷ್ಠಾನದಲ್ಲಿದ್ದು ಇವುಗಳ ಪ್ರಯೋಜನವನ್ನು ಪಡೆಯಲು ರೇಷ್ಮೆ ಇಲಾಖೆಯ ಸ್ಥಳೀಯ ಅಧಿಕಾರಿಗಳನ್ನು ಸಂಪರ್ಕಿಸಿ.

ಕರ್ನಾಟಕ ವಾರ್ತೆ

ಬೀದಿಗೆ ಬಿದ್ದ ಹಬ್ಬಗಳು

ಜಯಪ್ರಕಾಶ್ ಶೆಟ್ಟಿ .ಹೆಚ್

ಬಾರದ ಮಳೆ, ಕೈಗೆಟುಕದ ಬೆಳೆ, ಬೀಜ–ಗೊಬ್ಬರ ಗಳ ಅಭಾವದಿಂದ ಸರ್ಕಾರ, ಸಹಕಾರ, ಸಹಾಯಗಳ ನಿರೀಕ್ಷೆ ಯಲ್ಲಿ ಕಂಗೆಡುತ್ತಿರುವ ದುಡಿಮೆಗಾರರು ಉರುಳಿಗೆ ಕೊರಲೊ ಡ್ಡುತ್ತಿದ್ದಾರೆ. ಸಣ್ಣ ಸೂಜಿ ಉತ್ಪಾದಕನೂ ತನ್ನ ಉತ್ಪಾದನೆಗೆ ಬೆಲೆ ನಿಗಧಿ ಮಾಡಿ, ನಷ್ಟವಾದಲ್ಲಿ ಕೋಟಿಗಟ್ಟಲೆ ಪರಿಹಾರ ಪಡೆಯುತ್ತಿದ್ದಾನೆ. ರಾಜಕಾರಣಿ ಗಳ ಭರವಸೆ, ಧಾರ್ಮಿಕ ದುರೀಣರ ಬೊಗಳೆಗಳು ಮುಂದುವರೆದು ಕೊಂಡೇ ಬಂದಿವೆ. ಈ ನಡುವೆ ಕೊರಳಿಗೆ ಕುಣಿಕೆ ಹಾಕಿಕೊಂಡಂತೆ ಬಣ್ಣದಶಾಲು, ಹಣೆಗೆ ಹೆದ್ದಾರಿ ಬರೆದಂತೆ ಉದ್ದನೆಯ ನಾಮ ಹಾಕಿದ ನಾಮ ಧಾರಿಗಳು ಅಧಿಕಗೊಳ್ಳುತ್ತಿದ್ದಾರೆ. ಈ ಮರಿ ಸೂರ್ಯರುಗಳು ಎಲ್ಲೆಂದರಲ್ಲಿ ಈಗ ಕಣ್ಣಿಗೆ ರಾಚುತ್ತಿದ್ದಾರೆ.

ಹಬ್ಬ–ಹರಿದಿನಗಳಲ್ಲಿ, ನಾಡು–ನುಡಿ–ದೇಶದ ಸಂಭ್ರಮ ದಲ್ಲಿ ಎಲ್ಲರನ್ನೂ ಸೇರಿಸುವ ಸಿಪಾಯಿಗಳಾಗಿ ರಶೀದಿ ಪುಸ್ತಕ ಹಿಡಿದು, ಮಂದಿಯ ಮುಖಕ್ಕೊಡ್ಡಿ ಎಷ್ಟು ಬರೆಯಲಿ? ಎಂಬ ಪ್ರಶ್ನೆ ಎಸೆಯುವ ಇವರುಗಳ ಮುಖದ ಗೆಲುವಿನ ನಗೆ ಎಲ್ಲರಿಗೂ ಪರಿಚಿತ. ಆಚರಣೆ ಎಂದಾಗ ಅಬ್ಬರವಿಲ್ಲದೆ ಹೇಗಾ ದೀತು? ಅಬ್ಬರಕ್ಕೆ ಗೊಬ್ಬರ ಬೇಡವೇ? ಗೊಬ್ಬರ ಕೊಡುವ ಗೋವನ್ನು ಪೀಕುವುದಕ್ಕಾಗಿಯೇ ತಯಾರಾಗುವ ಈ ಆರಕ್ಷಕರು ನಿಮ್ಮ ಪ್ರತಿ ಕ್ರಿಯೆಗಾಗಿಯೋ, ಆಯ್ಕೆಗಾಗಿಯೋ ಕಾಯುವವರಲ್ಲ. ನಿಮ್ಮ ಹಬ್ಬ ಅವರು ಆಚರಿಸುತ್ತಾರೆ. ಅದಕ್ಕಾಗಿ ನೀವು ನಿಮ್ಮ ಕರ್ತವ್ಯ ಎಂಬಂತೆ ವಂತಿಗೆ ನೀಡಬೇಕು! ಈ ನೆಲ, ದೇಶದಲ್ಲಿ ಹುಟ್ಟಿದ ಮೇಲೆ ಹಾಗೆ ಮಾಡುದಿರುವಂತಿಲ್ಲ. ಒಂದು ವೇಳೆ ನಮ್ಮ ಉಸಾಬರಿ ನಿಮಗೇಕೆ? ಎಂಬ ಪ್ರಶ್ನೆ ನಿಮ್ಮದಾದಲ್ಲಿ, ನಿಮ್ಮ ಹುಟ್ಟೇ ಅಡ್ಡ ದಾರಿಯದೆಂಬ ಅಘೋಷಿತ ನಾಮ ಫಲಕ ಪಡೆಯಲು ನೀವು ತಯಾರಿ ರಬೇಕು.



ನಿಮ್ಮ ದೇಣಿಗೆಯ ಪ್ರಮಾಣಾನುಸಾರ ಕರೆಯೋಲೆಯ ಲ್ಲಿಯೂ ನಿಮಗೊಂದು ಜಾಗ ಸಿಗುತ್ತದೆ. ಈ ತೆರನಾದ ಜಂಗಮ ರೂಪಿ ಕಲೆಕ್ಷನ್ ಕೌಂಟರ್‌ಗಳಿಂದಾಗಿ ಅನೇಕ ಯೋಗ್ಯತಾವಂತರು, ತಮ್ಮ ತಮ್ಮ ಯೋಗ್ಯತಾನುಸಾರ ದಾನಮಾಡಿ ಕಟೌಟ್‌ಗಳಾಗಿಯೊ, ಫ್ಲೆಕ್ಸ್‌ಗಳಾಗಿಯೋ, ಬ್ಯಾನರ್ ಬಂಟಿಂಗ್‌ಗಳ ರೂಪದ ಲ್ಲಿಯೋ ಹಬ್ಬಕ್ಕೊಂದು ಮೆರಗು ನೀಡುತ್ತಾರೆ. ವಂತಿಗೆದಾರರು, ಪೋಷಕರು, ಮಹಾಪೋಷಕರು, ಜಾಹೀರಾತುದಾರರು, ಪ್ರಾಯೋಜಕರುಗಳೆಂಬ ಅನೇಕ ಅಭಿದಾನಗಳಲ್ಲಿ ಕೊಡುವವರ ನಾಮಾರ್ಚನೆ ನಡೆಸಿದ ಮೇಲೆ ಸಾರ್ವಜನಿಕ ಸ್ಥಳದಲ್ಲಿ 'ಸಾರ್ವಜನಿಕ ಉತ್ಸವ' ಎಂಬ ಘೋಷವಾಕ್ಯದಡಿ 'ಉತ್ಸವಸಮಿತಿ' ಎಂಬ ಅಡ್‌ಹಾಕ್ ವ್ಯವಸ್ಥೆ ಕ್ರಿಯಾಶೀಲವಾಗಿ ತೊಡಗಿಕೊಳ್ಳುತ್ತದೆ. ಬಟಾಬಯಲಿನಲ್ಲಿ ಗರ್ಭ ಗೃಹ, ಸಾಂಸ್ಕೃತಿಕ ವೇದಿಕೆ, ಸಭಾಮಂಟಪ ಎಂಬ ರಚನೆಗಳು ಅಣಿಗೊಂಡು ಜಗಜ್ಜಾಹೀರಾಗಿ ಮೈಕಾಸುರನೆಂಬ ರಾಕ್ಷಸನನ್ನು ಸ್ಥಾಪಿಸಿ ಕೊಳ್ಳುತ್ತದೆ. ಕಾಣದ ದೇವರನ್ನು ಕರೆಯುವ ಆರಂಭದ ಕ್ಯಾಸೆಟ್ ಮುಗಿಯುತ್ತಿದ್ದಂತೆಯೇ ಸಂಸ್ಕೃತಿಯ ಅಕರಾಳ–ವಿಕರಾಳ ರೂಪದ ಬಳುವಳಿಯಂತೆ ಬೆರಕೆ ಸಂಗೀತದ ಕೂಗು ಅಬ್ಬರಿಸಿ ಉತ್ಸವದ ಆವರಣ ಸೃಷ್ಟಿಗೊಂಡು ಬಿಡುತ್ತದೆ. ಇದು ನಿಮ್ಮ ಸುತ್ತ–ಮುತ್ತ, ಮನೆಯ ಗಲ್ಲಿ–ಮೂಲೆಗಳಲ್ಲಿ ಸಾರ್ವಜನಿಕ ಸ್ಥಳವನ್ನು ಆಕ್ರಮಿಸಿಕೊಂಡು ಮೇಲೇಳುವ ಸಾರ್ವಜನಿಕ ಉತ್ಸವಗಳೆಲ್ಲದರ ಸಾಮಾನ್ಯ ಪಾಡು.

ಪ್ರಸ್ತುತ ಲೇಖನದಲ್ಲಿ ಇಂತಹ ಸಂಕ್ರಮಣ ಸ್ಥಿತಿಯನ್ನು ತಲುಪಿರುವ ಹಬ್ಬಗಳನ್ನು ಕುರಿತು ಚರ್ಚಿಸುವ ಯತ್ನ ಮಾಡಲಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಹಬ್ಬದ ಕುರಿತಾದ ಸ್ಥೂಲ ಗ್ರಹಿಕೆಯೊಂದಿಗೆ ಕರಾವಳಿ ಪರಿಸರದ ಕೆಲವು ಹಬ್ಬಗಳ ಕುರಿತಾದ ಪಕ್ಷಿನೋಟದ ಯತ್ನವನ್ನು ಮಾಡಲಾಗಿದೆ. ಜೊತೆಗೆ ಬದಲಾದ ಸನ್ನಿವೇಶದಲ್ಲಿ ಉತ್ಸವಗಳಾಗಿ ಮಾರ್ಪಡುತ್ತಿರುವ ಹಬ್ಬಗಳು ಹೊಂದಿದ ಮಾರ್ಪಾಡುಗಳನ್ನು, ಒಡ್ಡುವ ಸವಾಲುಗಳನ್ನು ಸಾಂಸ್ಕೃತಿಕ ರಾಜಕಾರಣದ ಹಿನ್ನೆಲೆಯಲ್ಲಿ ಚರ್ಚಿಸುವ ಪ್ರಯತ್ನವಾಗಿದೆ. ಹರಾಜಿಗೆ ಬಿದ್ದ ಹಬ್ಬಗಳು ಅಧಿಕಾರ ರಾಜಕಾರಣದ ಸಾಧನಗಳಾಗಿ ಸಾಮಾನ್ಯರ ಬದುಕಿಗೆ ಒಡ್ಡುತ್ತಿರುವ ಸವಾಲುಗಳು ಈ ಲೇಖನದ ಕೇಂದ್ರ ಕಾಳಜಿಗಳಾಗಿವೆ.

1) ಸಂಸ್ಕೃತ 'ಪರ್ವ' ಶಬ್ಧದ ಅಪಭ್ರಂಶರೂಪವಾಗಿ 'ಹಬ್ಬ' ವನ್ನು ಪರಿಗಣಿಸುತ್ತಾರೆ. ಆದರೆ 'ಹಬ್ಬ' ಕಟ್ಟಿಕೊಡುವ ಆತ್ಮೀಯ ಆವರಣ ದೇಸೀಯಾದುದು ಮತ್ತು 'ಉತ್ಸವ' ಪರಿಭಾಷೆಗಿಂತ ಭಿನ್ನವಾದ ಬಹುತ್ವದ ನೆಲೆಯದು. ಯಾಕೆಂದರೆ ಹಬ್ಬಗಳು ಉತ್ಸವದ ಏಕೀಕೃತ ಮಾದರಿಗಿಂತ ಭಿನ್ನವಾಗಿ, ಸೃಜನಾ ವೈವಿಧ್ಯವನ್ನು ಉಳಿಸುವ ಚಿಕ್ಕ ಚಿಕ್ಕ ಘಟಕಗಳು. ಮನೆಹಬ್ಬಗಳಿರಲಿ, ಊರ ದೈವದ ಹಬ್ಬಗಳಿರಲಿ ಇವುಗಳು ಮನೆಯ ಒಳಹೊರಗೆಂಬ ಎರಡೂ ನೆಲೆಗಳಲ್ಲಿ ಸಮುದಾಯ ಸಂಭ್ರಮವನ್ನು ಅಣಿಗೊಳಿಸುವ ಸಂದರ್ಭಗಳು. ಇಂತಹ ಸಂದರ್ಭಗಳು ಕೌಟುಂಬಿಕ ವಲಯದ ಒಳಗಡೆಯೇ ದುಡಿಮೆಯ ನಡುವಿನ ಬಿಡುವಾಗಿ, ಆಹಾರ–ಆಲೋಚನೆಗಳ ಬದಲಾವಣೆ ಇಲ್ಲವೇ ವಿಸ್ತರಣೆಯಾಗಿ ಸಂಭವಿಸುವಂತಹುಗಳು.

ಕಾಲಮಾನದ ನಡುವಿನ ಬದುಕಿನ ಏಕತಾನತೆ ಯನ್ನು ಕಡಿದು, ಹೊಸತನದೊಂದಿಗೆ ಬಂಧುತ್ವದ ನೆಲೆಗಳನ್ನು ಗಟ್ಟಿಗೊಳಿಸುತ್ತಾ, ಜೀವನಕ್ಕೆ ಚೈತನ್ಯ ತುಂಬುವ ಬಹುಮುಖ್ಯ ಸಂಗತಿಗ

ಹಬ್ಬ-ಹರಿದಿನಗಳಲ್ಲಿ, ನಾಡು-ನುಡಿ-ದೇಶದ ಸಂಭ್ರಮದಲ್ಲಿ ಎಲ್ಲರನ್ನೂ ಸೇರಿಸುವ ಸಿಪಾಯಿಗಳಾಗಿ ರಶೀದಿ ಪುಸ್ತಕ ಹಿಡಿದು, ಮಂದಿಯ ಮುಖಕ್ಕೊಡ್ಡಿ ಎಷ್ಟು ಬರೆಯಲಿ? ಎಂಬ ಪ್ರಶ್ನೆ ಎಸೆಯುವ ಇವರುಗಳ ಮುಖದ ಗೆಲುವಿನ ನಗೆ ಎಲ್ಲರಿಗೂ ಪರಿಚಿತ. ಆಚರಣೆ ಎಂದಾಗ ಅಬ್ಬರವಿಲ್ಲದೆ ಹೇಗಾದೀತು? ಅಬ್ಬರಕ್ಕೆ ಗೊಬ್ಬರ ಬೇಡವೇ? ಗೊಬ್ಬರ ಕೊಡುವ ಗೋವನ್ನು ಪೀಕುವುದಕ್ಕಾಗಿಯೇ ತಯಾರಾಗುವ ಈ ಆರಕ್ಷಕರು ನಿಮ್ಮ ಪ್ರತಿ ಕ್ರಿಯೆಗಾಗಿಯೋ, ಆಯ್ಕೆಗಾಗಿಯೋ ಕಾಯುವವರಲ್ಲ. ನಿಮ್ಮ ಹಬ್ಬ ಅವರು ಆಚರಿಸುತ್ತಾರೆ. ಅದಕ್ಕಾಗಿ ನೀವು ನಿಮ್ಮ ಕರ್ತವ್ಯ ಎಂಬಂತೆ ವಂತಿಗೆ ನೀಡಬೇಕು! ಈ ನೆಲ, ದೇಶದಲ್ಲಿ ಹುಟ್ಟಿದ ಮೇಲೆ ಹಾಗೆ ಮಾಡದಿರುವಂತಿಲ್ಲ.

ಳೆಂದರೆ ಇಂತಹ ಹಬ್ಬಗಳೇ. ಬಹುಮಟ್ಟಿನ ಆಚರಣಾವಲಯವನ್ನು ಗಮನಿಸಿ ಹೇಳುವುದಾದರೆ, ಈ ಆಚರಣಾ ಕೇಂದ್ರದಲ್ಲಿರುವ ಜನ ಅಕ್ಷರಿಕೆಲೋ ಕಕ್ಕೆ ಹೆಚ್ಚು ಪರಿಚಿತರಲ್ಲದವರು. ಪುರಾಣವನ್ನು ಬರೆಯ ಲಾರದ, ಓದಲಾರದ, ಆದರೆ ಬದುಕಿನ ದಟ್ಟ ಅನುಭವವನ್ನು ಹೆಪ್ಪಾಗಿಸಿಕೊಂಡು ಬಂದ ಈ ಜನಸಮುದಾಯಗಳ ಪ್ರತಿ ಆಚರಣೆಯ ಹಿಂದೆ ಪುರಾಣದ ನೆರಳಿಗಿಂತ, ಪಾರಂಪರಿಕ ಬದುಕಿನ ಛಾಯೆಯಿದೆ ಎನ್ನಬಹುದು. ಬದುಕನ್ನು ದಟ್ಟವಾಗಿ ಪ್ರೀತಿಸುವ ಈ ಮಂದಿ ಜೀವದ ಆಧಾರವಾದ ಮಣ್ಣು ಮತ್ತು ದುಡಿಮೆಯ ಲೋಕವನ್ನೇ ತನ್ನ ಆರಾಧನಾ ಪ್ರಪಂಚದಲ್ಲಿ ಸಾಕಾರಗೊಳಿಸಿಕೊಳ್ಳುತ್ತದೆ.

ಬದುಕಿನ ವಿಕಾಸಗತಿಯಲ್ಲಿ ಸಾಮುದಾಯಿಕ ಲೋಕಗ್ರಹಿಕೆ ಮತ್ತು ಜೀವನದೃಷ್ಟಿಯ ಭಾಗವಾಗಿ ಇವುಗಳು ಆಚರಣಾತ್ಮಕ ಆವರಣದ ಜತೆಗೆ ಕುಲಮೂಲೀಯ ಬೆಸುಗೆಯೊಂದಿಗೆ ಪ್ರತಿನಿಧಿಕರಣದ ನೆಲೆಯಲ್ಲಿಯೇ ಸ್ಥಾಪಿಸಲ್ಪಟ್ಟಿರುತ್ತವೆ. ಈ ತೆರನಾದ ಪ್ರತಿನಿಧಿಕರಣಕ್ಕೆ ಒಳಗಾಗದ ಹಬ್ಬಗಳು ಸಮುದಾಯದ ಪಾಲಿಗೆ ಹಬ್ಬಗಳೆನಿಸುವುದೇ ಇಲ್ಲ. ದೈನಿಕದ ಹೋರಾಟ ಹಾಗೂ ಬದುಕಿನ ಇತಿಹಾಸದೊಂದಿಗೆ ತಳುಕಿ ಹಾಕಿಕೊಳ್ಳದ ಯಾವುದೇ ಹಬ್ಬ ಜನಸಮುದಾಯಕ್ಕೆ ಹಬ್ಬದ ರೋಮಾಂಚನವನ್ನೊದಗಿಸಲಾರವು. ಹಾಗಾಗಿಯೇ ಸಂವಿಧಾನಾತ್ಮಕ ಆಶಯಗಳ ಹಿನ್ನೆಲೆಯಲ್ಲಿ ಬರುವ ರಾಷ್ಟ್ರೀಯ ಹಬ್ಬಗಳು, ಮಧ್ಯಮವರ್ಗದ ಸನ್ನಿಗಳಾಗಿ ಸಂಭವಿಸುತ್ತಿರುವ ಮೆಟ್ರೊಪಾಲಿಟನ್ ಸಿಟಿಗಳ ಕೆಲ ಸೆಲಬ್ರೇಶನ್‌ಗಳು ಸಾಮಾನ್ಯ ಜನರಲ್ಲಿ ಯಾವ ಕಂಪನವನ್ನೂ ಹುಟ್ಟಿಸುವುದಿಲ್ಲ.

2) ಪ್ರತಿಯೊಂದು ಪ್ರಾದೇಶಿಕ ಮತ್ತು ಜಾನಾಂಗಿಕ ವಲಯಗಳಲ್ಲಿ ಅನನ್ಯತೆಯೊಂದಿಗೆ ತಮ್ಮ ಬಹುತ್ವದ ನೆಲೆಗಳನ್ನು ದಾಖಲಿಸುವ ಹಬ್ಬಗಳು ಪ್ರಧಾನವಾಗಿ ಏಕಸಂಸ್ಕೃತಿಯ ವಕ್ತಾರಿಕೆಗಿಂತ ಭಿನ್ನವಾಗಿ ನಿಲ್ಲತಕ್ಕಂತಹುಗಳು. ಕರಾವಳಿ ಕನ್ನಡ ಪ್ರದೇಶವಾದ ಕುಂದಾಪುರವನ್ನು ಗಮನಿಸಿ ಉದಾಹರಿಸುವುದಾದರೆ ಇಂತಹ ಹಲವಾರು ಆಚರಣೆಗಳು ಇಲ್ಲಿ ಕಾಣಸಿಗುತ್ತವೆ. ಮುಖ್ಯವಾಗಿ ಕೃಷಿಕಾಯಕದ ಪಾರಂಪರಿಕ ಸಮಾಜವನ್ನು ಹೊಂದಿದ್ದ ಈ ಭಾಗದ ಆಚರಣೆಗಳು ಕೃಷಿ ಬದುಕಿನ ಗ್ರಹಿಕೆಯ ಸುತ್ತ ಬೆಸೆದುಕೊಂಡಿವೆ. ಬೇಸಾಯದ ಮೊದಲ ಉಳುಮೆಯಾಗಿ ಆರ್ದ್ರಾಥಿ ಹೊಟ್ಟು ಸುಡುವ, ಉಳುವ ಜಾನುವಾರುಗಳ ಸಿರಿಪಾದ ತೊಳೆಯುವ ಹಾಗೂ ಗೆಣಸುಕಾಯಿಹಾಲು ಮೆಲ್ಲುವ ಸೌರಮಾನ ಯುಗಾದಿ; ಈ ನಂತರದ ಹತ್ತನೇ ದಿನದಲ್ಲಿ ನೆಲಕ್ಕೆ ಮೊದಲ ಬೀಜ ನೆಟ್ಟು ಆರಂಭ ಮಾಡುವ ಬೀಜ ಮುಹೂರ್ತ (ಹತ್ರಾವದಿ) ಬಿತ್ತನೆಯ ಮೊದಲಿನ ಆಚರಣೆಗಳು.

ಈ ನಡುವೆಯೇ ಮಳೆಗಾಲದ ಆರಂಭದಲ್ಲಿ ತಲೆಮಾರಿನ ಋಣಸಂದಾಯದ ನೆಲೆಯಲ್ಲಿ ಅನುಕೂಲದ ದಿನದಂದು ನಡೆಯುವ ಜಕಣಿ ಮಾಂಸಾಹಾರಿ ಆಚರಣೆ. ಹಲಸಿನ ಹಣ್ಣಿನ ಪಿಟ್ಟನೊಂದಿಗೆ ಕೋಳಿಸಾರು ಮಾಡಿ ಭೂತಗಳಿಗೆ ಮತ್ತು ಸತ್ತ ಹಿರಿಯರಿಗೆ ಎಡೆಯಿಡುವ ಆಚರಣೆಯಿದು. ನಾಟಿ ಕೆಲಸ ಮುಗಿಯುತ್ತಿದ್ದಂತೆ ದುಡಿದ ಕೋಣ/ಎತ್ತುಗಳಿಗೆ ನಿರ್ಧಿಷ್ಟವಾದ ಮರಗಳ ತೊಗಟೆ ಬೇಯಿಸಿ ಚಗರುತೆಗೆದು, ಗಂಜಿ ಮಾಡಿ, ದುಡಿದು ದಣಿದ ಮನೆಮಂದಿಗೆ ಮಾಂಸಾಹಾರದ ಊಟಮಾಡಿಸುವ 'ಹದ್ನ' (ಎರ್ತ) ಶ್ರಮಗೌರವದ ಆಚರಣೆ.

ಹಬ್ಬವಿಲ್ಲದ ಕಾಲದಲ್ಲಿ ಕಡುಬು ತಿನ್ನುವ ಆಸೆಯ

ಹಬ್ಬವಿಲ್ಲದ ಕಾಲದಲ್ಲಿ ಕಡುಬು ತಿನ್ನುವ ಆಸೆಯ ಫಲವಾಗಿ ಹುಟ್ಟಿದ್ದೆನ್ನುವ ಐತಿಹ್ಯ ಪ್ರತೀತಿ ಹೊಂದಿದ ಆಸಾಡಿ ಹಬ್ಬ, ಔಷದೀಯ ನೆಲೆಯಲ್ಲಿ ಆಚರಿಸಲ್ಪಡುವ ಹಾಲಿ, ಕ್ಯಾನಿ-ಕೆಸವುಗಳ ಆಚರಣೆಗಳು ಇನ್ನಿತರವಾದವುಗಳು. ಮನೆಯ ಎದುರಿಗೆ ದಿನಂಪ್ರತಿ ರಂಗೋಲಿ ಬರೆಯುವ ಪದ್ಧತಿಯಿರದ ಈ ಭಾಗದಲ್ಲಿ ಹೊಸ್ತಿಲು ಪೂಜೆಯ ಸಮಾರೋಪವಾಗಿ ನಡೆಯುವ 'ಅಜ್ಜ' ಮಾಂಸದೂಟದ ಮತ್ತೊಂದು ಸಂಧರ್ಭ. ಈ ನಡುವೆ ಹೊಸಬೆಳೆಯ ಗರ್ಭಾಂಕುರವಾಗುತ್ತಿದ್ದಂತೆ ಎದುರಾಗುವ ಗಣೇಶ ಚತುರ್ಥಿ, ಸ್ಥಳೀಯರ ಪಾಲಿಗೆ ಸಣ್ಣಹೊಸ್ತು. ಐದು ಬಗೆಯ ನಿರ್ದಿಷ್ಟ ತರಕಾರಿಗಳ ಪಲ್ಯದೊಂದಿಗೆ ಶಾಖಾಹಾರಿಯಾಗಿ ನಡೆಯುವ ಈ ಆಚರಣೆ, ಈ ಭಾಗದಲ್ಲಿ ಕದಿರ ಪೂಜೆಗಾಗಿ ನಡೆಯುವ ಹೊಸ್ತಿನ ಸಂಕ್ಷಿಪ್ತರೂಪ.

ಫಲವಾಗಿ ಹುಟ್ಟಿದ್ದೆನ್ನುವ ಐತಿಹ್ಯ ಪ್ರತೀತಿ ಹೊಂದಿದ ಆಸಾಡಿ ಹಬ್ಬ, ಔಷದೀಯ ನೆಲೆಯಲ್ಲಿ ಆಚರಿಸಲ್ಪಡುವ ಹಾಲಿ, ಕ್ಯಾನಿ-ಕೆಸವುಗಳ ಆಚರಣೆಗಳು ಇನ್ನಿತರವಾದವುಗಳು. ಮನೆಯ ಎದುರಿಗೆ ದಿನಂಪ್ರತಿ ರಂಗೋಲಿ ಬರೆಯುವ ಪದ್ಧತಿಯಿರದ ಈ ಭಾಗದಲ್ಲಿ ಹೊಸ್ತಿಲು ಪೂಜೆಯ ಸಮಾರೋಪವಾಗಿ ನಡೆಯುವ 'ಅಜ್ಜ' ಮಾಂಸದೂಟದ ಮತ್ತೊಂದು ಸಂಧರ್ಭ. ಈ ನಡುವೆ ಹೊಸಬೆಳೆಯ ಗರ್ಭಾಂಕುರವಾಗುತ್ತಿದ್ದಂತೆ ಎದುರಾಗುವ ಗಣೇಶ ಚತುರ್ಥಿ, ಸ್ಥಳೀಯರ ಪಾಲಿಗೆ ಸಣ್ಣಹೊಸ್ತು. ಐದು ಬಗೆಯ ನಿರ್ದಿಷ್ಟ ತರಕಾರಿಗಳ ಪಲ್ಯದೊಂದಿಗೆ ಶಾಖಾಹಾರಿಯಾಗಿ ನಡೆಯುವ ಈ ಆಚರಣೆ, ಈ ಭಾಗದಲ್ಲಿ ಕದಿರ ಪೂಜೆಗಾಗಿ ನಡೆಯುವ ಹೊಸ್ತಿನ ಸಂಕ್ಷಿಪ್ತ ರೂಪ.

'ಹೊಸ್ತು' ಕದಿರನ್ನು ಹೊತ್ತುತಂದು ಮನೆ-ಮರ-ಸಾಧನಗಳಿಗೆ ಕಟ್ಟಿ, ಬೆಳೆ ಬೆಳೆದು ಒಳಗಿರುವ ಮೊದಲೇ ಸಮೃದ್ಧಿಯನ್ನು ಸ್ವಾಗತಿಸುವ ಶಾಖಾಹಾರಿ ಆಚರಣೆ. ಈ ಕಾಲದಲ್ಲಿಯೇ ನವರಾತ್ರಿಯ 9-10ನೆಯ ದಿನಗಳಂದು ಕೆಲವೇ ಮನೆಗಳಲ್ಲಿ ನಡೆಸುವ ಸರ್ವೇಸಮ್ಮನ ಆಚರಣೆ. ಶಕ್ತಿಯಾರಾಧನೆಯ ರೂಪಗಳಲ್ಲೊಂದು. ಸರ್ವೇಸಮ್ಮನ ಆಳಾದ ನಾಥ ಪಂಥಿಯನಾಗಿರಬಹುದಾದ ಜೋಗಿಗೂ ಪೀಠ ಕಟ್ಟಿ, ಕಬ್ಬಿನ ಜಲ್ಲೆಯ ತೋರಣದೊಂದಿಗೆ ಅಮ್ಮ ಮತ್ತು ಜೋಗಿ ಇಬ್ಬರನ್ನೂ ಆರಾಧಿಸುವಲ್ಲಿ, ಜೋಗಿಯ ಎಡೆಯ ಕೊನೆಗೆ ಒಣಮೀನು ಇರಿಸಿ ಉಭಯ ಆಹಾರ ಮಾದರಿಗಳನ್ನು ಗೌರವಿಸಲಾಗುತ್ತದೆ.

ಈ ಆಚರಣೆಯಲ್ಲಿ ಬಾವಿಯ ನೀರನ್ನು ಛಟ್ಟಿ(ಕೊಡ)ಗೆ ತುಂಬಿ, ಪೀಠದಲ್ಲಿರಿಸಿ ತುಂಬು ಹೆಣ್ತನದ ಸಂಕೇತದಂತೆ ಸಿಂಗಾರ(ಪಿಂಗಾರ) ಹೂವಿನಲ್ಲಿ ಅಲಂಕರಿಸಿ, ಹಲವು ಬಗೆಯ (ಮಣಿಗಡಬು ಮುಂತಾದ) ತಿನಿಸುಗಳನ್ನು ಬಡಿಸಿ, ಪೂಜಿಸಿ, ಕೊನೆಯದಿನ ಪುನಃ ಬಾವಿಗೆ ಮರುಜಲಪೂಜೆ ಮಾಡಿ ವಿಸರ್ಜಿಸಲಾಗುತ್ತದೆ. ಚೌತಿ, ಹೊಸ್ತು, ನವರಾತ್ರಿ ಈ ಮೂರೂ ಆಚರಣೆಗಳಲ್ಲಿ ಮನೆಯ ಮಡಿಕೆ-ಕುಡಿಕೆ, ಹೆಡಿಗೆ-ಕುಕ್ಕೆಗಳು ಶುದ್ಧತೆಯ ಸಂಕೇತವಾಗಿ ಸೇಡಿಬೊಟ್ಟುಗಳನ್ನು ಪಡೆದು ಚಿತ್ತಾರಗೊಂಡಂತಾಗುತ್ತವೆ. ಅಲ್ಲದೆ ಒಲೆಯ ಬೆಂಕಿ, ಕೊಟ್ಟಿಗೆಯ ಹಸು, ಗತಿಸಿದ ಮನೆಯ ಹಿರಿಯರು ಗೌರವದ ಎಡೆ ಪಡೆಯುತ್ತಾರೆ.(ಚೌತಿಯ ಗಣಪತಿ, ನವರಾತ್ರಿಯ ಸರ್ವೇಸ್ರಮ್ಮ ಇಬ್ಬರನ್ನೂ ನಿರಾಕಾರದ ನೆಲೆಯಲ್ಲಿಯೇ ಕಲ್ಪಿಸಿಕೊಳ್ಳುವ ಜತೆಗೆ ಇವರುಗಳು ಕಟ್ಟುವ ಪುರಾಣದಲ್ಲಿ ನವರಾತ್ರಿಯ ಸರ್ವೇಸ್ರಮ್ಮ ಹೊಸ್ತಿಲಜ್ಜಿಯ ಮಗ ಬಲೀಂದ್ರ ದೇವನ ಹೆಂಡತಿಯಾಗಿಯೂ ರೂಪುತಾಳುತ್ತಾಳೆ! ಆದರೆ ಇಲ್ಲೆಲ್ಲೂ ಕೃಷಿಕರ, ಶೂದ್ರರ, ದಲಿತರ ಪಾಲಿಗೆ ಅತೀತ/ನಿರಾಕೃತಳಾದ ಶಾರದೆ, ವಿದ್ಯಾಗಣಪತಿಯಾಗಿ ಇವರುಗಳು ಪರಿಭಾವಿತರಾಗುವುದಿಲ್ಲ).

ಹಾಗೆಯೇ, ದೀಪಾವಳಿಯ ಬಲೀಂದ್ರ ಪೂಜೆಯೂ ಮುಖ್ಯವಾಗಿ ಭೂಮಿಪೂಜೆಯಾಗಿಯೇ ಆಚರಿಸಲ್ಪಡುತ್ತದೆ. ಗದ್ದೆಗೆ ಛಿಟ್ಟು, ಎಲೆ-ಅಡಿಕೆ ಹಾಕಿ ಬಲೀಂದ್ರನ್ನು ಕೂಗಿ, ಕರೆದು ಮೇಟಿಕಂಬ-ಗದ್ದೆ-ಗೊಬ್ಬರದ ಗುಂಡಿಯ ಮೇಲೆಲ್ಲಾ ನೆಣೆಕೋಲು(ದೀಪದ ಕೋಲು) ನೆಟ್ಟು ದೀಪಾವಳಿ ಆವರಿಸಲಾಗುತ್ತದೆ. ಕಾಮನ ಹಬ್ಬವಾಗಿ ಶಿವರಾತ್ರಿಯ ಸಂಧರ್ಭದ ವಿಶೇಷ ಆಚರಣೆಯಾದ 'ದಿಂಸಾಲ್' ಇಲ್ಲವೇ ಹಣಬಿನ ಹಬ್ಬದಲ್ಲಿ ಕಾಮನ ಹೊಂಡಕ್ಕೆ ಕಿಚ್ಚುಹಾಕಿ, ಮುಂದಿನ ದಿನದ ಅಮವಾಸ್ಯೆಯ ರಾತ್ರಿಯಂದು ಈ ಬೆಂಕಿಯನ್ನು ಸೂಡಿ(ಸೂಟೆ)ಗೆ ಹೊತ್ತಿಸಿಕೊಂಡು, ಊರಿನ ಮನೆಮನೆಗೆ ಒಯ್ದು ಹಾಡು ಹೇಳಿ, ಕುಣಿದು ಕುಪ್ಪಳಿಸುವ ಸಂಭ್ರಮವನ್ನು ಆಚರಿಸಲಾಗುತ್ತದೆ. ಇಂತಹದೇ ಹತ್ತಾರು ಮನೆಹಬ್ಬ, ಊರಹಬ್ಬಗಳಲ್ಲದೇ ದೈವಭೂತಗಳಿಗೆ ಸಂಬಂಧಿಸಿದ- ಕೆಂಡ, ದಕ್ಕೆಬಲಿ, ಕೋಲ, ಕೊಡ್ಡೀರು, ಪಾಣರಾಟ ಇತ್ಯಾದಿಗಳನ್ನು ಒಳಗೊಂಡ ಹಾಲಬ್ಬಗಳಿವೆ. ಕಲ್ಲು-ಮರ-ಮನೆ-ಮಣ್ಣುಗಳಲ್ಲಿ ಅತೀತವನ್ನು ಕಾಣುತ್ತಾ, ಆಕಾರ ತುಂಬಲಾರದಲ್ಲಿ ನಿರಾಕಾರವನ್ನು ಸಂಕೇತಗಳಲ್ಲಿ ಬಚ್ಚಿಡುತ್ತಾ, ಬದುಕಿನ ಭರವಸೆ

[illegible] ನಿರಂತರವಾಗಿ ಮುನ್ನಡೆಸಿಕೊಂಡು ಬಂದಿದ್ದಾರೆ.

[illegible]ಸಂಸ್ಕೃತಿಯ ಮಾದರಿಯಲ್ಲಿ ಬರುವ ಈ ತೆರನಾದ ಹಬ್ಬಗಳು ವಿಗ್ರಹ ಇಲ್ಲವೇ ಆಕಾರ ಕೇಂದ್ರಿತವಾದವುಗಳಲ್ಲ. ಇರುವುದನ್ನು ಇದ್ದಹಾಗೆಯೇ ಹೊಸತುಗೊಳಿಸಿಕೊಳ್ಳುವಲ್ಲಿಯೂ ಮಂತ್ರ-ತಂತ್ರಗಳಿಲ್ಲ. ಸೀದಾ ಸಾದಾ ರೀತಿಯಲ್ಲಿ ಸಿಗುವ ಸೇಡಿ(ಜೇಡಿ) ಮಣ್ಣು ಮನೆಯ ಪಾತ್ರೆ ಪರಡಿಯ ಮೇಲೆ ಚಿತ್ತಾರವಾಗಿ ಹೊಸತನವನ್ನೂ; ಕೊಟ್ಟಿಗೆ ಹಸುವಿನ ಸಗಣಿ ಗೋಮಯವಾಗಿ ಶುದ್ಧತೆಯನ್ನೂ ಒದಗಿಸಿಕೊಡುತ್ತವೆ. ಹೊತ್ತಿಸುವ ದೀಪ, ಎಬ್ಬಿಸುವ ಲೋಬಾನದ ಹೊಗೆಗಳು ಹರಕೆಗಳನ್ನು ರವಾನಿಸುವ ಮಾಧ್ಯಮಗಳಾಗುತ್ತವೆ. ಬಹುಮಟ್ಟಿಗೆ ಆಹಾರಕ್ಕೆ ಒತ್ತುಕೊಡುವ ಈ ಹಬ್ಬಗಳು ವಿಧಿರೂಪದಲ್ಲಿ ಔಷಧೀಯ ಆಹಾರವನ್ನು ಒಳಗೊಳ್ಳುವ ಜೊತೆಗೆ ಶಾಖಾಹಾರ-ಮಾಂಸಾಹಾರಗಳೆಂಬ ಎರಡೂ ರೀತಿಗಳನ್ನು ಸಮಾನವಾಗಿ ಗೌರವಿಸುತ್ತವೆ.

ನಿಸರ್ಗ ಪರಿಕರಗಳಿಂದ ನಿಸರ್ಗವನ್ನೇ ಅಲಂಕರಿಸುವಂತೆ ಮೂರ್ತಗೊಳ್ಳುವ ಈ ಹಬ್ಬಗಳು, ಮಾನವ ಸಮಾಜದ ಸಮುದಾಯ ಸಂಬಂಧದ ಸೌಹಾರ್ದತೆಗೂ ಪೂರಕವಾಗಿಯೇ ಇರುತ್ತವೆ. ಊರು ಮತ್ತು ಮನೆಗಳನ್ನು ತುಂಬಿಕೊಳ್ಳುವ ಆಶಯವನ್ನು ವ್ಯಕ್ತಪಡಿಸುತ್ತಾ, ಕೂಟ-ಊಟಗಳ ಅವಕಾಶಗಳಾಗಿ ತೆರೆದುಕೊಳ್ಳುವ ಇವು ಬೀದಿಯ ಸಂಖ್ಯಾ ಪ್ರದರ್ಶನಕ್ಕಿಂತ ಸಂಬಂಧವೃದ್ಧಿಗೆ ಒತ್ತುಕೊಡುತ್ತವೆ. ಹೊಸತಲೆಮಾರಿಗೆ ಹೊಸರುಚಿ ತಯಾರಿಯ ಪಾಕಾನುಭವದ ತಾಲೀಮಿನ ಜೊತೆಗೆ ಪಾರಂಪರಿಕವಾದ ಆಹಾರ ಮತ್ತು ಜೀವನ ದೃಷ್ಟಿಯ ಪುನರ್ಮನನಕ್ಕೆ ಅವಕಾಶ ಒದಗಿಸುತ್ತವೆ.

3) "ಯಜಮಾನ್ಯವು ನೆನಪುಗಳನ್ನು ಸಂಪೂರ್ಣವಾಗಿ ಅಳಿಸಿ ಹಾಕುತ್ತದೆ; ಮತ್ತು ಅಂತವುಗಳೆಲ್ಲಾ ನಿರರ್ಥಕ ಎಂದು ಸಾರುತ್ತದೆ. ನಾನು ಏನು ಹೇಳುತ್ತೇನೆ ಎಂಬುದು ಮುಖ್ಯವಾಗುತ್ತದೆ. ನೆನಪಿನ ಮೂಲಕವೇ ಪ್ರತಿರೋಧಾತ್ಮಕ ಕಾರ್ಯಗಳು ನಡೆಯಬೇಕು"[1] ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಸಂಗತಿಗಳಾಗಿ ಪಲ್ಲಟಗಳ ನಡುವೆಯೂ ನಿರಂತರವಾಗಿ ಸಂಭವಿಸುವ ಆವರ್ತನ ರೂಪದ ಆಚರಣೆಗಳಾದ ಹಬ್ಬಗಳು ನಮ್ಮ ನೆನಪಿನ ಸಂಸ್ಕೃತಿಯ ಭಾಗವಾಗಿರುತ್ತವೆ. ಆದರೆ ನೆನಪಿನ ಸಂಸ್ಕೃತಿಯ ಭಾಗವಾದ ಇಂತಹ ಹಬ್ಬಗಳು ಆಧುನಿಕ(?) ಸಂದರ್ಭದಲ್ಲಿ ಯಾವ ಪಲ್ಲಟಗಳನ್ನು ಅನುಭವಿಸುತ್ತಿವೆ? ಅವು ಹಬ್ಬವನ್ನಾಚರಿಸುವವರ ಪ್ರತಿನಿಧೀಕರಣದ ಸಂದರ್ಭಗಳಾಗಿ ಉಳಿದುಕೊಂಡಿವೆಯೇ? ಉಳಿದುಕೊಂಡಿರದ ಪಕ್ಷದಲ್ಲಿ ಅವುಗಳು ಸಂವಹಿಸುತ್ತಿರುವ ಹೊಸ ಪ್ರತಿನಿಧೀಕರಣದ ನೆಲೆ, ಹಿನ್ನಲೆಗಳು ಯಾವುವು? ತಮ್ಮ ಚಲನಶೀಲ ಸ್ಥಿತಿಯಲ್ಲಿಯೂ ಉಳಿಸಿಕೊಂಡು ಬಂದಿದ್ದ ಅವುಗಳ ಕುಲಮೂಲೀಯ ಚಹರೆಗಳು ಬದಿಗೊತ್ತಲ್ಪಟ್ಟಿವೆಯೇ? ನಾಶಗೊಳಿಸಲ್ಪಟ್ಟಿವೆಯೇ? ಆಕ್ರಮಿಸಲ್ಪಟ್ಟಿವೆಯೇ?

ಒಂದು ವೇಳೆ ಆಕ್ರಮಿಸಲ್ಪಟ್ಟಿದ್ದರೆ ಆ ಆಕ್ರಮಣ ಪ್ರಕ್ರಿಯೆಯ ವೇಗ, ದಿಕ್ಕು, ರಾಜಕಾರಣಗಳ ಸ್ವರೂಪವೆಂತಹದು? ಪ್ರಸಾರ, ಪ್ರಚಾರದ ಗೀಳಿನಲ್ಲಿ ಹಬ್ಬಗಳು ಏನಾಗಿ ಪರಿವರ್ತಿತವಾಗಿವೆ? ಅವು ಉತ್ಸವಗಳಾಗಿವೆಯೆ? ಸೇವೆಗಳಾಗಿವೆಯೇ? ಪಲ್ಲಟ ಇಲ್ಲವೆ ಆಕ್ರಮಣಕ್ಕೆ ಸಾರಾಸಗಟಾಗಿ ಎಲ್ಲಾ ಹಬ್ಬಗಳೂ ಒಳಗಾಗಿವೆಯೇ? ಒಳಗಾಗದೇ ಉಳಿದವುಗಳು ಯಾವುವು? ಈ ಪ್ರತಿಕ್ರಿಯೆಗೆ ಒಳಪಡದ ಹಬ್ಬಗಳ ಕುರಿತಾದ ಸ್ಪಂದನೆಯ ಸ್ವರೂಪದಲ್ಲಿಯ ಪಲ್ಲಟಗಳೇನು? ಆಕ್ರಮಣಕ್ಕೆ ಒಳಗಾದ ಹಬ್ಬಗಳ ಆಹಾರ ಮಾದರಿಗಳು ಯಾವುವು? ಶಾಖಾಹಾರವೇ? ಮಾಂಸಾಹಾರವೇ?. ಆಹಾರ ಸಂಸ್ಕೃತಿಯ ಕುರಿತಾದ ಶುದ್ಧಾಶುದ್ಧ ಮನೋಭೂಮಿಕೆಗಳು ಹಬ್ಬಗಳ ಹೈಜಾಕ್‌ಗಳಿಗೆ ಮಾಡಿಕೊಟ್ಟ ಅನುಕೂಲತೆಗಳೆಷ್ಟು?.

ಆಹಾರ ಕ್ರಮದಲ್ಲಿ ಶಾಖಾಹಾರ-ಮಾಂಸಾಹಾರಗಳನ್ನು ಸಮಭಾವದಿಂದ ನೋಡುವ ಹಬ್ಬಗಳು ಮನೆಯೊಳಗಿದ್ದೂ ನಶಿಸುತ್ತಿವೆ ಯಾಕೆ? ಕುಲಮೂಲೀಯ ಅನನ್ಯತೆ, ಭಾಷಿಕ ಮತ್ತಿ ಆಚರಣಾ ದಿನಮಾನಗಳ ಆಯ್ಕೆಯ ಮುಕ್ತತೆಗಳು ಏಕ ಸಂಸ್ಕೃತಿಯ ಪಕ್ಷಾಲಕಗೆ ವಿರೋಧ ಒಡ್ಡುತ್ತವೆಯೆಂದೇ? ನೆಲ ಕಳೆದುಕೊಳ್ಳುತ್ತ ನೆಲೆಯನ್ನೂ ಕಳೆದುಕೊಳ್ಳುವುದಕ್ಕೆ ಈ ಮೂಲಕ ತಯಾರಿ ನಡೆಸಲಾಗುತ್ತಿದೆಯೇ? ಹಬ್ಬಗಳ ಈ ಸ್ಥಿತ್ಯಂತರದ ಹಿಂದಿರುವುದು ಆಧುನಿಕತೆಯೆ?. ಈ ಸಾಂಸ್ಕೃತಿಕ ರಾಜಕಾರದ ಸೂತ್ರವನ್ನೇನಾದರೂ ನಮ್ಮ ಸಾಮಾಜಿಕ ಚರಿತ್ರೆಯ ಹಿನ್ನಲೆಯಲ್ಲಿ ಹುಡುಕಬಹುದೇ? ಅಧಿಕಾರರಾಜಕಾರಣ/ಶಕ್ತಿರಾಜಕಾರಣದ ಭಾಗವಾಗಿ ಈ ಪಲ್ಲಟಗಳು ಜರುಗುತ್ತಿವೆಯೆ? ಜಾಗತೀಕರಣದ ಸಹಜ ಗುಣವೆಂಬಂತೆ ಪರಿಭಾವಿತವಾದ ಬಹುತ್ವ ನಾಶದ ಪ್ರಕ್ರಿಯೆಯ ಭಾಗವೇ ಇದು?

ಈ ಬಹುತ್ವ ನಾಶದಲ್ಲಿ ದೇಸೀಯ ಆಳುವ ವರ್ಗ ಇಲ್ಲವೇ ಪರಂಪರಾಗತ ಬುದ್ದಿಜೀವಿ ವರ್ಗದ ಪಾಲು ಇದೆಯೇ? ಬಹುತ್ವನಾಶದ ಮೂಲಕವಾಗಿ ದ್ರುವೀಕರಣವನ್ನು ಸಾಧಿಸಲಾಗುತ್ತಿದೆಯೇ? ದ್ರುವೀಕರಣದ ಪ್ರಕ್ರಿಯೆಗೂ ವರ್ತಮಾನ ರಾಜಕಾರಣದಲ್ಲಿ ಬಳಕೆಯಾಗುತ್ತಿರುವ ಸಾಂಸ್ಕೃತಿಕ ರಾಷ್ಟ್ರೀಯವಾದಕ್ಕೂ ನಂಟಿದೆಯೇ? ಈ ರಾಜಕಾರಣವು ಪಾರಂಪರಿಕವಾಗಿ ಅಕ್ಷರಿಕಲ್ಲದ ತಳಮೂಲದ ಜನಸಮುದಾಯಗಳ ಸಾಮಾನ್ಯಪ್ರಜ್ಞೆಯನ್ನು ಯಾವುದಕ್ಕಾಗಿ ಹದಗೊಳಿಸುತ್ತಿದೆ? ಹೀಗೆ ಹದಗೊಳಿಸುವಲ್ಲಿ ಪೂರಕವಾಗಿ ದುಡಿಯುತ್ತಿರುವ ಸಂಸ್ಥೆಗಳು ಯಾವುವು? ಈ ಸಂಸ್ಥೆಗಳ ಮೂಲಕವಾಗಿ ಕಟ್ಟುತ್ತಿರುವ ಧಾರ್ಮಿಕ ಸಂಕಥನವು ತಳಮೂಲವನ್ನು ಸಿಪಾಯಿಗಳಾಗಿಸುತ್ತಿದೆಯೆ? ಇಂತಹ ಅನೇಕ ಪ್ರಶ್ನೆಗಳು ಮತ್ತು ಅವುಗಳಿಗೆ ಕಂಡುಕೊಳ್ಳುವ ಉತ್ತರದ ಪ್ರಕ್ರಿಯೆಯಲ್ಲಿ ಹುಟ್ಟುವ ಪ್ರಶ್ನೆಗಳ ಸರಣಿಯಲ್ಲಿ ಹಬ್ಬಗಳ ಸ್ಥಿತ್ಯಂತರ ಸ್ವರೂಪ ಹಾಗೂ ಕಾರಣಗಳ ಹೆಜ್ಜೆ ಗುರುತುಗಳನ್ನು ಹುಡುಕುಬಹುದೋ ಏನೋ?.

ಮೇಲೆ ಉಲ್ಲೇಖಿಸಲಾದ ಕೆಲವೊಂದು ಹಬ್ಬಗಳಲ್ಲದೆ ಸಾರ್ವತ್ರಿಕ ದಿನಮಾನದಂದೇ ಸ್ಥಳೀಯ ಜಾನಪದ ಸಂಬಂಧದೊಂದಿಗೆ ಪುರಾಣೇತಿಹಾಸಗಳ ನೆರಳಿಗೂ ಒಡ್ಡಿಕೊಳ್ಳುವಂತಿರುವ ಹಬ್ಬಗಳೆಂದರೆ ಚೌತಿ (ಸಣ್ಣಹೊಸ್ತು), ನವರಾತ್ರಿ (ಸರ್ವಸ್ರಮ್ಮನ ಪೂಜೆ), ದೀಪಾವಳಿ, ಶಿವರಾತ್ರಿ.

ಈ ಮೇಲಣ ಹಬ್ಬಗಳಲ್ಲಿ ನಿರ್ದಿಷ್ಟ ದಿನಮಾನದಂದೇ ಸಾರ್ವತ್ರಿಕವಾಗಿ ನಡೆಯುವಾಗಲೇ ಸ್ಥಳೀಯತೆಯೊಂದಿಗೆ ವ್ಯಾಪಕತೆಯ ಚಹರೆಯನ್ನೂ ಹೊಂದಿರುವ ಬಲೀಂದ್ರನ ಪೂಜೆ ಮನೆಯಂಗಳದೊಂದಿಗೆ ಹಳೆಯ ಸಂಬಂಧ ಕಳೆದುಕೊಂಡಿಲ್ಲ ಮತ್ತು ಸಾರ್ವಜನಿಕ ವೇದಿಕೆಯ ಹಬ್ಬವಾಗಿ ಬೀದಿಗೆ ಬಿದ್ದಿಲ್ಲ. ಹಾಗೆಯೇ ಶಿವರಾತ್ರಿಯಂದು ಸ್ಥಳೀಯವಾಗಿ ನಡೆಯುವ 'ಹಣಬು' ಎಂದು ಕರೆಯಲಾಗುವ ಕಾಮನಕಿಚ್ಚು ಹಾಗೂ ಅದನ್ನು ಹೊತ್ತು ತಿರುಗುವ ಆಚರಣೆ ಅನೇಕ ಊರುಗಳಲ್ಲಿ ನಡೆಯುತ್ತಿದೆ. ಮತ್ತು ಇನ್ನು ಕೆಲವು ಊರುಗಳಲ್ಲಿ ನಿಂತುಹೋಗಿವೆ.

ಈ ನಡುವೆ ಇಂತಹದ್ದೊಂದು ಆಚರಣೆ ನಿಂತಿತು, ನಮ್ಮ ಸಂಸ್ಕೃತಿಗೆ ದಕ್ಕೆಯಾಯಿತೆಂದು ಯಾರೊಬ್ಬರೂ ಕೂಗಿದ ಸದ್ದು ಯಾರನ್ನೂ ತಲುಪಿದಂತೆ ಕಂಡಿಲ್ಲ. ಶಿವರಾತ್ರಿ, ದೀಪಾವಳಿಗಳೆರಡೂ ಈ ಭಾಗದಲ್ಲಿ ಮಾಂಸಾಹಾರದೊಂದಿಗೆ ನಡೆಯುವುದರಿಂದ ಈ ಹಬ್ಬಗಳ ಪಾಲಿಗೂ ಆಹಾರ ಶ್ರೇಣೀಕರಣದಲ್ಲಿ ಮಾಂಸಾಹಾರ ಕನಿಷ್ಠವಲ್ಲ. ದೀಪಾವಳಿಯಂತೆಯೇ, ಶಿವರಾತ್ರಿಯಾಗಲೀ, ಕಾಮನಹಬ್ಬವಾಗಲಿ ಆಚರಣೆಯ ಬಿರುಸು ಕಳೆದುಕೊಂಡಿ

ದೀಪಾವಳಿಯ ಬಲೀಂದ್ರ ಪೂಜೆಯೂ ಮುಖ್ಯವಾಗಿ ಭೂಮಿಪೂಜೆಯಾಗಿಯೇ ಆಚರಿಸಲ್ಪಡುತ್ತದೆ. ಗದ್ದೆಗೆ ಹಿಟ್ಟು, ಎಲೆ-ಅಡಿಕೆ ಹಾಕಿ ಬಲೀಂದ್ರನ್ನು ಕೂಗಿ, ಕರೆದು ಮೇಟಿಕಂಬ-ಗದ್ದೆ-ಗೊಬ್ಬರದ ಗುಂಡಿಯ ಮೇಲೆಲ್ಲಾ ನೆಣೆಕೋಲು ನೆಟ್ಟು ದೀಪಾವಳಿ ಆವರಿಸಲಾಗುತ್ತದೆ. ಕಾಮನ ಹಬ್ಬವಾಗಿ ಶಿವರಾತ್ರಿಯ ಸಂದರ್ಭದ ವಿಶೇಷ ಆಚರಣೆಯಾದ 'ದಿಂಸಾಲ್' ಇಲ್ಲವೇ ಹಣಬಿನ ಹಬ್ಬದಲ್ಲಿ ಕಾಮನ ಹೊಂಡಕ್ಕೆ ಕಿಚ್ಚುಹಾಕಿ, ಮುಂದಿನ ದಿನದ ಅಮವಾಸ್ಯೆಯ ರಾತ್ರಿಯಂದು ಈ ಬೆಂಕಿಯನ್ನು ಸೂಡಿಗೆ ಹೊತ್ತಿಸಿಕೊಂಡು, ಊರಿನ ಮನೆಮನೆಗೆ ಒಯ್ದು ಹಾಡು ಹೇಳಿ, ಕುಣಿದು ಕುಪ್ಪಳಿಸುವ ಸಂಭ್ರಮವನ್ನು ಆಚರಿಸಲಾಗುತ್ತದೆ. ಇಂತಹದೇ ಹತ್ತಾರು ಮನೆಹಬ್ಬ, ಊರ ಹಬ್ಬಗಳಲ್ಲದೇ ದೈವಭೂತಗಳಿಗೆ ಸಂಬಂಧಿಸಿದ- ಕೆಂಡ, ದಕ್ಕೆಬಲಿ, ಕೋಲ, ಕೊಡ್ನೀರು, ಪಾಣರಾಟ ಇತ್ಯಾದಿಗಳನ್ನು ಒಳಗೊಂಡ ಹಾಲಬ್ಬಗಳಿವೆ.

ರಬಹುದಾದರೂ ಬೀದಿಯ ಸಾರ್ವಜನಿಕ ಉತ್ಸವಗಳಾಗದೆ ಹಬ್ಬಗಳಾಗಿ ಉಳಿದಿವೆ.

ಆದರೆ ಚೌತಿ ಮತ್ತು ಶರನ್ನವರಾತ್ರಿಯ ಆಚರಣೆಗಳು ಕೃಷಿ ಆವರಣದ ನಡುವೆ ಅರೆ ಬರೆ ಜೀವ ಉಳಿಸಿಕೊಂಡು ಅದಕ್ಕಿಂತ ಭಿನ್ನವಾದ ಕೃಷಿಯೇತರ ಆವರಣಕ್ಕೆ ಸ್ಥಳಾಂತರಗೊಂಡಿವೆ. ಮನೆಹಬ್ಬವಾಗುವಲ್ಲಿ 'ಮನೆಯ ಕಿಚ್ಚು' 'ಮನೆಯ ಹಸು'ವಿನೊಂದಿಗೆ 'ಜನದೇವತೆ' ಎಂಬ ಆವಾಸದ ಪವಿತ್ರವಲಯವೆಲ್ಲವೂ ದೈವೀಕರಣಕ್ಕೆ ಒಳಗಾಗಿ ಜೀವಜಗತ್ತಿನೊಂದಿಗೆ ಪಡೆದುಕೊಳ್ಳುತ್ತಿದ್ದ ಚೇತೋಹಾರಿಯಾದ ಭಾವನಾತ್ಮಕ ಸಂಬಂಧಗಳೆಲ್ಲವನ್ನೂ ಕಳೆದುಕೊಂಡ ಬೀದಿಯ ಉತ್ಸವಗಳಾಗಿವೆ. ಪುರೋಹಿತನೆಂಬ ಜಾತಿಮೂಲದ ವ್ಯಕ್ತಿತ್ವವನ್ನು ನಿರಾಕರಿಸಿ (ನವರಾತ್ರಿಯೊಂದನ್ನುಳಿದು ಮಿಕ್ಕಂತೆ) ನೇರವಾಗಿ ಮನೆಯ ಮಹಿಳೆಯರೇ ವಹಿಸುತ್ತಿದ್ದ ಆಚರಣೆಯ ಕೇಂದ್ರಸ್ಥಾನ ಪುರೋಹಿತನೆಂಬ ದೇವರ ದಲ್ಲಾಳಿಯ ಕೈಗೆ ಹೋಗಿದೆ.

ನಿರಾಕಾರದ ಜಾಗದಲ್ಲಿ ಪುರಾಣಗಳ, ಕಲ್ಪಿತ ಕಥನಗಳ ಹಿನ್ನೆಲೆಯಿಂದ ಮೂಡಿದ ಮೂರ್ತಿಗಳೂ, ನಿರ್ದಿಷ್ಟ ರೂಪದ ಪೂಜಾಕ್ರಮಗಳೂ, ಮೆರವಣಿಗೆಗಳು ಸ್ಥಾಪಿಸಲ್ಪಟ್ಟಿವೆ. ಹಬ್ಬದ ಜಾಗವನ್ನಾಕ್ರಮಿಸಿದ ಉತ್ಸವಗಳ ಮೂಲಕ ವಿಗ್ರಹದ ಮುಂದೆ ಜನಸಮುದಾಯವನ್ನು ಆಗ್ರಹಿಸುವ ಉಗ್ರ ಭಾಷಣಗಳು ಹೊರಹೊಮ್ಮುತ್ತವೆ. ಈ ಉತ್ಸವಾಚರಣೆಗಳೊಂದಿಗೆ ಬಲಿಯುತ್ತಿರುವ ಧಾರ್ಮಿಕ ಸಂಕಥನದ ಮೂಲಕ ಸಾಂಸ್ಕೃತಿಕ ರಾಷ್ಟ್ರೀಯತೆಯೆಂಬ ರಾಜಕೀಯ ಸಂಕಥನವೊಂದನ್ನು ಭದ್ರಗೊಳಿಸುವ ಯತ್ನಗಳು ಸಾಗುತ್ತಿವೆ.

4) ಈ ಸಂದರ್ಭದಲ್ಲಿ ಮನೆಹಬ್ಬ ಇಲ್ಲವೆ ಊರ ಹಬ್ಬಗಳು ಡಾ. ಡಿ.ಆರ್. ನಾಗರಾಜ್ ಗುರುತಿಸುವಂತೆ, "ಮನೆಯ ಹೆಂಗಸರ ಶೃಂಗಾರದಲ್ಲಿ ಮತ್ತು ಮಕ್ಕಳ ಸಂಭ್ರಮದ ಮಟ್ಟದಲ್ಲಿ ನಿಂತರೆ ಅದಕ್ಕೆ ಮಹಾಸೊಬಗಿರುತ್ತದೆ.... ಆ ದಿನ ಸಹಜ ಸುಂದರಿಯರು ಭರ್ಜರಿ ಸೀರೆ ತೊಟ್ಟು ಭರ್ಜರಿಯಾಗಿ ಕಾಣುತ್ತಿರುತ್ತಾರೆ. ಸಾಧಾರಣಿಯರೂ ಭರ್ಜರಿ ಅಲಂಕಾರ ತೊಟ್ಟು ಮಿಂಚುತ್ತಾರೆ. ಆದರೆ ಇದೇ ಹಬ್ಬ ಹುಡುಗರ ಕೈಯಲ್ಲಿ ಕಾಸಿನ ಡಬ್ಬಗಳಾಗಿ ರಸೀದಿ ಪುಸ್ತಕಗಳಾಗಿ, ದೊಡ್ಡ ಪೆಂಡಾಲಗಳಾಗಿ ಕಿವಿ ಒಡೆದು ಹಾಕುವ ಮೈಕಾಸುರನಾಗಿ ಸಿಲ್ಕ್‌ಸ್ಮಿತಾ ಪಿಕ್ಚರ್ ಹಾಕುವ ಮಂಟಪವಾಗಿ ಬಂದಾಗ ನರಕ"[2] ಎನಿಸಿಬಿಡುತ್ತದೆ.

ಇಂತಹ ನರಕ ಅನೇಕರ ಪಾಲಿನ ಸ್ವರ್ಗ ಮತ್ತು ಯೋಜಿತ ನಿರ್ಮಾಣವೆಂಬುದು ನಮಗೆ ಸರಳವಾಗಿ ಹೊಳೆಯಲಾರದು. ಇವುಗಳು ಕೇವಲ ಹುಚ್ಚು ಮನಸ್ಸಿನ ಹುಡುಗರ ಅಡ್ಡಾ ದಿಡ್ಡಿ ಆಲೋಚನೆಗಳ ಆಕಾರಗಳಲ್ಲ. ಇದರ ಹಿಂದೆಯೂ ಒಂದು ವ್ಯವಸ್ಥಿತವಾದ ರಾಜಕಾರಣ, ತರ್ಕಗಳು ಕೆಲಸಮಾಡುತ್ತಿರುತ್ತವೆ. ಆ ರಾಜಕಾರಣಕ್ಕೆ ಅಧಿಕಾರ ಕೇಂದ್ರದತ್ತ ಸಾಗಿಹೋಗ ಈ ಮಾದರಿಯ ಧಾರ್ಮಿಕ ಸಂಕೇತಗಳ ಬಳಕೆ ಹೆಚ್ಚು ಅನುಕೂಲಕರ. ಇಂತಹ ತರ್ಕದ ಕೂಸಾಗಿ ಹುಟ್ಟುವ ಈ ಉತ್ಸವ ಸಂಸ್ಕೃತಿ ಕೇವಲ ಕಾಲಮಾನವೊಂದರ ಉರುಬಾಗಿ ಕಾಣಿಸಿಕೊಂಡು ಕಣ್ಮರೆಯಾಗತಕ್ಕದ್ದಲ್ಲ.

ಬದಲಾಗಿ ಪ್ರತಿ ವರ್ಷವೂ ಗತಕಾಲದ ಆಚರಣೆಗೆ ಹೊಸಸೇರ್ಪಡೆಗಳೊಂದಿಗೆ ಚರಿತ್ರೆಯ ಮಾಲೆ ಕಟ್ಟುವ ಈ ಪ್ರಕ್ರಿಯೆ ತನ್ನ ನಿರಂತರತೆಯನ್ನು ಕಾಯ್ದುಕೊಳ್ಳುತ್ತಲೇ ನಿರಂತರವಾಗಿ ಜನ ಸಂಸ್ಕೃತಿಯ ರೂಪಗಳನ್ನು ಅಲ್ಲಾಡಿಸುತ್ತ, ಇಲ್ಲವಾಗಿಸುತ್ತ ಆಚರಣಾತ್ಮಕಧರ್ಮದ ನಿರ್ವಾತ

ಜನಪ್ರಿಯವಾದ ಆಚರಣಾತ್ಮಕ ಧರ್ಮದ ಜಾಗವನ್ನು ಆಕ್ರಮಿಸುವ ಪ್ರಕ್ರಿಯೆಯಲ್ಲಿ ಜನಸಂಸ್ಕೃತಿಯ ಅನೇಕ ಅವಕಾಶಗಳು ಕಣ್ಮರೆಯಾಗುತ್ತವೆ. ಉತ್ಸವವಾಗಿ ಮೂರ್ತಿ ಕಲ್ಪನೆಗೆ ಒಳಪಟ್ಟು, ಶಿಷ್ಟವೆಂದು ಪರಿಭಾವಿತ ವಾದ ಪೂಜಾಕ್ರಮದ ಆವರಣ ಸೃಷ್ಟಿಯ ಮೂಲಕ ನಿರಾಕಾರ ಸಮಷ್ಟಿಯ ಕಲ್ಪನೆ ಹಾಗೂ ಅನನ್ಯ ಸಂಕೇತವೈವಿಧ್ಯಗಳ ಬಹುತ್ವದ ನಾಶದ ಜತೆಗೆ ಆಚರಣೆಯೊಂದಿಗೆ ಜನಸಮುದಾಯ ತಮ್ಮ ತಮ್ಮ ವ್ಯಕ್ತಿಗತ ನೆಲೆಯಲ್ಲಿ ಹೊಂದುತ್ತಿದ್ದ ಖಾಸಗಿ ಸಂಬಂಧಗಳು ನಾಶವಾಗುತ್ತವೆ. ಇದರಿಂದಾಗಿ ವೈಯಕ್ತಿಕ/ಕೌಟುಂಬಿಕವಾಗಿ ತಮ್ಮ ಆರಾಧನಾ ಸಂಕೇತದೊಂದಿಗೆ ಏರ್ಪಡಿಸಿಕೊಳ್ಳುತ್ತಿದ್ದ ನೇರ ಸಂವಾದಾತ್ಮಕ ಆತ್ಮನಿವೇದನಾ ಅವಕಾಶವಿರದೆ ಕ್ರಿಯಾತ್ಮಕ ಭಾಗೀದಾರಿಕೆಯೇ ನಾಪತ್ತೆಯಾಗುತ್ತದೆ.

ಸೃಷ್ಟಿಯಲ್ಲಿ ಸಾಂಸ್ಥಿಕ ಧರ್ಮದ ನೆಲೆಗಳನ್ನು ಗಟ್ಟಿಗೊಳಿಸುವಂತಹದು.

ದೇವರ ದಲ್ಲಾಳಿಗಳು

ಜನಪ್ರಿಯವಾದ ಆಚರಣಾತ್ಮಕ ಧರ್ಮದ ಜಾಗವನ್ನು ಆಕ್ರಮಿಸುವ ಪ್ರಕ್ರಿಯೆಯಲ್ಲಿ ಜನಸಂಸ್ಕೃತಿಯ ಅನೇಕ ಅವಕಾಶಗಳು ಕಣ್ಮರೆಯಾಗುತ್ತವೆ. ಉತ್ಸವವಾಗಿ ಮೂರ್ತಿ ಕಲ್ಪನೆಗೆ ಒಳಪಟ್ಟು, (ನಿರ್ದಿಷ್ಟ ಮಾದರಿಯ) ಶಿಷ್ಟವೆಂದು ಪರಿಭಾವಿತವಾದ ಪೂಜಾಕ್ರಮದ ಆವರಣ ಸೃಷ್ಟಿಯ ಮೂಲಕ ನಿರಾಕಾರ ಸಮಷ್ಟಿಯ ಕಲ್ಪನೆ ಹಾಗೂ ಅನನ್ಯ ಸಂಕೇತವೈವಿಧ್ಯಗಳ ಬಹುತ್ವದ ನಾಶದ ಜತೆಗೆ ಆಚರಣೆಯೊಂದಿಗೆ ಜನಸಮುದಾಯ ತಮ್ಮ ತಮ್ಮ ವ್ಯಕ್ತಿಗತ ನೆಲೆಯಲ್ಲಿ ಹೊಂದುತ್ತಿದ್ದ ಖಾಸಗಿ ಸಂಬಂಧಗಳು ನಾಶವಾಗುತ್ತವೆ. ಇದರಿಂದಾಗಿ ವೈಯಕ್ತಿಕ/ಕೌಟುಂಬಿಕವಾಗಿ

ತಮ್ಮ ಆರಾಧನಾ ಸಂಕೇತದೊಂದಿಗೆ ಏರ್ಪಡಿಸಿಕೊಳ್ಳುತ್ತಿದ್ದ ನೇರ ಸಂವಾದಾತ್ಮಕ ಆತ್ಮನಿವೇದನಾ ಅವಕಾಶವಿರದೆ ಕ್ರಿಯಾತ್ಮಕ ಭಾಗೀದಾರಿಕೆಯೇ ನಾಪತ್ತೆಯಾಗುತ್ತದೆ. ಹಾಗೇ ಆಚರಿಸಿ ಸಂಭ್ರಮಪಡುವಲ್ಲಿ ಕ್ರಿಯಾತ್ಮಕ ಒಳಗೊಳ್ಳುವಿಕೆಯಿರುತ್ತದೆ.

ಆದರೆ ಇಲ್ಲಿ ಜನ ಮತ್ತು ಆರಾಧನಾ ಕಲ್ಪನೆಯ ನಡುವೆ ಪುರೋಹಿತ/ಪೂಜಾರಿ ಎಂಬ ದೇವರ ದಲ್ಲಾಳಿಯ ಅಸ್ತಿತ್ವ ಇಡಿಯ ಆಚರಣೆಯನ್ನು ಸಶಕ್ತವಾಗಿ ನಿರ್ದೇಶಿಸುವಂತಾಗುತ್ತದೆ. ಹೀಗಾಗಿ ಹೆಣ್ಣು ಮತ್ತು ಮಕ್ಕಳೆಯ ಜಾಗದಲ್ಲಿ ವ್ಯಕ್ತಿನಿರ್ದೇಶಿತ ಬಿಡಿ ಅವಕಾಶಗಳು ಸೃಷ್ಟಿಗೊಳ್ಳುತ್ತವೆ. ಮನೆಯ ಆವರಣದೊಳಗೆ ಬಹು ಪುರುಷರಿಂದ ಪೂಜೆಗೊಳ್ಳುಹತ್ತಿದ ಪೂಜಾಕೈಂಕರ್ಯವು (ಬೀದಿಯ ಉತ್ಸವದಲ್ಲಿ) ಏಕಪುರುಷನ ಕಡೆಗೆ ಸ್ಥಳಾಂತರಗೊಳ್ಳುವ ಮೂಲಕ ವರ್ಣ ಶ್ರೇಣೀಕರಣದ ಊಳಿಗಮಾನ್ಯ ಸಾಮಾಜಿಕ ಸಂದರ್ಭವೇ ಪುನರಾವರ್ತಿತವಾಗುತ್ತದೆ.

ಮರುಪ ಸ್ಥಾಪಿತಗೊಂಡ ಈ ಶ್ರೇಣೀಕರಣವು ಚಾಲ್ತಿಗೊಳ್ಳುವುದರಿಂದ ಮನೆಯವರೇ ಮಾಡುವ (ತಾತ್ಕಾಲಿಕ ಪೆಂಡಾಲ್‌ಗಳಲ್ಲೂ ಇಂತಹ ಪೂಜಾಸ್ಥಳದ ಕಲ್ಪನೆ ಕೆಲಸ ಮಾಡುತ್ತದೆ) ಅಥವಾ ಗರ್ಭಗುಡಿ ಸೇವ ರಾಗಿ ಮಾರ್ಪಟ್ಟು ದೇಗುಲ ಸಂಸ್ಕೃತಿಯ ಕಟ್ಟಳೆಗಳು ಬಳಕೆಗಳು ಬರುತ್ತವೆ. ಇಂತಹ ಸಂಧರ್ಭದಲ್ಲಿ ಮನೆಯ ಆವರಣದಲ್ಲಿ ಸಾಧ್ಯವಾಗದ ಅರ್ಚನಾವಿಧಿಗಳು, ಸೇವಾ ಮಾದರಿಗಳು, ಪೂಜಾದರಗಳು ಜಾರಿಗೊಳ್ಳುವುದರಿಂದ ಸಾಂಸ್ಥಿಕ ಧರ್ಮದ ಬುದ್ಧಿಜೀವಿ ವರ್ಗವಾದ ಪುರೋಹಿತ ಸಮುದಾಯಕ್ಕೆ ಇದೊಂದು ವಾರ್ಷಿಕ ಉತ್ಪಾದನಾಂಗವಾಗಿ ರೂಪುಗೊಳ್ಳುತ್ತದೆ. ಹೀಗೆ ಹಬ್ಬ ಆಸ್ತಿಕತೆಯ ಹೆಸರಲ್ಲಿ ಉದ್ಯೋಗದ ಮಾರುಕಟ್ಟೆಯೊಂದನ್ನು ಸೃಷ್ಟಿಸುವುದಷ್ಟೇ ಅಲ್ಲ ಆ ಉದ್ಯೋಗಸ್ಥರು ಯಜಮಾನ ಸ್ಥಾನದಲ್ಲೂ ವಿರಾಜಮಾನರಾಗುತ್ತಾರೆ.

ಬಸವಣ್ಣನ ವಚನವೊಂದರಲ್ಲಿ ಬರುವಂತೆ 'ಹಸಿವಾದಾಗುಂಬುವವನು ಸತಿಯ ಸಂಭೋಗಿಸುವವನು' ತಾನೇ ಖುದ್ದು ಮಾಡುವ ಬದಲು ಇನ್ನಾರಿಗೋ ವಹಿಸಿಕೊಟ್ಟು ನಾಟಕದ ನೋಟಕರಾದ ಕ್ರಿಯಾ ಭಾಗೀದಾರಿಕೆಯಲ್ಲಿ ತಮ್ಮ ಪರಂಪರಾಗತ ನೆಲೆ ಕಳೆದುಕೊಂಡ ಅವಲಂಬಿತ ಸಮುದಾಯದ ಸೃಷ್ಟಿಯಾಗುತ್ತದೆ. ತಮ್ಮ ಅನನ್ಯ ಕುರುಹುಗಳನ್ನು ಉಳಿಸಿಕೊಂಡು ಹೋಗುವ ಸಾಂಸ್ಕೃತಿಕ ವೈವಿಧ್ಯದ ಬಹುತ್ವಗಳು ಉಳಿದುಕೊಳ್ಳಬಹುದಾದ ಅವಕಾಶಗಳು ನಾಶವಾಗುವುದರಿಂದ ಯಜಮಾನ ಶಕ್ತಿಗೆ ಬಹುಸಂಸ್ಕೃತಿಯ ಅಸ್ತಿತ್ವದ ಅಂಶಗಳನ್ನೇ ನಿರಾಕರಿಸುವ ಸಂದರ್ಭಗಳನ್ನು ಸೃಷ್ಟಿಸಿಕೊಳ್ಳಲು ಅನುಕೂಲವಾಗುತ್ತದೆ.

ದೇವಾಲಯವಿಲ್ಲದೆ ದೇವರನ್ನು ಅರ್ಚಿಸಿ ಹಗುರಗೊಳ್ಳಲು ಇರುವ ಅವಕಾಶಗಳನ್ನು ಕಸಿದುಬಿಡುವ ಉತ್ಸವ ಸಂಸ್ಕೃತಿ, ಧ್ರುವೀಕರಣಕ್ಕೆ ಸಹಕಾರಿಯಾಗುವ ಸಂಕೇತ ಮತ್ತು ಕುರುಹನ್ನು ಉದ್ದೀಪಿಸಿ, ಜನ ಸಮ್ಮತಿಯನ್ನು ಪಡೆದುಕೊಂಡುಬಿಡುತ್ತದೆ. ಇಂತಹ ಜನಸಮ್ಮತಿಯನ್ನು ಪಡೆಯುವ ಸಲುವಾಗಿ ಸಮುದಾಯದ ಸಾಮಾನ್ಯಪ್ರಜ್ಞೆಯ ಭಾಗವಾದ ಪುರಾಣ, ಇತಿಹಾಸಗಳ ನೆನಪುಗಳನ್ನು ಆಚರಣೆಯ ಜೊತೆಗೆ ಜೊಡಿಸುವ ಮೂಲಕ ಅಧಿಕೃತತೆಯನ್ನು ದಕ್ಕಿಸಿಕೊಳ್ಳುತ್ತದೆ.

(ಮುಂದುವರಿಯುವುದು)

ದಲಿತ ಚಳವಳಿ ನಡಿಗೆಯ ದಿಕ್ಸೂಚಿ

ಪುಸ್ತಕ ಅವಲೋಕನ



ಲೇಖಕರು: ವಡ್ಡಗೆರೆ ನಾಗರಾಜಯ್ಯ
ಬೆಲೆ: ರೂ.110/-
ಪ್ರಕಾಶಕರು: ಕರ್ನಾಟಕ ಸಾಹಿತ್ಯ ಪರಿಷತ್ತು
ನಂ.370, 10ನೇ ಅಡ್ಡರಸ್ತೆ
ಟೀಚರ್ಸ್ ಕಾಲೋನಿ
ನಾಗರಬಾವಿ, ಬೆಂಗಳೂರು-560072

ಡಾ.ಆನಂದ ಋಗ್ವೇದಿ

ಈ [illegible] ಹೊಸ [illegible]. [illegible] [illegible] ವಿಮರ್ಶೆಯ ಪರಿಕರಗಳು ತಮ್ಮ ಪರಿಭಾಷೆಯನ್ನು ಬದಲಾಯಿಸಿ ಕೊಂಡು ಸಂಸ್ಕೃತಿ [illegible]ಯಾಗಿ ಮಾರ್ಪಟ್ಟು ದಶಕ ಗಳೇ ಕಳೆದಿವೆ. ಈ ಹಂತದಲ್ಲಿ ವಿಮರ್ಶೆಗೆ ಇಳಿಯುವುದು ಒಂದು ಬಹು ದೊಡ್ಡ ಸಾಂಸ್ಕೃತಿಕ ಜವಾಬ್ದಾರಿಯೂ ಹೌದು. ಸಾಹಿತ್ಯದ ಆಸಕ್ತಿ, ಸಂಸ್ಕೃತಿ ಬಗೆಗಿನ ಆಳವಾದ ಗ್ರಹಿಕೆ, ಬೇರೆ ಬೇರೆ ಸಾಮಾಜಿಕ ಆಯಾಮಗಳೆಡೆಗಿನ ವಿಶಾಲ ದೃಷ್ಟಿಕೋನ, ಹಾಗೂ ಹಲವು ಜ್ಞಾನಶಿಸ್ತುಗಳ ಪ್ರಾಥ ಮಿಕ ತಿಳವಳಿಕೆ, ಅಷ್ಟ ಲ್ಲದೇ ಅಪಾರವಾದ ಓದಿನ ಪರಿಶ್ರಮ ಎಲ್ಲವನ್ನೂ ಒಳ ಗೊಂಡ ವಿಮರ್ಶೆ ಮಾತ್ರ ಸೂಕ್ಷ್ಮ ಒಳನೋಟಗಳನ್ನು ಸಾಮಾಜಿಕ ಗ್ರಹಿಕೆಗೆ ನೀಡಲು ಸಾಧ್ಯ. ಅಂತಹ ದೊಡ್ಡ ಪರಿಧಿಯ ಈ ವಿಮರ್ಶಾವಲಯಕ್ಕೆ ಹೊಸ ತಲೆಮಾರಿನ ತರುಣರು ಹೆಚ್ಚು ಪ್ರವೇಶಿಸದಿರುವುದಕ್ಕೆ ಹಲವು ಕಾರಣ ಗಳಿವೆ. ಅದರಲ್ಲಿ ವ್ಯವಧಾನರಹಿತ ಬದುಕು, ಸಾವಧಾನದ ಓದುವಿಕೆಯ ಕೊರತೆ ಪ್ರಮುಖವಾದವು. ಹೀಗೆಂದ ಕೂಡಲೇ ಹೊಸ ತಲೆಮಾರು ವಿಮ ರ್ಶೆಯಿಂದ ತೀರಾ ವಿಮುಖವಾಗಿದೆ ಎಂದು ಹೇಳಲಾಗದು. ಅಲ್ಲಲ್ಲಿ ಪ್ರಕಟವಾ ಗುವ ಹಲವು ಹೊಸಬರ ಬಿಡಿ ಬಿಡಿ ಲೇಖನಗಳು ಅಪಾರ ಓದು ಮತ್ತು ಸೂಕ್ಷ್ಮ ಒಳ ನೋಟಗಳಿಂದ ಗಮನ ಸೆಳೆಯುತ್ತವೆ. ಹಾಗೆ ತಮ್ಮ ಬಿಡಿ ಲೇಖನಗಳಿಂದ ಗಮನ ಸೆಳೆದ ವಿಶಿಷ್ಟ ಚಿಂತಕ ವಡ್ಡಗೆರೆ ನಾಗರಾಜಯ್ಯ ರವರ ಮೊದಲ ವಿಮರ್ಶಾ ಲೇಖನಗಳ ಸಂಕಲನವೇ 'ಬುದ್ಧನೆಡೆಗೆ'.

ವಡ್ಡಗೆರೆ ನಾಗರಾಜಯ್ಯ ಮೂಲತಃ ಕವಿ, ಅಲ್ಲದೇ ಸಾಮಾಜಿಕ ಹೋರಾಟಗಾರ. ದಲಿತ ಸಂಘರ್ಷ ಸಮಿತಿ ಯಿಂದ ಮೊದಲ್ಗೊಂಡು ದಲಿತ ಸಾಹಿತ್ಯ ಚಳುವಳಿಯ ಎಲ್ಲಾ ಮಗ್ಗುಲುಗಳನ್ನು ಸೂಕ್ಷ್ಮವಾಗಿ ಒಳಹೊಕ್ಕು ಪರಿ ಶೀಲಿಸಿದವರು. ಅಂತಹ ಪರಿಶೀಲನೆಯಲ್ಲಿ ಸ್ವಯಂ ಅನು ಭವ ವೇದ್ಯಗೊಂಡ ವಿಶೇಷವಾದ ಗ್ರಹಿಕೆ, ನೋಟ ನಿಷ್ಠು ರತೆ, ಕಾಳಜಿ ಮತ್ತು ನಿರ್ದುಷ್ಟತೆಗಳು ಅವರ ಲೇಖನಗ ಳನ್ನು ವಿಶಿಷ್ಟಗೊಳಿಸಿವೆ ಎಂದೇ ಹೇಳಬೇಕು. ಅಂತಹ ನಿರ್ದಿಷ್ಟ ಪ್ರತಿರೋಧದ ನೆಲೆಯಲ್ಲಿಯೇ ಹೊಮ್ಮುವ ಅವರ ಲೇಖನಿ ಬಹುಮಟ್ಟಿಗೆ ನಿಖರವಾಗಿ ಮತ್ತು ಮೊನ ಚಾಗಿ ವಾಸ್ತವದ ಸಂಗತಿಗಳಿಗೆ ಮುಖಾಮುಖಿಯಾಗು ತ್ತದೆ. ವಿಶೇಷವೆಂದರೆ, ಶೀರ್ಷಿಕೆಯಲ್ಲಿಯೇ 'ವಿಮರ್ಶಾ ಲೇಖನಗಳು' ಎಂದಿರುವ ಈ ಕೃತಿ ವೈಚಾರಿಕ ವಿಶ್ಲೇಷಣೆ ಗಳಿಂದಲೇ ರೂಪುಗೊಂಡಿರುವಂತಹದ್ದು.

ಕೃತಿ ಕೇಂದ್ರಿತ ವಿಮರ್ಶೆಯ ಜಾಡಿನಿಂದ ಭಿನ್ನ ವಾಗಿ ಸಮಾಜವನ್ನೇ ಪಠ್ಯವಾಗಿಸಿಕೊಂಡ ಈ ಆಲೋ ಚನಾ ಕ್ರಮಕ್ಕೆ ವಿಶ್ಲೇಷಣೆಗೆ ಒಂದು 'ಪ್ರಾತಿನಿಧಿಕ ಧ್ವನಿ' ಸಹಜವೆಂಬಂತೆ ದಕ್ಕಿಬಿಟ್ಟಿದೆ. ಆ ಪ್ರಾತಿನಿಧಿಕತೆ ಕೇವಲ ಒಂದು ವರ್ಗಕ್ಕೆ, ಅನುಭವಕ್ಕೆ, ಅನುಭೂತಿಗೆ ಸೀಮಿತವಲ್ಲ. ಅದು ವಿಶೇಷವಾಗಿ ಸಾಮಾಜಿಕ ಧಮನಕ್ಕೆ ಒಳಗಾದ ಶೋಷಿತರ ಪರ ಧ್ವನಿಯಂತೆ ಕಾಣಿಸಿದರೂ ಅದು ಈ ನೆಲದ ಎಲ್ಲ ಆದಿಮ ಸಮುದಾಯಗಳ ಪ್ರಾತಿನಿಧಿಕತ್ವ ಪಡೆ ದಿರುವಂತಹದು. ಈ 'ಪ್ರತಿನಿಧಿ'ತನ ಲೇಖನಗಳಲ್ಲಿ ಢಾಳಾಗಿ ಕಂಡುಬರುವುದಲ್ಲದೆ ಕೆಲವೊಮ್ಮೆ ಲೇಖಕರ ವೈಯಕ್ತಿಕ ತೀವ್ರ ಆಸ್ಥೆಯೊಂದಿಗೆ ವಕಾಲತ್ತೊಂದು ಪ್ರಾಪ್ತ ವಾದಂತೆ ಕಂಡುಬರುತ್ತದೆ. ಈ ವಕೀಲಿಕೆ ಆದಿಮ ಸಮು ದಾಯಗಳ ಬಗೆಗಿನ ಅನುಕಂಪದಿಂದಲೋ, ಸ್ವಾನುಕಂಪ ದಿಂದಲೋ ಸ್ವಮರುಕದಿಂದಲೋ ಮೂಡಿಬಂದುದಲ್ಲ. ಬದಲಾಗಿ ಅದು ಚಿಕಿತ್ಸಕವಾಗಿ ನೋಡುವ ನೋಟ ದೊಂದಿಗೆ ಚಳುವಳಿಗಳ ಒಳ ಹೊಕ್ಕು ಬಂದ ಅನುಭವ ದಿಂದ ಸಾಧ್ಯವಾಗಿರುವಂತಹದು.

'ಬುದ್ಧನೆಡೆಗೆ' ಸಾಗುವ ಆಶಯವನ್ನು ಶೀರ್ಷಿಕೆಯ ಲ್ಲಿಯೇ ಹೊತ್ತ ವೈಚಾರಿಕ ಲೇಖನಗಳ ಈ ಸಂಕಲನ ಅದಕ್ಕೆ ಪೂರಕವಾಗಿ, ಸಾಮಾಜಿಕ ಅಸಮಾನತೆಯ ಎಲ್ಲಾ ಅನುಮಾನಗಳನ್ನು ಸಾಧ್ಯಂತವಾಗಿ ಪರಿಶೀಲಿಸುತ್ತದೆ. ಕೃತಿಯ ಒಟ್ಟು ಆಶಯಕ್ಕೆ ಸಂಬಂಧಿಸಿದಂತೆ ಒಂದು ವೈಚಾರಿಕ ಹಾದಿಯನ್ನು ನಿರ್ಮಿಸುವ ನಿಟ್ಟಿನಲ್ಲಿ ನಾಗರಾ ಜಯ್ಯ 'ಮಿಣುಕು ದೀಪ' ಹಿಡಿದು ಅದರ ಕಣ್ಬೆಳಕಿನಲ್ಲಿ ಹೋರಾಟದ ಹಾದಿಯ ಹೆಜ್ಜೆ ಗುರುತುಗಳನ್ನು ನಿಖರ ವಾಗಿ ಗುರುತಿಸುತ್ತಾರೆ. ಆ ಹಾದಿಯಲ್ಲಿ ದಲಿತ ಹೋರಾ ಟದ ಹೆಜ್ಜೆಗಳು ನಕ್ಸಲೀಯತೆ, ದಲಿತ ಚಳುವಳಿ, ಹಿಂದೂ ಫ್ಯಾಸಿಸಂ ಒಡಮೂಡಿದ ರೀತಿಯನ್ನು ಸಕಾರಣವಾಗಿ ವಿಶ್ಲೇಷಿಸಿ ನೀಡುವ ಒಳನೋಟಗಳು ಸಂಕಲನದ ಮಹತ್ವ ವನ್ನು ಎತ್ತಿ ಹಿಡಿಯುವಂತಹವು.

ದಲಿತ ಚರಿತ್ರೆಯನ್ನು ಸಾಂಸ್ಕೃತಿಕ ರಾಜಕಾರಣ ಹಾಗೂ ವೈಚಾರಿಕ ನೆಲೆಗಟ್ಟಿನಲ್ಲಿ ನಿರ್ಮಿಸಲು ಅವರು ಡಾ. ಅಂಬೇಡ್ಕರ್‌ರ ಚಿಂತನೆಗಳನ್ನು ಆಧರಿಸಿದರೆ, ಧಾರ್ಮಿಕ-ಆಧ್ಯಾತ್ಮಿಕ ಸ್ವರೂಪಗಳನ್ನು ಮಂಟೇಸ್ವಾಮಿಯ ಸಾಂಸ್ಕೃತಿಕ ದಂಗೆಯ ಕಥನದ ಮೂಲಕ ನಿರ್ವಚಿಸು ತ್ತಾರೆ. ಡಾ.ಅಂಬೇಡ್ಕರ್‌ರ ವಿಚಾರವಾದ ವ್ಯಕ್ತಿ ಸ್ವಾತಂತ್ರ್ಯದ ಅಂತಿಮನೆಲೆ ಬುದ್ಧನೆಡೆಗೆ ಸಾಗುವುದನ್ನು ಪರಿಗಣಿಸಿ, ದಲಿತರೆಲ್ಲರೂ ಬುದ್ಧನೆಡೆಗೆ ಸಾಗಬೇಕಾದ ಸಾಂಸ್ಕೃತಿಕ ತುರ್ತನ್ನು ವಿಶದೀಕರಿಸಿ ಅದನ್ನು ದಲಿತರ ನಿರ್ಧಾರವಾಗಿ ಮತ್ತು ಶೋಷಿತ ಸಮುದಾಯದ ಆಯ್ಕೆಯ ತೀರ್ಮಾನ ವಾಗಿ ಮಾರ್ಧನಿಸುವಂತೆ ಪರಿಕ್ರಮಿಸುವ ಲೇಖಕರ ಹಾದಿ ಸಂಯಮಪೂರ್ಣವಾಗಿಯೂ ತಾತ್ವಿಕ ಬದ್ಧತೆಯಿಂದಲೂ ನಿರ್ಮಾಣಗೊಂಡಿದೆ. ದಲಿತ ಹಾಗೂ ರೈತರು ಜತೆಗೂಡ ಬೇಕಾದ ಅನಿವಾರ್ಯತೆಯನ್ನು ಪ್ರತಿಪಾದಿಸುವ ನಾಗರಾ ಜಯ್ಯ ಅದಕ್ಕೆ ಪೂರಕವಾಗಿ ಕನ್ನಡನಾಡಿನ ಸಾಂಸ್ಕೃತಿಕ ರಾಜಕಾರಣದ ನಡಿಗೆಯ ಸ್ವರೂಪವನ್ನು ಕಂಡರಿಸುವ ಪ್ರಯತ್ನ ನಡೆಸಿದ್ದಾರೆ.

ಬುದ್ಧ ಭಾರತ ನಿರ್ಮಾಣಕ್ಕಾಗಿ ಹಂಬಲಿಸುವ ಡಾ.ಅಂಬೇಡ್ಕರ್‌ವಾದ, ಮಂಟೇಸ್ವಾಮಿಯ ಆಧ್ಯಾತ್ಮಿಕ ದಂಗೆ, ಟಿಪ್ಪುವಿನ ಮಾನವೀಯ ಆಶಯಗಳನ್ನು ಗೋರಿಕ ಟ್ಟಿದ ಹಿಂದೂ ಫ್ಯಾಸಿಸಂ, ವಿರಾಟ್ ಹಿಂದೂ ಸಮಾಜೋ ತ್ಸವದ ಹಿಂದಿನ ವಿಕಾರ ಸ್ವರೂಪ, ಉರಿಚಮ್ಮಾಳಿಗೆಯನ್ನು ಉಡುಗೊರೆಯಾಗಿ ಪಡೆದ ಮಾನವತಾವಾದಿ ಬಸವಣ್ಣನ ಜಾತಿ ಮೂಲದ ಬಗೆಗಿನ ಗೊಂದಲ, ಈ ಹೊತ್ತಿನ ದಲಿತ ಸಾಹಿತ್ಯದ ದಿಕ್ಕು-ದೆಸೆಗಳು ಎಲ್ಲವನ್ನು ಒಂದು ಆಶ ಯಕ್ಕೆ ಪೂರಕವಾಗಿ ಪೋಣಿಸುವ, ವಿಶ್ಲೇಷಿಸುವ, ಪ್ರತಿಪಾ ದಿಸುವ ವಡ್ಡಗೆರೆ ನಾಗರಾಜಯ್ಯನವರ ಈ ವಕೀಲವೃತ್ತಿ ಈ ಹೊತ್ತಿನ ಸಾಂಸ್ಕೃತಿಕ ರಾಜಕಾರಣದಲ್ಲಿ 'ದಲಿತತ್ವದ'ದ ಅನನ್ಯತೆಯನ್ನು ಪ್ರತಿಪಾದಿಸುವಲ್ಲಿ ಶಕ್ತವಾಗಿದೆ. ನಿಷ್ಠುರತೆ ಮತ್ತು ನಿರ್ದುಷ್ಟತೆಗೆ ಉಲ್ಲೇಖನೀಯ ಉದಾಹರಣೆ ಆಗಿ ರುವ ಲೇಖನ 'ಕಾಪಾಲಿಕ ಮಠಮನೆ' ಬಹು ವಿಶಿಷ್ಟವಾ ದುದು.

ಸಾಂಸ್ಕೃತಿಕ ಏಕರೂಪತೆಯ ಹೇರಿಕೆಯನ್ನು ಅನಾ ದಿಕಾಲದಿಂದಲೂ ವಿರೋಧಿಸುತ್ತಾ ಬಂದ ನೆಲಮೂಲದ ಕಾಪಾಲಿಕ-ನಾಥ ಪರಂಪರೆ ಸಾಗಿ ಬಂದ ಹಾದಿಯನ್ನು ಡೇವಿಡ್ ಲಾರೆಂಜನ್ ಮತ್ತು ರಹಮತ್ ತರೀಕೆರೆಯವರ ವ್ಯಾಪಕ ಅಧ್ಯಯನದ ನೆರವಿನಿಂದ ಮತ್ತು ಸ್ವಯಂ ಲೇಖ ಕನೇ ಕ್ಷೇತ್ರಕಾರ್ಯ ಕೈಗೊಂಡು ಸಂಗ್ರಹಿಸಿದ ಮಾಹಿತಿ ಗಳಿಂದ ಕಂಡರಿಸುವ 'ಕಾಪಾಲಿಕ ಮಠಮನೆ' ಎಂಬ ಲೇಖನ ಅಂತಿಮವಾಗಿ ವ್ಯಕ್ತಿ ಪ್ರತಿಷ್ಠೆಯ ಕಾರಣ ದಿಂದ ಕಾಪಾಲಿಕ ಮಠಮನೆಯೊಂದು ವೈದಿಕೀಕರಣಕ್ಕೆ ಈಡಾದ

ಸಾಂಸ್ಕೃತಿಕ ದುರಂತವನ್ನು, ಅಲ್ಲಿನ ರಾಜಕೀಯ ಅಧ್ವಾನಗಳನ್ನು ಚಿತ್ರಿಸುತ್ತದೆ. ಕರ್ನಾಟಕದ ಬಹುದೊಡ್ಡ ಒಕ್ಕಲಿಗ ಸಮುದಾಯದ ಪ್ರಾತಿನಿಧಿಕ ಮಠವೊಂದಕ್ಕೆ ಅದರ ಮೂಲನೆಲೆಯನ್ನು ಸಾಂಸ್ಕೃತಿಕ ಪಲ್ಲಟಗಳನ್ನು ನೆನಪು ಮಾಡಿಕೊಡುತ್ತಲೇ ಅದು ಕಂಡುಕೊಂಡಿರುವ ದುರಂತಕ್ಕೆ ಎಚ್ಚರಿಕೆ ನೀಡುತ್ತದೆ. ಇಂಥ ಈ ಲೇಖನ ಅದೇ ಮಠದ ಸ್ವಾಮೀಜಿಯ ಅಭಿನಂದನಾ ಗ್ರಂಥಕ್ಕಾಗಿ ಬರೆದುದು ವಿಶೇಷವೂ ಹೌದು, ಚೋದ್ಯವೂ ಹೌದು.

ಇಂತಹುದೊಂದು ಸೂಕ್ಷ್ಮ ಮನಸ್ಸು ಯಾವ ಮುಲಾಜಿಗೂ ಸಿಕ್ಕದೇ, ಸಾಮಾಜಿಕ ಕುರೂಪಗಳನ್ನು ಇಲಾಜುಮಾಡುವ ಪ್ರಯತ್ನ ನಡೆಸುತ್ತಾ ಅದರೊಂದಿಗೆ 'ದಲಿತತ್ವ'ದ ಅನನ್ಯ ಅಸ್ಮಿತೆಯನ್ನು ಪ್ರತಿಪಾದಿಸುವ ಪರಿ 'ಬುದ್ಧನೆಡೆಗೆ' ಕೃತಿಯನ್ನು ಈ ಹೊತ್ತಿನ ಬಹುಮುಖ್ಯ ಕೃತಿಯನ್ನಾಗಿ ಮಾಡಿದೆ. ಲೇಖಕರು ದಲಿತ ಚಳುವಳಿಯ ಹಿನ್ನೆಲೆಯನ್ನು ಅರಿತವರು. ಅದರ ಆಶಯವನ್ನು ಗರ್ಭೀಕರಿಸಿಕೊಂಡವರು. ವರ್ತಮಾನದ ಅದರ ಸ್ಥಿತಿಯನ್ನು ಕಂಡು 'ಬೌದ್ಧಿಕ ದಾಸ್ಯದಿಂದ ಬಳಲುವ ಕೆಲವೇ ಮಂದಿ ದಲಿತ ರಾಜಕೀಯ ನಾಯಕರು(ಹಿಂದೂ ಸಾಮ್ರಾಜ್ಯಶಾಹಿ ವಿರುದ್ಧ) ನೇರ ವೀರೋಚಿತ ಕಾಳಗಕ್ಕಿಳಿಯುವ ವೀರ್ಯವಂತಿಕೆಯನ್ನು ಕಳೆದುಕೊಂಡು ಹಿಂದೂ ಮೂಲಭೂತವಾದಿಗಳ ಕೈಯಲ್ಲಿ ಆಯುಧಗಳಾಗಿ ತಮ್ಮ ಜಾತಿಬಾಂಧವರ ವಿರುದ್ಧವೇ ಬಳಕೆಯಾಗುತ್ತಿರುವುದು ಆತಂಕಕಾರಿ ಅಂಶ...(ಪುಟ 28) ಎಂದು ಆಕ್ರೋಶ ವ್ಯಕ್ತಪಡಿಸುತ್ತಾ ಚಳುವಳಿಯನ್ನು ಕುಂದಿಸುವಲ್ಲಿ ಇಂತಹವರ ಪಾತ್ರ ಗಣನೀಯವಾಗಿರುವುದರ ಬಗ್ಗೆ ಎಚ್ಚರಿಸುತ್ತಾರೆ.

ದಲಿತ ಚಳುವಳಿಯ ಆತ್ಮವಿಮರ್ಶೆಗೆ ಸಕಾಲಿಕವಾದ ಈ ಸಂದರ್ಭದಲ್ಲಿ ವಡ್ಡಗೆರೆ ನಾಗರಾಜಯ್ಯನವರ ಲೇಖನಗಳು ಸತ್ವವನ್ನು ಒರೆಗೆ ಹಚ್ಚಿ ನೋಡುವಲ್ಲಿ, ಆ ದಾರಿಯ ಎಡರು-ತೊಡರುಗಳನ್ನು ನಿವಾರಿಸಲು ಮಾರ್ಗೋಪಾಯ ತಿಳಿಸುವಲ್ಲಿ ಮತ್ತು ಆದಿಮ ಸಮುದಾಯದ ಸಾಂಸ್ಕೃತಿಕ ಅನನ್ಯತೆಯ ಅರಿವನ್ನು ಮೂಡಿಸುವಲ್ಲಿ ಬಹುತೇಕ ಯಶಸ್ವಿಯಾಗಿವೆ. ಇಂತಹುದೊಂದು ಮಿಣುಕುದೀಪವೂ ಪ್ರಖರ ಬೆಳಕನ್ನು ಬೀರಿ, ಸಾಮಾಜಿಕ ಚಳುವಳಿಯ ದಿಕ್ಕುದೆಸೆಗಳನ್ನು ನಿರ್ದಿಷ್ಟಪಡಿಸಲು ಸಹಕರಿಸಬಲ್ಲುದು ಎಂಬುದಕ್ಕೆ ಈ ಕೃತಿ ಸಾಕ್ಷಿಯಾಗಿದೆ. ಈ ಅಂಶವನ್ನೇ ಮುನ್ನುಡಿಯಲ್ಲಿ ಕೋಟಿಗಾನಹಳ್ಳಿ ರಾಮಯ್ಯನವರು "....ಯಜಮಾನ ಸಂಸ್ಕೃತಿಯ ಪ್ರತಿಪಾದಿತ ಸ್ಥಗಿತ ಮೌಲ್ಯಗಳನ್ನು ದಲಿತ ಪರಂಪರೆಯ ದೇಶಿ ಹತಾರಗಳಿಂದಲೇ ಎದುರಗೊಳ್ಳಬೇಕೆಂಬ ಸಾಂಸ್ಕೃತಿಕ ಎಚ್ಚರ ಅವರ ಲೇಖನಗಳಲ್ಲಿ ವ್ಯಕ್ತವಾಗುತ್ತದೆ. ಹೀಗಾಗಿ ದಲಿತ ನಾಯಕತ್ವವು ನಿಜವಾಗಿ ತನ್ನ ದೃಷ್ಟಿಯನ್ನು ಎತ್ತಕೇಂದ್ರೀಕರಿಸಿಕೊಳ್ಳಬೇಕೆಂಬ ದಿಕ್ಕನ್ನು ಸಹ ಇಲ್ಲಿನ ಲೇಖನಗಳು ತೋರಿಸಬಲ್ಲವುಗಳಾಗಿವೆ ಎಂದರೆ ಅತಿಶಯೋಕ್ತಿಗಲಾರದು" ಎಂದಿದ್ದಾರೆ.

ವೈಚಾರಿಕ ಕೃತಿಯೊಂದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡಾಗಿಯೂ ಲೇಖಕರು ಕೆಲವೊಮ್ಮೆ ಮಾನಸಿಕ ದೂರ ಕಾಪಾಡಿಕೊಳ್ಳಲು ವಿಫಲರಾದ ಸಂದರ್ಭಗಳೂ ಕೃತಿಯಲ್ಲಿವೆ. ಸ್ವತಃಕವಿಯಾದ ಮೃದು ಮನಸ್ಸಿನ ಚಿಂತಕ ವಡ್ಡಗೆರೆ ನಾಗರಾಜಯ್ಯ ಕೆಲವೊಮ್ಮೆ ಭಾವೋದ್ವೇಗಕ್ಕೆ ಈಡಾಗದಂತೆ ಭಾಸವಾಗುವುದನ್ನು ಕೃತಿಯ ದೋಷವೆಂದು ಪರಿಗಣಿಸಲಾಗದು. ಆದರೆ ಭಾಷಣದ ಭಾವಾವೇಶಕ್ಕೆ ಹೊರತಾದ ಬೌದ್ಧಿಕ ಅಂಶಗಳು ಲೇಖನದ

ಲೇಖಕರು ದಲಿತ ಸಂಸ್ಕೃತಿಯ ನೆಲೆಯನ್ನು ಬಾಲ್ಯದ ಬೆರಗು, ಅಧ್ಯಯನದ ಹರವು ಮತ್ತು ವೈಚಾರಿಕ ದೃಷ್ಟಿಕೋನದಿಂದ ಪರಿಭಾವಿಸುವ ಪ್ರಯತ್ನದ ಈ ಕೃತಿಯಲ್ಲಿ ಕೆಲವೊಂದು ಸಂಗತಿಗಳು ವಾಚಕರನ್ನು ಗೊಂದಲಗೊಳಿಸುತ್ತವೆ. 'ಆದಿಜಾಂಬವ'ನನ್ನು ತಾತನೆಂದೂ, ಆತನೇ ಸೃಷ್ಟಿಕರ್ತನೆಂದೂ ಪರಿಭಾವಿಸುವ ಸಂಗತಿ ಬಾಲ್ಯದ ಬೆರಗಿಗೆ ಸಹಜವಾದರೂ ಅಂತಹ ಪುರಾಣ ಆಕೃತಿಯನ್ನು ವಿಶ್ಲೇಷಿಸದೇ ಒಪ್ಪಿಬಿಡುವುದು ಸರಿಯಲ್ಲ. ವೈಚಾರಿಕತೆಯನ್ನು ಪ್ರತಿಪಾದಿಸುತ್ತಾ ಈ ಇಂತಹ ಪುರಾಣ ಸಂಗತಿಗಳೂ ವೈಚಾರಿಕತೆಯನ್ನೇ ಬಿಂಬಿಸುತ್ತವೆ ಎಂದು ಪ್ರತಿ ಪಾದಿಸುವ ಲೇಖಕರು ಕೊಂಚ ಜಾಗರೂ ಕವಾಗಿರಬೇಕಿತ್ತು. ದಲಿತ ಪುರಾಣದಲ್ಲಿ 'ದಕ್ಕದಮಗನಿಂದ ದಕ್ಕಲಿಗರು ಜನ್ಮ ತಳೆದರು' ಎಂದಿರುವ ಲೇಖಕರು ದಲಿತ ಸಮುದಾಯದಿಂದಲೂ ತಿರಸ್ಕೃತರಾಗಿ ಬದುಕುತ್ತಿರುವ ದಕ್ಕಲಿಗರ ಬಗ್ಗೆ ಹೆಚ್ಚೇನೂ ಗಮನಹರಿಸುವುದಿಲ್ಲ.
ಕವಿ ಕೋಟಿಗಾನಹಳ್ಳಿ ರಾಮಯ್ಯ ಹೇಳುವಂತೆ 'ವಡ್ಡಗೆರೆ ನಾಗರಾಜಯ್ಯನವರ 'ಬುದ್ದನೆಡೆಗೆ' ದಲಿತ ವೈಚಾರಿಕ ನಡಿಗೆಯ ದಕ್ಸೂಚಿ ಕೃತಿ' ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ದಲಿತ ಚರಿತ್ರೆ ಮತ್ತು ದಲಿತ ಪುರಾಣಗಳ ನೆಲೆಗಳನ್ನೇ ಆರ್ಯೀಕರಣಗೊಳಿಸಿ ವೈದಿಕ ವಾಙ್ಮಯದಲ್ಲಿ ವಿಲೀನಗೊಳಿಸಿಕೊಂಡು ಕ್ರಮೇಣ ವಿಸ್ಮರಣೆಗೆ ಸರಿಸಿದ ಬ್ರಾಹ್ಮಣ ರಾಜಕಾರಣವನ್ನು ಬಯಲುಗೊಳಿಸುವ 'ಬುದ್ಧನೆಡೆಗೆ' ಈ ಹೊತ್ತಿನ ಅತ್ಯಂತ ಮಹತ್ವದ ವೈಚಾರಿಕ ಕೃತಿ.

ವಿಚಾರವಾಗಿ ಮಂಡಿಸಬೇಕಾದ ಸಂದರ್ಭದಲ್ಲಿ ಸಂಯಮವೊಂದು ಅಪೇಕ್ಷಣೀಯ. ವಿಷಯಮಂಡನೆಯಲ್ಲಿ ವಿಸ್ತಾರವನ್ನಷ್ಟೇ ಅಲ್ಲದೇ ನಿರ್ದಿಷ್ಟ ಉಲ್ಲೇಖಗಳನ್ನು ಬಯಸುವ ವೈಚಾರಿಕ ಕೃತಿಯಲ್ಲಿ ಲೇಖಕರು ಬೀಡುಬೀಸಾಗಿ ಹೇಳಿಕೆ ನೀಡಿದ ಉದಾಹರಣೆಗಳೂ ಇವೆ. ಅಂಬೇಡ್ಕರ್‌ರ ಜಾತ್ಯಾತೀತ ಮನೋಧರ್ಮವನ್ನು ಕುರಿತು ಬರೆಯುತ್ತಾ "ಅಂಬೇಡ್ಕರ್ ಇಸ್ಲಾಂ ಧರ್ಮದ ವಿರುದ್ಧ ಯಾವತ್ತೂ ವಿರೋಧಿ ಭಾವನೆ ತಾಳಲಿಲ್ಲ. ಬದಲಾಗಿ ಕೋಮುವಾದದ ವಿಷಕ್ಕೆ ಆಸ್ಪೃಶ್ಯರು ಮತ್ತು ಮುಸ್ಲಿಮರಿಬ್ಬರೂ ಜೊತೆಗೂಡಿ ಪರಿಹಾರ ಕಂಡುಕೊಂಡಿರುವ ಮಾರ್ಗಗಳನ್ನು ಗೌರವಿಸಿದರು. ಬುದ್ಧ ತಮ್ಮ ಮೊದಲ ಗುರುವಾದರೆ ಸಂತಕಬೀರ್ ತಮ್ಮ ಎರಡನೇ ಗುರುವೆಂದು ಅವರು ಆಗಾಗ ಹೇಳುತ್ತಿದ್ದುದುಂಟು". (ಪುಟ-75) ಎನ್ನುತ್ತಾರೆ. ಈ ಇಂತಹ ಹೇಳಿಕೆಗಳು ಚಾರಿತ್ರಿಕ ಮಹತ್ವವಿರುವ ಅಂಬೇಡ್ಕರ್‌ರಂತರ ಧೀರೋದಾತ್ತ ವ್ಯಕ್ತಿತ್ವವನ್ನು ತಾರ್ಕಿಕವಾಗಿ ಸರಳೀಕರಿಸಿ ನೋಡಿದರೆ 'ಆಗಾಗ ಹೇಳುತ್ತಿದ್ದುದುಂಟು' ಎಂಬ ಪದಸರಣಿ ಕೇವಲ ಸಂಭಾವ್ಯತೆಯನ್ನು ಸೂಚಿಸಬಹುದೇ ಹೊರತು ಸತ್ಯವನ್ನಲ್ಲ. ಮಾತಿನ ಭರದಲ್ಲಿ ಆಗುವ ಇಂತಹ ಎಡವಟ್ಟುಗಳು ವೈಚಾರಿಕ ಲೇಖನದಲ್ಲಿ ಅಪೇಕ್ಷಣೀಯವಲ್ಲ.

ಲೇಖಕರು ದಲಿತ ಸಂಸ್ಕೃತಿಯ ನೆಲೆಯನ್ನು ಬಾಲ್ಯದ ಬೆರಗು, ಅಧ್ಯಯನದ ಹರವು ಮತ್ತು ವೈಚಾರಿಕ ದೃಷ್ಟಿಕೋನದಿಂದ ಪರಿಭಾವಿಸುವ ಪ್ರಯತ್ನದ ಈ ಕೃತಿಯಲ್ಲಿ ಕೆಲವೊಂದು ಸಂಗತಿಗಳು ವಾಚಕರನ್ನು ಗೊಂದಲಗೊಳಿಸುತ್ತವೆ. 'ಆದಿಜಾಂಬವ'ನನ್ನು ತಾತನೆಂದೂ, ಆತನೇ ಸೃಷ್ಟಿಕರ್ತನೆಂದೂ ಪರಿಭಾವಿಸುವ ಸಂಗತಿ ಬಾಲ್ಯದ ಬೆರಗಿಗೆ ಸಹಜವಾದರೂ ಅಂತಹ ಪುರಾಣ ಆಕೃತಿಯನ್ನು ವಿಶ್ಲೇಷಿಸದೇ ಒಪ್ಪಿಬಿಡುವುದು ಸರಿಯಲ್ಲ. ವೈಚಾರಿಕತೆಯನ್ನು ಪ್ರತಿಪಾದಿಸುತ್ತಾ ಈ ಇಂತಹ ಪುರಾಣ ಸಂಗತಿಗಳೂ ವೈಚಾರಿಕತೆಯನ್ನೇ ಬಿಂಬಿಸುತ್ತವೆ ಎಂದು ಪ್ರತಿಪಾದಿಸುವ ಲೇಖಕರು ಕೊಂಚ ಜಾಗರೂಕವಾಗಿರಬೇಕಿತ್ತು. ದಲಿತ ಪುರಾಣದಲ್ಲಿ 'ದಕ್ಕದಮಗನಿಂದ ದಕ್ಕಲಿಗರು ಜನ್ಮತಳೆದರು' ಎಂದಿರುವ ಲೇಖಕರು ದಲಿತ ಸಮುದಾಯದಿಂದಲೂ ತಿರಸ್ಕೃತರಾಗಿ ಬದುಕುತ್ತಿರುವ ದಕ್ಕಲಿಗರ ಬಗ್ಗೆ ಹೆಚ್ಚೇನೂ ಗಮನಹರಿಸುವುದಿಲ್ಲ.

ಕವಿ ಕೋಟಿಗಾನಹಳ್ಳಿ ರಾಮಯ್ಯ ಹೇಳುವಂತೆ 'ವಡ್ಡಗೆರೆ ನಾಗರಾಜಯ್ಯನವರ 'ಬುದ್ದನೆಡೆಗೆ' ದಲಿತ ವೈಚಾರಿಕ ನಡಿಗೆಯ ದಕ್ಸೂಚಿ ಕೃತಿ' ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ದಲಿತ ಚರಿತ್ರೆ ಮತ್ತು ದಲಿತ ಪುರಾಣಗಳ ನೆಲೆಗಳನ್ನೇ ಆರ್ಯೀಕರಣಗೊಳಿಸಿ ವೈದಿಕ ವಾಙ್ಮಯದಲ್ಲಿ ವಿಲೀನಗೊಳಿಸಿಕೊಂಡು ಕ್ರಮೇಣ ವಿಸ್ಮರಣೆಗೆ ಸರಿಸಿದ ಬ್ರಾಹ್ಮಣ ರಾಜಕಾರಣವನ್ನು ಬಯಲುಗೊಳಿಸುವ 'ಬುದ್ದನೆಡೆಗೆ' ಈ ಹೊತ್ತಿನ ಅತ್ಯಂತ ಮಹತ್ವದ ವೈಚಾರಿಕ ಕೃತಿ. ದಲಿತರು ಇಂಥ ಮತ್ತಷ್ಟು ಪರ್ಯಾಯ ಸಾಂಸ್ಕೃತಿಕ ಪಠ್ಯಗಳನ್ನು ರೂಪಿಸಿಕೊಳ್ಳುವ ಮೂಲಕ ಏಕಸಂಸ್ಕೃತಿಯ ಹೇರಿಕೆಯನ್ನು ಪ್ರತಿಭಟಿಸಬೇಕಾಗಿದೆ.

ದಲಿತತ್ವದ 'ಅಸ್ಮಿತೆ'ಯನ್ನು ಪ್ರತಿಪಾದಿಸುತ್ತಾ 'ಬುದ್ಧನೆಡೆಗೆ' ಸಾಗಬೇಕಾದ ಸಾಂಸ್ಕೃತಿಕ ತುರ್ತನ್ನು ನಿರ್ವಹಿಸುವ ನಾಗರಾಜಯ್ಯ ಅಂತಹ ಪರ್ಯಾಯ ಸಾಂಸ್ಕೃತಿಕ ಪಠ್ಯ ಶೋಧದಲ್ಲಿ ತೊಡಗಬಲ್ಲವರು. ಬುದ್ಧನೆಡೆಗೆ ಸಾಗುವ ಈ ಹಾದಿಯಲ್ಲಿ ಅಂತಹ ಮಹತ್ತರ ಹೆಜ್ಜೆ ಇಡಬಲ್ಲವರೆಂದೇ ಈ ಜವಾಬ್ದಾರಿ ಅವರು ಹೊರಬೇಕಿರುವುದು. ಅಷ್ಟೇ ಅಲ್ಲ ದಲಿತ ಚಳುವಳಿಯಲ್ಲಿ ತೊಡಗಿಕೊಂಡವರ ಸಾಮೂಹಿಕ ಸಾಂಸ್ಕೃತಿಕ ಜವಾಬ್ದಾರಿಯೂ ಇದಾಗರಿಬೇಕು ಎಂಬುದನ್ನು ಅವರ ಲೇಖನಗಳೇ ತಿಳಿಸಿಕೊಟ್ಟಿವೆ. □

ಸಂಸ್ಕೃತ ವಿಶ್ವವಿದ್ಯಾಲಯದ ಸುತ್ತಮುತ್ತ



ನಮ್ಮ ಮಧ್ಯದಲ್ಲಿರುವ ಪ್ರಸಿದ್ಧ ಭಾಷಾಶಾಸ್ತ್ರಜ್ಞ ಮತ್ತು ಚಿಂತಕ ಡಾ.ಕೆ.ವಿ ನಾರಾಯಣ ತಮ್ಮ ಒಂದು ಲೇಖನದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದಿಂದ ನಾಡಿಗೆ ಯಾವ ರೀತಿಯಲ್ಲಿಯೂ ಉಪಯೋಗವಿಲ್ಲವೆಂಬುದನ್ನು ಮತ್ತು ಅದು ಸಾಮಾಜಿಕ ನಡೆಯನ್ನು ಕುಂಠಿತಗೊಳಿಸುತ್ತದೆಯೆಂಬುದನ್ನು ಸುಸ್ಪಷ್ಟವಾಗಿ ಮತ್ತು ಒಂದು ರೀತಿಯಲ್ಲಿ ಉಗ್ರವಾಗಿ ಮಂಡಿಸಿದ್ದಾರೆ. ಅವರ ಈ ಲೇಖನವು ಎರಡು ರೀತಿಯಿಂದ ನಮಗೆ ಮುಖ್ಯವಾಗುತ್ತದೆ. ಮೊದಲನೆಯದಾಗಿ ಅದರಲ್ಲಿನ ವಿಷಯ ಮಂಡನೆಯ ಪರಿ ಮತ್ತು ಅದರಲ್ಲಿ ಮಂಡಿತವಾಗಿರುವ ಅವರ ಚಿಂತನೆ. ಎರಡನೆಯದು ಅವರು ಅದನ್ನು ಕನ್ನಡದಲ್ಲಿ ಕಟ್ಟಿರುವ ರೀತಿ. ಇಡೀ ಲೇಖನವನ್ನು ಅವರು ಕನ್ನಡದಲ್ಲಿ ಬರೆದಿದ್ದಾರೆ. ತಮ್ಮ ವಿಷಯ ಮಂಡನೆಗೆ ಕನ್ನಡದ ನುಡಿ ಸಿಗದಿದ್ದಾಗ ಇಂಗ್ಲಿಷ್ ಪದವನ್ನು ಬಳಸಿದ್ದಾರೆ ವಿನಾ ಸಂಸ್ಕೃತವನ್ನಲ್ಲ.

ಪ್ರಸ್ತಾವನೆ

ಈ ವಿಶ್ವವಿದ್ಯಾಲಯವು ಅವಶ್ಯಕವೇ ಅಥವಾ ಅವಶ್ಯಕವಿಲ್ಲವೇ ಎಂಬುದನ್ನು ಕುರಿತಂತೆ ಕರ್ನಾಟಕದಲ್ಲಿ ವಾದ-ಪ್ರತಿವಾದ ಕಳೆದ ಎರಡು-ಮೂರು ತಿಂಗಳುಗಳಿಂದ ಅತ್ಯಂತ ಬಿಸಿಬಿಸಿಯಾಗಿ ನಡೆಯುತ್ತಿದೆ. ಈ ನಾಡಿನ ವಿದ್ವಾಂಸರೆಲ್ಲ ಇದರಲ್ಲಿ ಭಾಗವಹಿಸುತ್ತಿದ್ದಾರೆ. ಈ ಬಗ್ಗೆ ಪತ್ರಿಕೆಯೊಂದು ಪ್ರತ್ಯೇಕ ಪುಟವನ್ನೇ ಮೀಸಲಿಟ್ಟು ಸಂಸ್ಕೃತ ವಿಶ್ವವಿದ್ಯಾಲಯದ ಬಗ್ಗೆ ಅಪ್ರತ್ಯಕ್ಷವಾಗಿ ವಕಾಲತ್ತು ನಡೆಸುತ್ತಿರುವಂತೆ ಕಾಣುತ್ತಿದೆ. ಈ ಬಗ್ಗೆ ಮೊಟ್ಟಮೊದಲು ಪ್ರಜಾವಾಣಿಯಲ್ಲಿ (29-05-09) ವೇದ ವಿಶ್ವವಿದ್ಯಾಲಯವು ಅವಶ್ಯವೇ? ಎಂಬ ನನ್ನ ಲೇಖನವು ಸಂಸ್ಕೃತ ವಿಶ್ವವಿದ್ಯಾಲಯದ ಬಗೆಗಿನ ವಿವಾದವನ್ನು ಜನರ ಮುಂದಿಟ್ಟಿತು. ಅದರ ನಂತರ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಚಂದ್ರಶೇಖರ ಕಂಬಾರ ಅವರು ಸಂಸ್ಕೃತ ವಿಶ್ವವಿದ್ಯಾಲಯವು ಅಗತ್ಯವಿಲ್ಲವೆಂಬ ವಾದವನ್ನು ತಮ್ಮ ಪ್ರಜಾವಾಣಿ ಸಂದರ್ಶನದಲ್ಲಿ(31-05-09)ಮಂಡಿಸಿದರು.

"ಪ್ರಜಾವಾಣಿಯು ತನ್ನ ಶನಿವಾರದ ಅಂಕಣವೊಂದರಲ್ಲಿ ಡಾ.ಹಂಪನಾ, ಡಾ.ಎಂ.ಎಂ.ಕಲಬುರ್ಗಿ, ಡಾ.ಜಿ.ಎಸ್.ಶಿವರುದ್ರಪ್ಪ, ಕವಿ ಚನ್ನವೀರ ಕಣವಿ ಮುಂತಾದವರ ಅಭಿಪ್ರಾಯವನ್ನು ಪ್ರಕಟಿಸಿತು. ಅವರೆಲ್ಲ ಒಕ್ಕೊರಲಿನಿಂದ ಸಂಸ್ಕೃತ ವಿಶ್ವವಿದ್ಯಾಲಯವು ಕರ್ನಾಟಕದಲ್ಲಿ ಅಗತ್ಯವಿಲ್ಲವೆಂಬ ವಾದವನ್ನು ಗಟ್ಟಿಯಾಗಿ ಮಂಡಿಸಿದರು. ಡಾ.ಕಲಬುರ್ಗಿ, ಡಾ.ಹಂಪನಾ ಮುಂತಾದವರು ಇಂತಹ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಾದರೆ ಅದು ಸಂಸ್ಕೃತದ ಜೊತೆಯಲ್ಲಿ ಉಳಿದ ಅನೇಕ ಪ್ರಾಚೀನ ಭಾಷೆಗಳಾದ ಪ್ರಾಕೃತ, ಪಾಲಿ, ಮಾಗಧಿ ಹಳಗನ್ನಡ ಮುಂತಾದವುಗಳನ್ನು ಒಳಗೊಳ್ಳಬೇಕೆಂಬ ವಾದವನ್ನು ಮುಂದಿಟ್ಟು ಅದು ಪ್ರಾಚ್ಯ ಭಾಷಾ ವಿಶ್ವವಿದ್ಯಾಲಯವಾಗಬೇಕೆಂದು ಒತ್ತಾಯಿಸುತ್ತಿದ್ದಾರೆ.

ಪ್ರಸಿದ್ಧ ಭಾಷಾಶಾಸ್ತ್ರಜ್ಞ ಮತ್ತು ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಕೆ.ವಿ. ನಾರಾಯಣ ಅದು ಸಂಸ್ಕೃತವಾಗಲಿ ಅಥವಾ ಪ್ರಾಚ್ಯ ಭಾಷೆಗಳದ್ದಾಗಲಿ ಕನ್ನಡಕ್ಕೆ ಅದರಿಂದ ಉಪಯೋಗವಿಲ್ಲವೆಂಬ ವಾದವನ್ನು ಅತ್ಯಂತ ಪ್ರಖರವಾಗಿ ಮಂಡಿಸಿದ್ದಾರೆ. ಸಂಸ್ಕೃತವನ್ನು ಕನ್ನಡಕ್ಕೆ ದಕ್ಕೆ ಯಾಗದಂತೆ ಹೇಗೆ ಕಟ್ಟಬೇಕೆಂಬುದು ಅರ್ಥವಿಲ್ಲದ ಸಂಗತಿಯಾಗಿದೆ. ಲಿಂಗದೇವರು ಹಳೆಮನೆ, ರಹಮತ್ ತರೀಕೆರೆ, ವೈವಿಎಸ್ ದತ್ತ, ಡಾ.ಕೆ.ರಾಘವೇಂದ್ರ ರಾವ್, ಚಂಪಾ ಮುಂತಾದವರು ತಮ್ಮ ನೆಲೆಯಲ್ಲಿ ಪತ್ರಿಕೆಗಳಲ್ಲಿ, ಪತ್ರ ವ್ಯವಹಾರಗಳಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಬಗ್ಗೆ ತಮ್ಮ ವಿರೋಧವನ್ನು ಮಂಡಿಸುತ್ತಿದ್ದಾರೆ. ನನ್ನ ಗಮನಕ್ಕೆ ಬಾರದೆ ಅನೇಕರು ಇದಕ್ಕೆ ತಮ್ಮ ವಿರೋಧವನ್ನು ಬೇರೆ ಬೇರೆ ರೀತಿಯಲ್ಲಿ ಮಂಡಿಸಿರಬಹುದು. ಈ ವಾದ-ಪ್ರತಿವಾದ ಇನ್ನೂ ನಡೆಯುತ್ತಿದೆ.

ವೇದವನ್ನು ಮುಗುಮ್ಮಾಗಿ ಕೈಬಿಟ್ಟ ಸಂಸ್ಕೃತವಾದಿಗಳು!

ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಸಂಸ್ಕೃತ ಪಾಠಶಾಲೆಯ ಆವರಣದಲ್ಲಿ ಸ್ಥಾಪಿಸಿರುವ ಕಚೇರಿಯಲ್ಲಿ ನೇತು ಹಾಕಿರುವ ಬೋರ್ಡಿನಲ್ಲಿ ಮಾತ್ರ 'ಸಂಸ್ಕೃತ-ವೇದ ವಿಶ್ವವಿದ್ಯಾಲಯ'ವೆಂಬ ಹೆಸರು ರಾರಾಜಿಸುತ್ತಿದೆ. ಅಂದರೆ ಅದು ಇನ್ನೂ ವೇದವನ್ನು ಕೈಬಿಟ್ಟಂತೆ ಕಾಣುತ್ತಿಲ್ಲ. ವಿದ್ವಾಂಸರೇನೋ ಸಂಸ್ಕೃತ ವಿಶ್ವವಿದ್ಯಾಲಯದ ಜೊತೆಯಲ್ಲಿ ವೇದವನ್ನು ತಳುಕು ಹಾಕುವುದು ಬೇಡವೆಂದು ಹೇಳುತ್ತಿದ್ದಾರೆ. ಆದರೆ ಬೋರ್ಡು ಮಾತ್ರ ವೇದವನ್ನು ಹೊತ್ತುಕೊಂಡಿದೆ. ಸಂಸ್ಕೃತ ವಿಶ್ವವಿದ್ಯಾಲಯದ ಜೊತೆಯಲ್ಲಿ ವೇದವನ್ನು ಜೋಡಿಸುವುದು ಬೇಡವೆಂದು ಹೇಳುತ್ತಿರುವ ಸಂಸ್ಕೃತವಾದಿಗಳು ತಂತ್ರವೊಂದನ್ನು ಅನುಸರಿಸುತ್ತಿರುವಂತೆ ಕಾಣುತ್ತಿದೆ.

ಕೆಲವು ಸಂಸ್ಕೃತವಾದಿಗಳು ವಾದಕ್ಕಾಗಿ ವೇದಾಧ್ಯಯನವನ್ನು ಸಂಸ್ಕೃತದ ಭಾಗವನ್ನಾಗಿ ಮಾಡುವ ಅವಶ್ಯಕತೆಯಿಲ್ಲವೆಂಬ ಮಾತನಾಡುತ್ತಿದ್ದಾರೆ. ಇದೊಂದು ಸಂಸ್ಕೃತವಾದಿಗಳ ತಂತ್ರವಾಗಿದೆ. ಸಂಸ್ಕೃತ ವಿಶ್ವವಿದ್ಯಾಲಯವು ಮೊದಲು ಆರಂಭವಾಗಲಿ, ನಂತರ ವೇದವನ್ನು ಅದಕ್ಕೆ ಸೇರಿಸಿಕೊಳ್ಳಬಹುದೆಂಬುದು ಅವರ ಹುನ್ನಾರವಿದ್ದಂತೆ ಕಾಣುತ್ತಿದೆ. ಆದರೆ ಸಂಸ್ಕೃತಕ್ಕೆ ಸಂಬಂಧಿಸಿದ ಕೆಲವು ಮೂಲಭೂತವಾದಿಗಳು ಇನ್ನೂ ಸಂಸ್ಕೃತವನ್ನು ವೇದದಿಂದ ಬೇರ್ಪಡಿಸಲಾಗದೆಂದು ವಾದಿಸುತ್ತಿದ್ದಾರೆ. ಶತಾವಧಾನಿ ಆರ್.ಗಣೇಶ್ ಅವರಿಗೆ ವೇದಗಳಿಲ್ಲದೆ ಸಂಸ್ಕೃತವಿಲ್ಲ. ವೇದವಿಲ್ಲದೆ ಸಂಸ್ಕೃತವು ಇರಲು ಸಾಧ್ಯವಿಲ್ಲವೆನ್ನುವುದು ಈ ಮೂಲಭೂತವಾದಿಗಳ ನಂಬಿಕೆ. 'ಇತಿಹಾಸದಿಂದ ಏನನ್ನು ಕಲಿಯಲಿಲ್ಲವೆಂಬುದೇ ಇತಿಹಾಸದಿಂದ ಕಲಿತ ಪಾಠ'ವೆಂಬ ಮಾತೊಂದಿದೆ. ಈ ಸಂಸ್ಕೃತಕ್ಕೆ ಅಂಟಿಕೊಂಡಿರುವ ಮೂಲಭೂತವಾದಿಗಳಿಗೆ ಬುದ್ಧಿ ಬರುವುದಿಲ್ಲವೆನ್ನುವುದು ಸ್ಪಷ್ಟವಾಗುತ್ತಿದೆ.

ಡಾ. ಕೆ.ವಿ ನಾರಾಯಣರ ಚಿಂತನೆ

ನಮ್ಮ ಮಧ್ಯದಲ್ಲಿರುವ ಪ್ರಸಿದ್ಧ ಭಾಷಾಶಾಸ್ತ್ರಜ್ಞ ಮತ್ತು ಚಿಂತಕ ಡಾ.ಕೆ.ವಿ ನಾರಾಯಣ ತಮ್ಮ ಒಂದು ಲೇಖನದಲ್ಲಿ (ವಿಜಯ ಕರ್ನಾಟಕ: 24-08-09)ಸಂಸ್ಕೃತ ವಿಶ್ವವಿದ್ಯಾಲಯದಿಂದ ನಾಡಿಗೆ ಯಾವ ರೀತಿಯಲ್ಲಿಯೂ ಉಪಯೋಗವಿಲ್ಲವೆಂಬುದನ್ನು ಮತ್ತು ಅದು ಸಾಮಾಜಿಕ ನಡೆಯನ್ನು ಕುಂಠಿತಗೊಳಿಸುತ್ತದೆಯೆಂಬುದನ್ನು ಸುಸ್ಪಷ್ಟವಾಗಿ ಮತ್ತು ಒಂದು ರೀತಿಯಲ್ಲಿ ಉಗ್ರವಾಗಿ(ಅವರು ಬಳಸಿರುವ ಪದ ಕಟು) ಮಂಡಿಸಿದ್ದಾರೆ. ಅವರ ಈ ಲೇಖನವು ಎರಡು ರೀತಿಯಿಂದ ನಮಗೆ ಮುಖ್ಯವಾಗುತ್ತದೆ. ಮೊದಲನೆಯದಾಗಿ ಅದರಲ್ಲಿನ ವಿಷಯ ಮಂಡನೆಯ ಪರಿ ಮತ್ತು ಅದರಲ್ಲಿ ಮಂಡಿತವಾಗಿರುವ ಅವರ ಚಿಂತನೆ. ಎರಡನೆಯದು ಅವರು ಅದನ್ನು ಕನ್ನಡದಲ್ಲಿ ಕಟ್ಟಿರುವ ರೀತಿ. ಇಡೀ ಲೇಖನವನ್ನು ಅವರು ಕನ್ನಡದಲ್ಲಿ ಬರೆದಿದ್ದಾರೆ. ತಮ್ಮ ವಿಷಯ ಮಂಡನೆಗೆ ಕನ್ನಡದ ನುಡಿ ಸಿಗದಿದ್ದಾಗ ಇಂಗ್ಲಿಷ್ ಪದವನ್ನು (ಉದಾಹರಣೆಗೆ ಲೈಬ್ರರಿ) ಬಳಸಿದ್ದಾರೆ ವಿನಾ ಸಂಸ್ಕೃತವನ್ನಲ್ಲ. ಅವರ ಪ್ರಕಾರ ಇಂಗ್ಲಿಷ್ ಪದಗಳನ್ನು ಅಲ್ಲಿ ಬಳಸುತ್ತಿರುವುದು ಸಂಸ್ಕೃತವನ್ನು ವಿರೋದಿಸುವು ದಕ್ಕಲ್ಲ. ಜನರಿಗೆ ಗ್ರಂಥಾಲಯ ಎಂಬುದಕ್ಕಿಂತ ಲೈಬ್ರರಿ ಎಂಬುದು ಬೇಗ ಮತ್ತು ಸುಲಭವಾಗಿ ತಿಳಿಯುತ್ತದೆ

ಎಂಬುದಕ್ಕಾಗಿ ಎಂಬುದು ಮುಖ್ಯ. ಭಾಷೆಯ ಉದ್ದೇಶ ಅದೇ ತಾನೇ! ಎರಡೂ ದೃಷ್ಟಿಯಿಂದ ಅದೊಂದು ಅಪರೂಪದ ಬರಹವಾಗಿದೆ. ಕರ್ನಾಟಕಸ್ಥರೆಲ್ಲರೂ ಓದಲೇಬೇಕಾದ ಮತ್ತು ಮನನ ಮಾಡಿಕೊಳ್ಳಬೇಕಾದ(ಇದಕ್ಕೆ ಸ್ವಲ್ಪ ತಯಾರಿ ಮತ್ತು ಮನಸ್ಸು ಬೇಕಾಗುತ್ತದೆ) ಚಾರಿತ್ರಿಕ ಲೇಖನ ಅದಾಗಿದೆ. ಅದರಲ್ಲಿ ಅವರು ಸೂಕ್ಷ್ಮವಾಗಿ ಅಷ್ಟೇ ಗಟ್ಟಿಯಾಗಿ ಸಂಸ್ಕೃತದ ಪರವಾದ ವಿಚಾರವನ್ನು ತಿರಸ್ಕರಿಸಿದ್ದಾರೆ.

ಸಾಮಾಜಿಕತೆ ಎಂಬ ಮೈಲಿಗೆ.

ಸಂಸ್ಕೃತವಾದಿಗಳಿಗೂ ಮತ್ತು ಅದರ ಅಗತ್ಯವಿಲ್ಲವೆಂಬ ವಾದಿಗಳಿಗೂ ನಡುವೆ ಇರುವ ಪ್ರಮುಖ ಭಿನ್ನತೆಯೆಂದರೆ ಕೆ.ವಿ.ನಾ. ಹೇಳುವಂತೆ ಅದು ಸಾಮಾಜಿಕತೆಗೆ ಸಂಬಂಧಿಸಿದೆ. ನಮಗೆ ಬೇಕಿರಲಿ ಇಲ್ಲದಿರಲಿ ನುಡಿಗೆ ಸಾಮಾಜಿಕತೆಯಿಂದ ಮುಕ್ತಿಯಿಲ್ಲ. ಅದು ತನ್ನ ಅಸ್ತಿತ್ವವನ್ನು ಮತ್ತು ಪ್ರಸ್ತುತತೆಯನ್ನು ಸಮಾಜದ ಚೌಕಟ್ಟಿನಲ್ಲಿ ಪಡೆದುಕೊಳ್ಳಬೇಕು. ಆದರೆ ಅದನ್ನು ನಮ್ಮ ಸಂಸ್ಕೃತವಾದಿಗಳು ಒಪ್ಪಲು ಸಿದ್ಧರಿಲ್ಲವಲ್ಲ! ಎಲ್ಲವೂ ಶಬ್ದದಲ್ಲೇ ಇರುತ್ತದೆಯೆಂದು. ಎಲ್ಲವೂ ನುಡಿಯಲ್ಲೇ ಅಡಗಿಕೊಂಡಿರುತ್ತದೆಯೆಂದು ಅವರು ಪ್ರತಿಪಾದಿಸುತ್ತಿದ್ದಾರೆ ಈ ಬಗ್ಗೆ ಸಂಸ್ಕೃತದ ಅತ್ಯಂತ ತೀವ್ರ ಪ್ರತಿಪಾದಕರೊಬ್ಬರ ಪ್ರಕಾರ 'ನೀರಿನ ಶಬ್ದಾರ್ಥ ಮೌಲ್ಯವಾಗಲಿ, ಅದರ ಪದಾರ್ಥ ಮೌಲ್ಯವಾಗಲಿ ಯಾವ ಕಾಲಕ್ಕೂ ಮಾರ್ಪಡದು' ಎಂದು ಷರಾ ಬರೆದಿದ್ದಾರೆ.

ಕೆ.ವಿ.ನಾ. ಹೇಳುವಂತೆ ತಿಳುವಳಿಕೆಯೆನ್ನುವುದು. ಜ್ಞಾನವೆನ್ನುವುದು ನುಡಿಯಲ್ಲಿ ಮಂಡಿತವಾಗುತ್ತದೆ ವಿನಾ ಅದು ಅದರಲ್ಲೇ ಇರುವುದಿಲ್ಲ. ಹಾಗೆ ನುಡಿಯಲ್ಲೇ ಇರುತ್ತದೆಯೆಂದು ಮಡಿ ಆಚರಿಸಿಕೊಂಡು ಬಂದಿದ್ದರಿಂದಲೇ ಸಂಸ್ಕೃತವು ಇಂದು ಸತ್ತ ಭಾಷೆಯಾಗಿ ಬಿಟ್ಟಿದೆ. ಇದು ಸುಮ್ಮಸುಮ್ಮನೆ ಸತ್ತ ಭಾಷೆಯಾಗಲಿಲ್ಲ. ಅದನ್ನು ನಮ್ಮ ಕರ್ಮಠರು ಸಾಯಿಸಿ ಈಗ ಅದರ ಹೆಣವನ್ನು ಇಟ್ಟುಕೊಂಡು ಪ್ರಲಾಪಿಸುತ್ತಿದ್ದಾರೆ. ಈ ಮಡಿಯನ್ನು ಸಂಸ್ಕೃತಕ್ಕೆ ಆರೋಪಿಸಿದ್ದರಿಂದ, ವಿಚಾರವು ಭಾಷೆಯಲ್ಲಿರುತ್ತದೆ ಎಂದು ಭಾವಿಸಿ ಅದಕ್ಕೆ ರಕ್ಷಣೆಯ ಗೋಡೆಗಳನ್ನು ಕಟ್ಟುತ್ತಾ ಬಂದಿದ್ದರಿಂದಲೇ, ಅಂತಹ ಹುನ್ನಾರಗಳನ್ನು ಬೆಳೆಸುತ್ತಾ ಬಂದಿದ್ದರಿಂದ ಅದು ತನ್ನ ನಡೆಯನ್ನು ಕಳೆದುಕೊಂಡು ಬಿಟ್ಟಿತು. ಈಗಲೂ ಅದಕ್ಕೆ ಸಂಸ್ಕೃತವಾದಿಗಳು ನಡೆಯು ದೊರೆಯುವಂತೆ ಮಾಡಲು ಸಿದ್ಧರಿಲ್ಲ. ಅದು ನಡೆಯನ್ನು ಕಳೆದುಕೊಂಡು ನಿಂತ ನೀರಾಗಿ ಮಲೆತು (ಕೊಳೆತು)ನಾರುತ್ತಿರುವುದು ನಮಗೆಲ್ಲ ತಿಳಿದ ಸಂಗತಿಯೇ ಆಗಿದೆ.

ನುಡಿಯೊಂದು ಸಮಾಜದಲ್ಲಿ ಸಂಭವಿಸಬೇಕಾದ ಸಂಗತಿಯಾಗಿದೆ. ಅದು ಶೂನ್ಯದಲ್ಲಿ ಸಂಭವಿಸುವುದಿಲ್ಲ. ನಿಜ, ಶಬ್ದವೊಂದರ ಅರ್ಥವು ಬದಲಾಗುತ್ತಾ ನಡೆಯುತ್ತದೆ. ಒಂದು ಕಾಲಕ್ಕಿದ್ದ ಅರ್ಥ ಮತ್ತೊಂದು ಕಾಲದಲ್ಲಿ ಬಿದ್ದು ಹೋಗುತ್ತದೆ. ಆದರೆ ಶಬ್ದವಿರುತ್ತದೆ. ಇದು ಸರಿ. ಆದರೆ ಚರಿತ್ರೆಯಲ್ಲಿ ಬದುಕಬೇಕಾಗಿರುವ ನಾವು ಅರ್ಥವನ್ನು ಬಿಟ್ಟು ಬರೀ ಶಬ್ದವನ್ನು ನೆಮ್ಮಿಕೊಂಡಿರಲು ಸಾಧ್ಯವಿಲ್ಲ. ನನಗೆ ಶಬ್ದವೊಂದರ ಅರ್ಥ ನನ್ನ ಸಂದರ್ಭದಲ್ಲಿ ಅರ್ಥವಾಗದಿದ್ದರೆ ಬರೀ ಶಬ್ದವನ್ನು ಕಟ್ಟಿಕೊಂಡು ಮಾಡುವುದೇನು? ಆದ್ದರಿಂದ ನುಡಿಯಲ್ಲಿ ಶಬ್ದವಿರುತ್ತದೆ. ನನಗೆ ಅದರ ಆವತ್ತಿನ ಅರ್ಥ ಮುಖ್ಯವಾಗುತ್ತದೆ. ಉದಾಹರಣೆಗೆ ಬಸವಣ್ಣ 'ಜಲವೊಂದೆ ಶೌಚಾಚಮನಕ್ಕೆ' ಎನ್ನುವ ಮಾತಾಡಿದ್ದಾನೆ. ಜಲಕ್ಕೆ 'ಮಡಿ-ಮೈಲಿಗೆ'ಯ ಮೈಲಿಗೆ ಇರುತ್ತದೆ. ಆದರೆ ನೀರಿಗೆ ಯಾವ ಮೈಲಿಗೆಯೂ ಇರುವುದಿಲ್ಲ. ಶೌಚಕ್ಕೂ, ಆಚಮನಕ್ಕೂ ಬಳಸುವುದು ನೀರು ತಾನೆ! ಆದರೆ ಮಡಿವಂತರಿಗೆ ಶೌಚಕ್ಕೆ ಬಳಸುವುದು ನೀರಾದರೆ ಆಚಮನಕ್ಕೆ ಬಳಸುವುದು ಜಲ ತಾನೆ!. ನಿಜ, ಇಲ್ಲಿ ಬಸವಣ್ಣ ಜಲ, ಶೌಚ, ಆಚಮನ ಎಂಬ ಮೂರು ಸಂಸ್ಕೃತ ಪದಗಳನ್ನು ಬಳಸಿದ್ದಾನೆ.

> **ಸಂಸ್ಕೃತವಾದಿಗಳಿಗೂ ಮತ್ತು ಅದರ ಅಗತ್ಯವಿಲ್ಲವೆಂಬ ವಾದಿಗಳಿಗೂ ನಡುವೆ ಇರುವ ಪ್ರಮುಖ ಭಿನ್ನತೆಯೆಂದರೆ ಕೆ.ವಿ.ನಾ, ಹೇಳುವಂತೆ ಅದು ಸಾಮಾಜಿಕತೆಗೆ ಸಂಬಂಧಿಸಿದೆ. ನಮಗೆ ಬೇಕಿರಲಿ ಇಲ್ಲದಿರಲಿ ನುಡಿಗೆ ಸಾಮಾಜಿಕತೆಯಿಂದ ಮುಕ್ತಿಯಿಲ್ಲ. ಅದು ತನ್ನ ಅಸ್ತಿತ್ವವನ್ನು– ಪ್ರಸ್ತುತತೆಯನ್ನು ಸಮಾಜದ ಚೌಕಟ್ಟಿನಲ್ಲಿ ಪಡೆದುಕೊಳ್ಳಬೇಕು. ಆದರೆ ಅದನ್ನು ನಮ್ಮ ಸಂಸ್ಕೃತವಾದಿಗಳು ಒಪ್ಪಲು ಸಿದ್ಧರಿಲ್ಲವಲ್ಲ! ಎಲ್ಲವೂ ಶಬ್ದದಲ್ಲೇ ಇರುತ್ತದೆಯೆಂದು, ಎಲ್ಲವೂ ನುಡಿಯಲ್ಲೇ ಅಡಗಿಕೊಂಡಿರುತ್ತದೆಯೆಂದು ಅವರು ಪ್ರತಿಪಾದಿಸುತ್ತಿದ್ದಾರೆ ಈ ಬಗ್ಗೆ ಸಂಸ್ಕೃತದ ಅತ್ಯಂತ ತೀವ್ರ ಪ್ರತಿಪಾದಕ ರೊಬ್ಬರ ಪ್ರಕಾರ 'ನೀರಿನ ಶಬ್ದಾರ್ಥ ಮೌಲ್ಯವಾಗಲಿ, ಅದರ ಪದಾರ್ಥ ಮೌಲ್ಯವಾಗಲಿ ಯಾವ ಕಾಲಕ್ಕೂ ಮಾರ್ಪಡದು' ಎಂದು ಷರಾ ಬರೆದಿದ್ದಾರೆ.**

ಇದರ ಆಧಾರದ ಮೇಲೆ ಸಂಸ್ಕೃತದ ಸಮರ್ಥನೆ ಮಾಡತೊಡಗಿದರೆ ಅವರಿಗೆ ಬಸವಣ್ಣ ಅರ್ಥವಾಗಿಲ್ಲವೆಂದು, ಬಸವಣ್ಣನ ಆಶಯ ತಿಳಿದಿಲ್ಲವೆಂದು ತಿಳಿಯಬೇಕಾಗುತ್ತದೆ. ಈ ವಚನವನ್ನು ಬಸವಣ್ಣ ಯಾರನ್ನು ಉದ್ದೇಶವಾಗಿಟ್ಟುಕೊಂಡು ಬರೆದಿದ್ದಾನೋ ಅವರಿಗೆ ಗಟ್ಟಿಯಾಗಿ ತಾಕುವಂತೆ ಮಾಡಲು ಅವನು ಸಂಸ್ಕೃತ ಪದಗಳನ್ನು ಇಲ್ಲಿ ಬಳಸಿದ್ದಾನೆ. ಇಲ್ಲಿ ಬಸವಣ್ಣ ಮುಖ್ಯವಾಗಿ ನೀರಿಗೆ ಸಂಬಂಧಿಸಿದ ಪಾವಿತ್ರತೆಯನ್ನು ಅಪವಿತ್ರಗೊಳಿಸುತ್ತಿದ್ದಾನೆ. ಒಟ್ಟು ಆಶಯವನ್ನು ಹಿಡಿಯದೆ ಯಾವುದೋ ವಚನವನ್ನು, ವಚನವೊಂದರ ಪದವನ್ನು ಹಿಡಿದುಕೊಂಡು ನಡೆಸುವ ಚರ್ಚೆಗೆ ಯಾವುದೇ ಅರ್ಥವಿರುವುದಿಲ್ಲ. 'ಅರಿವು ಎಲ್ಲರಿಗೂ ದೊರೆಕಬೇಕೆಂಬುದು ಇಂದಿನ ನಡವಳಿಕೆ' ಎಂದು ಕೆವಿನಾ ಹೇಳಿದಾಗ ಅವರು ನುಡಿಯು ಸಾಮಾಜಿಕವಾಗುವ ಪರಿಯನ್ನು ಕುರಿತೇ ಹೇಳುತ್ತಿದ್ದಾರೆ. ಜಲಕ್ಕೆ ನೀರಿನಂತೆ ಸಾಮಾಜಿಕತೆ ಹೇಗೆ ಇಲ್ಲವೋ ಅದೇ ರೀತಿಯಲ್ಲಿ ಸಂಸ್ಕೃತಕ್ಕೆ ಸಾಮಾಜಿಕತೆಯಿಲ್ಲ.

ಅರಿವಿನ ಉತ್ಪಾದನೆ ಹೇಗೆ ನಡೆಯುತ್ತದೆ?

ಅರಿವು ಎಂಬುದು ಸಿದ್ಧವಾದ ಸರಕಲ್ಲ. ಅದು ಜನರು ಲೋಕದಲ್ಲಿ ಅನುಸಂಧಾನ ನಡೆಸುತ್ತಾ ಕಟ್ಟುತ್ತಿರುತ್ತಾರೆ. ಅದು ಚರಿತ್ರೆಯ ಒಡಲೊಳಗಿಂದ ಮೂಡಿ ಬರುವ ಫಲವಾಗಿದೆ. ಇದು ಹುಟ್ಟಿದ ಸಂಗತಿಯಲ್ಲ. ಅದು ಕಟ್ಟಿದ ಒಂದು ಸಂಗತಿ. ಚರಿತ್ರೆಗೆ ಕುರುಡಾಗಿರುವವರು ಮಾತ್ರ ಇಂದು ಸಂಸ್ಕೃತ ವಿಶ್ವವಿದ್ಯಾಲಯದ ಬಗ್ಗೆ ಉಗ್ರವಾದ ವಾದವನ್ನು ಮಂಡಿಸಬಹುದು. ಅದಿರಲಿ. ಇಡೀ ವಿಶ್ವದ ಅರಿವೆಂಬ ಅರಿವೆಲ್ಲ ಸಂಸ್ಕೃತದಲ್ಲಿದೆಯೆಂಬುದು ಕೇವಲವೊಂದು ವಾದ. ಅದು ಒಂದು ಕಾಲಕ್ಕೆ ಜನರು ಕಟ್ಟಿದ ಒಂದು ಸಂಗತಿ. ಅದೀಗ ನಡೆಯನ್ನು ಕಳೆದುಕೊಂಡು ಬಿಟ್ಟಿದೆ. ಕೆ.ವಿ.ನಾ. ಹೇಳುತ್ತಿರುವಂತೆ 'ನಡೆ'ಯನ್ನು ಕಳೆದುಕೊಂಡ ಸಂಗತಿಗಳು ಮಾತ್ರ ಹೊತ್ತಗೆಗಳನ್ನು ಸೇರಿಕೊಂಡು ಬಿಡುತ್ತವೆ.

ಈ ಬಗೆಯ ನಡೆ ಕಳೆದುಕೊಂಡ ಸಂಗತಿಗಳಿಂದ ಜನತೆಗೆ ಆಗಬೇಕಾದುದೇನು ಎಂಬುದು ಇಲ್ಲಿನ ಪ್ರಶ್ನೆ. ಈ ಬಗೆಯಲ್ಲಿ ಅರಿವನ್ನು ಕಟ್ಟಲು ನಮಗೆ ನಾವು ದಿನನಿತ್ಯ ಏಗಾಡುವ ನುಡಿಯು ಬೇಕಾಗುತ್ತದೆ. ಏಕೆಂದರೆ ಅರಿವು ಎಂಬುದು ಕಟ್ಟಬೇಕಾಗಿರುವ ಸಂಗತಿ. ನಮ್ಮ ಸಂಸ್ಕೃತದಲ್ಲಿ ಅಟಿದೆ-ಇಟಿದೆ ಎಂದೆಲ್ಲಾ ಹಲುಬುವ ವರು ಆಲದ ಮರಕ್ಕೆ ನೇತು ಬೀಳುವವರಾಗಿರುತ್ತಾರೆ. ಇಲ್ಲಿ ನಡೆ ಸಾಧ್ಯವಿಲ್ಲ. ಅರಿವಿನ ಉತ್ಪಾದನೆಯೆಂಬುದು ನಡೆಯಲ್ಲಿ ಒಂದು ಸಂಗತಿಯೇ ವಿನಾ ಕಟ್ಟುಗಳಲ್ಲಿ ಅಥವಾ ಬಿಲಗಳಲ್ಲಿ ಕೂತಿರುವ ಸಂಗತಿಯಲ್ಲ.

ದಿನನಿತ್ಯದ ಜಂಜಾಟವನ್ನು ಎದುರಿಸಬೇಕಾದ ಜನರು ಲೋಕ ವ್ಯವಹಾರದಲ್ಲಿ ದಿನ ನಿತ್ಯ ಪ್ರಕೃತಿಯೊಂದಿಗೆ ನಡೆಸುವ ಪ್ರಯೋಗ-ಪ್ರಮಾದಗಳ ಮೂಲಕ ಪಡೆಯುವ ಅನುಭವದಿಂದ ಏನೋ ಒಂದನ್ನು ಕಂಡು ಹಿಡಿಯುತ್ತಾರೆ. ಕೆ.ವಿ.ನಾ.ಸರಿಯಾಗಿ ಹೇಳುವಂತೆ ತಿಳುವಳಿಕೆ ಎನ್ನುವುದು ದಿನದಿನದ ಬದುಕಿನೊಳಗೆ ಹೆಣೆದುಕೊಂಡಿರುತ್ತದೆ. ಹೀಗೆ ಜನರು ಕಂಡು ಹಿಡಿದ ಸಂಗತಿಗಳು ಹೊತ್ತಗೆ ಸೇರುತ್ತವೆ. ಇದು ಅರಿವು ಉತ್ಪಾದನೆಯಾಗುವ ಪರಿ. ಹೊತ್ತಗೆಗಳಲ್ಲಿರುವುದೇ ಅರಿವಲ್ಲ. ಅದು ಸಾರ್ವತ್ರಿಕವೂ ಅಲ್ಲ.

ಪ್ರಗತಿಗಾಮಿಗಳಾಗಲು ಪರದಾಟ!

ಅನೂಚಾನವಾಗಿ ಪ್ರತಿಗಾಮಿಗಳಾಗಿಯೇ ಬೆಳೆದುಕೊಂಡು ಬಂದಿರುವ ಸಂಸ್ಕೃತವಾದಿಗಳು ಈಗ ಹೂಡಿರುವ ಹುನ್ನಾರವೆಂದರೆ 'ಸಾಂಪ್ರದಾಯಿಕವಾಗಿ ಸಂಸ್ಕೃತದಿಂದ ಶೂದ್ರರನ್ನು ಮತ್ತು ದಲಿತರನ್ನು ವಂಚಿಸಲಾಗಿದೆ. ಇನ್ನು ಅದು ನಡೆಯಬಾರದು, ಸಂಸ್ಕೃತದಲ್ಲಿರುವುದೆಲ್ಲಾ ದಲಿತರಿಗೆ ಮತ್ತು ಶೂದ್ರರಿಗೆ ದೊರೆಯುವಂತಾಗಬೇಕು' ಎಂದು ಒತ್ತಾಯಿಸುತ್ತಿದ್ದಾರೆ. ತಮ್ಮ ಪ್ರಗತಿಗಾಮಿತನಕ್ಕೆ ಇದನ್ನು ಮಾನದಂಡವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ಸಂಸ್ಕೃತ ವಿಶ್ವವಿದ್ಯಾಲಯ ಬೇಕೆಂದು ವಾದಿಸುತ್ತಿದ್ದಾರೆ. ಇದು ತುಂಬಾ ವಿಚಿತ್ರವಾಗಿ ಕಾಣುತ್ತದೆ. ಆದರೆ ಅದು ಹಾಗೆ ಕಾಣಬೇಕಾಗಿಲ್ಲ. ಏಕೆಂದರೆ ತಾವು ಹೇಳುತ್ತಿರುವುದೆಲ್ಲಾ ಒಂದು ತಂತ್ರ ಎಂಬುದು ಅವರಿಗೆ ಗೊತ್ತಿದೆ. ಅವರ ಮುಂದಿರುವ ಪ್ರಶ್ನೆಯೆಂದರೆ ಪ್ರಗತಿಗಾಮಿಗಳ ಮುಖವಾಡ ಧರಿಸುವುದು ಹೇಗೆ ಎಂಬುದಾಗಿದೆ. ಸಂಸ್ಕೃತವನ್ನು ದಲಿತರಿಗೂ ಕಲಿಸುವ ಬಗ್ಗೆ ವೈದಿಕರು ಒತ್ತಾಯಿಸುವುದು ನಗೆಯುಕ್ಕಿಸುತ್ತದೆ!

ಈ ಸಂಸ್ಕೃತವನ್ನು ಅದರ ಪಾಲಕರು–ಪೋಷಕರು

[illegible] ಕಲಿಯಲು ಬಿಡ ಲಿಲ್ಲ. ಇಲ್ಲಿ ಪ್ರಶ್ನೆಯೆಂದರೆ ದಲಿತರಿಗೆ ಮತ್ತು ಶೂದ್ರರಿಗೆ ಸಂಸ್ಕೃತದ ಜ್ಞಾನ ಯಾಕೆ ಬೇಕು? ಅವರು ಅದನ್ನು ಕೇಳುತ್ತಿದ್ದಾರೇನು? ಅವರಿಗೆ ಏನು ಬೇಕು ಎಂಬುದನ್ನು ನಿರ್ಧರಿಸಲು ಇವರು ಯಾರು? ಅವರ ಪರವಾಗಿ ವಾದಿಸುವ ಹಕ್ಕನ್ನು ಇವರಿಗೆ ಕೊಟ್ಟವರು ಯಾರು? ಅವರಿಗೆ ಯಾವ ಬಗೆಯ ಜ್ಞಾನ ಬೇಕೆಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಅದನ್ನು ವೈದಿಕರಿಂದ ಅವರು ಕಲಿಯಬೇಕಾಗಿಲ್ಲ. ಒಂದು ಕಾಲಕ್ಕೆ ಅದನ್ನು ಶೂದ್ರರಿಗೆ ಮತ್ತು ದಲಿತರಿಗೆ ನಿರಾಕರಿಸಿದವರೂ ಅವರೇ, ಈಗ ಅದನ್ನು ಅವರು ಕಲಿಯಬೇಕೆಂದು ಒತ್ತಾಯಿಸುತ್ತಿರುವವರೂ ಅವರೇ. ಎಲ್ಲ ಕಾಲಕ್ಕೂ ತಾವೇ ಯಜಮಾನರು ಎನ್ನುವಂತೆ ಅವರು ಮಾತನಾಡುತ್ತಿದ್ದಾರೆ. ಇದು ಯಾಜಮಾನ್ಯ ಸಂಸ್ಕೃತಿಯ ಆಕ್ರಮಣಕ್ಕೆ ನಿದರ್ಶನವಾಗಿದೆ.

ದಲಿತರಿಗೆ ಮತ್ತು ಶೂದ್ರರಿಗೆ ಸಂಸ್ಕೃತ ವಿಶ್ವವಿದ್ಯಾಲಯದಿಂದ ಆಗಬೇಕಾದುದೇನಿಲ್ಲ. ಸಂಸ್ಕೃತವು ಕನ್ನಡಕ್ಕೆ ತೊಡಕಾಗಿ ಪರಿಣಮಿಸಿದೆಯೇ ವಿನಾ ಚಾಲಕ ಶಕ್ತಿಯಾಗಿಲ್ಲ. ಈಗಾಗಲೇ ಜನರು ಯಾವ ಭಾಷೆಯಲ್ಲಿ ನಡೆ ಸಾಧಿಸಿಕೊಂಡಿದ್ದಾರೋ ಅದರಲ್ಲಿ ಅವರಿಗೆ ಬೇಕಾದುದನ್ನು ನೀಡುವುದು ಸರ್ಕಾರಗಳ ಕೆಲಸವಾಗಬೇಕು. ಸಂಸ್ಕೃತ ವಿಶ್ವವಿದ್ಯಾಲಯ ಬೇಕೆಂದು ಜನರು ಕೇಳಿಲ್ಲ. ಸರ್ಕಾರವು ತನ್ನಷ್ಟಕ್ಕೆ ತಾನು ಜನರಿಗೆ ಇದು ಬೇಕೆಂದು ನಿರ್ಧರಿಸಿ ಹೊರಡುವುದು ಜನತಂತ್ರಕ್ಕೆ ವಿರೋಧವಾದುದಾಗಿದೆ.

ವಿಶ್ವವಿದ್ಯಾಲಯದಲ್ಲಿ ವಿದ್ಯೆಯ ಸೃಷ್ಟಿ ನಡೆಯಬೇಕೆ ವಿನಾ ಪರಂಪರೆಯ ಗುಣಗಾನವಲ್ಲ, ಏಣಿಶ್ರೇಣಿಯ ಆರಾಧನೆಯೂ ಅಲ್ಲ, ಅಸಮಾನತೆಯ ವೈಭವೀಕರಣವೂ ಅಲ್ಲ. ನಮ್ಮಲ್ಲಿರುವ ವಿಶ್ವವಿದ್ಯಾಲಯಗಳೆಲ್ಲಾ ಜನರ, ದುಡಿಯುವ ವರ್ಗದ, ರೈತರ, ಪರಿಶಿಷ್ಟರ ಮತ್ತು ಮಹಿಳೆಯರ ಒಂದಲ್ಲ ಒಂದು ಸಂಗತಿ ಬಗ್ಗೆ, ಒಂದಲ್ಲ ಒಂದು ರೀತಿಯಲ್ಲಿ ಬೆಳಕು ಚೆಲ್ಲುವ ಕೆಲಸ ಮಾಡುತ್ತಿವೆ. ನಮ್ಮ ನಾಡಿನ 65 ಲಕ್ಷ ಭೂರಹಿತ ದಿನಗೂಲಿ ದುಡಿಮೆಗಾರರಿಗೆ ಸಂಸ್ಕೃತವು ಮಂತ್ರಗಳನ್ನು ನೀಡಬಹುದೇ ವಿನಾ ಅನ್ನವನ್ನು ನೀಡಲು ಸಾಧ್ಯವಿಲ್ಲ(ಅದರಿಂದ ಮಾವಿನಕಾಯಿ ಬೀಳುವುದಿಲ್ಲ). ಹಾಗಾದರೆ ಉಳಿದ ವಿಶ್ವವಿದ್ಯಾಲಯಗಳು ಅನ್ನವನ್ನು ನೀಡುತ್ತಿವೆಯೇ ಎಂದು ಶತಾವಧಾನಿ ಆರ್. ಗಣೇಶ್ ಕೇಳಬಹುದು.

ಕನ್ನಡ ವಿಶ್ವವಿದ್ಯಾಲಯವು ದುಡಿಮೆಗಾರರಿಗೆ ಏನು ನೀಡುತ್ತಿದೆಯೆಂದು ಸವಾಲು ಹಾಕಬಹುದು. ಇದು ಸರಿಯಾದ ಪ್ರಶ್ನೆಯಾಗಿದೆ. ಆದರೆ ನಮ್ಮ ವಿಶ್ವವಿದ್ಯಾಲಯಗಳು ನೇರವಾಗಿ ದುಡಿಯುವರ್ಗಕ್ಕೆ ಏನೂ ಮಾಡದಿರಬಹುದು. ಅದರೆ ಅವರ ಸಂಕಷ್ಟಕ್ಕೆ, ಅವರ ದುಮ್ಮಾನಗಳಿಗೆ, ಅವರ ದೈನಂದಿನ ದಂದುಗಗಳಿಗೆ ಅವು ತಮ್ಮದೇ ನೆಲೆಯಲ್ಲಿ ಸ್ಪಂದಿಸುತ್ತಿವೆ, ಧ್ವನಿ ನೀಡುತ್ತಿವೆ. ಅಂತಹ ವಿಷಯ ಕುರಿತಂತೆ ಕಮ್ಮಟಗಳನ್ನು ನಡೆಸುತ್ತಿವೆ, ತರಬೇತಿ ಹಮ್ಮಿಕೊಳ್ಳುತ್ತಿವೆ, ವಿಚಾರ ಸಂಕಿರಣ ನಡೆಸುತ್ತಿವೆ, ಅಧ್ಯಯನ ಪ್ರಬಂಧ ಪ್ರಕಟಿಸುತ್ತವೆ. ಜನರಲ್ಲಿ ಜಾಗೃತಿ ಮೂಡಿಸುತ್ತಿವೆ. ಈ ಬಗೆಯ ಸಂಗತಿಗಳನ್ನು ರಾಜಕೀಕರಣಗೊಳಿಸುತ್ತಿವೆ. ಇದು ಬಹಳ ಮುಖ್ಯವಾದ ಸಂಗತಿಯಾಗಿದೆ.

ನಮ್ಮ ದೇಶದಲ್ಲಿ ಹಿಂದುಳಿದ ವರ್ಗಗಳ ಚಳುವಳಿ ಕಟ್ಟುವಲ್ಲಿ, ದಲಿತ ಹೋರಾಟ ಸಂಘಟಿಸುವಲ್ಲಿ, ಕಾರ್ಮಿಕರ ಸಂಘಗಳನ್ನು ಬೆಳೆಸುವಲ್ಲಿ ನಮ್ಮ ವಿಶ್ವವಿದ್ಯಾಲಯಗಳ ವಿದ್ವಾಂಸರು ಅಪಾರ ಕಾಣಿಕೆ ನೀಡಿದ್ದಾರೆ. ಉದಾಹರಣೆಗೆ ಉದ್ಯೋಗದ ಹಕ್ಕನ್ನು ಒದಗಿಸಿದ ಎನ್‌ಆರ್‌ಈಜಿಎ ಅಂತಹ ಶಾಸನಾತ್ಮಕ ಭದ್ರತೆಯನ್ನು ನೀಡುವಲ್ಲಿ ವಿದ್ವಾಸರಾದ ಜೀನ್ ಡ್ರೇಜ್ ಮತ್ತು ಮಿಹಿರ್ ಶಹಾ ಮತ್ತು ಅವರ ತಂಡದ ಪಾತ್ರ ಪ್ರಮುಖವಾಗಿದೆ. ಇದೆಲ್ಲ ಈ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಾಧ್ಯವಾಗುತ್ತದೆಯೇ?. ಅಲ್ಲಿ ಯಾವುದನ್ನು ರಾಜಕೀಕರಣಗೊಳಿಸಲಾಗುತ್ತದೆ?. ಯಾರ ಹಿತಾಸಕ್ತಿಗಳನ್ನು ಕಾಪಿಡಲಾಗುತ್ತದೆ? ಭೈರಪ್ಪನವರಿಗೆ, ಗಣೇಶ್ ಅವರಿಗೆ ಇದರಲ್ಲಿ ಮಾರ್ಕ್ಸಿಸ್ಟರ ವಾಸನೆ ಮೂಗಿಗೆ ಬಡಿದು ಬಿಡುತ್ತದೆ. ಬಡವರಿಗೆ, ಕೂಲಿಕಾರರಿಗೆ, ಮಹಿಳೆಯರಿಗೆ, ಪರಿಶಿಷ್ಟರಿಗೆ ಧ್ವನಿ ನೀಡುವುದಾದರೆ, ಅವರ ಸಂಘಟನೆ ಮಾಡುವುದಾದರೆ ಕಮ್ಯುನಿಸ್ಟರೇ ಆಗಲಿ ಬಿಡಿ! ಆದರೆ ಸಂಸ್ಕೃತ ವಿವಿಯಲ್ಲಿ ಯಾರ ಹಿತ ಕಾಯಲಾಗುತ್ತದೆ? ಯಾರ ಪರವಾಗಿ ಅದು ಕೆಲಸ ಮಾಡುತ್ತದೆ? ಯಾವ ಸಂಗತಿಗಳನ್ನು ಇಲ್ಲಿ ರಾಜಕೀಕರಣಗೊಳಿಸಲಾಗುತ್ತದೆ?.

ಈ ಎಲ್ಲ ಪ್ರಶ್ನೆಗಳಿಗೆ ಆರ್.ಗಣೇಶ್ ಅವರು ತಮ್ಮ ವಿಜಯ ಕರ್ನಾಟಕ ಪತ್ರಿಕೆಯ ಲೇಖನದಲ್ಲಿ ಸ್ಪಷ್ಟವಾಗಿ ಉತ್ತರಿಸಿದ್ದಾರೆ. ಅರ್ಚಕರನ್ನು, ಯಾಜ್ಞಿಕರನ್ನು, ಪುರೋಹಿತರನ್ನು, ಜ್ಯೋತಿಷಿಗಳನ್ನು ಸಿದ್ಧಪಡಿಸುವುದು ಸರ್ಕಾರದ ಕೆಲಸವೆಂದು ಮುಕ್ತವಾಗಿ ಹೇಳಿದ್ದಾರೆ. ಇದು ಸಂಸ್ಕೃತ ವಿಶ್ವವಿದ್ಯಾಲಯ ಆರಂಭವಾದರೆ ಅಲ್ಲಿ ನಡೆಯುವ ರಾಜಕಾರಣ. ಈ ಬಗ್ಗೆ ಡಾ.ಕೆ.ರಾಘವೇಂದ್ರರಾವ್ ಸರಿಯಾಗಿ ಗುರುತಿಸಿರುವಂತೆ ಇಲ್ಲಿರುವ ಪ್ರಶ್ನೆ ಸಂಸ್ಕೃತದ ಅಧ್ಯಯನದ ಅಗತ್ಯವನ್ನು ಕುರಿತದ್ದಲ್ಲ. ಅವರ ಪ್ರಶ್ನೆಯೆಂದರೆ ಈ ವಿಶ್ವವಿದ್ಯಾಲಯದ ಸ್ಥಾಪನೆಗೆ ಸುಗ್ರೀವಾಜ್ಞೆ ಮೂಲಕ ಸರ್ಕಾರವು ತೆಗೆದುಕೊಂಡಿರುವ ತೀರ್ಮಾನದ ಹಿನ್ನೆಲೆಯಲ್ಲಿ ಇದನ್ನು ನೋಡಿದಾಗ ನಾವು 'ಆಧುನಿಕ, ವೈಚಾರಿಕ ಮತ್ತು ವೈಜ್ಞಾನಿಕ ಸಮುದಾಯದಿಂದ ಕೂಡಿದ ಉದಾರವಾದಿ ಜನತಂತ್ರವನ್ನು ಆಧರಿಸಿದ ರಾಷ್ಟ್ರವನ್ನು ಕಟ್ಟಬೇಕೆಂದು ಹೊರಟದ್ದೇವೆಯೋ ಅಥವಾ ಮಧ್ಯಕಾಲೀನ, ಪಾಳೆಗಾರಿಕೆಯಿಂದ ಕೂಡಿದ, ವಿಕೃತ, ಕೋಮುವಾದಿ, ಕರ್ಮಠ, ಪ್ರತಿಗಾಮಿ ರಾಷ್ಟ್ರವನ್ನು ಕಟ್ಟಬೇಕೆಂದು ಹೊರಟದ್ದೇವೆಯೋ' ಎಂಬುದರ ಬಗ್ಗೆ ಗೊಂದಲ ಉಂಟಾಗಿಬಿಡುತ್ತದೆ.

ದಲಿತರಿಗೆ ಮತ್ತು ಶೂದ್ರರಿಗೆ ಸಂಸ್ಕೃತ ವಿಶ್ವವಿದ್ಯಾಲಯದಿಂದ ಆಗಬೇಕಾದುದೇನಿಲ್ಲ. ಸಂಸ್ಕೃತವು ಕನ್ನಡಕ್ಕೆ ತೊಡಕಾಗಿ ಪರಿಣಮಿಸಿದೆಯೇ ವಿನಾ ಚಾಲಕ ಶಕ್ತಿಯಾಗಿಲ್ಲ. ಈಗಾಗಲೇ ಜನರು ಯಾವ ಭಾಷೆಯಲ್ಲಿ ನಡೆ ಸಾಧಿಸಿಕೊಂಡಿದ್ದಾರೋ ಅದರಲ್ಲಿ ಅವರಿಗೆ ಬೇಕಾದುದನ್ನು ನೀಡುವುದು ಸರ್ಕಾರಗಳ ಕೆಲಸವಾಗಬೇಕು. ಸಂಸ್ಕೃತ ವಿಶ್ವವಿದ್ಯಾಲಯ ಬೇಕೆಂದು ಜನರು ಕೇಳಿಲ್ಲ. ಸರ್ಕಾರವು ತನ್ನಷ್ಟಕ್ಕೆ ತಾನು ಜನರಿಗೆ ಇದು ಬೇಕೆಂದು ನಿರ್ಧರಿಸಿ ಹೊರಡುವುದು ಜನತಂತ್ರಕ್ಕೆ ವಿರೋಧವಾದುದಾಗಿದೆ. ವಿಶ್ವವಿದ್ಯಾಲಯದಲ್ಲಿ ವಿದ್ಯೆಯ ಸೃಷ್ಟಿ ನಡೆಯಬೇಕೆ ವಿನಾ ಪರಂಪರೆಯ ಗುಣಗಾನವಲ್ಲ, ಏಣಿಶ್ರೇಣಿಯ ಆರಾಧನೆಯೂ ಅಲ್ಲ, ಅಸಮಾನತೆಯ ವೈಭವೀಕರಣವೂ ಅಲ್ಲ.

ನಿಜ, ಉಪಯುಕ್ತತೆಯೇ ಎಲ್ಲದಕ್ಕೂ ಮಾನದಂಡವಾಗಬೇಕಾಗಿಲ್ಲ. ವಿಶ್ವವಿದ್ಯಾಲಯಗಳು ಜನರನ್ನು ಒಳಗೊಳ್ಳುವಂತಿರಬೇಕೆಂದು ಹೇಳಿದಾಗ ಅದು ಉಪಯುಕ್ತತೆಯ ಪ್ರಶ್ನೆಯಲ್ಲ. ಉಪಯುಕ್ತತೆಯನ್ನು ಯಾಂತ್ರಿಕವಾಗಿ ಪರಿಭಾವಿಸಿಕೊಳ್ಳಬಾರದು. ಅದನ್ನು ಸೈದ್ಧಾಂತಿಕ ನೆಲೆಯಲ್ಲಿ, ಪ್ರಣಾಳಿಕೆ ನೆಲೆಯಲ್ಲಿ ನೋಡಬೇಕು. ಆದರೆ ಸಂಸ್ಕೃತ ವಿಶ್ವವಿದ್ಯಾಲಯವು, ಡಾ..ಎಂ.ಎಂ.ಕಲಬುರ್ಗಿ ಅವರು ಸರಿಯಾಗಿ ಗುರುತಿಸಿರುವಂತೆ, ಕರ್ಮಕಾಂಡವನ್ನು ನಡೆಸುವ ಪುರೋಹಿತರನ್ನು, ದೇವಾಲಯಗಳಲ್ಲಿ ದಕ್ಷಿಣೆಗಾಗಿ ಕೈಚಾಚುವ ಅರ್ಚಕರನ್ನು, ಜನರನ್ನು ಮೌಢ್ಯತೆಗೆ ತಳ್ಳುವ ಜ್ಯೋತಿಷಿಗಳನ್ನು, ಮಂತ್ರಿ–ಮಹೋದಯರ ಕಚೇರಿಗಳಲ್ಲಿ ಯಜ್ಞ–ಯಾಗ ನಡೆಸುವ ಯಾಜ್ಞಿಕರನ್ನು ಮಾತ್ರ ಉತ್ಪಾದಿಸಬಲ್ಲದು.

ಪಿರ್ಯಾದಿದಾರರೂ ಅವರೇ, ನ್ಯಾಯಾಧೀಶರೂ ಅವರೇ!

ಈಗಾಗಲೆ ತಿಳಿಸಿರುವಂತೆ ವಿಜಯ ಕರ್ನಾಟಕ ಪತ್ರಿಕೆಯು ಸಂಸ್ಕೃತ ವಿಶ್ವವಿದ್ಯಾಲಯ ಕುರಿತಂತೆ ಸಂವಾದವೊಂದನ್ನು ಏರ್ಪಡಿಸಿತ್ತು. ಅದನ್ನು ಡಾ.ಎಸ್.ಎಲ್.ಭೈರಪ್ಪ ಅವರ ಆಶಯ ಪ್ರಬಂಧದಿಂದ ಆರಂಭಿಸಲಾಗಿತ್ತು. ಅವರು ತಮ್ಮ ಆಶಯ ಬರಹದಲ್ಲಿ ಸಂಸ್ಕೃತವು ಅಷ್ಟು ಮಹತ್ವವಾದುದು, ಇಷ್ಟು ಗುರುತ್ವವುಳ್ಳದ್ದು,ಅದು ಜ್ಞಾನದ ಗಣಿ ಮುಂತಾದ ಮುತ್ತುಗಳನ್ನು ಉದುರಿಸಿ ಸಂವಾದಕ್ಕೆ ಚಾಲನೆ ನೀಡಿದರು. ಅದಕ್ಕೆ ಪ್ರತಿಕ್ರಿಯೆಯಾಗಿ ನಾಡಿನ ಅನೇಕ ವಿದ್ವಾಂಸರು ಪರವಾಗಿ, ವಿರೋಧವಾಗಿ ಬರೆದರು.

ಈ ಸಂವಾದದ ಕೊನೆಯ ಭಾಗದಲ್ಲಿ ಎರಡು ಕಂತುಗಳಲ್ಲಿ ಎರಡು ಪುಟಗಳ ತುಂಬಾ ಡಾ.ಆರ್. ಗಣೇಶ್ ಅವರು ಸಂವಾದದಲ್ಲಿ ಸಂಸ್ಕೃತ ವಿವಿ ಬಗ್ಗೆ ಆಕ್ಷೇಪವೆತ್ತಿದ ಎಲ್ಲರಿಗೂ ಉತ್ತರ ಕೊಡುತ್ತಾ ಸಂಸ್ಕೃತ ವಿವಿ ಯಾಕೆ ಬೇಕು ಎಂಬುದನ್ನು ವಿವರಿಸುತ್ತಾ ಅದು ಜ್ಞಾನದ ಕಣಜವೆಂದೂ, ಅದರ ಕೃಪೆಗೆ ದಲಿತರೂ ಮತ್ತು ಶೂದ್ರರೂ ಪಾತ್ರರಾಗಬೇಕೆಂದು ತಮ್ಮ ತೀರ್ಮಾನವನ್ನು ನೀಡಿದ್ದಾರೆ. ಅವರು ಸಂಸ್ಕೃತದ ವಿರೋಧವಾಗಿರುವ ಎಲ್ಲ ಬಗೆಯ ಪ್ರತಿವಾದಗಳಿಗೂ 'ಸಕಲ ವಿದ್ಯಾ ಪಾರಂಗತ'ರಂತೆ ಉತ್ತರ ಕೊಟ್ಟಿದ್ದಾರೆ. ಅವರ ಉತ್ತರ ನೋಡಿದ ಮೇಲೆ ಕೆವಿನಾ ಅಥವಾ ಜಿಆರ್ ಅವರ ವಾದಗಳ ಸೂಕ್ಷ್ಮವು ಅವರ ತಿಳಿವಿಗೆ ದಕ್ಕಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಈ ಸಂವಾದಕ್ಕೆ ವಿ.ಕ.ದಲ್ಲಿ ಮುಗಿತಾಯವನ್ನು ಹಾಡಿದವರು ಎಸ್.ಎಲ್.ಭೈರಪ್ಪನವರೋ ಅಥವಾ ಆರ್. ಗಣೇಶ್ ಅವರೋ ಎಂಬುದು ನಮಗೆ ಗೊಂದಲ ಉಂಟುಮಾಡಿದೆ. ಇವರೂ ಸಂವಾದವನ್ನು ಏರ್ಪಡಿಸಿದ ವಿ.ಕ.ವನ್ನು ಹೊಗಳಿ ಸಮಾಪನ ಮಾಡುತ್ತಾರೆ ಮತ್ತು ಅವರೂ ಪತ್ರಿಕೆಗೆ ತಮ್ಮ ಕೃತಜ್ಞತೆ ಅರ್ಪಿಸಿ ಮುಕ್ತಾಯ ಹಾಡುತ್ತಾರೆ. ಇದನ್ನೆಲ್ಲಾ ನೋಡಿದರೆ ಇವರೆಲ್ಲಾ ಕೂಡಿಕೊಂಡೇ ಈ ಸಂವಾದವೆಂಬ ಪ್ರಹಸನವನ್ನು ನಡೆಸಿದಂತೆ ಕಾಣುತ್ತದೆ. ಈ ಮಾತಿಗೆ ಪುರಾವೆಯನ್ನು ಸಂವಾದಕ್ಕೆ

ತೆರೆ ಎಳೆದ ಬೈರಪ್ಪ ಅವರು ಸಂವಾದದಲ್ಲಿ ಸಂಸ್ಕೃತ ವಿವಿ ಪರವಾಗಿ ವೈವಿಧ್ಯಮಯವಾದ ವಿಚಾರಗಳನ್ನು ಮಂಡಿಸಿದ ವಿದ್ವಾಂಸರನ್ನೆಲ್ಲಾ ಹೊಗಳಿ ಇವರ ಸಂಖ್ಯೆಯು ವಿರೋಧ ವ್ಯಕ್ತ ಪಡಿಸಿದ ಮಂದಿಗಿಂತ ಅಧಿಕವೆಂದು ಫಲಿತಾಂಶ ಘೋಷಿಸಿರುವುದರಲ್ಲಿ ಕಂಡುಕೊಳ್ಳಬಹುದು. ಅಂದರೆ ಅವರು ತಾವು ರೂಪಿಸಿದ್ದ ಸಂಗತಿಯನ್ನು ಜನಮತಗಣನೆಯೆಂದು ತಾವೇ ಪರಿಭಾವಿಸಿಕೊಂಡು ದರ ಬಗ್ಗೆ ತೀರ್ಮಾನವನ್ನು ತಾವೇ ಕೊಟ್ಟುಕೊಂಡಿದ್ದಾರೆ. ಅಲ್ಲಿ ಪಿರ್‍ಯಾದಿದಾರರೂ ಅವರೇ ಆಗಿದ್ದಾರೆ: ನ್ಯಾಯಾಧೀಶರೂ ಅವರೇ ಆಗಿದ್ದಾರೆ. ಹಾಗಿದ್ದ ಮೇಲೆ ಇಲ್ಲಿ ನ್ಯಾಯವು ದೊರೆಯುದಾದರೂ ಹೇಗೆ!

ಬೈರಪ್ಪ ಅವರು ತಮ್ಮ ಸಂವಾದವನ್ನು ಮುಗಿತಾಯ ಮಾಡುತ್ತಾ ಸಂಸ್ಕೃತ ವಿವಿಯ ವಿರೋಧವಾಗಿ ವಾದ ಮಂಡಿಸಿದವರನ್ನೆಲ್ಲಾ ಮೂರು ಗುಂಪು ಮಾಡಿದ್ದಾರೆ. ಅದನ್ನು ಅವರು ಹೇಗೆ ಮಾಡಿದ್ದಾರೆಂದರೆ ಅದನ್ನು ಯಾವ ರೀತಿ ವಿಶ್ಲೇಷಿಸಿದರೂ ಕೆವಿನಾ ಆಗಲಿ ಅಥವಾ ಜಿಆರ್ ಆಗಲಿ ಅವರ ಯಾವ ಗುಂಪಿಗೂ ಸೇರುವುದಿಲ್ಲ. ಈ ಬಗೆಯ ವರ್ಗೀಕರಣವನ್ನು ಅವರು ತಮ್ಮ ಮೂಗಿನ ನೇರಕ್ಕೆ ಮಾಡಿಕೊಂಡಿರುವುದು ಇದರಿಂದ ಸ್ಪಷ್ಟವಾಗಿದೆ. ವಿಚಿತ್ರವೆಂದರೆ ಸಂಸ್ಕೃತ ವಿವಿಯ ಪರವಾಗಿ ವಾದ ಮಂಡಿಸಿದವರನ್ನು ಮಾತ್ರ ಅವರು ಯಾವುದೇ ಬಗೆಯಲ್ಲಿ ವರ್ಗೀಕರಿಸಿಲ್ಲ. ಇದು ಏನನ್ನು ಸೂಚಿಸುತ್ತದೆ?. ಅವರ ಅಜೆಂಡಾ ಒಂದೇ!. ಅದು ಸಂಸ್ಕೃತ ವಿಶ್ವವಿದ್ಯಾಲಯ.

ಸಂಸ್ಕೃತ ವಿವಿ ಬೇಕೆಂದು ವಾದಿಸುವವರೆಲ್ಲರೂ ಸಮಾನವಾಗಿ ಹೇಳಿರುವ ಸಂಗತಿಯೆಂದರೆ ಭಾರತೀಯ ಸಂಸ್ಕೃತಿಯನ್ನು ಕಾಪಿಡುವುದಕ್ಕಾಗಿ ಸಂಸ್ಕೃತ ವಿವಿ ಬೇಕು, ಜನರಲ್ಲಿ ರಾಷ್ಟ್ರೀಯತೆಯನ್ನು ಉದ್ದೀಪಿಸುವುದಕ್ಕಾಗಿ ಅದು ಬೇಕು. ವಿದೇಶಿ ಸಂಸ್ಕೃತಿಯ ಆಕ್ರಮಣವನ್ನು ತಡೆಯಲು ಅದು ಬೇಕು ಎಂಬುದಾಗಿದೆ. ಇದೇ ನಿಜವಾಗಿದ್ದರೆ, ಈ ವಿವಿಗೆ ಮನ್ನಣೆಯನ್ನೂ, ಹಾಗೆಯೇ ಹಣಕಾಸು ಸಂಪನ್ಮೂಲವನ್ನು ಮತ್ತು ನೆರವನ್ನೂ ಕೇಂದ್ರದಿಂದ ಪಡೆಯಬಹುದು. ನಮ್ಮ ಸರ್ಕಾರವೇಕೆ ಅದರ ಮೇಲೆ ಹಣ ಸುರಿಯಬೇಕು? ಅಖಿಲ ಭಾರತ ಮಟ್ಟದ, ಅಂತಾರಾಷ್ಟ್ರೀಯ ಮಟ್ಟದ ವಿವಿ ಇದಾದ ಮೇಲೆ ಅದಕ್ಕೆ ನಮ್ಮ ರಾಜ್ಯ ಸರ್ಕಾರವೇಕೆ ಶ್ರಮಿಸಬೇಕು?.

ಅದಕ್ಕಿಂತ ಹೆಚ್ಚಾಗಿ ಭಾರತೀಯ ಸಂಸ್ಕೃತಿಯೆಂಬುದು ಬದುಕಿರುವುದೇ ಕರ್ನಾಟಕ ಸಂಸ್ಕೃತಿ, ತಮಿಳು ಸಂಸ್ಕೃತಿ, ಬಂಗಾಳಿ ಸಂಸ್ಕೃತಿ ಮುಂತಾದವುಗಳ ಬಹುರೂಪಿತನದಿಂದ ಎಂಬುದನ್ನು ಇಲ್ಲಿ ಮರೆಮಾಚಲಾಗುತ್ತಿದೆ. ಈ ಸಂಸ್ಕೃತವಾದಿಗಳು ತಮ್ಮ ಏಕರೂಪೀಕರಣದ ಭಾಗವಾಗಿ ಸಂಸ್ಕೃತ ವಿವಿಯನ್ನು ಕಟ್ಟಲು ಕಟಿಬದ್ಧರಾಗಿರುವಂತೆ ಕಾಣುತ್ತದೆ. ಪುರುಷ ಶಾಹಿಯ ಪ್ರಶ್ನೆಯನ್ನು ಸುಮ್ಮಸುಮ್ಮನೇ ಎತ್ತುತ್ತಿಲ್ಲ. ನಮ್ಮ ನಾಡಿನ ಜನಸಂಖ್ಯೆಯಲ್ಲಿ ಸರಿಸುಮಾರು ಅರ್ಧದಷ್ಟು ಮಹಿಳೆಯರಿದ್ದಾರೆ. ಅವರ ಹಿತಾಸಕ್ತಿಗಳನ್ನು ಹೇಗೆ ಕಡೆ ಗಣಿಸುವುದು?

ಸಂಸ್ಕೃತ ವಿಶ್ವವಿದ್ಯಾಲಯದ ಪರವಾಗಿ ವಾದಿಸುತ್ತಿರುವವರು ಅದರ ಪರವಾಗಿ ನೀಡುತ್ತಿರುವ ಸಮಜಾಯಿಷಿಗಳೆಲ್ಲ ತೋರಿಕೆಯ ಸಂಗತಿಗಳು. ಅದರ ಮೂಲ ಉದ್ದೇಶ ಸ್ಪಷ್ಟ. ವೈದಿಕತೆಯ ವೈಭವೀಕರಣ. ವೈದಿಕರ ಹಿತಾಸಕ್ತಿಗಳ ಸಂರಕ್ಷಣೆ. ಹಿಂದುಳಿದ ವರ್ಗಗಳ, ದಲಿತರ, ಮಹಿಳೆಯರ ಚಳಿವಳಿ, ಸಂಘಟನೆಗಳನ್ನೆಲ್ಲಾ ತುಳಿಯುವುದು. ಅದಕ್ಕೆ ಮುಗ್ಧ ಅವೈದಿಕರನ್ನು ಭಾವುಕತೆಯ ನೆಲೆಯಲ್ಲಿ ದುರ್ಬಳಕೆ ಮಾಡಿಕೊಳ್ಳುವುದು. ಉಳಿದ್ದೆಲ್ಲಾ ಸಂಗತಿಗಳು ಕೇವಲ ಬೊಗಳೆ ಮಾತ್ರವಾಗಿವೆ. ಇದನ್ನು ಕರ್ನಾಟಕಸ್ಥರು ಎಷ್ಟು ಬೇಗ ಅರ್ಥ ಮಾಡಿಕೊಳ್ಳುತ್ತಾರೋ ಅಷ್ಟು ಅವರಿಗೆ ಮತ್ತು ಕನ್ನಡಕ್ಕೆ ಒಳ್ಳೆಯದಾಗುತ್ತದೆ.

ಸಂಸ್ಕೃತ ವಿಶ್ವವಿದ್ಯಾಲಯ ಕುರಿತಂತೆ ನಾನು ಆರಂಭಿಸಿದ ಚರ್ಚೆಯ ಒಂದು ಭಾಗವಾಗಿ ಸ್ಫೋಟಗೊಂಡ ವಿಚಿತ್ರ ಸಂಗತಿಯೊಂದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಈ ವಾದ-ಸಂವಾದದಲ್ಲಿ ನಾಡಿನ ಅನೇಕ ವಿದ್ವಾಂಸರು ಭಾಗವಹಿಸಿದ್ದಾರೆ. ಬಹಳ ವಿಚಿತ್ರವಾದ ಸಂಗತಿಯೆಂದರೆ ಇಲ್ಲಿಯೂ ನಾನು ಪ್ರಬಂಧದಲ್ಲಿ ಹೇಳಿರುವ ಸಾಮಾಜಿಕತೆ ನುಸುಳದೆ ಬಿಟ್ಟಿಲ್ಲ. ಸಂಸ್ಕೃತದ ಪರವಾಗಿ ವಾದಿಸುವವರೆಲ್ಲಾ ಕಾಕತಾಳೀಯವೆನ್ನುವಂತೆ ಭಟ್ಟರೋ ಅಥವಾ ಶರ್ಮರೋ ಇಲ್ಲವೇ ರಾವ್‌ಗಳೋ ಅಲ್ಲದಿದ್ದರೆ ಹೆಗಡೆಗಳೋ ಆಗಿರುತ್ತಾರೆ. ಸಂಸ್ಕೃತ ವಿಶ್ವವಿದ್ಯಾಲಯದಿಂದ ಲೋಕೋಪಯೋಗವಿಲ್ಲವೆನ್ನುವ ಮಂದಿಯೆಲ್ಲ ಶೂದ್ರರು ಅಥವಾ ದಲಿತರಾಗಿದ್ದಾರೆ. ಎಲ್ಲ ಸಂದರ್ಭದಲ್ಲೂ ಇರುವಂತೆ ಇಲ್ಲಿಯೂ ಸಹ ಎರಡೂ ಪಕ್ಷಗಳಲ್ಲಿ ಅಪವಾದಗಳಿವೆ. ಆದರೆ ನಡೆ ಕಳೆದುಕೊಂಡ, ನಡುವನ್ನೂ ಕಳೆದು ಕೊಂಡಿರುವ ಸಂಸ್ಕೃತದ ಪರವಾದ ವಾದ ಮಾಡುತ್ತಿರುವ ಮಂದಿ ಮಾತ್ರ ವಿಚಿತ್ರವೆನ್ನುವಂತೆ ಒಂದು ಚಿಕ್ಕ ಆದರೆ ಪ್ರತಿಷ್ಠಿತ ಸಾಮಾಜಿಕ ಗುಂಪಿಗೆ ಸೇರಿದವರಾಗಿದ್ದಾರೆ.

ಈ ವಿವಿಯು ಮಹಿಳೆಯರ ಹಿತಾಸಕ್ತಿಗಳನ್ನು ಹೇಗೆ ಸಂರಕ್ಷಿಸುತ್ತದೆ ಎಂಬುದರ ಬಗ್ಗೆ ಅದರ ಪರವಾಗಿ ಪ್ರಖರ ವಾದ ಮಂಡಿಸಿದವರಾರು ಚಕಾರವೆತ್ತಿಲ್ಲ. ಅದರ ವಿರೋಧಿಗಳೂ ಎತ್ತಿಲ್ಲವೆಂದು ವಾದಕ್ಕಾಗಿ ಯಾರಾದರೂ ಕೇಳಬಹುದು. ಅದರ ವಿರೋಧಿಗಳು ಅವರ ಲಿಂಗ ಸಂಬಂಧಿ ನೆಲೆಗಳ ಬಗೆಗಿನ ಬದ್ಧತೆಯನ್ನು ಬಿಡಿಸಿ ಹೇಳಬೇಕಾಗಿಲ್ಲ. ಅವರ ಬರಹಗಳಲ್ಲಿ 'ಜನರು' ಎಂದಾಗ ಅಲ್ಲಿ ಮಹಿಳೆಯರೂ ಸೇರುತ್ತಾರೆ. ಆದರೆ ಸಂಸ್ಕೃತದ ಸಂಸ್ಕೃತಿಯೇನಿದೆ, ಅದರ ಪರಂಪರೆಯೇನಿದೆ ಅದು ಪುರುಷ ಶಾಹಿಯಾಗಿದೆ. ಮಹಿಳೆಯರಿಗೆ ಸಂಸ್ಕೃತವನ್ನು ನಿರಾಕರಿಸಿದ ಪರಂಪರೆ ಸಂಸ್ಕೃತದ್ದಾಗಿದೆ. ಅದರ ಬಗ್ಗೆ ನಿಜಕ್ಕೂ ಎಚ್ಚರವಿದ್ದಿದ್ದರೆ, ಬೈರಪ್ಪಾದಿಗಳು ಅಲ್ಲಿ ಸುಧಾರಣೆಯಾಗಬೇಕಾದುದೇನು ಎಂಬುದನ್ನು ತಿಳಿಸಬೇಕಾಗಿತ್ತು.

ಸಂಸ್ಕೃತ ವಿವಿಯನ್ನು ಬಂದು ಮಾಡಲಾಗುತ್ತದೋ ಅಥವಾ ಅದನ್ನು ತೆರೆಯಲಾಗುತ್ತದೋ ಎಂಬುದು ಬೇರೆ ಮಾತು. ಆದರೆ ಈ ನೆಪದಲ್ಲಿ ಅನೇಕರ ಬಣ್ಣ ಬದಲಾದುದು ಮಾತ್ರ ನಿಜ. ಬೈರಪ್ಪ ಅಂತವರು ತಾವೆಷ್ಟು ಪ್ರತಿಗಾಮಿಗಳೆಂಬುದನ್ನು ಬಹಿರಂಗ ಪಡಿಸಿದ್ದಾರೆ. ಎಮ್.ಎಲ್.ಸಿ.ಯ ಪಟ್ಟ, ಮಂಡಳಿ, ಸಮಿತಿ, ನಿಗಮ ಮುಂತಾದವುಗಳಲ್ಲಿನ ಸದಸ್ಯತ್ವಗಳು, ಲಾಭ ತರಬಲ್ಲ ಹುದ್ದೆಗಳು, ವಿವಿಧ ಸ್ಥಾನಗಳು ಮುಂತಾದವುಗಳ ಮುಂದೆ ಸ್ವಾಭಿಮಾನ, ವೈಯುಕ್ತಿಕ ನಿಲುವು, ಸೈದ್ಧಾಂತಿಕ ಬದ್ಧತೆ, ಹಂಗಿಗೆ ಪ್ರತಿಯಾಗಿ ಹಕ್ಕಿನ ಬದುಕು, ಜನರ ಹಿತಾಸಕ್ತಿಗಳು ಮುಂತಾದವು ಎಷ್ಟು [illegible] ಎಂಬುದನ್ನು ಅನೇಕ ಶೂದ್ರ ವಿದ್ವಾಂಸರು ಮತ್ತು ಚಿಂತಕರು ಈ ವಿವಾದದ ಸಂದರ್ಭದಲ್ಲಿ ತೋರಿಸಿಕೊಟ್ಟಿದ್ದಾರೆ.

ಒಟ್ಟಾರೆ ಸಂಸ್ಕೃತ ವಿಶ್ವವಿದ್ಯಾಲಯವನ್ನು ಈ ಸರ್ಕಾರವು ಕೇವಲ ಕೆಲವು ಮಂದಿಯ ಹಿತಾಸಕ್ತಿಯನ್ನು ಪೂರೈಸುವ ಸಲುವಾಗಿ ಸ್ಥಾಪಿಸುತ್ತಿದೆಯೆಂಬುದು ಸ್ಪಷ್ಟವಾಗಿದೆ. (ಈ ಅಂಕಣದಲ್ಲಿ ವಿಜಾಪುರದ(ಸಂ.14) ನಂತರ 'ರಾಯಚೂರು ಜಿಲ್ಲೆಯ ಅಭಿವೃದ್ಧಿಯ ಕಥೆ : ದುಸ್ಥಿತಿಯ ವ್ಯಥೆ' (ಸಂ.15) ಬಗ್ಗೆ ಬರೆಯಬೇಕಾಗಿತ್ತು. ಆದರೆ ಈ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ವಿವಾದವು ದುತ್ತನೇ ಎದುರಾದುದರಿಂದ ಅದರ ಬಗ್ಗೆ ತುರ್ತಾಗಿ ಬರೆಯಬೇಕಾಯಿತು. ಮುಂದಿನ ಸಂಚಿಕೆಯಲ್ಲಿ ರಾಯಚೂರು ಜಿಲ್ಲೆಯ ಅಭಿವೃದ್ಧಿ-ದುಸ್ಥಿತಿ ಕುರಿತಂತೆ ಬರೆಯುತ್ತೇನೆ. ಇಲ್ಲಿ ಮಂಡಿಸಿರುವ ವಿಚಾರಕ್ಕೆ ನಾವು, ನಾನು ಮಾತ್ರವೇ ಹೊಣೆಗಾರ : ಅಂಕಣಗಾರ)

ಕೊನೆಯ ಕಟಕಿ!

ಸಂಸ್ಕೃತ ವಿಶ್ವವಿದ್ಯಾಲಯ ಕುರಿತಂತೆ ನಾನು ಆರಂಭಿಸಿದ ಚರ್ಚೆಯ ಒಂದು ಭಾಗವಾಗಿ ಸ್ಫೋಟಗೊಂಡ ವಿಚಿತ್ರ ಸಂಗತಿಯೊಂದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಈ ವಾದ-ಸಂವಾದದಲ್ಲಿ ನಾಡಿನ ಅನೇಕ ವಿದ್ವಾಂಸರು ಭಾಗವಹಿಸಿದ್ದಾರೆ. ಬಹಳ ವಿಚಿತ್ರವಾದ ಸಂಗತಿಯೆಂದರೆ ಇಲ್ಲಿಯೂ ನಾನು ಪ್ರಬಂಧದಲ್ಲಿ ಹೇಳಿರುವ ಸಾಮಾಜಿಕತೆ ನುಸುಳದೆ ಬಿಟ್ಟಿಲ್ಲ. ಸಂಸ್ಕೃತದ ಪರವಾಗಿ ವಾದಿಸುವವರೆಲ್ಲಾ ಕಾಕತಾಳೀಯವೆನ್ನುವಂತೆ ಭಟ್ಟರೋ ಅಥವಾ ಶರ್ಮರೋ ಇಲ್ಲವೇ ರಾವ್‌ಗಳೋ ಅಲ್ಲದಿದ್ದರೆ ಹೆಗಡೆಗಳೋ ಆಗಿರುತ್ತಾರೆ. ಸಂಸ್ಕೃತ ವಿಶ್ವವಿದ್ಯಾಲಯದಿಂದ ಲೋಕೋಪಯೋಗವಿಲ್ಲವೆನ್ನುವ ಮಂದಿಯೆಲ್ಲ ಶೂದ್ರರು ಅಥವಾ ದಲಿತರಾಗಿದ್ದಾರೆ. ಎಲ್ಲ ಸಂದರ್ಭದಲ್ಲೂ ಇರುವಂತೆ ಇಲ್ಲಿಯೂ ಸಹ ಎರಡೂ ಪಕ್ಷಗಳಲ್ಲಿ ಅಪವಾದಗಳಿವೆ.

ಆದರೆ ನಡೆ ಕಳೆದುಕೊಂಡ, ನಡುವನ್ನೂ ಕಳೆದುಕೊಂಡಿರುವ ಸಂಸ್ಕೃತದ ಪರವಾದ ವಾದ ಮಾಡುತ್ತಿರುವ ಮಂದಿ ಮಾತ್ರ ವಿಚಿತ್ರವೆನ್ನುವಂತೆ ಒಂದು ಚಿಕ್ಕ ಆದರೆ ಪ್ರತಿಷ್ಠಿತ ಸಾಮಾಜಿಕ ಗುಂಪಿಗೆ ಸೇರಿದವರಾಗಿದ್ದಾರೆ. ಇದನ್ನು ನಾವು ವಿತ್ತಂಡವಾದಗಳ ಮೂಲಕ ಒಪ್ಪದೆ ಪ್ರತಿಯಾಗಿ ವಾದಿಸಬಹುದು. ಆದರೆ ದಿಟವನ್ನು ಮುಚ್ಚಿಡಲಾದೀತೆ! ಇದು 'ಕಾಗೆ ಕೂರುವುದಕ್ಕೂ ಮರ ಬೀಳುವುದಕ್ಕೂ' ಸರಿಹೋಯಿತು ಎಂಬ ನಾಣ್ನುಡಿಯ ಮೂಲಕ ಪಕ್ಕಕ್ಕೆ ಸರಿಸುವುದು ಅಸಾಧ್ಯ. ಈ ವಿವಾದದ ಸಂದರ್ಭದಲ್ಲಿ ಬಹಿರಂಗಗೊಂಡ ಪಟ್ಟಿಯಿಂದಾಗಿ ಸಂಸ್ಕೃತ ವಿವಿ ಪರವಾಗಿ ಸಾಮಾನ್ಯವಾಗಿ ಯಾರು ನಿಲುತ್ತಿದ್ದಾರೆಂಬುದು ನಮ್ಮ ಕಣ್ಣು ತೆರಸಬೇಕಾಗಿದೆ. □

ವಿಜ್ಞಾನದೆಡೆಗೆ ಬನ್ನಿ ದಲಿತ ಯುವಕರೇ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಆರ್ಥಿಕ ಸುಧಾರಣೆ ಮತ್ತು ಜಾಗತೀಕರಣದ ಪರಿಣಾಮವಾಗಿ ಇತ್ತೀಚೆಗೆ ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ಮ್ಯಾನೇಜ್‌ಮೆಂಟ್ ವೃತ್ತಿಗಳಿಗೆ ಭಾರೀ ಬೇಡಿಕೆ ಬಂದಿದೆ. ೩೦ ವರ್ಷಗಳ ಅನುಭವದ ನಂತರ ಓರ್ವ ವಿಜ್ಞಾನದ ಪ್ರೊಫೆಸರ್ ಪಡೆದುಕೊಳ್ಳುವಷ್ಟು ಮಾಸಿಕ ವೇತನವನ್ನು ಓರ್ವ ಸಾಫ್ಟ್‌ವೇರ್ ಇಂಜಿನಿಯರ್ ತನ್ನ ಮೊದಲ ತಿಂಗಳಲ್ಲಿಯೇ ಪಡೆಯುತ್ತಾನೆ. ಓರ್ವ ವಿಜ್ಞಾನಿ ಒಂದು ವರ್ಷದಲ್ಲಿ ಗಳಿಸುವಷ್ಟು ಹಣವನ್ನು ಓರ್ವ ಮ್ಯಾನೇಜ್‌ಮೆಂಟ್ ಪದವೀಧರ ಒಂದು ತಿಂಗಳಲ್ಲಿ ಗಳಿಸುತ್ತಾನೆ. ೧೨ನೆಯ ತರಗತಿಯ ನಂತರ ನಾಲ್ಕು ವರ್ಷಗಳ ಶಿಕ್ಷಣ ಪೂರೈಸಿದರೆ ಸಾಫ್ಟ್‌ವೇರ್ ಇಂಜನಿಯರ್ ಪದವಿ ಪಡೆಯಬಹುದು. ಇನ್ನು ಆರು ವರ್ಷಗಳ ಶಿಕ್ಷಣ ಪೂರೈಸಿದರೆ ಎಂಬಿಎ ಸ್ನಾತಕೋತ್ತರ ಪದವಿ ಪಡೆಯಬಹುದು. ಆದರೆ ಶಿಕ್ಷಕ ವೃತ್ತಿಗೆ ಬರ ಬೇಕಾದರೆ ಕನಿಷ್ಠ ಹತ್ತು ವರ್ಷಗಳನ್ನು ಅಧ್ಯಯನದಲ್ಲಿ ಸವೆಸಬೇಕು.

ಕೆಲವು ವರ್ಷಗಳ ಹಿಂದೆ ಭಾರತದ ಪ್ರತಿಷ್ಠಿತ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆ (ಸಿಎಸ್‌ಐಆರ್) "ಯುವ ವಿಜ್ಞಾನಿ ಪ್ರಶಸ್ತಿ"ಗಾಗಿ ಅರ್ಜಿಗಳನ್ನು ಆಹ್ವಾನಿಸಿ ಜಾಹೀರಾತು ನೀಡಿತ್ತು. ಪ್ರತಿವರ್ಷ ಎಂಟು ಪ್ರಶಸ್ತಿಗಳನ್ನು ಸಿಎಸ್‌ಐಆರ್ ನೀಡುತ್ತದೆ. ಆದರೆ ಆಶ್ಚರ್ಯಕರವಾದ ವಿಷಯವೇನೆಂದರೆ ಈ ಪ್ರಶಸ್ತಿಗಾಗಿ ಆಗ ಅರ್ಜಿ ಸಲ್ಲಿಸಿದವರಲ್ಲಿ ಕನಿಷ್ಠ ಅರ್ಹತೆಯನ್ನು ಹೊಂದಿದ್ದವರು ಕೇವಲ ಮೂರು ಮಂದಿ ಮಾತ್ರ! ದೆಹಲಿ ವಿಶ್ವವಿದ್ಯಾನಿಲಕ್ಕೆ ಸೇರಿದ ಪ್ರತಿಷ್ಠಿತ ಕಾಲೇಜೊಂದರಲ್ಲಿ ಪ್ರತಿ ಪದವಿ ಕೋರ್ಸ್‌ಗಳಿಗಾಗಿ 1,000 ಅರ್ಜಿಗಳು ಬಂದಿದ್ದವು. ಆದರೆ ಇವುಗಳಲ್ಲಿ ಜೀವ ವಿಜ್ಞಾನ ಕೋರ್ಸ್‌ಗಳಿಗೆ ಒಂದೇ ಒಂದು ಅರ್ಜಿ ಕೂಡ ಇರಲಿಲ್ಲ.

ಕಳೆದ ಕೆಲವು ವರ್ಷಗಳಲ್ಲಿ ಪದವಿ ಕೋರ್ಸ್‌ಗಳಿಗಾಗಿ ದೆಹಲಿ ವಿ.ವಿ ಕಾಲೇಜುಗಳಲ್ಲಿ ಅರ್ಜಿ ಸಲ್ಲಿಸುತ್ತಿರುವ ವಿದ್ಯಾರ್ಥಿಗಳು ವಾಣಿಜ್ಯ ಮತ್ತು ಅರ್ಥಶಾಸ್ತ್ರ ವಿಷಯಗಳಿಗೆ ಪ್ರಾಧಾನ್ಯತೆ ನೀಡುತ್ತಿದ್ದು, ವಿಜ್ಞಾನ ವಿಷಯಗಳನ್ನು ಕೇಳುವವರಿಲ್ಲದಂತಾಗಿದೆ. ಭಾರತದಲ್ಲಿ ವರ್ಷಕ್ಕೆ ನಾಲ್ಕು ಲಕ್ಷ ಇಂಜಿನಿಯರುಗಳು ಮತ್ತು ಎರಡು ಲಕ್ಷ ಸಾಫ್ಟ್‌ವೇರ್ ಇಂಜಿನಿಯರುಗಳು ತಯಾರಾಗುತ್ತಿದ್ದಾರೆ. ಇವರಲ್ಲಿ 20,000 ಮಂದಿ ಸ್ನಾತಕೋತ್ತರ ಪದವಿಯ ಅಧ್ಯಯನ ನಡೆಸಿದರೆ, ಕೇವಲ 1,000 ಮಂದಿ ಪಿಎಚ್‌ಡಿ ಮೆಟ್ಟಿಲೇರುತ್ತಾರೆ. ಇದೆಲ್ಲದರ ಮಧ್ಯೆ. ಮೂಲಭೂತ ವಿಜ್ಞಾನದ ವಿಷಯಗಳು, ಅಧ್ಯಯನ ಮಾಡುವವರಿಲ್ಲದೆ ಸೊರಗುತ್ತಿದೆ ಎಂದು ಬಹಳಷ್ಟು ಮಂದಿ ಹಿರಿಯ ವಿಜ್ಞಾನಿಗಳು ಕಳವಳ ವ್ಯಕ್ತಪಡಿಸುತ್ತಾರೆ. "ಭಾರತದಲ್ಲಿ ವಿಜ್ಞಾನದ ಬಗೆಗಿನ ಆಸಕ್ತಿ ಬದಲಾಗುತ್ತಿರುವ ಸ್ಪರ್ಧಾತ್ಮಕ ಯುಗಕ್ಕೆ ತಕ್ಕಂತೆ ಬದಲಾಗಿಲ್ಲ" ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಮುಖ್ಯಸ್ಥರಾದ ಪ್ರೊ. ಗೋವರ್ಧನ್ ಮೆಹತಾ ಅಭಿಪ್ರಾಯಪಡುತ್ತಾರೆ. ವಿಜ್ಞಾನ ವಿಷಯಗಳನ್ನು ಬೋಧಿಸುವ ಶಿಕ್ಷಕರ ಕೊರತೆಯನ್ನು ಭಾರತ ಈಗ ಎದುರಿಸುತ್ತಿದೆ.

ಆರ್ಥಿಕ ಸುಧಾರಣೆ ಮತ್ತು ಜಾಗತೀಕರಣದ ಪರಿಣಾಮವಾಗಿ ಇತ್ತೀಚೆಗೆ ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ಮ್ಯಾನೇಜ್‌ಮೆಂಟ್ ವೃತ್ತಿಗಳಿಗೆ ಭಾರೀ ಬೇಡಿಕೆ ಬಂದಿದೆ. 30 ವರ್ಷಗಳ ಅನುಭವದ ನಂತರ ಓರ್ವ ವಿಜ್ಞಾನದ ಪ್ರೊಫೆಸರ್ ಪಡೆದುಕೊಳ್ಳುವಷ್ಟು ಮಾಸಿಕ ವೇತನವನ್ನು ಓರ್ವ ಸಾಫ್ಟ್‌ವೇರ್ ಇಂಜಿನಿಯರ್ ತನ್ನ ಮೊದಲ ತಿಂಗಳಲ್ಲಿಯೇ ಪಡೆಯುತ್ತಾನೆ. ಓರ್ವ ವಿಜ್ಞಾನಿ ಒಂದು ವರ್ಷದಲ್ಲಿ ಗಳಿಸುವಷ್ಟು ಹಣವನ್ನು ಓರ್ವ ಮ್ಯಾನೇಜ್‌ಮೆಂಟ್ ಪದವೀಧರ ಒಂದು ತಿಂಗಳಲ್ಲಿ ಗಳಿಸುತ್ತಾನೆ. 12ನೆಯ ತರಗತಿಯ ನಂತರ ನಾಲ್ಕು ವರ್ಷಗಳ ಶಿಕ್ಷಣ ಪೂರೈಸಿದರೆ ಸಾಫ್ಟ್‌ವೇರ್ ಇಂಜಿನಿಯರ್ ಪದವಿ ಪಡೆಯಬಹುದು. ಇನ್ನು ಆರು ವರ್ಷಗಳ ಶಿಕ್ಷಣ ಪೂರೈಸಿದರೆ ಎಂಬಿಎ ಸ್ನಾತಕೋತ್ತರ ಪದವಿ ಪಡೆಯಬಹುದು. ಆದರೆ ಶಿಕ್ಷಕ ವೃತ್ತಿಗೆ ಬರಬೇಕಾದರೆ ಕನಿಷ್ಠ ಹತ್ತು ವರ್ಷಗಳನ್ನು ಅಧ್ಯಯನದಲ್ಲಿ ಸವೆಸಬೇಕು. ಪಿಯುಸಿ ನಂತರ ಮೂರು ವರ್ಷ ಪದವಿಗೆ, ಎರಡು ವರ್ಷ ಸ್ನಾತಕೋತ್ತರ ಪದವಿಗೆ ಮತ್ತು ನಾಲ್ಕು ವರ್ಷ ಪಿಎಚ್‌ಡಿಗೆ, ಇನ್ನೊಂದು ವರ್ಷ ಉದ್ಯೋಗ ಹುಡುಕಲು ಬೇಕಾಗುತ್ತದೆ. ಇನ್ನು [illegible] ವಿಜ್ಞಾನ ವಿಷಯಗಳ ಬಗ್ಗೆ ಅಧ್ಯಯನ ಕೈಗೊಳ್ಳಲು ಕಠಿಣ ಪರಿಶ್ರಮ ಮತ್ತು ಪ್ರಾಮಾಣಿಕ ಪ್ರಯತ್ನ ಅತ್ಯವಶ್ಯಕ.

ಭಾರತದಲ್ಲಿ ಮಹತ್ತರವಾದ ಬದಲಾವಣೆಗಳು ಘಟಿಸುತ್ತಿವೆ. ಎಲೀಟ್‌ಗಳ ಮಕ್ಕಳು ಸುಲಭ ಹಣತರುವ ವೃತ್ತಿ ಮತ್ತು ಇದರ ಜೊತೆಗೆ ಬರುವ ಜೀವನಶೈಲಿಗೆ ಮಾರುಹೋಗಿದ್ದಾರೆ. ಸಾಮಾಜಿಕವಾದ ಮತ್ತು ಮಾನಸಿಕವಾದ ಈ ವಿದ್ಯಮಾನವನ್ನು ದೇಶಭಕ್ತಿಯ ಘೋಷಣೆಗಳು ತಡೆಯಲು ಸಾಧ್ಯವಿಲ್ಲ. ಎಲೀಟ್‌ಗಳ ನಿರಾಸಕ್ತಿಗೆ ಗುರಿಯಾಗಿರುವ ಮೂಲಭೂತ ವಿಜ್ಞಾನ ವಿಷಯಗಳ ಅಧ್ಯಯನವನ್ನು ಈಗ ದಲಿತರು ಕೈಗೆತ್ತಿಕೊಳ್ಳಬೇಕಾಗಿದೆ. ಈ ಐತಿಹಾಸಿಕ ಅವಕಾಶವನ್ನು ದಲಿತ ಮಧ್ಯಮವರ್ಗ ಬಳಸಿಕೊಂಡು ತಮ್ಮ ಮಕ್ಕಳು ವಿಜ್ಞಾನ ವಿಷಯಗಳಲ್ಲಿ ಅಧ್ಯಯನ ಕೈಗೊಳ್ಳುವಂತೆ ಪ್ರೇರಣೆ ನೀಡಬೇಕು. ಆದರೆ ಇದಕ್ಕೆ ಸ್ವಲ್ಪಮಟ್ಟಿಗಿನ ತ್ಯಾಗ ಅತ್ಯವಶ್ಯಕ. ಎಲ್ಲ ಚಳವಳಿಗಳೂ ತ್ಯಾಗವನ್ನು ಅಪೇಕ್ಷಿಸಿಯೇ ತೀರುತ್ತದೆ.

ಮೂಲಭೂತ ವಿಜ್ಞಾನ ವಿಷಯಗಳ ಪರಿಣತಿಗೆ ಸಾಮಾಜಿಕವಾದ ಅರ್ಥಗಳಿವೆ. ಹುಟ್ಟಿನಿಂದಲೇ ಪ್ರತಿಭೆ ಮತ್ತು ಬುದ್ಧಿವಂತಿಕೆಯ ಪ್ರತೀಕ ಎಂದು ಬ್ರಾಹ್ಮಣರು ಸ್ವಯಂಪ್ರಶಂಸೆ ಮಾಡಿಕೊಳ್ಳುತ್ತಾರೆ. ಇಂತಹ ಮತಿಭ್ರಾಂತ ವಿಚಾರಗಳಿಗೆ ಯಾವಾಗಲೂ ನಮ್ಮ ವಿರೋಧವಿದೆ. ಆದರೆ, ಇತಿಹಾಸದ ಪುಟಗಳನ್ನು ತೆರೆದು ನೋಡಿದಾಗ, ಬಹುತೇಕ ವಿಜ್ಞಾನ ಮತ್ತು ಗಣಿತದ ಶಿಕ್ಷಕರು ಬ್ರಾಹ್ಮಣರೇ ಆಗಿರುವುದು ಕಂಡುಬರುತ್ತದೆ. ವಾಸ್ತವ ಸ್ಥಿತಿ ಹೀಗಿರುವುದರಿಂದ ಬ್ರಾಹ್ಮಣರು ಹೇಳಿಕೊಳ್ಳುವುದೇ ಸತ್ಯ ಎಂಬ ಭಾವನೆ ಇದೆ.

ಒಂದು ವೇಳೆ ದಲಿತ ಮಧ್ಯಮವರ್ಗ ತಮ್ಮ ಮಕ್ಕಳನ್ನು ವಿಜ್ಞಾನ ಅಭ್ಯಸಿಸಲು ಪ್ರೋತ್ಸಾಹ ನೀಡಿದರೆ ಏನಾಗಬಹುದು? ಕೆಲವೇ ದಶಕಗಳಲ್ಲಿ ದೇಶದ ಬಹಳಷ್ಟು ವಿಜ್ಞಾನ ಮತ್ತು ಗಣಿತದ ಶಿಕ್ಷಕರು ದಲಿತರಾಗಿರುತ್ತಾರೆ. ಜಗತ್ತಿನಾದ್ಯಂತ ಜನಸಂಖ್ಯೆ ಹೆಚ್ಚಳವಾಗುತ್ತಿದ್ದು, ಹವಾಮಾನ ವೈಪರೀತ್ಯ ದೊಡ್ಡ ಸವಾಲಾಗಿ ಪರಿಣಮಿಸಿರುವುದರಿಂದ ಮತ್ತೆ ವಿಜ್ಞಾನಕ್ಕೆ ಬೇಡಿಕೆ ಖಂಡಿತ ಬರುತ್ತದೆ. ದಲಿತ ಪ್ರೊಫೆಸರ್‌ಗಳು ವಿಜ್ಞಾನದ ವಿಷಯಗಳ ಬೋಧನೆ ಮಾಡಲಾರಂಭಿಸಿದರೆ ಜಾತಿಯಾಧಾರಿತ ಸಮಾಜ ದಲಿತರನ್ನು ದಡ್ಡರು, ಪ್ರತಿಭೆ ಇಲ್ಲದವರು ಎಂದು ಹೇಗೆ ಹೇಳಲು ಸಾಧ್ಯ?

2009ರ ಜುಲೈ 11ರಂದು ಪ್ರತಿಭಾನ್ವಿತ ದಲಿತ ಡಾಕ್ಟರ್ ವೈಭವ್ ವಾಸ್ನಿಕ್ ನನಗೊಂದು ಪತ್ರ ಬರೆದಿದ್ದರು. ದಲಿತ ಮಕ್ಕಳಿಗೆ ತರ್ಕಬದ್ಧವಾದ ಸಮಸ್ಯೆ–ಪರಿಹಾರ (ಪಜ಼ಲ್ ಸಾಲ್ವಿಂಗ್) ಮಾದರಿಯ ಶಿಕ್ಷಣ ನೀಡುವುದರ ಮೂಲಕ ಸ್ಪರ್ಧಾತ್ಮಕ ಮನೋಭಾವ ಬೆಳೆಸಬಹುದು ಎಂಬ ಸಲಹೆ ನೀಡಿದ್ದರು. ವಾಸ್ನಿಕ್ ಅವರ ಆಲೋಚನೆಗೆ ಒಂದು ವಿಸ್ತೃತವಾದ ಚೌಕಟ್ಟು ಒದಗಿಸುವ ನಿಟ್ಟಿನಲ್ಲಿ ನಾನೀನ ಚಿಂತನೆ ನಡೆಸುತ್ತಿದ್ದೇನೆ. ವಿಜ್ಞಾನದ ವಿಷಯದಲ್ಲಿ ನೊಬೆಲ್ ಪ್ರಶಸ್ತಿ ಪಡೆದವರಲ್ಲಿ ಸುಮಾರು ಅರ್ಧದಷ್ಟು ಮಂದಿ ಯೆಹೂದ್ಯರು ಎಂದು ವಾಸ್ನಿಕ್ ಇದಕ್ಕೆ ಪೂರಕವಾಗಿ ಹೇಳುತ್ತಾರೆ.

ಜೈಪುರ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಪ್ರೊ ಪ್ರಹ್ಲಾದ್ ರೈ ಹೇಳುವಂತೆ ಮಧ್ಯಮ ವರ್ಗ ಯಾವಾಗಲೂ ಕೆಳವರ್ಗದವರನ್ನು

ಮುನ್ನಡೆಸುತ್ತದೆ. ಹೀಗಾಗಿ ದಲಿತ ಮಧ್ಯಮವರ್ಗ ವಿಜ್ಞಾನದ ವಿಷಯಗಳ ಅಧ್ಯಯನವನ್ನು ತಮ್ಮ ಸಮುದಾಯದಲ್ಲಿ ಜನಪ್ರಿಯಗೊಳಿ ಸಬೇಕಾಗಿದೆ. ದಲಿತ ಮಧ್ಯಮವರ್ಗ ವಿವಿಧ ಸ್ತರಗಳಲ್ಲಿ ಜಾತಿಯಾಧಾರಿತ ಸಮಾಜವನ್ನು ಎದುರಿಸಬೇಕಾಗುತ್ತದೆ. ದಲಿತರು ಆಧುನಿಕ ಶಿಕ್ಷಣಕ್ಕೆ ಹೊಸಬರು. ತೀರ ಇತ್ತೀಚಿನ ವರೆಗೆ ದಲಿತರಿಗೆ ಶಾಲೆಗಳಲ್ಲಿ ಪ್ರವೇಶವಿರಲಿಲ್ಲ. 20ನೇ ಶತಮಾನದ ಆರಂಭದಲ್ಲಿ ದಲಿತರು ಶಿಕ್ಷಣ ಕ್ಷೇತ್ರಕ್ಕೆ ಕಾಲಿಡುತ್ತಿದ್ದಂತೆ, ದಲಿತರ ಮನೆಗಳಿಗೆ ಬೆಂಕಿ ಹಚ್ಚಲಾಯಿತು. ದಲಿತ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದ ಶಾಲಾ ಕಟ್ಟಡಗಳ ಮೇಲೆ ದಾಳಿ ಮಾಡಲಾಯಿತು. ದಲಿತ ಪೋಷಕರನ್ನು ಥಳಿಸಲಾಯಿತು. ಶತಮಾನಗಳ ನಿರಾಕರಣೆ ಮತ್ತು ಶೋಷಣೆಯ ನಡುವೆಯೂ ಈಗ ವಿದೇಶಗಳಲ್ಲಿ ನೂರಾರು ದಲಿತರು ವಿಜ್ಞಾನದ ವಿಷಯಗಳಲ್ಲಿ ಉತ್ತಮವಾದ ಸಾಧನೆ ಮಾಡುತ್ತಿದ್ದಾರೆ. ವಾಸ್ನಿಕ್ ಇದಕ್ಕೆ ಅತ್ಯುತ್ತ ಮವಾದ ನಿದರ್ಶನ. ದಲಿತರು ಪ್ರತಿಭೆಯಿಲ್ಲದವರು ಎಂಬ ಸ್ಟಿರಿಯೋಟೈಪ್‌ನಿಂದಾಚೆಗೆ ಬರುವುದು ದಲಿತ ಮಧ್ಯಮ ವರ್ಗದ ಮುಂದಿರುವ ಮಹತ್ವದ ಸವಾಲು.

ಆಧುನಿಕ ಜ್ಞಾನದ 'ಖನಿಗಳು' ಎಂದು ಸ್ವಯಂಪ್ರಶಂಸೆಯಲ್ಲಿ ನಿರತರಾದ ಎಲೀಟ್‌ಗಳ ವಿರುದ್ಧ ವಾದ ಮಾಡುತ್ತಾ ಕೂರಲು ತಮ್ಮ ಬುದ್ಧಿಮತ್ತೆ, ಶಕ್ತಿ, ಮತ್ತು ಸಂಪನ್ಮೂಲಗಳನ್ನು ಖರ್ಚು ಮಾಡದೆ, ದಲಿತ ಮಧ್ಯಮ ವರ್ಗದ ಮುಂದಿನ ಪೀಳಿಗೆ ವಿಜ್ಞಾನದ ಪ್ರಯೋಗಾಲಯಗಳಿಗೆ ಲಗ್ಗೆಯಿಡಬೇಕು. ಖಾಲಿ ಪ್ರಯೋಗಾಲಯಗಳಿಗೆ ಲಗ್ಗೆಯಿಡಲು ಇದಕ್ಕಿಂತ ಸುಸಮಯ ಬೇರೊಂದಿಲ್ಲ.

ಹೊಸ ಶಿಕ್ಷಣ ನೀತಿ: ಕೆಳವರ್ಗದವರ ವಿರುದ್ಧ ಪಿತೂರಿ

ಆರ್ಥಿಕ ಸುಧಾರಣೆಯ ನಂತರ ಭಾರತದ ಆರ್ಥಿಕ ವ್ಯವಸ್ಥೆ ಹಿಂದೆಂದಿಗಿಂತಲೂ ಅತಿ ಹೆಚ್ಚಿನ ವೇಗದಲ್ಲಿ ವಿಸ್ತೃತವಾಗುತ್ತಿದೆ. ಹೊಸ ವೃತ್ತಿಗಳು ಅಸ್ತಿತ್ವಕ್ಕೆ ಬರುತ್ತಿವೆ. ಈ ಹಿಂದೆ ಐಎಎಸ್ ವೃತ್ತಿಗೆ ಸಿಗುತ್ತಿದ್ದ ಘನತೆ ಮತ್ತು ಗೌರವ ಈಗ ಅತ್ಯುತ್ತಮ ವಿದ್ಯಾಸಂಸ್ಥೆಗಳಲ್ಲಿ ಮ್ಯಾನೆಜ್‌ಮೆಂಟ್ ಪದವಿ ಪಡೆದವರಿಗೂ ಸಿಗುತ್ತಿದೆ. ಕೆಲವೇ ವರ್ಷಗಳ ಹಿಂದೆ ಬಹಳಷ್ಟು ಮಂದಿ ಮ್ಯಾನೆಜ್‌ಮೆಂಟ್ ಪದವೀಧರರು ಐಎಎಸ್ ವೃತ್ತಿಗೆ ಸೇರುತ್ತಿದ್ದರು. ಆದರೆ ಈಗ ಬಹಳಷ್ಟು ಮಂದಿ ಐಎಎಸ್ ಅಧಿಕಾರಿಗಳು ಮ್ಯಾನೆಜ್‌ಮೆಂಟ್ ವೃತ್ತಿಗೆ ಬರುತ್ತಿದ್ದಾರೆ.

ಬದಲಾಗುತ್ತಿರುವ ಜೀವನಶೈಲಿಯ ಜೊತೆಗೆ ಹೊಸ ತಂತ್ರಜ್ಞಾನ ಆಧಾರಿತ ಆರ್ಥಿಕ ವ್ಯವಸ್ಥೆ ನುರಿತ ವೃತ್ತಿಪರರನ್ನು ಬಯಸುತ್ತದೆ. ಈ ಆರ್ಥಿಕ ವ್ಯವಸ್ಥೆಗೆ ಇಂಗ್ಲಿಷ್ ಭಾಷೆಯ ಮೇಲೆ ಹಿಡಿತ ಹೊಂದಿರುವ ವೃತ್ತಿಪರರ ಬೇಡಿಕೆ ಹೆಚ್ಚು. ಹೆಚ್ಚಿನ ಪರಿಣತಿ ಹೊಂದಿರುವ ತಾಂತ್ರಿಕ ಸಿಬ್ಬಂದಿಯ ಬೇಡಿಕೆ ಕೂಡ ಇದೆ. ಜೊತೆಗೆ ಸೇಲ್ಸ್ ಪ್ರೊಫೆಷನಲ್ಸ್, ಫ್ಲೋರ್ ವ್ಯವಸ್ಥಾಪಕರು, ಇಂಟೀರಿಯರ್ ಡಿಸೈನರ್ಸ್, ಇಂತಹ ವೃತ್ತಿಪರರಿಗೆ ಕೂಡ ಬೇಡಿಕೆ ಹೆಚ್ಚಾಗಿದೆ. ಸರ್ಕಾರಿ ಕಚೇರಿಗಳು ಕೂಡ ಇತ್ತೀಚೆಗೆ ಆಕರ್ಷಕವಾಗಿರುತ್ತವೆ. ನುರಿತ ಕೆಲಸಗಾರರಿಗೆ ಹಿಂದೆಂದೂ ಇಲ್ಲದಷ್ಟು ಬೇಡಿಕೆ ಈಗ ಬಂದಿದೆ. ಪರಿಣತಿ ಹೊಂದಿಲ್ಲದ ಕೆಲಸಗಾರರಿಂದ ಆರ್ಥಿಕ ವ್ಯವಸ್ಥೆ ಬೆಳೆಯಲು ಸಾಧ್ಯವಿಲ್ಲ. ಬಿಳಿಯ ಕಾಲರ್‌ನ ಕೆಲಸಗಳು ಕಡಿಮೆಯಾಗುತ್ತಿದೆ. ಸಮಾಜ ವಿಜ್ಞಾನದ ವಿಷಯಗಳಲ್ಲಿ ಬಿಎ, ಎಂಎ ಪದವಿಗಳನ್ನು ಹೊಂದಿರುವವರಿಗೆ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿವೆ. ಸರ್ಕಾರಿ ನೌಕರಿಗಳ ಪ್ರಮಾಣ ಇಳಿಮುಖ ಕಾಣುತ್ತಿದೆ. ಆದರೆ ಭಾರತದ ಶಿಕ್ಷಣ ವ್ಯವಸ್ಥೆ ಅಧಿಕ ಸಂಖ್ಯೆಯಲ್ಲಿ ಸಮಾಜ ವಿಜ್ಞಾನದ ಪದವೀಧರರನ್ನು ಸೃಷ್ಟಿಸುತ್ತದೆ. ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆದುಕೊಳ್ಳಲು ಶಕ್ತರಲ್ಲದ ಕೆಳವರ್ಗದ ವಿದ್ಯಾರ್ಥಿಗಳು ಅನಿವಾರ್ಯವಾಗಿ ಬಿಎ, ಎಂಎ ಪದವಿಗಳನ್ನು ಪಡೆದು ನಿರುದ್ಯೋಗಿಗಳ ಗುಂಪಿಗೆ ಸೇರುತ್ತಾರೆ.

ಬಿಎ/ಎಂಎ ಪದವೀಧರರಿಗೆ ಉನ್ನತವಾದ ಗುರಿಗಳು ಇಲ್ಲವೆಂದೇನಿಲ್ಲ. ತಾಂತ್ರಿಕವಾಗಿ ಹೇಳುವುದಾದರೆ, ಕೇಂದ್ರದ ನಾಗರಿಕ ಸೇವೆಯ ಪರೀಕ್ಷೆ ತೆಗೆದುಕೊಳ್ಳಲು ತೆಲುಗು, ಹಿಂದಿ ಅಥವಾ ಮರಾಠಿ ಭಾಷೆಯಲ್ಲಿ ಬಿಎ ಪದವಿ ಪಡೆದ ವಿದ್ಯಾರ್ಥಿ ಕೂಡ ಬಿಕಾಂ, ಬಿಎಸ್ಸಿ ಪಡೆದ ವಿದ್ಯಾರ್ಥಿಯಷ್ಟೇ ಅರ್ಹತೆಯನ್ನು ಹೊಂದಿರುತ್ತಾನೆ. ಆದರೆ ಹೊಸ ಆರ್ಥಿಕ ವ್ಯವಸ್ಥೆಯಿಂದ ಕಡೆಗಣಿಸಲ್ಪಟ್ಟಿರುವ ಬಿಎ, ಎಂಎ ಪದವೀಧರರು ಹೊಸ ಆರ್ಥಿಕ ವ್ಯವಸ್ಥೆಯ ಬಗ್ಗೆ ಸಹಜವಾಗಿ ಆಕ್ರೋಶ ಹೊಂದಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಏನು ಮಾಡಬಹುದು? ಸಮಾಜ ವಿಜ್ಞಾನ ಶಿಕ್ಷಣವನ್ನು ಶೇ. 75ರಷ್ಟು ಪ್ರಮಾಣದಲ್ಲಿ ಕಡಿಮೆಗೊಳಿಸಲು ಸರ್ಕಾರಕ್ಕೆ ಸಾಧ್ಯವೇ? ಒಂದು ವೇಳೆ ಹಾಗೆ ಮಾಡಿದ್ದೇ ಆದರೆ ಸಮಾಜ ವಿಜ್ಞಾನದ ವಿಷಯಗಳನ್ನು ಬೋಧಿಸುತ್ತಿರುವ ಸಾವಿರಾರು ಶಿಕ್ಷಕರು ಎಲ್ಲಿಗೆ ಹೋಗಬೇಕು? ದೇಶಕ್ಕೆ ಸಮಾಜ ವಿಜ್ಞಾನದ ಪದವೀಧರರ ಅವಶ್ಯಕತೆ ಇಲ್ಲದಿರುವುದರಿಂದ ಪೋಷಕರು ತಮ್ಮ ಮಕ್ಕಳನ್ನು ಸಮಾಜ ವಿಜ್ಞಾನದ ಕೋರ್ಸ್‌ಗಳಿಗೆ ಕಳುಹಿಸಬಾರದು ಎಂದು ಸರ್ಕಾರ ಹೇಳಿಕೆ ನೀಡಲು ಸಾಧ್ಯವೇ?

ಸರ್ಕಾರದ ಮುಂದೆ ಈ ಕೆಳಗಿನ ಮೂರು ಆಯ್ಕೆಗಳಿವೆ:

– ಉದ್ಯೋಗ ಮಾರುಕಟ್ಟೆಯ ಬೇಡಿಕೆಗಳಿಗೆ ಅನುಗುಣವಾಗಿ ಸಮಾಜ ವಿಜ್ಞಾನದ ಶಿಕ್ಷಣದ ಬದಲಿಗೆ ತಾಂತ್ರಿಕ/ ವೃತ್ತಿಪರ ಶಿಕ್ಷಣವನ್ನು ಆರಂಭಿಸುವುದು. ಭಾರತದಲ್ಲಿ ಆರ್ಥಿಕ ಸುಧಾರಣೆ ಅನುಷ್ಠಾನಗೊಂಡಾಗಲೇ ಈ ಪ್ರಕ್ರಿಯೆ ಕೂಡ ಆರಂಭವಾಗಬೇಕಿತ್ತು. ಈಗಾಗಲೇ ಬಹುತೇಕ ಎರಡು ದಶಕಗಳು ನಷ್ಟವಾಗಿದೆ.

– ಪ್ರೌಢಶಾಲೆಯಿಂದಾಚೆಗೆ ಕೂಡ ಶಿಕ್ಷಣ ಲಭ್ಯವಿದೆ ಎಂಬ ಅಂಶ ಮನದಟ್ಟಾಗದಂತೆ ಭಾರತದ ಕೆಳವರ್ಗದವರಿಗೆ ಶಿಕ್ಷಣ ನೀಡುವುದು.

– ಅಥವಾ ಕೆಳವರ್ಗದ ಮಕ್ಕಳು ಕಾಲೇಜು ಪ್ರವೇಶಿಸಲಾಗದಂತಹ ವಾತಾವರಣವನ್ನು ನಿರ್ಮಿಸುವ ಪಿತೂರಿ ನಡೆಸುವುದು.

ಕೇಂದ್ರದ ಯುಪಿಎ ಸರ್ಕಾರ ಶಿಕ್ಷಣದ ಬಗ್ಗೆ ಹೊಸ ರೀತಿಯ ಆಲೋಚನೆಗಳನ್ನು ಮಾಡಲಾರಂಭಿಸಿದೆ. ಸರ್ಕಾರ ಈಗಾಗಲೇ ಶಿಕ್ಷಣದ ಹಕ್ಕು ಮಸೂದೆಯನ್ನು ಅಂಗೀಕರಿಸಿದೆ. ಇದರ ಪ್ರಕಾರ 6ರಿಂದ 14ವರ್ಷದ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕೇನೋ ಇದೆ. ಮತ್ತು ಇಂತಹ ಶಿಕ್ಷಣ ಒದಗಿಸುವುದು ಸರ್ಕಾರದ ಜವಾಬ್ದಾರಿಯೂ ಹೌದು. 6–14 ವರ್ಷ ವಯೋಮಾನದ ಮಕ್ಕಳಿಗೆ ಶಿಕ್ಷಣ ಒದಗಿಸುವುದೆಂದರೆ, ಪ್ರೌಢಶಾಲೆಯವರೆಗಿನ ಶಿಕ್ಷಣ ಮಾತ್ರ, ಹಾಗಾದರೆ ಎಂಟನೆಯ ತರಗತಿಯ ನಂತರ ಮಕ್ಕಳು ಏನು ಮಾಡಬೇಕು? ಎಂಟನೆಯ ತರಗತಿಯ ಸರ್ಟಿಫಿಕೇಟ್‌ಗೆ ಯಾವ ಉದ್ಯೋಗಾವಕಾಶವಿದೆ?

ಮೊದಲೇ ಮಧ್ಯಾಹ್ನದ ಬಿಸಿಯೂಟ ಸೇವಿಸಿ ಮಕ್ಕಳು ಪ್ರೌಢಶಾಲೆಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವುದೇ ಕಷ್ಟ ಅದಿರಲಿ. ಒಂದು ವೇಳೆ ಲಕ್ಷಾಂತರ ಸಂಖ್ಯೆಯಲ್ಲಿ ಮಕ್ಕಳು ಪ್ರೌಢಶಾಲೆಯಲ್ಲಿ ಉತ್ತೀರ್ಣರಾಗಿ ಕಾಲೇಜುಗಳಿಗೆ ಕಾಲಿಟ್ಟರೆ ಸರ್ಕಾರ ಏನು ಮಾಡಬಹುದು?

ಕೇಂದ್ರ ಸರ್ಕಾರದ ಬಳಿ ಇಂತಹ ಸಮಸ್ಯೆಯ ಶಮನಕ್ಕೆ ಕೂಡ ರಾಮಬಾಣ ಸಿದ್ಧವಿದೆ; ಪ್ರೌಢಶಾಲೆಯ ಪರೀಕ್ಷೆಗಳನ್ನು ಆಯ್ಕೆಯಾಧಾರಿತಗೊಳಿಸುವುದು. ಕೆಳವರ್ಗದ ವಿದ್ಯಾರ್ಥಿಗಳ ಮೇಲೆ ಇದು ಯಾವ ರೀತಿಯ ಪರಿಣಾಮ ಬೀರಬಹುದು?

ಕೆಳವರ್ಗದ ಜನರಿಗೆ ಈ ಬಗ್ಗೆ ಯಾವುದೇ ರೀತಿಯ ತಿಳುವಳಿಕೆ ಕೂಡ ಇರುವುದಿಲ್ಲ. ಈ ವರ್ಗದ ಜನ ತಮ್ಮ ಮಕ್ಕಳ ಭವಿಷ್ಯದ ಜವಾಬ್ದಾರಿಯನ್ನು ಶಿಕ್ಷಕರಿಗೆ ಒಪ್ಪಿಸಿಬಿಟ್ಟಿರುತ್ತಾರೆ. ಶಿಕ್ಷಕರು ಪ್ರೌಢಶಾಲೆಯವರೆಗಿನ ಶಿಕ್ಷಣವೇ ಮಹತ್ವದ ಗಡಿ ಎಂಬಂತೆ ವಿದ್ಯಾರ್ಥಿಗಳ/ ಪೋಷಕರ ತಲೆಗೆ ತುಂಬುತ್ತಿರುತ್ತಾರೆ. ಹಾಗಾಗಿ, ಈ ಪ್ರಕ್ರಿಯೆಯಲ್ಲಿ ಹಲವಾರು ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ ಈ ಮಹತ್ವದ ಪರೀಕ್ಷೆಯಲ್ಲಿ (ಎಸ್‌ಎಸ್‌ಎಲ್‌ಸಿ) ಉತ್ತೀರ್ಣರಾಗುವ ಸಾಧ್ಯತೆಯಾದರೂ ಇರುತ್ತದೆ.

ಆದರೆ ಈಗ ಪ್ರೌಢಶಾಲೆಯ ಅಂದರೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ವಿದ್ಯಾರ್ಥಿಗಳ ಆಯ್ಕೆಗೆ ಬಿಟ್ಟರೆ, ಬಹಳಷ್ಟು ಮಂದಿ ವಿದ್ಯಾರ್ಥಿಗಳು 'ಆಯ್ಕೆ'ಯ ಪರೀಕ್ಷಾ ಪದ್ಧತಿಗೆ ಜೋತುಬಿದ್ದು, ಸರ್ವನಾಶದ ಹಾದಿ ತುಳಿಯುವುದು ಗ್ಯಾರಂಟಿ.

ಪ್ರೌಢಶಾಲೆಯ ಪರೀಕ್ಷೆಗಳಿಗೆ 'ಆಯ್ಕೆ'ಯ ಅವಕಾಶ ನೀಡು ವುದು ನಿಜಕ್ಕೂ ಹಾಸ್ಯಾಸ್ಪದ ವಿಚಾರ.

ಪ್ರೌಢಶಾಲೆಯ ಸಾರ್ವಜನಿಕ ಪರೀಕ್ಷೆಗಳಲ್ಲಿ

> **ಆರ್ಥಿಕ ಸುಧಾರಣೆಯ ನಂತರ ಭಾರತದ ಆರ್ಥಿಕ ವ್ಯವಸ್ಥೆ ಹಿಂದೆಂದಿಗಿಂತಲೂ ಅತಿ ಹೆಚ್ಚಿನ ವೇಗದಲ್ಲಿ ವಿಸ್ತೃತವಾಗುತ್ತಿದೆ. ಹೊಸ ವೃತ್ತಿಗಳು ಅಸ್ತಿತ್ವಕ್ಕೆ ಬರುತ್ತಿವೆ. ಈ ಹಿಂದೆ ಐಎಎಸ್ ವೃತ್ತಿಗೆ ಸಿಗುತ್ತಿದ್ದ ಘನತೆ ಮತ್ತು ಗೌರವ ಈಗ ಅತ್ಯುತ್ತಮ ವಿದ್ಯಾಸಂಸ್ಥೆಗಳಲ್ಲಿ ಮ್ಯಾನೆಜ್‌ಮೆಂಟ್ ಪದವಿ ಪಡೆದವರಿಗೂ ಸಿಗುತ್ತಿದೆ. ಕೆಲವೇ ವರ್ಷಗಳ ಹಿಂದೆ ಬಹಳಷ್ಟು ಮಂದಿ ಮ್ಯಾನೆಜ್‌ಮೆಂಟ್ ಪದವೀಧರರು ಐಎಎಸ್ ವೃತ್ತಿಗೆ ಸೇರುತ್ತಿದ್ದರು. ಆದರೆ ಈಗ ಬಹಳಷ್ಟು ಮಂದಿ ಐಎಎಸ್ ಅಧಿಕಾರಿಗಳು ಮ್ಯಾನೆಜ್‌ಮೆಂಟ್ ವೃತ್ತಿಗೆ ಬರುತ್ತಿದ್ದಾರೆ. ಬದಲಾಗುತ್ತಿರುವ ಜೀವನಶೈಲಿಯ ಜೊತೆಗೆ ಹೊಸ ತಂತ್ರಜ್ಞಾನ ಆಧಾರಿತ ಆರ್ಥಿಕ ವ್ಯವಸ್ಥೆ ನುರಿತ ವೃತ್ತಿಪರರನ್ನು ಬಯಸುತ್ತದೆ.**

ಪರೀಕ್ಷಾ ಭಯದಿಂದ ಬಹಳಷ್ಟು ಮಂದಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂಬ ಕಾರಣವೊಡ್ಡುತ್ತಾರೆ ಕೇಂದ್ರದ ಶಿಕ್ಷಣ ಮಂತ್ರಿಗಳು. ಇದು ನಿಜವೇ ಆಗಿದ್ದರೆ, ಸರ್ಕಾರ ಪ್ರೀತಿಸುವುದನ್ನೂ ಕೂಡ ನಿಷೇಧಿಸಲಿ. ಭಾರತದಲ್ಲಿ ಪ್ರೀತಿಯ ಕಾರಣಗಳಿಗಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಯುವಕ/ ಯುವತಿಯರ ಸಂಖ್ಯೆ, ಪ್ರೌಢಶಾಲಾ ಪರೀಕ್ಷೆಯ ಭಯದಿಂದ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಗಿಂತ ಹೆಚ್ಚು.

ಸರ್ಕಾರದ ಹೊಸ ಶಿಕ್ಷಣ ನೀತಿ ಕೆಳವರ್ಗದ ಕೆಲಸಗಾರರನ್ನು 'ಪರಿಣತಿ ಹೊಂದಿಲ್ಲದವರು', 'ಅನಕ್ಷರಸ್ಥರು' ಎಂಬ ಗುಂಪಿನಲ್ಲಿಡುವ ಕೆಲಸ ಮಾಡುತ್ತಿರುವುದು ಕಾಕತಾಳೀಯವೇ? ಅಥವಾ ಇದು ಸ್ಪಷ್ಟವಾದ, ಮತ್ತು ಸರಳವಾದ ಪಿತೂರಿಯೇ?

* * * * *

ಮಧ್ಯಪ್ರದೇಶ ಸರ್ಕಾರ ಈ ಹಿಂದೆ ದಿಗ್ವಿಜಯ್ ಸಿಂಗ್ ನೇತೃತ್ವದಲ್ಲಿ ಜಾರಿಗೆ ತಂದ ವಿತರಕರ ವೈವಿಧ್ಯತೆಯ ಯೋಜನೆಗೆ ಇದೇ ಆಗಸ್ಟ್ 27ರಂದು ಎಂಟು ವರ್ಷ ತುಂಬುತ್ತದೆ.

2003ರ ಆಗಸ್ಟ್ 27ರಂದು ಸುಮಾರು 12 ಮಂದಿ ದಲಿತ/ ಆದಿವಾಸಿ ಉದ್ದಿಮೆದಾರರಿಂದ ಉತ್ಪನ್ನಗಳು ಮತ್ತು ಸೇವೆಯನ್ನು ಪಡೆದುಕೊಳ್ಳುವ ಮೊದಲ ಆದೇಶವನ್ನು ದಿಗ್ವಿಜಯ್ ಸಿಂಗ್ ಸರ್ಕಾರ ಹೊರಡಿಸಿತ್ತು. ಭೋಪಾಲ್ ಸಮ್ಮೇಳನವೆಂದೇ ಈಗ ಜನಪ್ರಿಯವಾಗಿರುವ ವಿಚಾರ ಸಂಕಿರಣವೊಂದನ್ನು ಮಧ್ಯಪ್ರದೇಶ ಸರ್ಕಾರ 2002ರ ಜನವರಿ 13 ಮತ್ತು 14ರಂದು ಆಯೋಜಿಸಿದ್ದು, ಇದರಲ್ಲಿ ದೇಶದ ಸುಮಾರು 300 ಮಂದಿ ದಲಿತ/ಆದಿವಾಸಿ ಬುದ್ಧಿಜೀವಿಗಳು ಭಾಗವಹಿಸಿದ್ದರು.

ದಲಿತ ಐಎಎಸ್ ಅಧಿಕಾರಿ ರಾಜಶೇಖರ್ ವುಂದ್ರು ಮತ್ತು ಸ್ನೇಹಿತ ಡಿ. ಶ್ಯಾಂ ಬಾಬು ಸಹಾಯದಿಂದ ನಾನು 21ನೆಯ ಶತಮಾನದ ದಲಿತ ಕಾರ್ಯಸೂಚಿಯನ್ನು ಬರೆದೆ. ಮಾದರಿ ಐಎಎಸ್ ಅಧಿಕಾರಿ ಡಾ. ಅಮರ್ ಸಿಂಗ್ ಮಧ್ಯಪ್ರದೇಶ ಸರ್ಕಾರ ಮತ್ತು ನಮ್ಮ ಗುಂಪಿನ ನಡುವೆ ಸೇತುವೆಯಾಗಿ ಕೆಲಸ ಮಾಡಿದ್ದರು. ಈ ಕಾರ್ಯಸೂಚಿ ಈಗ ಭೋಪಾಲ್ ಡ್ಯಾಕುಮೆಂಟ್ ಎಂದು ಜನಪ್ರಿಯವಾಗಿದೆ.

ದಲಿತ/ ಆದಿವಾಸಿಗಳ ಏಳ್ಗೆಗಾಗಿ ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ಯಾವ ಅಂಶಗಳನ್ನು ಯೋಜನೆಯ ಭಾಗವಾಗಿ ಘೋಷಣೆ ಮಾಡಬಹುದು ಎಂದು ಸಮ್ಮೇಳನದ ಮುಕ್ತಾಯದ ದಿನ ಅಂದರೆ ಜನವರಿ 14ರಂದು ದಿಗ್ವಿಜಯ್ ಸಿಂಗ್ ನಮ್ಮ ಅಭಿಪ್ರಾಯ ಕೇಳಿದರು. ನಾವು ಈ ಬಗ್ಗೆ ಒಂದು ನಿಮಿಷದ ಅನೌಪಚಾರಿಕ ಮಾತುಕತೆ ನಡೆಸಿ ಒಂದೇ ಒಂದು ಅಂಶವನ್ನು ಶಿಫಾರಸ್ಸು ಮಾಡಿದೆವು. ಸರ್ಕಾರ ದಲಿತ/ ಆದಿವಾಸಿ ಉದ್ದಿಮೆದಾರರಿಂದ ಉತ್ಪನ್ನಗಳು ಮತ್ತು ಸೇವೆಯನ್ನು ಪಡೆದುಕೊಳ್ಳುವ ಹಾಗೆ "ವಿತರಕರ ವೈವಿಧ್ಯತೆಯ ಯೋಜನೆ"ಯನ್ನು ಘೋಷಣೆ ಮಾಡುವಂತೆ ಶಿಫಾರಸ್ಸು ಮಾಡಿದೆವು.

ಒಂದು ನಿಮಿಷ ಈ ಬಗ್ಗೆ ಆಲೋಚಿಸಿದ ದಿಗ್ವಿಜಯ್ ಸಿಂಗ್ "ಇನ್ನು ಮುಂದೆ ದಲಿತ/ ಆದಿವಾಸಿ ಉದ್ದಿಮೆದಾರರಿಂದ ಶೇ. 30ರಷ್ಟು ಪ್ರಮಾಣದಲ್ಲಿ ಸರ್ಕಾರ ಉತ್ಪನ್ನಗಳು ಮತ್ತು ಸೇವೆಯನ್ನು ಖರೀದಿಸಲಿದೆ" ಎಂದು ಘೋಷಿಸಿದರು. ಸರ್ಕಾರ ದಲಿತ ಲಕ್ಷಾಧಿಪತಿಗಳನ್ನು ಸೃಷ್ಟಿ ಮಾಡುವ ಘೋಷಣೆ ನೀಡಿತು. ಗಣರಾಜ್ಯದ ಹಿಂದಿನ ದಿನ, ಅಂದಿನ ರಾಷ್ಟ್ರಪತಿ ದಿವಂಗತ ಕೆ ಆರ್ ನಾರಾಯಣನ್, ರಾಷ್ಟ್ರದ ನಾಯಕರು ವೈವಿಧ್ಯತೆಯನ್ನು ಎಲ್ಲ ರಂಗಗಳಲ್ಲಿಯೂ ಜಾರಿಗೆ ತರಬೇಕೆಂದು ತಮ್ಮ ಭಾಷಣದಲ್ಲಿ ಕರೆ ನೀಡಿದರು. ಈ ಹೊಸ ಬೆಳವಣಿಗೆಯನ್ನು ಗಮನಿಸಿದ ರಾಷ್ಟ್ರೀಯ ಮಾಧ್ಯಮದ ಕೆಲವು ಪತ್ರಕರ್ತರು, ಉದಾಹರಣೆಗೆ ಪ್ರೊ. ಪ್ರತಾಪ್ ಭಾನು ಮೆಹತಾ 'ದಿ ಹಿಂದೂ' ಪತ್ರಿಕೆಯಲ್ಲಿ ಭೋಪಾಲ್ ಘೋಷಣೆಯನ್ನು ಮನಸಾರೆ ಹೊಗಳಿ ಎರಡು ಅಂಕಣಗಳನ್ನು ಬರೆದರು. ಪ್ರೊ. ಮೆಹತಾ ಅವರ ಪ್ರಯತ್ನದಿಂದಾಗಿ ಭೋಪಾಲ್ ಸಮ್ಮೇಳನಕ್ಕೆ ರಾಷ್ಟ್ರವ್ಯಾಪಿ ಪ್ರಚಾರ ಸಿಕ್ಕಿತು.

ದಲಿತ/ ಆದಿವಾಸಿಗಳ ಅಭಿವೃದ್ಧಿಗಾಗಿ ಮಹತ್ವದ ಹೊಸ ಯೋಜನೆಗಳನ್ನು ಜಾರಿಗೆ ತಂದ ದಿಗ್ವಿಜಯ್ ಸಿಂಗ್ ಮರುವರ್ಷ ನಡೆದ ಚುನಾವಣೆಯಲ್ಲಿ ಸೋಲನುಭವಿಸಿದರು. ದಲಿತ/ ಆದಿವಾಸಿ ಅಜೆಂಡಾದಿಂದಾಗಿ ಸಿಂಗ್ ಅವರು ಚುನಾವಣೆಯಲ್ಲಿ ಸೋತರು ಎಂದು ಬಹಳಷ್ಟು ಮಂದಿ ವಿಶ್ಲೇಷಿಸುತ್ತಾರೆ. ಈ ಮಧ್ಯೆ ನಾನು ದಲಿತ/ ಆದಿವಾಸಿ ಉದ್ದಿಮೆದಾರರ ಪರ ವಾದವನ್ನು ಮುಂದುವರೆಸುತ್ತಾ ಬಂದೆ. ದಲಿತ/ ಆದಿವಾಸಿಗಳು ಮಾರುಕಟ್ಟೆಯಲ್ಲಿ ವ್ಯವಹಾರ ನಡೆಸಲು ಭಾರತೀಯ ಉದ್ಯಮ ಅವಕಾಶ ನೀಡಬೇಕು ಎಂಬ ವಿಚಾರ ಮಂಡಿಸುತ್ತಾ ಬಂದೆ.

ದಲಿತ ಮಧ್ಯಮವರ್ಗದವರಿಗೆ ಈ ವಾದ ಇಷ್ಟವಾಯಿತು. 2004ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ದಲಿತ/ ಆದಿವಾಸಿಗಳ ಉದ್ದಿಮೆದಾರರ ಅಂಶವನ್ನು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿಕೊಂಡಿತು. ದಲಿತ ಕೇಂದ್ರಿತ ಉದ್ಯಮದ ವೈವಿಧ್ಯತೆಯ ಅಜೆಂಡಾ ರಾಷ್ಟ್ರದ ಮುಖ್ಯವಾಹಿನಿಯನ್ನು ಪ್ರವೇಶಿಸಿದ್ದನ್ನು ಗಮನಿಸಿದ ನಾನು ದಲಿತ ಬಂಡವಾಳಶಾಹಿತ್ವದ ಬಗ್ಗೆ ವಿಚಾರ ಮಾಡಲಾರಂಭಿಸಿದೆ. ಈ ಮಧ್ಯೆ "ದೆಹಲಿ ದಲಿತ್ ಡೈವರ್ಸಿಟಿ ಗ್ರೂಪ್" ಎಂಬ ಒಕ್ಕೂಟವನ್ನು ಕಟ್ಟಿದ ಉದ್ಯಮಿ ಶಿಶುಪಾಲ್ ಸಿಂಗ್ ದೆಹಲಿಯಲ್ಲಿ ಮೂರು ಜಾಥಾಗಳನ್ನು ಆಯೋಜಿಸಿದ್ದರು. ಆದರೆ, ಶಿಶುಪಾಲ್ ಕೂಡ ತಮ್ಮ ಉದ್ಯಮ ಚಟುವಟಿಕೆಗಳಲ್ಲಿ ಮಗ್ನರಾದ ಬಳಿಕ ಈ ಚಳವಳಿ ತನ್ನ ಕಾವು ಕಳೆದುಕೊಂಡಿತು.

ಯಾರೂ ಊಹಿಸಲಾಗದ, ರೋಮಾಂಚಕಾರಿ ವಿಚಾರವಿದು! ಖಾಸಗಿ ಮಾತುಕತೆಯ ಸಂದರ್ಭದಲ್ಲಿ ಯಾವುದಾದರೂ ವ್ಯಕ್ತಿ ಪೋಪ್‌ಗೆ ಸೆಡ್ಡು ಹೊಡೆದು ಹೊರನಡೆದ ನಿದರ್ಶನ ಇತಿ ಹಾಸದಲ್ಲಿದೆಯೇ? ಇಂತಹ ನಿದರ್ಶನ ವೊಂದಿದೆ ಎನ್ನುವುದಕ್ಕೆ "ಟೈಮ್" ಮ್ಯಾಗಜೀನ್ ಸಾಕ್ಷಿಯಾಗಿದೆ. 1936ರ ಮಾರ್ಚ್ 16ರಂದು "ಟೈಮ್" ಮ್ಯಾಗಜೀನ್‌ನಲ್ಲಿ ಪ್ರಕಟವಾದ ಲೇಖನವೊಂದರ ವೆಬ್‌ಲಿಂಕ್ ಒಂದನ್ನು ಇತ್ತೀಚೆಗೆ ಜಿತೇಂದ್ರ ಮಕ್ವಾನಾ ನನಗೆ ಕಳುಹಿಸಿದ್ದ.

ಆದರೆ ಈಗ ಎಚ್ ಎಲ್ ದುಶಾದ್ ಅವರ ಪ್ರಯತ್ನದಿಂದಾಗಿ ದಲಿತ ಉದ್ದಿಮೆದಾರರ ಅಜೆಂಡಾ ಮತ್ತೆ ಜೀವ ಪಡೆದುಕೊಂಡಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಪ್ರತಿ ವರ್ಷ ಆಗಸ್ಟ್ 27ರಂದು "ವೈವಿಧ್ಯತೆಯ ದಿನ"ವನ್ನು ಆಚರಿಸುತ್ತಾ ಬಂದಿದ್ದಾರೆ ದುಶಾದ್. ಸಮಾರಂಭಕ್ಕೆ ಹಲವು ಮಹತ್ವದ ಚಿಂತಕರನ್ನು ದುಶಾದ್ ಆಹ್ವಾನಿಸುತ್ತಾರೆ. ಇಂತಹ ಒಂದು ಸಮಾರಂಭದಲ್ಲಿ ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ದಿಗ್ವಿಜಯ್ ಸಿಂಗ್ ಕೂಡ ಭಾಗವಹಿಸಿದ್ದರು. ಈ ವರ್ಷ ಸಿಂಗ್ ಭಾಗವಹಿಸಲಾಗಲಿಲ್ಲ. ಆದರೆ ದಿಗ್ವಿಜಯ್ ಸಿಂಗ್ ಅವರ ಕಾರ್ಯಸೂಚಿಯನ್ನು ಮುನ್ನಡೆಸಲು ಈ ವರ್ಷ ಹೊಸ ಸ್ನೇಹಿತರನ್ನು ದುಶಾದ್ ಸಂಪಾದಿಸಿದ್ದಾರೆ.

ಆಗಸ್ಟ್ 27ರಂದು ನಡೆದ ಸಮಾರಂಭದಲ್ಲಿ ಪ್ರಮುಖ ಮುಸ್ಲಿಂ ನಾಯಕ ಸೈಯದ್ ಶಹಾಬುದ್ದೀನ್ ಮತ್ತು ಇತ್ತೀಚಿನವರೆಗೆ ಬಿಜೆಪಿಯಲ್ಲಿದ್ದ ಸುಧೀಂದ್ರ ಕುಲಕರ್ಣಿ ಭಾಗವಹಿಸಿದ್ದರು. ಕುಲಕರ್ಣಿ ಅವರ ಪ್ರಯತ್ನದ ಫಲವಾಗಿ ಕಳೆದ ಲೋಕಸಭಾ ಚುನಾವಣೆಯ ಬಿಜೆಪಿ ಪ್ರಣಾಳಿಕೆಯಲ್ಲಿ ದಲಿತ/ ಆದಿವಾಸಿ ಉದ್ದಿಮೆದಾರರ ಅಂಶ ಸೇರ್ಪಡೆಯಾಗಿತ್ತು,

ಕಳೆದ ನಾಲ್ಕು ವರ್ಷಗಳಿಂದ ವಿತರಣೆ, ಡೀಲರ್‌ಷಿಪ್, ಗುತ್ತಿಗೆಯಲ್ಲಿ "ವೈವಿಧ್ಯತೆ"ಗೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನ, ಬರಹ, ವರದಿಗಳನ್ನು ಸಂಗ್ರಹಿಸಿ ದುಶಾದ್ ಅವರು "ಡೈವರ್ಸಿಟಿ ಇಯರ್ ಬುಕ್" ಹೊರತರುತ್ತಿದ್ದಾರೆ. ಕೆಲವು ತಿಂಗಳ ಹಿಂದೆ ಮಾಯಾವತಿ ನೇತೃತ್ವದ ಉತ್ತರಪ್ರದೇಶದ ಸರ್ಕಾರ ಕಟ್ಟಡ ಕಾಮಗಾರಿಗಳಲ್ಲಿ "ವೈವಿಧ್ಯತೆ"ಯ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. ದುಶಾದ್ ಅವರ ಈ ಚಳವಳಿಯಲ್ಲಿ ಖ್ಯಾತ ಉದ್ಯಮಿ ಬ್ರಿಜ್‌ಪಾಲ್ ಭಾರತಿ ಕೂಡ ಇತ್ತೀಚೆಗೆ ಸೇರಿಕೊಂಡಿದ್ದಾರೆ. ಉದ್ಯಮ ಮತ್ತು ವ್ಯಾಪಾರದಲ್ಲಿ ದಲಿತರ ಹಕ್ಕುಗಳ ಬಗ್ಗೆ ದುಶಾದ್ ನಡೆಸುತ್ತಿರುವ ಈ ಪ್ರಯತ್ನಕ್ಕೆ ಇವರಲ್ಲದೆ ಉತ್ತರ ಭಾರತದ ರಾಜ್ಯಗಳ ಹಲವಾರು ಮಂದಿ ಕೈಜೋಡಿಸಿದ್ದಾರೆ.

ಇತ್ತೀಚೆಗೆ ಪ್ರಮುಖ ದಲಿತ ಕಾರ್ಯಕರ್ತರೊಬ್ಬರು "ಮೀಸಲಾತಿ ಮತ್ತು ವೈವಿಧ್ಯತೆ"ಯ ನಡುವಿನ ವ್ಯತ್ಯಾಸದ ಬಗ್ಗೆ ನನಗೆ ಪ್ರಶ್ನೆ ಕೇಳಿದರು. "ವೈವಿಧ್ಯತೆ" ಮೀಸಲಾತಿಗೆ ಧಕ್ಕೆ ತರಲಿದೆ ಎಂಬುದು ಅವರ ಆತಂಕ. ವೈವಿಧ್ಯತೆ, ಮೀಸಲಾತಿಯ ವಿಸ್ತೃತ ರೂಪವಾಗಿದ್ದು ಸರ್ಕಾರಿ ವಲಯದ ಉದ್ಯೋಗಗಳು ಮಾತ್ರವಲ್ಲದೆ, ಖಾಸಗಿ ವಲಯಗಳು ಕೂಡ ಸೇರುತ್ತದೆ. ಇತರ ಉದ್ಯಮ ವಹಿವಾಟುಗಳ ಜೊತೆಗೆ ಚಲನಚಿತ್ರೋದ್ಯಮ, ಮಾಧ್ಯಮ ಉದ್ಯಮ ಕೂಡ ಇದರ ಪರಿಧಿಗೆ ಒಳಪಡುತ್ತದೆ ಎಂಬ ವಿವರಣೆ ನೀಡಿ ಅವರ ಆತಂಕ ನಿವಾರಿಸಿದೆ.

ಸರ್ಕಾರಿ ಕೆಲಸಗಳು ಕಡಿಮೆಯಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಉದ್ಯಮಗಳಲ್ಲಿ ದಲಿತರ ಹಕ್ಕುಗಳಿಗಾಗಿ ಪ್ರಯತ್ನ ನಡೆಸುತ್ತಿರುವ ದುಶಾದ್‌ರಂತಹವರ ಸಂಖ್ಯೆ ಹೆಚ್ಚಾಗಬೇಕಿದೆ. ದಲಿತರನ್ನು ಮಾರುಕಟ್ಟೆ ಅರ್ಥವ್ಯವಸ್ಥೆಯಿಂದ ಬೇರ್ಪಡಿಸಿ ಭಾರತ ಸದೃಢ ರಾಷ್ಟ್ರವಾಗಿ ಬೆಳೆಯಲು ಸಾಧ್ಯವಿಲ್ಲ.

ಅಸ್ಪೃಶ್ಯ ಲಿಂಕನ್!

ಯಾರೂ ಊಹಿಸಲಾಗದ, ರೋಮಾಂಚಕಾರಿ

ದಲಿತ/ಆದಿವಾಸಿ ಉದ್ದಿಮೆದಾರರಿಗೆ ಅವಕಾಶ

ವಿಚಾರವಿದು! ಖಾಸಗಿ ಮಾತುಕತೆಯ ಸಂದರ್ಭದಲ್ಲಿ
ಯಾವುದಾದರೂ ವ್ಯಕ್ತಿ ಪೋಪ್‌ಗೆ ಸೆಡ್ಡು ಹೊಡೆದು
ಹೊರನಡೆದ ನಿದರ್ಶನ ಇತಿಹಾಸದಲ್ಲಿದೆಯೇ? ಇಂತಹ
ನಿದರ್ಶನವೊಂದಿದೆ ಎನ್ನುವುದಕ್ಕೆ "ಟೈಮ್" ಮ್ಯಾಗಜಿನ್
ಸಾಕ್ಷಿಯಾಗಿದೆ.

1936ರ ಮಾರ್ಚ್ 16ರಂದು "ಟೈಮ್" ಮ್ಯಾಗ
ಜಿನ್‌ನಲ್ಲಿ ಪ್ರಕಟವಾದ ಲೇಖನವೊಂದರ ವೆಬ್‌ಲಿಂಕ್
ಒಂದನ್ನು ಇತ್ತೀಚೆಗೆ ಜಿತೇಂದ್ರ ಮಕ್ವಾನಾ ನನಗೆ ಕಳುಹಿ
ಸಿದ್ದ. "ಧರ್ಮ: ಅಸ್ಪೃಶ್ಯ ಲಿಂಕನ್" (ರಿಲಿಜನ್: ಅನಟಚ
ಬಲ್ ಲಿಂಕನ್) ಎಂಬ ಶೀರ್ಷಿಕೆಯ ಸುದ್ದಿ ಈಗ ಫೇಸ್
ಬುಕ್‌ನಲ್ಲಿ ಜನಪ್ರಿಯವಾಗಿದೆ.

ಈ ಲೇಖನವನ್ನು ಓದುತ್ತಾ ಹೋದಂತೆ ಅಂಬೇ
ಡ್ಕರ್ ಬಗ್ಗೆ ನಮಗೆಷ್ಟು ಗೊತ್ತು ಎಂಬ ಪ್ರಶ್ನೆ ನನ್ನನ್ನು
ಕಾಡಿತು. ಸುಮಾರು 73 ವರ್ಷಗಳ ಹಿಂದೆ "ಟೈಮ್"
ಮ್ಯಾಗಜಿನ್ ಅಂಬೇಡ್ಕರ್ ಬಗ್ಗೆ ಲೇಖನ ಪ್ರಕಟಿಸಿ, ಅವ
ರನ್ನು "ಅಸ್ಪೃಶ್ಯ ಲಿಂಕನ್" ಎಂದು ಪ್ರಶಂಸಿದ್ದು ನಮ್ಮಲ್ಲಿ
ಎಷ್ಟು ಮಂದಿಗೆ ಗೊತ್ತು? "ಟೈಮ್" ಮ್ಯಾಗಜಿನ್‌ನ
ಲೇಖನ ಅಮೆರಿಕಾದ ಜನಪ್ರಿಯ ಮ್ಯಾಗಜಿನ್
"ಜಿಯೋನ್ಸ್ ಹೆರಾಲ್ಡ್"ನ ಮೇಲೆ ಆಧಾರಿತವಾಗಿದೆ.

"ಜಿಯೋನ್ಸ್ ಹೆರಾಲ್ಡ್" ಮ್ಯಾಗಜಿನ್‌ನ ಸಂಪಾದಕ
ಲೂಯಿಸ್ ಹಾರ್ಟ್‌ಮನ್ ಡಾ. ಅಂಬೇಡ್ಕರ್ ಅವರ
ಸಂದರ್ಶನ ನಡೆಸಲು 1936ರಲ್ಲಿ ಭಾರತಕ್ಕೆ ಬಂದಿದ್ದರು
ಎಂಬ ಸತ್ಯವನ್ನು ಬಹಳಷ್ಟು ಮಂದಿ ನಂಬುವುದಿಲ್ಲ. ಆ
ಕಾಲದಲ್ಲಿ ಸಾಮಾನ್ಯಪ್ರಯಾಣಿಕರಿಗೆ ವಿಮಾನಯಾನ
ಸೌಲಭ್ಯ ಇರಲಿಲ್ಲ. ಹೀಗಾಗಿ ಅಂಬೇಡ್ಕರ್ ಅವರ ಈ
ಒಂದು ಸಂದರ್ಶನಕ್ಕಾಗಿ ಲೂಯಿಸ್ ಹಲವು ವಾರಗಳನ್ನು
ಕಳೆದಿದ್ದರು. "ನಾನು ಹಿಂದೂ ಆಗಿ ಸಾಯುವುದಿಲ್ಲ"
ಎಂದು ನಾಸಿಕ್ ನಗರದಲ್ಲಿ ಘೋಷಣೆ ಮಾಡಿದ ನಂತರ
ಅಂಬೇಡ್ಕರ್ ಜಗತ್ತಿನ ಗಮನ ಸೆಳೆದಿದ್ದರು.

ಆದರೆ "ಟೈಮ್" ಮ್ಯಾಗಜಿನ್‌ನ ಲೇಖನದಲ್ಲಿರುವ
ವಿಷಯಕ್ಕೆ ಹೋಲಿಸಿದರೆ ಇವೆಲ್ಲ ತೀರ ಸಣ್ಣಮಟ್ಟ ವಿವರ
ಗಳಾಗಿ ಕಾಣುತ್ತವೆ. "ರೋಮ್‌ನ ಪೋಪ್‌ರೊಂದಿಗಿನ
ಖಾಸಗಿ ಭೇಟಿಯ ಸಂದರ್ಭದಲ್ಲಿ ದಿಢೀರನೆ ಹೊರನಡೆದ
ಏಕೈಕ ಜೀವಂತ ವ್ಯಕ್ತಿ ಅಂಬೇಡ್ಕರ್" ಎಂಬ ವಿವರ ಈ
ಲೇಖನದಲ್ಲಿದೆ.

ಜಗತ್ತಿನ ಇತಿಹಾಸದಲ್ಲಿ ಓರ್ವ ವ್ಯಕ್ತಿಯನ್ನು "ಏಕೈಕ
ಜೀವಂತ ವ್ಯಕ್ತಿ" ಎಂಬ ರೂಪಕ ಬಳಸಿ ವಿಶ್ಲೇಷಿಸಿರು
ವುದು ಅಪರೂಪದಲ್ಲಿ ಅಪರೂಪ. ಘಟನೆ ನಡೆದ ಸಂದ
ರ್ಭದಲ್ಲಿ ಹನ್ನೊಂದನೇ ಪೋಪ್ ಪಿಯಸ್ ಅವ
ರೊಂದಿಗೆ ಡಾ. ಅಂಬೇಡ್ಕರ್ ಖಾಸಗಿ ಭೇಟಿಯಲ್ಲಿದ್ದರು.
ಜಾತಿ-ವಿರೋಧಿ ಹೋರಾಟಕ್ಕೆ ಅಂತರಾಷ್ಟ್ರೀಯ ಬೆಂಬಲ
ಪಡೆಯುವ ನಿಟ್ಟಿನಲ್ಲಿ ಪೋಪ್ ಅವರನ್ನು ಅಂಬೇಡ್ಕರ್
ಭೇಟಿ ಮಾಡಿದ್ದರು.

ಲೇಖನದ ಪ್ರಕಾರ, ಭಾರತದ ಅಸ್ಪೃಶ್ಯರ
ಹೀನಾಯ ಸ್ಥಿತಿಯ ಬಗ್ಗೆ ಡಾ. ಅಂಬೇಡ್ಕರ್ ಅವರಿಂದ
ತಿಳಿದುಕೊಂಡ ಬಳಿಕ, "ಈ ಅನ್ಯಾಯಗಳನ್ನು ಸರಿಪಡಿ
ಸಲು ಮೂರು ಅಥವಾ ನಾಲ್ಕು ಶತಮಾನಗಳಾಗಬಹುದು

**ಈ ಲೇಖನವನ್ನು ಓದುತ್ತಾ ಹೋದಂತೆ
ಅಂಬೇಡ್ಕರ್ ಬಗ್ಗೆ ನಮಗೆಷ್ಟು ಗೊತ್ತು
ಎಂಬ ಪ್ರಶ್ನೆ ನನ್ನನ್ನು ಕಾಡಿತು. ಸುಮಾರು
73 ವರ್ಷಗಳ ಹಿಂದೆ "ಟೈಮ್" ಮ್ಯಾಗ
ಜಿನ್ ಅಂಬೇಡ್ಕರ್ ಬಗ್ಗೆ ಲೇಖನ ಪ್ರಕ
ಟಿಸಿ, ಅವರನ್ನು "ಅಸ್ಪೃಶ್ಯ ಲಿಂಕನ್"
ಎಂದು ಪ್ರಶಂಸಿದ್ದು ನಮ್ಮಲ್ಲಿ ಎಷ್ಟು
ಮಂದಿಗೆ ಗೊತ್ತು? "ಟೈಮ್" ಮ್ಯಾಗ
ಜಿನ್‌ನ ಲೇಖನ ಅಮೆರಿಕಾದ ಜನ
ಪ್ರಿಯ ಮ್ಯಾಗಜಿನ್ "ಜಿಯೋನ್ಸ್
ಹೆರಾಲ್ಡ್"ನ ಮೇಲೆ ಆಧಾರಿತವಾಗಿದೆ.**

ಮಗು.(ಅಲ್ಲಿಯವರೆಗೆ) ಸಹನೆ ಇರಲಿ" ಎಂದು ಪೋಪ್
ಉತ್ತರಿಸುತ್ತಾರೆ. ಪೋಪ್ ಅವರ ಪ್ರತಿಕ್ರಿಯೆಯಿಂದ ಚಕಿತ
ರಾದ ಅಂಬೇಡ್ಕರ್ ಅಲ್ಲಿಂದ ದಿಢೀರನೆ ಎದ್ದು ಹೊರನಡೆ
ಯುತ್ತಾರೆ. ಜಗತ್ತಿನ ಶ್ರೀಮಂತ ಹಾಗೂ ಜನಪ್ರಿಯ
ನಾಯಕರು ಪೋಪ್‌ರ ಅನುಗ್ರಹಕ್ಕೆ ಪಾತ್ರರಾಗಲು ತುದಿ
ಗಾಲಲ್ಲಿರುತ್ತಿದ್ದ ಆ ಸಂದರ್ಭದಲ್ಲಿ ಪೋಪ್‌ಗೆ ಸೆಡ್ಡು
ಹೊಡೆದವರು ಅಂಬೇಡ್ಕರ್.

ಆ ಅವಧಿಯಲ್ಲಿ ಪೋಪ್ ಅವರನ್ನು ವಿರೋ
ಧಿಸುವುದೆಂದರೆ, ದೇವರನ್ನೇ ವಿರೋಧಿಸಿದ ಹಾಗೆ.
ಒಂದು ವೇಳೆ ದೇವರೇ ದಲಿತರ ಮುಕ್ತಿಗಾಗಿ ಮೂರು
ಅಥವಾ ನಾಲ್ಕು ಶತಮಾನಗಳ ವೇಳಾಪಟ್ಟಿಯನ್ನೇನಾ
ದರೂ ನಿಗದಿಪಡಿಸಿದ್ದರೆ ಡಾ. ಅಂಬೇಡ್ಕರ್ ಎಲ್ಲ ದೇವರು
ಗಳ ವಿರುದ್ಧ ಹೋರಾಡುತ್ತಿದ್ದರು. ಪೋಪ್ ಅವರನ್ನು
ವಿರೋಧಿಸುವ ಮೂಲಕ ಅಂಬೇಡ್ಕರ್ ಅವರು ಎಲ್ಲ
ಪಶ್ಚಿಮ ರಾಷ್ಟ್ರಗಳ ನೈತಿಕ ಬೆಂಬಲವನ್ನು ಅಪೇಕ್ಷಿಸುತ್ತಿ
ದ್ದರು. ಅಂಬೇಡ್ಕರ್ ಅವರ ಗುಣವೇ ಅಂಥಹುದು.
ಅವರು ಯಾರಿಗೂ ಹೆದರುತ್ತಿರಲಿಲ್ಲ.

ಬ್ರಿಟಿಷ್ ಸಂಸ್ಥಾನಕ್ಕೂ ಹೆದರಲಿಲ್ಲ, ಗಾಂಧೀಜಿ
ಅವರಿಗೂ ಹೆದರಲಿಲ್ಲ. ಹಿಂದೂ ಧರ್ಮದ ಜಾತಿ ವ್ಯವ
ಸ್ಥೆಗೆ ಅವರು ಸವಾಲು ಹಾಕಿದರು. ಅಂಬೇಡ್ಕರ್ ಅವರಿಗೆ
ತಮ್ಮ ಜೀವಿತಾವಧಿಯಲ್ಲಿಯೇ ಅಸ್ಪೃಶ್ಯರ ಸಮಸ್ಯೆಗಳಿಗೆ
ಪರಿಹಾರಗಳು ಬೇಕಿತ್ತು.

ಪೋಪ್ ಅವರಿಗೆ ಸವಾಲು ಹಾಕುವಷ್ಟು ನೈತಿಕ
ಸ್ಥೈರ್ಯವನ್ನು ಹೊಂದಿದ್ದ ಅಂಬೇಡ್ಕರ್, ಸಮಸ್ಯೆಗೆ ಪರಿ
ಹಾರ ಹುಡುಕುವ ಛಾತಿಯನ್ನು ಕೂಡ ಹೊಂದಿದ್ದರು
ಎಂದು ವಾದಿಸಬಹುದು. 1950ರಲ್ಲಿ ಭಾರತೀಯ ಗಣರಾ
ಜ್ಯದ ಸಂವಿಧಾನವನ್ನು ಬರೆದು ದಲಿತರಿಗೆ ಮೀಸಲಾತಿಯ
ಮುಕ್ತಿ ಮಾರ್ಗವನ್ನು ತೋರಿದಾಗ ಪೋಪ್ ಅವರ
"ಮೂರು ಅಥವಾ ನಾಲ್ಕು ಶತಮಾನಗಳ" ಭವಿಷ್ಯವಾಣಿ
ಅವರ ಜೀವಿತಾವಧಿಯಲ್ಲಿಯೇ ಸುಳ್ಳಾಯಿತು. ಅದು
ಅಂಬೇಡ್ಕರ್ ಅವರಿಗಿದ್ದ ದೂರದೃಷ್ಟಿ ಮತ್ತು ಛಲ.

1936ರಲ್ಲಿ ಹಿಂದೂ ಧರ್ಮವನ್ನು ತೊರೆಯುವು
ದಾಗಿ ಹೇಳಿದ ಅಂಬೇಡ್ಕರ್ ಮತಾಂತರ ಹೊಂದಲು
ಮೂರು ದಶಕಗಳಷ್ಟು ಸಮಯವನ್ನೇಕೆ ತೆಗೆದುಕೊಂಡರು
ಎಂಬ ಅಂಶವನ್ನು ತಿಳಿದುಕೊಳ್ಳಲು ವಿದ್ವಾಂಸರು ಮತ್ತು
ಚಿಂತಕರು ಯಾವಾಗಲೂ ಉತ್ಸುಕರಾಗಿರುತ್ತಾರೆ.

ಅಂಬೇಡ್ಕರ್ ಅವರು ದಲಿತರ ಹಕ್ಕುಗಳನ್ನು ಪಡೆ
ದುಕೊಳ್ಳುವ ನಿಟ್ಟಿನಲ್ಲಿ ರಾಜಕೀಯ ಅಸ್ತ್ರವಾಗಿ ಮತಾಂತ
ರದ ಬೆದರಿಕೆ ಯನ್ನು ಬಳಸುತ್ತಿದ್ದರೆ? ಅಥವಾ ಯಾವ
ಧರ್ಮಕ್ಕೆ ಮತಾಂತರ ಹೊಂದಬೇಕು ಎಂದು ನಿರ್ಧರಿ
ಸುವ ನಿಟ್ಟಿನಲ್ಲಿ ಅವರಿಗೇನಾದರೂ ಗೊಂದಲಗಳಿದ್ದವೇ?
ಅಥವಾ ಅವರಿಗೆ ಇನ್ಯಾವುದಾದರೂ ಆತಂಕಗಳು ಇತ್ತೇ?
ಅವರ ಮನಸ್ಸಿನಲ್ಲಿ ಇದ್ದುದಾದರೂ ಏನು?

ಈ ಜಿಜ್ಞಾಸೆಗೆ ಪೂರಕವಾದ ಅಂಶವನ್ನು "ಟೈಮ್"
ಮ್ಯಾಗಜಿನ್‌ನಲ್ಲಿ ಪ್ರಕಟವಾದ ಲೂಯಿಸ್ ಆಲಿವರ್
ಹಾರ್ಟ್‌ಮನ್ ಮತ್ತು ಅಂಬೇಡ್ಕರ್ ನಡುವಿನ ಈ ಅಪ
ರೂಪದ ಸಂವಾದದಲ್ಲಿ ನಾವು ಕಾಣಬಹುದು.

"ಒಂದಂತೂ ನಿರ್ಧಾರವಾಗಿದೆ. ನಾವು ಹಿಂದೂ
ಧರ್ಮದಿಂದ ಹೊರನಡೆಯುವುದು ಖಚಿತ. ಆದರೆ
ಯಾವ ದಿಕ್ಕಿಗೆ ನಮ್ಮ ಪಯಣವೆಂದು ಇನ್ನೂ ನಿರ್ಧರಿ
ಸಿಲ್ಲ" ಎಂದು ಅಂಬೇಡ್ಕರ್ ಉತ್ತರಿಸಿದರು. "ನಿರ್ಧಾರನ್ನು
ಘೋಷಿಸುವಷ್ಟು ಧೈರ್ಯ ಈಗ ನಿಮಗಿಲ್ಲ. ನೀವು
ಹಿಂದೂಗಳ ಜೊತೆ ಹೊಂದಾಣಿಕೆ ಮಾಡಿಕೊಂಡರೆ ಎಲ್ಲ
ವನ್ನು ಕಳೆದುಕೊಳ್ಳುತ್ತೀರಿ; ಮಹಮದೀಯರ ಧರ್ಮಕ್ಕೆ
ಸೇರಿದರೆ ಹಿಂದೂಗಳು ನಿಮ್ಮನ್ನು ಸರ್ವನಾಶ ಮಾಡು
ತ್ತಾರೆ; ಕ್ರೈಸ್ತ ಧರ್ಮಕ್ಕೆ ಸೇರಿದರೆ ಹಿಂದೂ-ಮುಸ್ಲಿಮರಿ
ಬ್ಬರೂ ನಿಮ್ಮ ಬೆನ್ನು ಹತ್ತುತ್ತಾರೆ" ಎಂದು ನಾನು ಹೇಳಿ
ದಾಗ, "ಹೌದು, ನಾವಿನ್ನೂ ಸಿದ್ಧರಾಗಿಲ್ಲ" ಎಂದು ಅಂಬೇ
ಡ್ಕರ್ ಪ್ರತಿಕ್ರಿಯಿಸಿದರು.

ಹಾರ್ಟ್‌ಮನ್ ಅಂಬೇಡ್ಕರ್ ಅವರನ್ನು "ಅಸ್ಪೃಶ್ಯ
ಲಿಂಕನ್" ಎಂದು ಕರೆದಿದ್ದಾರೆ. "ಟೈಮ್" ಮ್ಯಾಗಜಿನ್
ಕೂಡ ಈ ಹೋಲಿಕೆಯನ್ನು ಅನುಮೋದಿಸಿದೆ.
ಮುಂದೊಂದು ದಿನ ಅಂಬೇಡ್ಕರ್ ಭಾರತದ ಸಂವಿಧಾನ
ವನ್ನು ಬರೆಯಲಿದ್ದಾರೆ ಎಂದು ಯಾರೂ ಊಹಿಸಲೂ
ಸಾಧ್ಯವಿರದ ಆ ಸಂದರ್ಭದಲ್ಲಿ ಇದೇ ಅಂಬೇಡ್ಕರ್ ಇತಿ
ಹಾಸದ ದಿಕ್ಕನ್ನೇ ಬದಲಿಸಲಿದ್ದಾರೆ ಎಂದು ಹಾರ್ಟ್‌ಮನ್
1936ರಲ್ಲಿಯೇ ಭವಿಷ್ಯ ನುಡಿದಿದ್ದರು.

ಮುಂದುವರೆದು ಹಾರ್ಟ್‌ಮನ್ ಬರೆಯುತ್ತಾರೆ;
"ಅಂಬೇಡ್ಕರ್ ಅವರ ವ್ಯಕ್ತಿತ್ವದ ಹಲವಾರು ಅಂಶಗಳು
ನಮಗೆ ಅರ್ಥವೇ ಆಗುವುದಿಲ್ಲ. ಒಬ್ಬ ಮಹಾನ್ ಮನಃ
ಶಾಸ್ತ್ರಜ್ಞನಿಗೆ ಮಾತ್ರ ಅಂಬೇಡ್ಕರ್ ಅವರ ವ್ಯಕ್ತಿತ್ವವನ್ನು
ವಿವರಿಸಲು ಸಾಧ್ಯ.

ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಹನ್ನೊಂದನೇ
ಪೋಪ್ ಪಿಯಸ್ ಓರ್ವ ಸಾಮಾನ್ಯ ವ್ಯಕ್ತಿ, ಸುಮಾರು
350 ದಶಲಕ್ಷ ಹಿಂದೂ ದೇವ-ದೇವತೆಗಳು ಕಸದ ರಾಶಿ,
ಗಾಂಧೀಜಿ ಓರ್ವ ಫಲಾಯನವಾದಿ ಮತ್ತು ನೆಹರು ಅಧಿ
ಕಾರದಾಹಿ. ಇತಿಹಾಸಕ್ಕೆ ಹೊಸ ದಿಕ್ಕು ತೋರಿಸುತ್ತಿರುವ
ಅಂಬೇಡ್ಕರ್ ನಿಜಕ್ಕೂ ವಿಶೇಷವಾದ ವ್ಯಕ್ತಿ." □

ಬುದ್ಧಾಯಣ

೦

೪೯

ರಾಜಪುರೋಹಿತ ಕಾಗೆಗಳ ಮೈಯಲ್ಲಿ ಕೊಬ್ಬಿರುವುದೇ...!!

ಸಿ. ಎಚ್. ರಾಜಶೇಖರ್

ಅಂದಿನ ದಿನಗಳಲ್ಲಿ ದೇವಮಾನವರ ಗುರುವಾದ ಗೌತಮ ಬುದ್ಧರು ಸಾವತ್ಥಿಯ ಜೇತವನದಲ್ಲಿ ತನ್ನ ಅಪಾರ ಭಿಕ್ಷುಗಳೊಂದಿಗೆ ತಂಗಿದ್ದರು. ಅದಕ್ಕೂ ಬಲು ಹಿಂದೆ ವಾರಣಸಿ ನಗರವನ್ನು ಬ್ರಹ್ಮದತ್ತನೆಂಬ ರಾಜನು ಆಳುತ್ತಿದ್ದನು. ಅಂಥಹ ಸಂದರ್ಭದಲ್ಲಿ ಬೋಧಿಸತ್ವರು ಕಾಗೆಯಾಗಿ ಹುಟ್ಟಿದ್ದರು. ಆಗ ಅಲ್ಲೊಂದು ಘಟನೆಯು ಹೀಗೆ ಸಂಭವಿಸಿತು:

ನಗರದ ಮುಖ್ಯದ್ವಾರದ ಬಳಿ ಇದ್ದ ತೋರಣ ಒಂದರ ಮೇಲೆ ಎರಡು ಕಾಗೆಗಳು ಕುಳಿತು ಹರಟೆ ಹೊಡೆಯುತ್ತಿದ್ದವು. ಆ ಸಮಯಕ್ಕೆ ಸರಿಯಾಗಿ ಬ್ರಹ್ಮದತ್ತ ರಾಜನ ಆಸ್ಥಾನದಲ್ಲಿ ರಾಜಪುರೋಹಿತನಾಗಿದ್ದ ಬ್ರಾಹ್ಮಣನು ಹೊಳೆಯಲ್ಲಿ ಸ್ನಾನ ಮುಗಿಸಿ ಮನೆಯತ್ತ ತೆರಳುತ್ತಿದ್ದ. ಆತ ಶುಭ್ರವಾದ ಬಿಳಿ ಬಟ್ಟೆಯನ್ನು ಧರಿಸಿದ. ಮೈಗೆ ಸುಗಂಧ ಲೇಪನವನ್ನು ಮಾಡಿಕೊಂಡಿದ್ದ. ಆತನ ಗತ್ತು ಗೈರತ್ತನ್ನು ಕಂಡ ಒಂದು ಕಾಗೆಗೆ ಆತನ ಅಹಂಕಾರವನ್ನು ಮುರಿಯಬೇಕು ಅನ್ನಿಸಿತು. ಆಗ ಅದು ತನ್ನ ಮಿತ್ರನನ್ನು ಕುರಿತು:

"ಮಿತ್ರ, ಆ ರಾಜಪುರೋಹಿತನನ್ನು ಕಂಡೆಯಾ? ಲೋಕದಲ್ಲಿ ನನಗಿಂತ ಮಿಗಿಲಾದವರು ಯಾರೂ ಇಲ್ಲ ಎಂದು ಭ್ರಮಿಸಿದಂತಿದೆ. ಈಗ ನೋಡು ಅವನ ತಲೆಯ ಮೇಲೆ ಹೇಗೆ ಪಿಚಿಕೆಯನ್ನು ಹಾಕುತ್ತೇನೆ!" ಎನ್ನಲು ಮತ್ತೊಂದು ಕಾಗೆ:

"ಅಯ್ಯಾ, ನೀನು ಹಾಗೇನಾದರೂ ಮಾಡಿದರೆ ಅನಗತ್ಯವಾಗಿ ಅಪಾಯವನ್ನು ಆಹ್ವಾನಿಸಿಕೊಂಡಂತೆಯೆ ಸರಿ!"

"ಅದು ಹೇಗೆ?'

"ಆತ ಸಾಧಾರಣ, ಮನುಷ್ಯನಲ್ಲ. ಒಬ್ಬ ರಾಜಪುರೋಹಿತ, ಆತ ರಾಜನಿಗೆ ಬಲು ಆಪ್ತ. ನಮ್ಮ ರಾಜನೋ ಹೇಳಿ ಕೇಳಿ ಅವಿವೇಕಿ. ಅವನ ಒಪ್ಪಿಗೆ ಇಲ್ಲದೆ ಯಾವುದೇ ಕಾರ್ಯವನ್ನು ಮಾಡುವುದಿಲ್ಲ. ಹಾಗಾಗಿ ಈ ಬ್ರಾಹ್ಮಣ ಅಧಿಕಾರ. ಐಶ್ವರ್ಯ ಮತ್ತು ಕುತಂತ್ರ ಬುದ್ಧಿಯುಳ್ಳವನಾಗಿದ್ದಾನೆ. ಇಂತವನೊಂದಿಗೆ ವೈರವನ್ನು ಕಟ್ಟಿಕೊಂಡರೆ ನಿನ್ನನ್ನು ನೀನು ಹಾಳು ಮಾಡಿಕೊಳ್ಳುವುದರ ಜೊತೆಗೆ ನಿನ್ನ ಕುಲಕ್ಕೇ ಕೊಳ್ಳಿ ಇಟ್ಟಂತಾಗುತ್ತದೆ!"

"ಅದು ಹೇಗೆ? ಈ ಕಾಡಿನಲ್ಲಿ ಸಾವಿರಾರು ಕಾಗೆಗಳಿವೆ. ಅವುಗಳಲ್ಲಿ ನನ್ನನ್ನು ಹೆಗೆ ಕಂಡು ಹಿಡಿದು ಶಿಕ್ಷಿಸಬಲ್ಲ?"

"ಮಿತ್ರ, ಇದು ಸರಿಯಾದ ಕೆಲಸವಲ್ಲ. ನೀನಾಗಿಯೇ ಅಪಾಯವನ್ನು ಅಹ್ವಾನಿಸಿಕೊಳ್ಳುವುದು ಜಾಣರ ಲಕ್ಷಣವಲ್ಲ. ಸ್ವಲ್ಪ ತಾಳು ನಿನ್ನಂತಹ ಮೂರ್ಖನೊಂದಿಗೆ ಗೆಳೆತನ ಸಲ್ಲದು. ನಾನು ಹಾರಿ ಹೋಗುತ್ತೇನೆ!" ಎಂದು ಅದು ತನ್ನ ಪಾಡಿಗೆ ತಾನು ಪುರ್ರನೆ ಹಾರಿ ಕಾಡಿನಲ್ಲಿ ಕಣ್ಮರೆಯಾಯಿತು. ಈ ಕಾಗೆಯು ತನ್ನ ಅವಿವೇಕ ಮತ್ತು ಸೊಕ್ಕಿನ ಕಾರಣದಿಂದ ಕುಳಿತಲ್ಲಿಂದ ಮೇಲೆ ಹಾರಿ ಸರಿಯಾಗಿ ಆ ಬ್ರಾಹ್ಮಣನ ನೆತ್ತಿಯ ಮೇಲೆ ಪಿಚಿಕೆಯನ್ನು ಹಾಕಿತು. ಅದು ತಲೆಯಿಂದ ಹರಿದು ಮುಖ ಮತ್ತು ಬಟ್ಟೆಯನ್ನೆಲ್ಲ ಕಳಂಕಗೊಳಿಸಿತು. ಕೋಪಗೊಂಡ ಬ್ರಾಹ್ಮಣನು ಕಾಗೆಯತ್ತ ಕೆಂಗಣ್ಣು ಬಿಟ್ಟ. ಅದು ಆತನಿಗೆ ಅಣಕಿಸುತ್ತಾ ಹಾರಿ ಹೋಯಿತು.

ಆತ ತನ್ನ ಕೋಪವನ್ನು ನುಂಗಿ ಶಾಂತನಾಗುವ ಬದಲು ಕೈ



"ಮಿತ್ರ, ಇದು ಸರಿಯಾದ ಕೆಲಸವಲ್ಲ. ನೀನಾಗಿಯೇ ಅಪಾಯವನ್ನು ಅಹ್ವಾನಿಸಿಕೊಳ್ಳುವುದು ಜಾಣರ ಲಕ್ಷಣವಲ್ಲ. ಸ್ವಲ್ಪ ತಾಳು ನಿನ್ನಂತಹ ಮೂರ್ಖನೊಂದಿಗೆ ಗೆಳೆತನ ಸಲ್ಲದು. ನಾನು ಹಾರಿ ಹೋಗುತ್ತೇನೆ!" ಎಂದು ಅದು ತನ್ನ ಪಾಡಿಗೆ ತಾನು ಪುರ್ರನೆ ಹಾರಿ ಕಾಡಿನಲ್ಲಿ ಕಣ್ಮರೆಯಾಯಿತು. ಈ ಕಾಗೆಯು ತನ್ನ ಅವಿವೇಕ ಮತ್ತು ಸೊಕ್ಕಿನ ಕಾರಣದಿಂದ ಕುಳಿತಲ್ಲಿಂದ ಮೇಲೆ ಹಾರಿ ಸರಿಯಾಗಿ ಆ ಬ್ರಾಹ್ಮಣನ ನೆತ್ತಿಯ ಮೇಲೆ ಪಿಚಿಕೆಯನ್ನು ಹಾಕಿತು. ಅದು ತಲೆಯಿಂದ ಹರಿದು ಮುಖ ಮತ್ತು ಬಟ್ಟೆಯನ್ನೆಲ್ಲ ಕಳಂಕಗೊಳಿಸಿತು. ಕೋಪಗೊಂಡ ಬ್ರಾಹ್ಮಣನು ಕಾಗೆಯತ್ತ ಕೆಂಗಣ್ಣು ಬಿಟ್ಟ. ಅದು ಆತನಿಗೆ ಅಣಕಿಸುತ್ತಾ ಹಾರಿ ಹೋಯಿತು.

ಕೈ ಹಿಸುಕಿಕೊಂಡು ಹಲ್ಲು ಕಡಿದ, 'ಆ ಕಾಗೆ ಏನಾದರೂ ಆತನ ಕೈಗೆ ಸಿಕ್ಕಿದ್ದರೆ ಆನೆಯ ಕಾಲಿನ ಅಡಿ ಇಟ್ಟು ತುಳಿಸುತ್ತಿದ್ದ. ಆ ಕಾಗೆಯನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಿಲ್ಲ ಎಂಬುದನ್ನು ಅರಿತ ಮೇಲೆ ಸಮಸ್ತ ಕಾಗೆಯ ಕುಲದ ಮೇಲೆ ಶತ್ರು ಮನೋಭಾವವನ್ನು ತಾಳಿದ.

ಅದೇ ಸಂದರ್ಭಕ್ಕೆ ಸರಿಯಾಗಿ ಕಾಕತಾಳಿಯವೆಂಬಂತೆ ಗಜಶಾಲೆಯ ಕುಟೀರಕ್ಕೆ ಬೆಂಕಿ ತಗುಲಿ ನೂರಾರು ಅನೆಗಳ ಬೆನ್ನು ಸುಟ್ಟು ಅಧಿಕವಾಗಿ ಗಾಯಗೊಂಡವು. ವ್ಯಸನಗೊಂಡ ರಾಜ ತನ್ನ ರಾಜ್ಯ ವೈದ್ಯನನ್ನು ಕರೆಸಿ ಆನೆಗಳಿಗೆ ಚಿಕಿತ್ಸೆ ಕೊಡಿಸಿದ. ಎಷ್ಟೇ ಚಿಕಿತ್ಸೆ ಕೊಡಿಸಿದರೂ ಆನೆಗಳ ಗಾಯ ವಾಸಿಯಾಗದೆ ಆನೆಗಳು ಸೊರಗತೊಡಗಿದವು. ಕೊನೆಗೆ ತನ್ನ ರಾಜಪುರೋಹಿತನನ್ನು ಕರೆಸಿ ಈ ವಿಷಯ ತಿಳಿಸಿ ಆತನ ಸಲಹೆ ಕೇಳಿದ. ಇದೇ ಸಮಯಕ್ಕಾಗಿ ಕಾಯುತ್ತಿದ್ದ ಆತ:

"ಮಹಾರಾಜ, ಇದರ ವೈದ್ಯ ನನಗೆ ಗೊತ್ತಿದೆ!"

"ಪುರೋಹಿತರೇ, ಹಾಗಾದರೆ ಯಾವ ವಸ್ತುವು ಬೇಕಾಗಬಹುದು?"

"ಮಹಾರಾಜ, ಅಪಾರ ಪ್ರಮಾಣದಲ್ಲಿ ಕಾಗೆಗಳ ಕೊಬ್ಬು ಬೇಕಾಗುತ್ತದೆ!"

"ಹಾಗೇನು? ಹಾಗೆಯೇ ಆಗಲಿ! ಯಾರಲ್ಲಿ? ಎಲೈ ಸೇನಾಧಿಪತಿಯೇ, ನಮ್ಮ ಸಮಸ್ತ ಸೈನ್ಯವನ್ನೆಲ್ಲ ಬಳಸಿಕೊಂಡು ಅಪಾರ ಪ್ರಮಾಣದಲ್ಲಿ ಕಾಗೆಗಳನ್ನು ಬೇಟೆಯಾಡಿ ಕೊಬ್ಬನ್ನು ಸಂಗ್ರಹಿಸಿ ತನ್ನಿ!" ಎಂದು ರಾಜಾಜ್ಞೆಯನ್ನು ಮಾಡಿದ.

ಸೇನಾಧಿಪತಿಯು ಮರುಕ್ಷಣದಿಂದ ತನ್ನ ಸೇನೆಯೊಂದಿಗೆ ಕಂಡ ಕಂಡ ಕಾಗೆಗಳನ್ನು ಬೇಟೆಯಾಡತೊಡಗಿದ. ಎಷ್ಟೇ ಕಾಗೆಗಳನ್ನು ಕೊಂದು ಅವುಗಳ ಮೈಯನ್ನು ಸೀಳಿದರೂ ಒಂದೇ ಒಂದು ಹನಿ ಕೊಬ್ಬಿನ ಅಂಶ ದೊರೆಯಲಿಲ್ಲ. ದಿನದಿಂದ ದಿನಕ್ಕೆ ಸತ್ತ ಕಾಗೆಗಳ ರಾಶಿಯು ಪರ್ವತಾಕಾರವಾಗಿ ಬೆಳೆಯಿತು. ಇದರಿಂದ ದಿಗಿಲುಗೊಂಡ ಅಪರಾಧಿ ಕಾಗೆಯು ಸ್ಮಶಾನದ ಬಳಿ ನೆಲೆಸಿದ್ದ ಕಾಗೆಗಳ ನಾಯಕರಾದ ಬೋದಿಸತ್ವ ಸ್ವರೂಪಿಯಾದ ಕಾಗೆಯನ್ನು ಸಂಧಿಸಿ:

"ನಾಯಕರೇ, ನನ್ನಿಂದ ಮಹಧಾಪರಾಧವಾಯಿತು ನನ್ನನ್ನು ಕ್ಷಮಿಸಿ ಬಿಡಿ!"

'ನಿನ್ನಿಂದಾದ ಅಪರಾಧವೇನು?" ಎನ್ನಲು ಅದು

"ನನ್ನ ಅಜ್ಞಾನದಿಂದಾಗಿ ಈ ರೀತಿ ನನ್ನ ಸಮಸ್ತ ಕುಲಕ್ಕೇ ಆ ಬ್ರಾಹ್ಮಣನು ಸಂಚುಕಾರ ತರಬಲ್ಲನೆಂದು ನಾನು ಎಣಿಸಿರಲಿಲ್ಲ. ನನ್ನನ್ನು ಈಗಲೇ ಬಂಧಿಸಿ ಕೊಂಡ್ಯೊಯ್ದು ಆ ರಾಜಪುರೋಹಿತನಿಗೆ ಒಪ್ಪಿಸಿ ನಮ್ಮ ಕುಲವನ್ನು ರಕ್ಷಿಸು!" ಎನ್ನಲು ಬೋಧಿಸತ್ವರು ಅಪರಾಧವನ್ನು ತಡೆಯಲು ಮೈತ್ರಿಯೊಂದೇ ಮಹಾಮಾರ್ಗ ಎಂದು ಅರಿತರು. ತನ್ನ ಬಳಗದಲ್ಲಿ ಅಳಿದುಳಿದಿದ್ದ ಎಂಬತ್ತು ಸಾವಿರ ಕಾಗೆಗಳನ್ನು ಒಂದು ಸುಕ್ಷಿತ ಸ್ಥಳದಲ್ಲಿ ಇರಿಸಿ: "ಮಿತ್ರರೇ, ನೀವುಗಳು ಯಾರೂ ರಾಜನ ಸೇನೆಯ ಕಣ್ಣಿಗೆ ಬೀಳಬೇಡಿ. ನಾನು ರಾಜನ ಬಳಿ ಹೋಗಿ ಆತನ ತಪ್ಪಿನ ಅರಿವನ್ನು ಆತನಿಗೆ ಮೂಡಿಸಿ ನಿಮ್ಮಗಳ ಅಭಯ ದಾನವನ್ನು ಪಡೆದು ಬರುತ್ತೇನೆ!' ಎಂದು ಅಲ್ಲಿಂದ ಹಾರಿ ಕಣ್ಮರೆಯಾಯಿತು. ರಾಜನು ರಾಜ ಪರಿಷತ್ತಿನಲ್ಲಿ ತನ್ನ ಸಿಂಹಾಸನದ ಮೇಲೆ ಕುಳಿತಿದ್ದ ಆತನೆದುರು ಹಾರಿ ಬಂದು ಕುಳಿತು ಆತನಿಗೆ ವಂದಿಸುತ್ತಾ: "ಪ್ರಭು, ಎಲ್ಲಾದರೂ ಕಾಗೆಗಳ ಮೈಯಲ್ಲಿ ಕೊಬ್ಬಿರುವುದೆ?" "ಎಲೈ ಕಾಗೆಗಳ ನಾಯಕನೇ, ಇರುವುದೆಂದು ನನ್ನ ರಾಜ ಪುರೋಹಿತ ಹೇಳಿದನಲ್ಲ!' "ಪ್ರಭು, ಕೊಬ್ಬಿರುವುದು ಕಾಗೆಗಳ ಮೈಯಲಲ್ಲ. ನಿನ್ನ ಪುರೋಹಿತನ ದ್ವೇಷ ಮತ್ತು ಅಜ್ಞಾನದಲ್ಲಿ.

ನೆಡೆದ ಕತೆಯನ್ನು ವಿಸ್ತಾರವಾಗಿ ಹೇಳಿ ಮುಗಿಸಿ:

"ನನ್ನ ಅಜ್ಞಾನದಿಂದಾಗಿ ಈ ರೀತಿ ನ್ನನ ಸಮಸ್ತ ಕುಲಕ್ಕೇ ಆ ಬ್ರಾಹ್ಮಣನು ಸಂಚುಕಾರ ತರಬಲ್ಲನೆಂದು ನಾನು ಎಣಿಸಿರಲಿಲ್ಲ. ನನ್ನನ್ನು ಈಗಲೇ ಬಂಧಿಸಿ ಕೊಂಡ್ಯೊಯ್ದು ಆ ರಾಜಪುರೋಹಿತನಿಗೆ ಒಪ್ಪಿಸಿ ನಮ್ಮ ಕುಲವನ್ನು ರಕ್ಷಿಸು!" ಎನ್ನಲು ಬೋಧಿಸತ್ವರು ಅಪರಾಧವನ್ನು ತಡೆಯಲು ಮೈತ್ರಿಯೊಂದೇ ಮಹಾಮಾರ್ಗ ಎಂದು ಅರಿತರು.

ತನ್ನ ಬಳಗದಲ್ಲಿ ಅಳಿದುಳಿದಿದ್ದ ಎಂಬತ್ತು ಸವಿರ ಕಾಗೆಗಳನ್ನು ಒಂದು ಸುಕ್ಷಿತ ಸ್ಥಳದಲ್ಲಿ ಇರಿಸಿ:

"ಮಿತ್ರರೇ, ನೀವುಗಳು ಯಾರೂ ರಾಜನ ಸೇನೆಯ ಕಣ್ಣಿಗೆ ಬೀಳಬೇಡಿ. ನಾನು ರಾಜನ ಬಳಿ ಹೋಗಿ ಆತನ ತಪ್ಪಿನ ಅರಿವನ್ನು ಆತನಿಗೆ ಮೂಡಿಸಿ ನಿಮ್ಮಗಳ ಅಭಯ ದಾನವನ್ನು ಪಡೆದು ಬರುತ್ತೇನೆ!' ಎಂದು ಅಲ್ಲಿಂದ ಹಾರಿ ಕಣ್ಮರೆಯಾಯಿತು. ರಾಜನು ರಾಜ ಪರಿಷತ್ತಿನಲ್ಲಿ ತನ್ನ ಸಿಂಹಾಸನದ ಮೇಲೆ ಕುಳಿತಿದ್ದ ಆತನೆದುರು ಹಾರಿ ಬಂದು ಕುಳಿತು ಆತನಿಗೆ ವಂದಿಸುತ್ತಾ:

"ಪ್ರಭು, ಎಲ್ಲಾದರೂ ಕಾಗೆಗಳ ಮೈಯಲ್ಲಿ ಕೊಬ್ಬಿರುವುದೆ?"

"ಎಲೈ ಕಾಗೆಗಳ ನಾಯಕನೇ, ಇರುವುದೆಂದು ನನ್ನ ರಾಜಪುರೋಹಿತ ಹೇಳಿದನಲ್ಲ!'

"ಪ್ರಭು, ಕೊಬ್ಬಿರುವುದು ಕಾಗೆಗಳ ಮೈಯಲಲ್ಲ. ನಿನ್ನ ಪುರೋಹಿತನ ದ್ವೇಷ ಮತ್ತು ಅಜ್ಞಾನದಲ್ಲಿ. ರಾಜನಾದವನು ಭಾವೋದ್ರೇಕಕ್ಕೆ ಒಳಗಾಗಿ ವಿವೇಚನೆಯನ್ನು ಕಳೆದುಕೊಂಡು ರಾಜ್ಯಭಾರ ಮಾಡಬಾರದು ಯೋಚಿಸಿ ಪರಿಶೀಲಿಸಿ ಮಾಡಬೇಕು. ಯಾಮದೇ ಒಳಿತಲ್ಲದ, ಬಹುಜನರ ಹಿತ ಮತ್ತು ಸುಖವನ್ನು ಕಾಣದ ಕೆಲಸವನ್ನು ಮಾಡಿದರೆ ಅದರಿಂದ ಫಲವೇನು? ಅದರಿಂದ ಜೀವಕುಲಕ್ಕೆ ನಷ್ಟವಾಗುತ್ತದೆ. ಅತ್ಯಂತ ಭಯಕ್ಕೆ ಕಾರಣವಾಗುತ್ತದೆ. ಪುರೋಹಿತನು ವೈರಭಾವಕ್ಕೆ ವಶನಾಗಿ ಸುಳ್ಳು ಹೇಳಿದ್ದಾನೆ. ಸತ್ಯವೆಂದರೆ ಯಾವುದೇ ಕಾಗೆಯ ಮೈಯಲ್ಲಿ ಕೊಬ್ಬು ಇರುವುದೇ ಇಲ್ಲ!"

"ವಿವೇಕಿಯಂತೆ ಮಾತನಾಡುವ ಎಲೈ ಪಂಡಿತನೇ, ಹಾಗಾದರೆ ಕಾಗೆಗಳ ಮೈಯಲೇಕೆ ಕೊಬ್ಬು ಇರುವುದಿಲ್ಲ?'

"ಮಹಾರಾಜ, ಕಾಗೆಗಳು ಸದಾ ಶ್ರಮಜೀವಿಗಳು. ತುತ್ತು ಆಹಾರವನ್ನು ಹುಡುಕುತ್ತಾ ಲೋಕವನ್ನೆಲ್ಲ ಸಂಚರಿಸುತ್ತಿರುತ್ತವೆ. ಹಾಗಾಗಿ ಯಾವಾಗಲೂ ಕಾಗೆಗಳು ಉದ್ವಿಗ್ನ ಹೃದಯಿಗಳಾಗಿರುತ್ತವೆ. ಅವು ನಿರಂತರ ಮನುಷ್ಯರು, ಹದ್ದುಗಳು ಮತ್ತು ಬೇಟೆಗಾರರ ಅಪಕೃಪೆ ತುತ್ತಾಗುವ ಕಾರಣ ಭಯ ಭೀತರಾಗಿಯೇ ಹಾರಾಡುತ್ತಿರುತ್ತವೆ. ಇಷ್ಟೇ ಅಲ್ಲದೆ ಅವು ಕ್ಷತ್ರಿಯರು, ಶ್ರೀ ಪುರುಷರ ಪಾಲಿಗೆ ಅಪಶಕುನವಾಗಿ ಇಡೀ ಪ್ರಪಂಚಕ್ಕೆ ತೊಂದರೆ ಕೊಡುತ್ತವೆ. ಆದರೂ ಕೂಡ ಮನುಜರಂತೆ ಸಿಕ್ಕಿದನ್ನು ಒಬ್ಬರೆ ಕದ್ದು ತಿನ್ನುವುದಿಲ್ಲ. ಬದಲಿಗೆ ತನ್ನ ಬಳಗದೊಂದಿಗೆ ಹಂಚಿ ತಿನ್ನುತ್ತವೆ. ಹೀಗಿರುವಾಗ ಅವುಗಳ ಮೈಯಲ್ಲಿ ಕೊಬ್ಬು ಹೇಗಿರಲು ಸಾಧ್ಯ? ಈಗಲೂ ಇಲ್ಲ. ಹಿಂದೆಯೂ ಇಲ್ಲ. ಮುಂದೆ ಇರಲೂ ಸಾಧ್ಯವಿಲ್ಲ!" ಎನ್ನಲು ರಾಜನಿಗೆ ತನ್ನ ತಪ್ಪಿನ ಅರಿವು ಮೂಡಲು, ಸೇನಾಧಿಕಾರಿಯನ್ನು ಕರೆದು:

"ಈಗಿಂದೀಗಲೇ ಕಾಗೆಗಳ ಮಾರಣ ಹೋಮವನ್ನು ನಿಲ್ಲಿಸಿ. ನೀಚನಾದ ರಾಜಪುರೋಹಿತನನ್ನು ಗಡಿಯಿಂದ ಆಚೆ ಓಡಿಸು!" ಎಂದು ಆಜ್ಞೆ ಮಾಡಿದ. □

ಕಲಾಪ

ವಿಧಾನಸಭಾ ಕಲಾಪ
ಗಣಿ ಆಲಾಪ
ಪ್ರಲಾಪದಲ್ಲಿ ಸಮಯ
ಮಂಗಮಾಯ!
ಉ.ಕ ಹೈಕದ ಅಭಿವೃದ್ಧಿ
ಚರ್ಚಿಸಲು ಸಿಗಲಿಲ್ಲ ಸಮಯ!
ಇನ್ನು ಅಭಿವೃದ್ಧಿ? ದೂರದ ಸುದ್ದಿಯಯ್ಯ
ಪ್ರಜಾ ಪ್ರಭುವೆ?!

○ ಅಲ್ಲಮಪ್ರಭು ಬೆಟ್ಟದೂರು



'SAMVADA' Kannada Monthly, October 2009 RNI-KAR KAN/2002/9246 CPMG/KA/BGW-706/2009-11
Office of Posting: RAJAJINAGAR HO, Date of Posting: 27-28 of Every Month

ಕೇಂದ್ರ ಸಾಹಿತ್ಯ ಅಕಾದೆಮಿ,
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001

ಕವಿತೆಗಳು
ಕೆ.ಜಿ. ಶಂಕರಪಿಳ್ಳೆ
ಅನುವಾದ :
ತೇರ್‌ಳಿ ಎನ್. ಶೇಖರ್
ಬೆಲೆ : 120/-



ಲ ರೂ ಜ ಎ ಲ ನ್ಸಾ
ಅನುವಾದ:
(ಶ್ರೀಮತಿ) ಶ್ರೀ ಹರ್ಲೇಕರ
ಬೆಲೆ : 350/-

ಕನುಪರ್ತಿ ವರಲಕ್ಷ್ಮಿ
ಪೀಲಾಪ್ರಗಡ ರಾಜ್ಯಲಕ್ಷ್ಮಿ
ಬೆಲೆ: 40/-



ಬಿಳಿಯ ಲಕೋಟೆ
ಬೆಂಗಾಲಿ ಮೂಲ: ಮತಿನಂದಿ
ಅನುವಾದ : ರಮಾ
ಬೆಲೆ : 100/-



ಸೂಫಿ ಹೇಳಿದ ಕಥೆ
ಕೆ.ಪಿ. ರಾಮನುಣ್ಣಿ
ಅನುವಾದ :
ಡಾ.ಅಶೋಕ ಕುಮಾರ್
ಬೆಲೆ : 100/-



ಅಕ್ಕಮಹಾದೇವಿ
ಗುರುಲಿಂಗ ಕಾಪಸೆ
ಬೆಲೆ: 40/-

ಒಂದು ಗಿಡ ಮತ್ತು ಎರಡು
ಹಕ್ಕಿಗಳು
ವಿಶ್ರಾಮ ಬೇಡೆಕರ
ಅನುವಾದ : ಕುಮುದಿನಿ
ಅಶೋಕ ಭೈರಣ್ಣ
ಬೆಲೆ : 225/-



ಪಿ. ಲಂಕೇಶ್
ಕೆ. ಮರುಳಸಿದ್ದಪ್ಪ
ಬೆಲೆ : 40/-



ಸ್ವಾಮಿ ವಿವೇಕಾನಂದ
ನಮಾಯಿ ಸದನ್ ಬೋಸ್
ಬೆಲೆ : 40/-

ಸುಂದರಿಯರು ಸುಂದರರು
ಉರೂಬ್
ಅನುವಾದ :
ಮೋಹನ ಕುಂಟಾರ್
ಬೆಲೆ : 250/-



ಶ್ರೀರಂಗ
ಎನ್ಕೆ.ಕುಲಕರ್ಣಿ
ಬೆಲೆ : 40/-



ಆರ್.ಕಲ್ಯಾಣಮ್ಮ
ಎಸ್.ಡಿ.ಶಶಿಕಲಾ
ಬೆಲೆ : 40/-



ನ ಹನ್ಯತೆ
ಮೈತ್ರೇಯಿ ದೇವಿ
ಅನುವಾದ : ಗೀತಾ
ವಿಜಯಕುಮಾರ್
ಬೆಲೆ : 250/-



ರಾಷ್ಟ್ರಕವಿ ಕುವೆಂಪು
ಪ್ರಭು ಶಂಕರ
ಬೆಲೆ: 40/-



ಆಧುನಿಕ ಮಹಾಭಾರತ
ಗುಂಟೂರು ಶೇಷೇಂದ್ರ ಶರ್ಮಾ
ಅನುವಾದ :
ಅರ್ಕಸಾಲಿ ವೃಷಭೇಂದ್ರಾಚಾರ್
ಬೆಲೆ : 200/-

ಕೇತು ವಿಶ್ವನಾಥರೆಡ್ಡಿ ಕತೆಗಳು
ತೆಲುಗು ಮೂಲ :
ಕೇತು ವಿಶ್ವನಾಥರೆಡ್ಡಿ
ಅನುವಾದ :
ಮೀರಾಸಾಬಿಹಳ್ಳಿ ಶಿವಣ್ಣ
ಬೆಲೆ : 120/-



ತ.ರಾ.ಸು
ಎಂ.ಎಸ್.ಪಾಟೀಲ
ಬೆಲೆ : 40/-



ಮಧುರಚೆನ್ನ
ಗುರುಲಿಂಗ ಕಾಪಸೆ
ಬೆಲೆ : 40/-



ನೆಲವೆದ್ದು ಬಡಿಯಿತು
ವಿಶ್ವಾಸ ಪಾಟೀಲ
ಕನ್ನಡಕ್ಕೆ : ಚಂದ್ರಕಾಂತ
ಪೋಕಳೆ
ಬೆಲೆ : 350/-